ಮಂಗಳವಾರ, ಮಾರ್ಚ್ 18, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಭಿಮಾನ

ಪುನೀತ್ ರಾಜ್‌ಕುಮಾರ್ ಜನ್ಮದಿನವಾದ ಸೋಮವಾರ ಬಾಲಕಿಯೊಬ್ಬಳು ಕೆನ್ನೆಯ ಮೇಲೆ ಅಪ್ಪು ಎಂದು ಬರೆದುಕೊಂಡು ಅಭಿಮಾನ ಮೆರೆದಳು

SHOWROOMS: KARNATAKA: BENGALURU: RENAULT **BANNERGHATTA ROAD** Ph: 8546820204, RENAULT **MYSORE ROAD** Ph: 8527240549 & 7026666922, RENAULT **SILK BOARD** Ph: 8527240654, RENAULT **WHITEFIELD** Ph: 8527240685, RENAULT **JP NAGAR** Ph: 8527240626 & 7353760555, RENAULT **KALYAN NAGAR** Ph: 8527236137 & 8722866664, RENAULT **SARJAPURA** Ph: 8448481374, 8746811000 & 8496915111, RENAULT **YELAHANKA** Ph: 8527234592, 9071767600 & 8884498993, RENAULT **YESWANTHPUR** Ph: 9311832962 & 9311832968. RENAULT **TUMKUR** Ph: 7353764337.

ನಮ್ಮ ಗ್ಯಾರಂಟಿಗಳನ್ನು ನಕಲು ಮಾಡಿದ ಮೋದಿ– ಸಿ.ಎಂ. • ಉತ್ತರಕ್ಕೆ ಅತೃಪ್ತಿ– ವಿರೋಧಪಕ್ಷಗಳ ಸಭಾತ್ಯಾಗ

ಸರ್ಕಾರ ದಿವಾಳಿಯಾಗಿಲ್ಲ; ಗ್ಯಾರಂಟಿ ನಿಲ್ಲಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ ಎಂಬ ವಿರೋಧ ಪಕ್ಷಗಳ ಮಾತಿನಲ್ಲಿ ಹುರುಳಿಲ್ಲ. ದಿವಾಳಿಯಾಗಿದ್ದರೆ 2023ರ ಮೇ ತಿಂಗಳಿಂದ 2025ರ ಫೆಬ್ರುವರಿ ವರೆಗೆ ಗ್ಯಾರಂಟಿ ಯೋಜನೆಗಳ ಮೂಲಕ ಜನರಿಗೆ ₹ 76,509 ಕೋಟಿ ನೆರವು ವಿತರಿಸಲು ಸಾಧ್ಯವಾಗುತ್ತಿತ್ತೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಪ್ರಶ್ನಿಸಿದರು.

ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಗೆ ಸಿದ್ದರಾಮಯ್ಯ ಸೋಮವಾರ ಸುದೀರ್ಘ ಉತ್ತರ ನೀಡಿದರು. ಆರೆಸ್ಸೆಸ್, ಅಂಬೇಡ್ಕರ್, ಎಐಸಿಸಿ ನಾಯಕರ ಪ್ರಸ್ತಾಪದಿಂದಾಗಿ ಕಲಾಪದಲ್ಲಿ ಹಲವು ಬಾರಿ ಗದ್ದಲ ನಡೆಯಿತು. ಅದರ ನಡುವೆಯೇ ಮುಖ್ಯಮಂತ್ರಿ ತಮ್ಮ ಉತ್ತರ ಮುಂದುವರಿಸಿದರು. ಉತ್ತರ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಸಭಾತ್ಯಾಗ ಮಾಡಿದರು.

ಸಿ.ಎಂ ಉತ್ತರ: 'ಕೊಟ್ಟ ಮಾತಿನಂತೆ ನಾವು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದ್ದೇವೆ. ಅದಕ್ಕಾಗಿಯೇ ಚನ್ನಪಟ್ಟಣ, ಸಂಡೂರು ಮತ್ತು ಶಿಗ್ಗಾವಿ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಜನರು ನಮ್ಮ ಪಕ್ಷವನ್ನು ಬೆಂಬಲಿಸಿದರು. ಐದು ವರ್ಷ ಪೂರ್ಣಗೊಳ್ಳುವವರೆಗೂ ಗ್ಯಾರಂಟಿ ಯೋಜನೆಗಳು ನಿಲ್ಲುವುದಿಲ್ಲ' ಎಂದರು.

'ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧ್ಯಕ್ಷರೂ ಆಗಿರುವ ಕ್ಯಾಮರೂನ್ ದೇಶದ ಅಧ್ಯಕ್ಷ ಫಿಲೆ ಮಾನ್ ಯಾಂಗ್ ಅವರು ನಮ್ಮ ಗ್ಯಾರಂಟಿ ಯೋಜನೆಗಳನ್ನು ಹೊಗಳಿದ್ದಾರೆ. ತೆಲುಗು ದೇಶಂ ಪಕ್ಷದ ಆಡಳಿತವಿರುವ ಆಂಧ್ರ ಪ್ರದೇಶ, ಬಿಜೆಪಿ ಆಡಳಿತವಿರುವ ಮಹಾರಾಷ್ಟ್ರ ಮತ್ತು ಸಿಪಿಎಂ ಆಡಳಿತವಿರುವ ಕೇರಳದ ಸಚಿವರು, ಅಧಿಕಾರಿಗಳು ನನ್ನನ್ನು ಭೇಟಿಮಾಡಿ ಗ್ಯಾರಂಟಿ ಯೋಜನೆಗಳ ಬಗ್ಗೆ ಚರ್ಚಿಸಿದ್ದಾರೆ. ಪ್ರಧಾನಿ ಮೋದಿ ಅವರೂ ನಮ್ಮ ಗ್ಯಾರಂಟಿ ಯೋಜನೆಗಳನ್ನು ನಕಲು ಮಾಡಿದ್ದಾರೆ. ಇದು ಯೋಜನೆಗಳ ಯಶಸ್ಸಿನ ಸಂಕೇತವಲ್ಲವೆ' ಎಂದು ಕೇಳಿದರು.

ಆರ್ಥಿಕ ಅಶಿಸ್ತು: 'ಬಿಜೆಪಿ ಸರ್ಕಾರದ ಅವಧಿಯಲ್ಲಿ ಅನುದಾನ ಒದಗಿಸದೇ ₹2.70 ಲಕ್ಷ ಕೋಟಿ ಮೊತ್ತದ ಕಾಮಗಾರಿಗಳನ್ನು ಮಂಜೂರು ಮಾಡಲಾಗಿತ್ತು. ಮುಖ್ಯಮಂತ್ರಿಯವರ ವಿಶೇಷ ಅನುದಾನದ ಹೆಸರಿನಲ್ಲಿ ₹1.66 ಲಕ್ಷ ಕೋಟಿ ಮೊತ್ತದ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿತ್ತು. ವಿವಿಧ ಇಲಾಖೆಗಳಲ್ಲಿ ಒಟ್ಟು ₹ 36,000 ಕೋಟಿ ಮೊತ್ತದ ಬಿಲ್‌ಗಳನ್ನು ಬಾಕಿ ಇರಿಸಲಾಗಿತ್ತು. ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿನ ಆರ್ಥಿಕ ಅಶಿಸ್ತಿನಿಂದಾಗಿ ಅಭಿವೃದ್ಧಿ ಯೋಜನೆಗಳಿಗೆ ಅನುದಾನ ಒದಗಿಸುವುದಕ್ಕೆ ತೊಡಕಾಗಿದೆ' ಎಂದು ಸಿದ್ದರಾಮಯ್ಯ ಹೇಳಿದರು.

ಕೇಂದ್ರ ಕೊಟ್ಟಿದ್ದು ಸಾಲ: 'ಕೇಂದ್ರ ಸರ್ಕಾರ ರಾಜ್ಯದ ನೀರಾವರಿ ಯೋಜನೆಗಳಿಗೆ ₹ 10,300 ಕೋಟಿ ಅನುದಾನ ನೀಡಿದೆ ಎಂದು ಬಸನಗೌಡ ಪಾಟೀಲ ಯತ್ನಾಳ ಸದನದಲ್ಲಿ ಸುಳ್ಳು ಹೇಳಿದ್ದಾರೆ. ಕೇಂದ್ರ ಸರ್ಕಾರ ಕೊಟ್ಟಿರುವುದು ಸಾಲ. ಅದಕ್ಕೆ 50 ವರ್ಷ ಬಡ್ಡಿ ಕಟ್ಟಬೇಕಿಲ್ಲ. ಯತ್ನಾಳ ಆರ್‌ಎಸ್‌ಎಸ್ ಬೈಠಕ್‌ನಲ್ಲಿದ್ದಾರೋ ಸದನದಲ್ಲಿದ್ದಾರೋ ಗೊತ್ತಿಲ್ಲ' ಎಂದು ವಾಗ್ದಾಳಿ ನಡೆಸಿದರು.

ಪರಿಶಿಷ್ಟರ ಅಭಿವೃದ್ಧಿಯ ವಿಚಾರದಲ್ಲಿನ ಬದ್ಧತೆಯಿಂದಾಗಿ ತಮ್ಮದೇ ನೇತೃತ್ವದ ಸರ್ಕಾರವು 2013ರಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ ಕಾಯ್ದೆ ಜಾರಿಗೆ ತಂದಿತು. ಆ ನಂತರದ ನಾಲ್ಕು ವರ್ಷಗಳಲ್ಲಿ ಈ ಕಾಯ್ದೆಯಡಿ ₹ 1.80 ಲಕ್ಷ ಕೋಟಿ ಅನುದಾನ ಒದಗಿಸಲಾಗಿತ್ತು. ಬಿಜೆಪಿಗೆ ಬದ್ಧತೆ ಇದ್ದರೆ ಕೇಂದ್ರ ಸರ್ಕಾರದಲ್ಲೂ ಇಂತಹ ಕಾಯ್ದೆ ಜಾರಿಗೊಳಿಸಲಿ ಎಂದು ಸವಾಲು ಹಾಕಿದರು.

'ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ನ್ಯಾಯ ಸಿಗುತ್ತಿಲ್ಲ. ರೈಲ್ವೆ ಯೋಜನೆ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ರೈಲ್ವೆ ಯೋಜನೆಗಳಿಗೆ ಉಚಿತವಾಗಿ ಜಮೀನು ಒದಗಿಸಿ, ಶೇಕಡ 50ರಷ್ಟು ವೆಚ್ಚ ಹಂಚಿಕೆ ಮಾಡಿಕೊಳ್ಳುತ್ತಿದ್ದೇವೆ. ಆದರೆ, ಆದಾಯ ಪೂರ್ತಿ ಕೇಂದ್ರ ಸರ್ಕಾರಕ್ಕೆ ಹೋಗುತ್ತಿದೆ' ಎಂದರು.

'ನಮ್ಮ ಅವಧಿಯಲ್ಲಿ ಅಪರಾಧಗಳ ಸಂಖ್ಯೆಯೂ ಕಡಿಮೆ ಆಗಿದೆ. ರೈತರ ಆತ್ಮಹತ್ಯೆಯೂ ಕಡಿಮೆ ಆಗಿದೆ. ಮಾದಕದ್ರವ್ಯ ಮಾಫಿಯಾಗಳ ಚಟುವಟಿಕೆಯೂ ಕಡಿಮೆ ಆಗಿದೆ. ಮಂಗಳೂರು ಪೊಲೀಸರು ದೊಡ್ಡ ಪ್ರಮಾಣದಲ್ಲಿ ಮಾದಕದ್ರವ್ಯ ಪದಾರ್ಥಗಳನ್ನು ಹಿಡಿದಿದ್ದಾರೆ. ಪೊಲೀಸರಿಗೆ ನೀವೂ ಮೆಚ್ಚುಗೆ ವ್ಯಕ್ತಪಡಿಸಿದ್ದೀರಿ. ಕರ್ನಾಟಕವನ್ನು ಮಾದಕ ದ್ರವ್ಯ ಮುಕ್ತ ರಾಜ್ಯವಾಗಿಸುವುದು ನಮ್ಮ ಗುರಿ' ಎಂದು ಸಿದ್ದರಾಮಯ್ಯ ಹೇಳಿದರು.

ಡೀಸೆಲ್ ದರ ಮತ್ತು ನೌಕರರ ವೇತನ ಹೆಚ್ಚಿದ ಕಾರಣ ಬಸ್ ಪ್ರಯಾಣದ ದರವನ್ನು ಏರಿಕೆ ಮಾಡಬೇಕಾಯಿತು. ಮೆಟ್ರೊ ಪ್ರಯಾಣ ದರ ಏರಿಕೆಗೆ ದರ ಪರಿಷ್ಕರಣಾ ಸಮಿತಿಯ ಶಿಫಾರಸ್ಸೇ ಕಾರಣ. ಬಿಜೆಪಿ ಅವಧಿಯಲ್ಲಿ ದರ ಪರಿಷ್ಕರಣೆಗೆ ಸಮಿತಿ ರಚಿಸುವಂತೆ ಮನವಿ ಮಾಡಿದ್ದರು. ಒಮ್ಮೆ ಶಿಫಾರಸು ಮಾಡಿದ ಮೇಲೆ ದರ ಇಳಿಸಲು ಸಾಧ್ಯವಾಗುವುದಿಲ್ಲ ಎಂದರು.

ಬೆಂಗಳೂರು ಅಭಿವೃದ್ಧಿಗೆ ನಮ್ಮ ಸರ್ಕಾರ ₹7,000 ಕೋಟಿ ನೀಡಿದೆ. ಆದರೆ, ಬಸವರಾಜ ಬೊಮ್ಮಾಯಿ ಸರ್ಕಾರ ಇದ್ದಾಗ ಒಂದು ಪೈಸೆಯನ್ನೂ ಕೊಟ್ಟಿಲ್ಲ ಎಂದು ಮುಖ್ಯಮಂತ್ರಿ ಹರಿಹಾಯ್ದರು.

ವಿಧಾನಸಭೆ ಕಲಾಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉಪಸ್ಥಿತರಿದ್ದರು–ಪ್ರಜಾವಾಣಿ ಚಿತ್ರ

'ಕೀಳು ಅಭಿರುಚಿಯ ಹೇಳಿಕೆ'

'ಸರ್ಕಾರದ ಕರಿಮಣಿ ಮಾಲೀಕ ಯಾರು ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಮತ್ತು ಬಿಜೆಪಿಯ ವಿ. ಸುನಿಲ್ ಕುಮಾರ್ ಕೇಳಿದ್ದಾರೆ. ಇದು ಕೀಳು ಅಭಿರುಚಿಯ ಹೇಳಿಕೆ' ಎಂದು ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದರು.

'ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದ್ದೇವೆ. ನಿಮ್ಮ ಪಕ್ಷದಲ್ಲಿ ಭಿನ್ನಾಭಿಪ್ರಾಯಗಳಿಲ್ಲವೆ? ವಿಜಯೇಂದ್ರ ಮತ್ತು ಯತ್ನಾಳ ಏನೆಲ್ಲ ಮಾತನಾಡುತ್ತಿದ್ದಾರೆ ಗೊತ್ತಿಲ್ಲವೆ? ಅಶೋಕ, ಸುನಿಲ್ ಅವರಿಂದ ಇಂತಹ ಮಾತು ನಿರೀಕ್ಷಿಸಿರಲಿಲ್ಲ' ಎಂದರು.

ಅದಕ್ಕೆ ಪ್ರತಿಕ್ರಿಯಿಸಿದ ಅಶೋಕ, 'ರಾಜ್ಯದ ಮುಖ್ಯಮಂತ್ರಿ ಯಾರು ಎನ್ನುವ ಕುರಿತು ಕಾಂಗ್ರೆಸ್‌ನವರು ದಿನಕ್ಕೊಂದು ಹೇಳಿಕೆ ನೀಡುತ್ತಿದ್ದಾರೆ. ನಿತ್ಯವೂ ಉಪಾಹಾರ, ಊಟದ ಸಭೆಗಳಾಗುತ್ತಿವೆ. ಇಲ್ಲಿ ಅಭಿರುಚಿಯ ಪ್ರಶ್ನೆ ಮುಖ್ಯವಲ್ಲ, ರಾಜ್ಯದ ಮುಖ್ಯಮಂತ್ರಿ ಯಾರು ಎಂಬ ಪ್ರಶ್ನೆ ಮುಖ್ಯ' ಎಂದು ಹೇಳಿದರು.

ಸಿ.ಎಂ– ವಿಜಯೇಂದ್ರ ಜಟಾಪಟಿ

ಜಾತಿ ರಾಜಕಾರಣದ ವಿಷಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಬಿಜೆಪಿಯ ಬಿ.ವೈ. ವಿಜಯೇಂದ್ರ ಅವರ ಮಧ್ಯೆ ಸದನದಲ್ಲಿ ಕೆಲ ಕಾಲ ಜಟಾಪಟಿ ನಡೆಯಿತು.

ಗ್ಯಾರಂಟಿ ಯೋಜನೆಗಳ ಕುರಿತು ಮುಖ್ಯಮಂತ್ರಿಯವರು ಮಾತನಾಡುತ್ತಿದ್ದಾಗ ಮಧ್ಯ ಪ್ರವೇಶಿಸಿದ ವಿಜಯೇಂದ್ರ, 'ಗ್ಯಾರಂಟಿಗಳ ಬಗ್ಗೆ ಅಷ್ಟೆಲ್ಲ ನಂಬಿಕೆ ಇದ್ದಿದ್ದರೆ ಶಿಗ್ಗಾವಿ ಉಪ ಚುನಾವಣೆ ಪ್ರಚಾರದಲ್ಲಿ ನೀವು ಜಾತಿ ಹೆಸರಿನಲ್ಲಿ ಭಿಕ್ಷೆ ಬೇಡಬೇಕಿತ್ತೆ' ಎಂದು ಕೇಳಿದರು.

ಆಗ ಸಿಟ್ಟಿನಿಂದ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ನೀವು ಮಾಡಿದ್ದೂ ಜಾತಿ ರಾಜಕಾರಣವನ್ನೆ. ನೀವು ಬಿಜೆಪಿ ಅಧ್ಯಕ್ಷರಾಗಿರುವುದು, ಆ ಹುದ್ದೆ ಉಳಿಸಿಕೊಳ್ಳಲು ಯತ್ನಿಸುತ್ತಿರುವುದು ಜಾತಿಯನ್ನು ಮುಂದಿಟ್ಟುಕೊಂಡೇ. ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಗನ ವಿರುದ್ಧ ನಮ್ಮ ಪಕ್ಷದ ಅಲ್ಪಸಂಖ್ಯಾತ ಸಮುದಾಯದ ಯಾಸೀರ್ ಖಾನ್ ಪಠಾಣ್ ಗೆದ್ದಿರುವುದಕ್ಕೆ ಗ್ಯಾರಂಟಿಗಳ ಬಲವೇ ಕಾರಣ' ಎಂದರು.

ಸುದ್ದಿ 2 ನಿಮಿಷ

ಬಿಎಸ್‌ವೈ ಮಧ್ಯಂತರ ಅರ್ಜಿ: ಪ್ರಾಸಿಕ್ಯೂಷನ್‌ಗೆ ನೋಟಿಸ್

ಬೆಂಗಳೂರು: ಬಾಲಕಿಯೊಬ್ಬಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಪ್ರಕರಣದಲ್ಲಿ ಹೊಸದಾಗಿ ಸಂಜ್ಞೇಯ ಅಪರಾಧ ಪರಿಗಣಿಸುವಂತೆ ಜನಪ್ರತಿನಿಧಿಗಳ ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಿರುವ ಆದೇಶದಲ್ಲಿ ಕೆಲವೊಂದು ಅಂಶಗಳನ್ನು ಕೈಬಿಡಬೇಕು ಮತ್ತು ಜಾಮೀನಿಗೆ ವಿಧಿಸಲಾಗಿರುವ ಷರತ್ತುಗಳನ್ನು ಸಡಿಲಿಸಬೇಕು' ಎಂ ಕೋರಿ ಆರೋಪಿಯೂ ಆದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಈ ಕುರಿತ ಎರಡು ಪ್ರತ್ಯೇಕ ಮಧ್ಯಂತರ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆ ವೇಳೆ ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ಎನ್. ನಾಯಕ್, 'ಆರೋಪಿಯು ಈಗಾಗಲೇ ಜಾಮೀನಿನ ಷರತ್ತುಗಳನ್ನು ಉಲ್ಲಂಘಿಸಿದ್ದಾರೆ' ಎಂದು ಆರೋಪಿಸಿದರು. ಕೆಲಕಾಲ ವಿಚಾರಣೆ ಆಲಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

ಶುಶ್ರೂಷಕಿ ಹತ್ಯೆ: ಮಾಸೂರು ಬಂದ್

ಹಾವೇರಿ: ಶುಶ್ರೂಷಕಿ ಸ್ವಾತಿ ಬ್ಯಾಡಗಿ (22) ಅವರ ಹತ್ಯೆಯನ್ನು ಖಂಡಿಸಿ ಸೋಮವಾರ ಕರೆ ನೀಡಲಾಗಿದ್ದ ರಟ್ಟೀಹಳ್ಳಿ ತಾಲ್ಲೂಕಿನ ಮಾಸೂರಿನಲ್ಲಿ ಬಂದ್ ಆಚರಿಸಲಾಯಿತು.

'ಲವ್ ಜಿಹಾದ್ ಹೆಸರಿನಲ್ಲಿ ಸ್ವಾತಿ ಅವರನ್ನು ಹತ್ಯೆ ಮಾಡಿದ ಆರೋಪಿಗಳ ವಿರುದ್ಧ ಕಠಿಣ ಪ್ರಕರಣ ಕೈಗೊಳ್ಳಬೇಕು. ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸಬೇಕು' ಎಂದು ವಿಶ್ವ ಹಿಂದೂ ಪರಿಷತ್, ಬಜರಂಗದಳ ಹಾಗೂ ಇತರೆ ಸಂಘಟನೆಗಳು ಬಂದ್ ಕರೆ ನೀಡಿದ್ದವು. ಸಂಘಟನೆಗಳ ಮುಖಂಡರು ಪ್ರತಿಭಟನೆ ನಡೆಸಿದರು.

ಮಾಸೂರಿನ ಜನರು ಬೆಳಿಗ್ಗೆಯಿಂದಲೇ ಸ್ವಯಂಪ್ರೇರಿತರಾಗಿ ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದರು. ಅಂಗಡಿ, ಹೋಟೆಲ್ ಮತ್ತು ಇತರೆ ಮಳಿಗೆಗಳು ಬಂದ್ ಆಗಿದ್ದವು. ಬಸ್ ಸಂಚಾರ ಯಥಾಸ್ಥಿತಿ ಇತ್ತು. ಬ್ಯಾಂಕ್, ಶಾಲಾ–ಕಾಲೇಜು ಹಾಗೂ ಅಗತ್ಯ ಸೇವೆಗಳ ಕಚೇರಿ ತೆರೆದಿದ್ದವು.

'ಮಾಸೂರಿನ ಸ್ವಾತಿ ಬ್ಯಾಡಗಿ ಅವರನ್ನು ಪ್ರೀತಿಸುತ್ತಿದ್ದ ಆರೋಪಿ ನಯಾಜ್, ಮದುವೆ ಹೆಸರಿನಲ್ಲಿ ವಂಚಿಸಿದ್ದ. ಮದುವೆ ಆಗುವಂತೆ ಹೇಳಿದ್ದಕ್ಕೆ ಸ್ನೇಹಿತರ ಜೊತೆ ಸೇರಿ ಸ್ವಾತಿ ಅವರನ್ನು ಕೊಂದ. ಇಂಥ ಹೀನ ಕೃತ್ಯ ಎಸಗಿದ ಆರೋಪಿಗಳಿಗೆ ಗಲ್ಲು ಶಿಕ್ಷೆ ವಿಧಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು. ರಾಣೆಬೆನ್ನೂರಿನಲ್ಲಿ ಎಬಿವಿಪಿ ಸಂಘಟನೆ ನೇತೃತ್ವದಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಸಿಇಟಿ ಕನ್ನಡ ಭಾಷೆ ಪರೀಕ್ಷೆ ಏ.15ಕ್ಕೆ

ಬೆಂಗಳೂರು: ಹೊರನಾಡು ಮತ್ತು ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ ಈ ಮೊದಲು ನಿಗದಿಗೊಳಿಸಿದ್ದ ಸಿಇಟಿ ಕನ್ನಡ ಪರೀಕ್ಷೆಯನ್ನು ಏ.18ಕ್ಕೆ ಬದಲು ಏ.15ರಂದು (ಮಂಗಳವಾರ) ನಡೆಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ತಿಳಿಸಿದೆ.

ಏಪ್ರಿಲ್ 18ರಂದು 'ಶುಭ ಶುಕ್ರವಾರ' ಇರುವುದರಿಂದ ಪರೀಕ್ಷೆಯ ದಿನಾಂಕವನ್ನು ಬದಲಾಯಿಸಬೇಕೆಂದು ಮನವಿಗಳು ಬಂದಿದ್ದವು. ಹೀಗಾಗಿ, ಸರ್ಕಾರದ ನಿರ್ದೇಶನದಂತೆ ಈ ಬದಲಾವಣೆ ಮಾಡಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಬೆಂಗಳೂರು, ಮಂಗಳೂರು, ವಿಜಯಪುರ, ಬೆಳಗಾವಿ ಕೇಂದ್ರಗಳಲ್ಲಿ ಮಾತ್ರ ಅಂದು ಬೆಳಿಗ್ಗೆ 10.30ರಿಂದ 11.30ರ ವರೆಗೆ ಕನ್ನಡ ಭಾಷಾ ಪರೀಕ್ಷೆ ನಡೆಯಲಿದೆ ಎಂದು ಅವರು ವಿವರಿಸಿದ್ದಾರೆ.

ಸಿಇಟಿ- 25ರ ಉಳಿದ ಪರೀಕ್ಷೆಗಳು ನಿಗದಿಯಂತೆ ಏ. 16 ಮತ್ತು 17ರಂದು ನಡೆಯಲಿವೆ. ಸದ್ಯದಲ್ಲೇ ಪ್ರವೇಶ ಪತ್ರ ಡೌನ್‌ಲೋಡ್‌ಗೂ ಅವಕಾಶ ನೀಡಲಾಗುವುದು. ವೇಳಾಪಟ್ಟಿಗೆ ಪ್ರಾಧಿಕಾರದ ವೆಬ್‌ಸೈಟ್ ನೀಡಬಹುದು ಎಂದೂ ಅವರು ಹೇಳಿದ್ದಾರೆ.

ಸಂಬಳ ನೀಡುವುದೂ ಕಷ್ಟ: ರೇವಂತ ರೆಡ್ಡಿ

ಹೈದರಾಬಾದ್: 'ರಾಜ್ಯದಲ್ಲಿ ಆರ್ಥಿಕ ಬಿಕ್ಕಟ್ಟು ತಲೆದೋರಿದೆ. ಸರ್ಕಾರಿ ನೌಕರರಿಗೆ ತಿಂಗಳ ಮೊದಲ ದಿನ ಸಂಬಳ ನೀಡುವುದೂ ಕಷ್ಟವಾಗಿದೆ' ಎಂದು ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ ಅವರು ವಿಧಾನ ಪರಿಷತ್ತಿನಲ್ಲಿ ಸೋಮವಾರ ಹೇಳಿದರು.

ಸರ್ಕಾರಿ ನೌಕರರನ್ನು ಉದ್ದೇಶಿಸಿ, 'ನಿಮಗೆ ಸಂಬಳ ನೀಡುವುದಕ್ಕಾಗಿಯೇ ಆರ್‌ಬಿಐನಿಂದ ಪ್ರತಿ ತಿಂಗಳು ₹4,000 ಕೋಟಿ ಸಾಲ ಪಡೆದು ಕೊಳ್ಳುತ್ತಿದ್ದೇವೆ. ಇದು ನಿಮ್ಮದೇ ಸರ್ಕಾರ. ಲೆಕ್ಕಪತ್ರವನ್ನು ತೋರಿಸುತ್ತೇನೆ. ತುಟ್ಟಿಭತ್ಯೆ ಬೇಕಾ ಅಥವಾ ಸಂಬಳ ಬೇಕಾ ಎಂದು ನೀವೇ ನಿರ್ಧರಿಸಿ. ನಮ್ಮ ಪರಿಸ್ಥಿತಿ ಅರ್ಥ ಮಾಡಿಕೊಳ್ಳಿ' ಎಂದರು.

ಉತ್ತರ ಪ್ರದೇಶದ ಹೋಲಿಕೆಗೆ ತೀವ್ರ ಆಕ್ಷೇಪ

ಕಾನೂನು ಮತ್ತು ಸುವ್ಯವಸ್ಥೆ: ಗೃಹ ಸಚಿವರ ಉತ್ತರ ವಿರೋಧಿಸಿ ವಿಪಕ್ಷ ಸದಸ್ಯರ ಸಭಾತ್ಯಾಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ ಎಂದ ವಿಧಾನ ಪರಿಷತ್ತಿನ ವಿರೋಧ ಪಕ್ಷಗಳ ಸದಸ್ಯರ ಆರೋಪವನ್ನು ನಿರಾಕರಿಸಿದ ಗೃಹ ಸಚಿವ ಜಿ. ಪರಮೇಶ್ವರ, ದೇಶದ ಬೇರೆಲ್ಲಾ ರಾಜ್ಯಗಳಿಗಿಂತ ಕರ್ನಾಟಕದಲ್ಲಿ ಅಪರಾಧ ಕೃತ್ಯಗಳು ನಿಯಂತ್ರಣದಲ್ಲಿವೆ ಎಂದು ಅಂಕಿ–ಅಂಶಗಳನ್ನು ಸದನದ ಮುಂದೆ ಇರಿಸಿದರು. ಇದನ್ನು ಒಪ್ಪದ ವಿರೋಧ ಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದರು.

ಬಿಜೆಪಿಯ ಎನ್.ರವಿಕುಮಾರ್, ಸಿ.ಟಿ.ರವಿ, ಹೇಮಲತಾ ನಾಯಕ್, ಜೆಡಿಎಸ್‌ನ ಟಿ.ಎ.ಶರವಣ, ಎಸ್.ಎಲ್. ಬೋಜೇಗೌಡ ಅವರು ನಿಯಮ 69ರ ಅಡಿಯಲ್ಲಿ ವಿಷಯವನ್ನು ಪ್ರಸ್ತಾಪಿಸಿ, 'ರಾಜ್ಯದಲ್ಲಿ ಅತ್ಯಾಚಾರ, ಕೊಲೆ ಮತ್ತು ದರೋಡೆ ಪ್ರಕರಣಗಳು ಹೆಚ್ಚಾಗಿವೆ. ಗೃಹ ಸಚಿವ ಮತ್ತು ಗೃಹ ಇಲಾಖೆ ವಿಫಲವಾಗಿವೆ' ಎಂದು ಸರ್ಕಾರದ ಗಮನ ಸೆಳೆದಿದ್ದರು.

ಇದಕ್ಕೆ ಎರಡು ತಾಸಿನಷ್ಟು ಉತ್ತರ ನೀಡಿದ ಜಿ.ಪರಮೇಶ್ವರ, 'ಕರ್ನಾಟಕದ ಪ್ರಕರಣಗಳನ್ನಷ್ಟೇ ಗಮನದಲ್ಲಿ ಇರಿಸಿಕೊಂಡು ಮಾತನಾಡಬಾರದು. ಉತ್ತರ ಪ್ರದೇಶ, ಬಿಹಾರ, ರಾಜಸ್ಥಾನ, ಮಹಾರಾಷ್ಟ್ರ, ಗುಜರಾತ್‌ಗಳಿಗಿಂತ ಕಡಿಮೆ ಕೊಲೆ, ದರೋಡೆ, ಅತ್ಯಾಚಾರ ಪ್ರಕರಣಗಳು ಕರ್ನಾಟಕದಲ್ಲಿ ದಾಖಲಾಗಿವೆ' ಎಂದರು.

'ಈ ಹಿಂದೆ ಇತರರು ಗೃಹ ಸಚಿವರಾಗಿದ್ದವರ ಅವಧಿಯಲ್ಲಿ ಹೆಚ್ಚು ಪ್ರಕರಣಗಳು ನಡೆದಿವೆ. ಈಗ ಅದು ಕಡಿಮೆಯಾಗಿದೆ. 2020ರಲ್ಲಿ 1,316, 2021ರಲ್ಲಿ 1,341, 2022ರಲ್ಲಿ 1,368, 2023ರಲ್ಲಿ 1,296, 2024ರಲ್ಲಿ 1,208 ಮತ್ತು 2025ರಲ್ಲಿ ಈವರೆಗೆ 204 ಕೊಲೆ ಪ್ರಕರಣಗಳು ದಾಖಲಾಗಿವೆ. ಎಲ್ಲರ ಅವಧಿಯಲ್ಲೂ ಕೃತ್ಯಗಳು ನಡೆದಿವೆ. ಆದರೆ ಈಗ ಕಡಿಮೆಯಾಗಿದೆ' ಎಂದು ವರು ತಿಳಿಸಿದರು.

ತಾವು ಕೇಳಿದ ಎಲ್ಲ ಪ್ರಶ್ನೆಗಳಿಗೆ ಉತ್ತರ ದೊರೆತಿಲ್ಲ ಎಂದು ವಿರೋಧ ಪಕ್ಷಗಳ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, 'ಉತ್ತರವನ್ನು ನಾವು ವಿರೋಧಿಸಿ ಸಭಾತ್ಯಾಗ ಮಾಡುತ್ತೇವೆ' ಎನ್ನುತ್ತಾ ಸದನದಿಂದ ಹೊರನಡೆದರು. ಬೋಜೇಗೌಡ ಮತ್ತು ಎಚ್.ವಿಶ್ವನಾಥ್ ಹೊರತುಪಡಿಸಿ ವಿರೋಧ ಪಕ್ಷಗಳ ಉಳಿದ ಸದಸ್ಯರು ಅವರನ್ನು ಹಿಂಬಾಲಿಸಿದರು.

'ನಮ್ಮ ಆಕ್ಷೇಪಗಳಿಗೆ ಗೃಹ ಸಚಿವ ಉತ್ತರಿಸುವ ಮುನ್ನವೇ ಸಭಾತ್ಯಾಗ ಮಾಡಿದರೆ ಹೇಗೆ' ಎಂದ ಬೋಜೇಗೌಡ, ಕೆಲ ಸಮಯದ ನಂತರ ತಾವೂ ಹೊರನಡೆದರು. ಸಭಾಧ್ಯಕ್ಷರು ಕಲಾಪವನ್ನು ಮಂಗಳವಾರಕ್ಕೆ ಮುಂದೂಡಿದರು.

ನಮ್ಮದು ದೇಶದಲ್ಲೇ ಅತ್ಯುತ್ತಮ ಪೊಲೀಸ್ ಪಡೆ ಎಂದು ಸಚಿವರು ಹೇಳಿದ್ದಾರೆ. ಅದು ಸರಿ. ಆದರೆ ನಮ್ಮ ರಾಜ್ಯಕ್ಕೆ ಅತ್ಯುತ್ತಮ ಗೃಹ ಸಚಿವ ಬೇಕಾಗಿದೆ

ಭಾರತಿ ಶೆಟ್ಟಿ, ವಿಧಾನ ಪರಿಷತ್ ಸದಸ್ಯೆ

ದುರ್ಬಲ ಗೃಹ ಸಚಿವ ಎಂದರೆ ಅರ್ಥವೇನು? ನಾನೇನು ಲಾಠಿ ಹಿಡಿದು ಬೀದಿಯಲ್ಲಿ ನಿಲ್ಲಬೇಕೆ? ನಮ್ಮ ಬಲ–ದೌರ್ಬಲ್ಯ ಆಡಳಿತದಲ್ಲಿ ಕಾಣುತ್ತದೆ

ಜಿ.ಪರಮೇಶ್ವರ, ಗೃಹ ಸಚಿವ

ಪರಿಷತ್ ಕಲಾಪದಲ್ಲಿ ಕೇಳಿಸಿದ್ದು...

ಬೆಳಗಾವಿ ಅಧಿವೇಶನದಲ್ಲಿ ನಡೆದದ್ದನ್ನು ನನ್ನೊಬ್ಬನಿಗೇ ಮಿತಗೊಳಿಸಿ ನೋಡಬಾರದು. ಶಾಸಕಾಂಗದ ಮೇಲೆ ಕಾರ್ಯಾಂಗ ದೌರ್ಜನ್ಯ ಎಸಗಿತು. ಇದು ಮುಂದೆ ಇನ್ನೊಬ್ಬರ ಮೇಲೂ ಆಗಬಹುದು. ಇದಕ್ಕೊಂದು ತಾರ್ಕಿಕ ಅಂತ್ಯ ಕಾಣಿಸಬೇಕು

ಸಿ.ಟಿ.ರವಿ, ಬಿಜೆಪಿ ಸದಸ್ಯ

ಘಟನೆ ನಡೆದ ಮೇಲೆಯೇ ಆ ಬಗ್ಗೆ ಗೃಹಸಚಿವರಿಗೆ ಗೊತ್ತಾಗುತ್ತದೆ. ಏಕೆಂದರೆ ಅವರ ಬಳಿ ಗುಪ್ತಚರ ಇಲಾಖೆ ಇಲ್ಲ. ಅದು ಮುಖ್ಯಮಂತ್ರಿ ಬಳಿ ಇದೆ. ಮುಖ್ಯಮಂತ್ರಿ ಬಳಿ ಇರುವ ಇಲಾಖೆಗಳೆಲ್ಲಾ ಸತ್ತು ಹೋಗುತ್ತವೆ. ಆರ್ಥಿಕ ಇಲಾಖೆಯೂ ಸತ್ತು ಹೋಗಿದೆ.

ಎಚ್.ವಿಶ್ವನಾಥ್, ಬಿಜೆಪಿ ಸದಸ್ಯ

ನಮ್ಮ ಮುಖ್ಯಮಂತ್ರಿ ಅತ್ಯುತ್ತಮವಾದ ಬಜೆಟ್ ನೀಡಿದ್ದಾರೆ. ಎಲ್ಲರಿಗೂ ನ್ಯಾಯ ಒದಗಿಸಿದ್ದಾರೆ. ಆರ್ಥಿಕ ಇಲಾಖೆ ಸತ್ತು ಹೋಗಿದೆ ಎಂದು ನೀವು ಹೇಗೆ ಹೇಳುತ್ತೀರಿ. ಇದನ್ನು ಕಡತದಿಂದ ತೆಗೆದುಹಾಕಬೇಕು

ಸಲೀಂ ಅಹಮದ್, ಕಾಂಗ್ರೆಸ್ ಸದಸ್ಯ

ವಿಧಾನ ಪರಿಷತ್ ಕಲಾಪ ವೀಕ್ಷಿಸಿದ ವಿದ್ಯಾರ್ಥಿಗಳು —ಪ್ರಜಾವಾಣಿ ಚಿತ್ರ

ಬಿಸಿ ಚರ್ಚೆ.... ಆರೋಗ್ಯ ಸಚಿವ ಸಚಿವ ಗುಂಡೂರಾವ್ ಅವರು ಪ್ರಜಾವಾಣಿ ಪತ್ರಿಕೆಯ ವರದಿಯೊಂದರ ಕುರಿತು ಕಾಂಗ್ರೆಸ್ ಸದಸ್ಯರಾದ ನಜೀರ್ ಅಹಮ್ಮದ್, ಕೆ. ಗೋವಿಂದ ರಾಜ್ ಹಾಗೂ ರವಿ ಅವರೊಂದಿಗೆ ಸೋಮವಾರ ವಿಧಾನ ಪರಿಷತ್ ಕಲಾಪದಲ್ಲಿ ಚರ್ಚೆಯಲ್ಲಿ ತೊಡಗಿದ್ದರು – ಪ್ರಜಾವಾಣಿ ಚಿತ್ರ

'ಮುಸ್ಲಿಮರಿಗೆ ಮೀಸಲು: ಸಂಸತ್‌ನಲ್ಲಿ ಪ್ರಸ್ತಾಪ'

ಪ್ರಜಾವಾಣಿ ವಾರ್ತೆ

ನವದೆಹಲಿ: ಸರ್ಕಾರಿ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಮೀಸಲು ನೀಡಿರುವ ಕರ್ನಾಟಕ ಸರ್ಕಾರದ ಕ್ರಮ ಅಸಾಂವಿಧಾನಿಕ, ದುಸ್ಸಾಹಸ ಎಂದು ಅಭಿಪ್ರಾಯ ಪಟ್ಟಿರುವ ಬಿಜೆಪಿ, 'ಈ ವಿಷಯವನ್ನು ಸಂಸತ್‌ನಲ್ಲಿ ಪ್ರಸ್ತಾಪಿಸಲಾಗುವುದು. ಸದನದ ಹೊರಗೆ ಸಹ ಹೋರಾಟ ನಡೆಸಲಾಗುವುದು' ಎಂದು ಘೋಷಿಸಿದೆ.

ಸೋಮವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ಸಂಸದರಾದ ತೇಜಸ್ವಿ ಸೂರ್ಯ, ಪಿ.ಸಿ. ಮೋಹನ್, ಬ್ರಿಜೇಶ್ ಚೌಟ ಹಾಗೂ ಸಿ.ಎನ್.ಮಂಜುನಾಥ್, 'ಕರ್ನಾಟಕ ಕಾಂಗ್ರೆಸ್ ಸರ್ಕಾರ ಓಲೈಕೆ ರಾಜಕಾರಣದಲ್ಲಿ ತೊಡಗಿದೆ. ಈ ಕ್ರಮವು ಸಂವಿಧಾನಬಾಹಿರ ಹಾಗೂ ಸಂವಿಧಾನ ನಿರ್ಮಾತೃಗಳು ರೂಪಿಸಿದ ತತ್ವಗಳಿಗೆ ವಿರುದ್ಧ' ಎಂದು ಕಿಡಿಕಾರಿದರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಒತ್ತಡಕ್ಕೆ ಮಣಿದು ಕಾಂಗ್ರೆಸ್ ಸರ್ಕಾರ ಈ ತೀರ್ಮಾನ ತೆಗೆದುಕೊಂಡಿದೆ ಎಂ ದರು.

'ಈ ಕಾನೂನುಬಾಹಿರ ನಿರ್ಧಾರವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು. ನಮ್ಮ ಪಕ್ಷವು ವಿಧಾನಮಂಡಲ ಹಾಗೂ ಸಂಸತ್‌ನಲ್ಲಿ ಈ ವಿಷಯ ಪ್ರಸ್ತಾಪಿಸಿ ಹೋರಾಟ ಮಾಡಲಿದೆ' ಎಂದು ತೇಜಸ್ವಿ ಸೂರ್ಯ ತಿಳಿಸಿದರು. ಸರ್ಕಾರ ತನ್ನ ತೀರ್ಮಾನವನ್ನು ವಾಪಸ್ ಪಡೆಯುವ ತನಕ ಹೋರಾಟ ಮುಂದುವರಿಯಲಿದೆ ಎಂದು ಅವರು ಹೇಳಿದರು.

ಕರ್ನಾಟಕ ಸರ್ಕಾರದ ಈ ಕ್ರಮವು ರಾಷ್ಟ್ರೀಯ ಸಮಗ್ರತೆ, ಏಕತೆ ಮತ್ತು ಸಾರ್ವಭೌಮತ್ವಕ್ಕೆ ಬೆದರಿಕೆಯಾಗಿದೆ ಎಂದು ಅವರು ದೂರಿದರು.

ಬ್ರಿಜೇಶ್ ಚೌಟ ಮಾತನಾಡಿ, 'ನಮ್ಮ ದೇಶದಲ್ಲಿ ಮತ-ಧರ್ಮಗಳ ಆಧಾರದ ಮೇಲೆ ಈ ರೀತಿ ಮೀಸಲಾತಿ ನೀಡುವುದಕ್ಕೆ ಅವಕಾಶ ಇಲ್ಲ. ಈ ವಿಚಾರವಾಗಿ ಸುಪ್ರೀಂಕೋರ್ಟ್ ಆದೇಶ ನೀಡಿದೆ. ಧರ್ಮ ಆಧರಿಸಿ ಮೀಸಲಾತಿ ನೀಡುವುದನ್ನು ಅಂಬೇಡ್ಕರ್ ವಿರೋಧಿಸಿದ್ದರು. ಈ ಹಿಂದೆ ಹಲವು ರಾಜ್ಯಗಳು ಧರ್ಮಾಧಾರಿತ ಮೀಸಲಾತಿ ನೀಡಲು ಪ್ರಯತ್ನ ನಡೆಸಿದ್ದವು. ಆದರೆ, ಅದಕ್ಕೆ ನ್ಯಾಯಾಲಯಗಳು ತಡೆಯಾಜ್ಞೆ ನೀಡಿದ್ದವು' ಎಂದರು.

ಮೀಸಲು: ವಿಧಾನ ಪರಿಷತ್‌ನಲ್ಲಿ ಪ್ರತಿಧ್ವನಿ

ಬೆಂಗಳೂರು: ಸರ್ಕಾರಿ ಕಾಮಗಾರಿಗಳಲ್ಲಿ ಮುಸ್ಲಿಮರಿಗೆ (ಪ್ರವರ್ಗ 2ಬಿ) ಶೇ 4 ಮೀಸಲಾತಿ ಕಲ್ಪಿಸಿರುವ ವಿಚಾರವು ವಿಧಾನ ಪರಿಷತ್‌ನಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವೆ ಕೆಲ ಹೊತ್ತು ಮಾತಿನ ಜಟಾಪಟಿಗೆ ಕಾರಣವಾಯಿತು.

ಸೋಮವಾರ ಬೆಳಿಗ್ಗೆ ಕಲಾಪ ಆರಂಭ ಆಗುತ್ತಿದ್ದಂತೆ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, 'ಧರ್ಮಾಧಾರಿತವಾಗಿ ಮೀಸಲಾತಿ ನೀಡಲು ನಿರ್ಧರಿಸಿರುವ ಸರ್ಕಾರದ ಕ್ರಮ ಸಂವಿಧಾನಬಾಹಿರ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅದಕ್ಕೆ ಕ್ರಿಯಾಲೋಪ ಎತ್ತಿದ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, 'ವಿರೋಧ ಪಕ್ಷದ ನಾಯಕರಾದವರು ಸದನವನ್ನು ತಪ್ಪು ದಾರಿಗೆ ಎಳೆಯಬಾರದು. ಸಂವಿಧಾನದ ಅನುಸಾರವೇ ಅಲ್ಪಸಂಖ್ಯಾತರಿಗೆ ಮೀಸಲಾತಿ ಕಲ್ಪಿಸಲಾಗಿದೆ. ಇದು ಧಾರ್ಮಿಕ ಮೀಸಲಾತಿ ಅಲ್ಲ. ತೆರಿಗೆ ಪಾವತಿಸುತ್ತಿರುವ ದೇಶದಲ್ಲಿ 140 ಕೋಟಿ ಜನರಿಗೂ ಸೌಲಭ್ಯಗಳನ್ನು ಪಡೆಯುವ ಹಕ್ಕಿದೆ. ದ್ವೇಷ ಭಾವನೆ ಬಿತ್ತುವ ಪದಗಳನ್ನು ಕಡತದಿಂದ ತೆಗೆಯಬೇಕು' ಎಂದು ಆಗ್ರಹಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಛಲವಾದಿ ನಾರಾಯಣಸ್ವಾಮಿ, 'ಸಂವಿಧಾನದಡಿ ಧಾರ್ಮಿಕ ಮೀಸಲಾತಿ ಸಲ್ಲದು. ಹಿಂದುಳಿದ ವರ್ಗದಡಿ (ಒಬಿಸಿ) ಸೌಲಭ್ಯಗಳನ್ನು ನೀಡಲು ನಮ್ಮ ತಕರಾರಿಲ್ಲ. ಧರ್ಮದ ಆಧಾರದಲ್ಲಿ ಮೀಸಲಾತಿ ನೀಡುವುದನ್ನು ಕಾನೂನು ಒಪ್ಪಲ್ಲ' ಎಂದರು.

ನಾರಾಯಣಸ್ವಾಮಿ ಮಾತಿಗೆ ದನಿಗೂಡಿಸಿದ ಬಿಜೆಪಿಯ ಸಿ.ಟಿ. ರವಿ, 'ಧರ್ಮದ ಆಧಾರದಲ್ಲಿ ನೀಡಿದ್ದ ಮೀಸಲಾತಿ ಪ್ರಕರಣಗಳನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ. ಮತೀಯ ಆಧಾರದ ಮೀಸಲಾತಿಯನ್ನು ಡಾ. ಬಿ.ಆರ್. ಅಂಬೇಡ್ಕರ್ ಕೂಡ ತಿರಸ್ಕರಿಸಿದ್ದರು' ಎಂದರು.

ಆಗ ಬಿ.ಕೆ. ಹರಿಪ್ರಸಾದ್, 'ಈ ಬಗ್ಗೆ ವಿಸ್ತೃತ ಚರ್ಚೆಗೆ ಅರ್ಧ ಗಂಟೆ ಕಾಲಾವಕಾಶ ನೀಡಬೇಕು' ಎಂದು ಸಭಾಪತಿ ಪೀಠದಲ್ಲಿದ್ದ ಉಪ ಸಭಾಪತಿ ಎಂ.ಕೆ. ಪ್ರಾಣೇಶ್ ಅವರನ್ನು ಕೋರಿದರು. ಸಮ್ಮತಿಸಿದ ಉಪ ಸಭಾಪತಿ, 'ನೋಟಿಸ್ ನೀಡಿದರೆ ಚರ್ಚೆಗೆ ಅವಕಾಶ ನೀಡುವ ಬಗ್ಗೆ ಪರಿಶೀಲಿಸಲಾಗುವುದು' ಎಂದು ವಾಗ್ವಾದಕ್ಕೆ ತೆರೆ ಎಳೆದರು.

'ವಿಶೇಷ ನ್ಯಾಯಾಲಯ ಸ್ಥಾಪನೆಗೆ ಪ್ರಸ್ತಾವ'

ಪರಿಷತ್ ಪ್ರಶ್ನೋತ್ತರ

ಬೆಂಗಳೂರು: 'ನಕಲಿ ಔಷಧ ತಯಾರಿಕೆ ಕಂಪನಿಗಳು ಹಾಗೂ ಮಾರಾಟಗಾರರ ವಿರುದ್ಧ ದಾಖಲಾಗಿರುವ ಪ್ರಕರಣಗಳ ತ್ವರಿತ ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪಿಸುವಂತೆ ಕಾನೂನು ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಕಾಂಗ್ರೆಸ್‌ನ ಎಸ್. ರವಿ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ನಕಲಿ ಔಷಧ ಮಾರಾಟ ಮಾಡುತ್ತಿರುವ 21 ಪ್ರಕರಣಗಳು ಗಮನಕ್ಕೆ ಬಂದಿದ್ದು, ವಿವಿಧ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲಾಗಿದೆ. ಮೂರು ವರ್ಷಗಳಲ್ಲಿ 20 ನಕಲಿ ಔಷಧ ತಯಾರಕ ಕಂಪನಿಗಳು ಹಾಗೂ ಒಬ್ಬರು ಔಷಧ ಮಾರಾಟಗಾರರ ಮೇಲೆ ಮೊಕದ್ದಮೆ ಹೂಡಲಾಗಿದೆ' ಎಂದರು.

'ಕಳಪೆ ಗುಣಮಟ್ಟದ ಔಷಧ ತಯಾರಿಸಿದ ಕಂಪನಿಗಳ ವಿರುದ್ಧ 1,001 ಪ್ರಕರಣ ದಾಖಲಿಸಿದ್ದು, 126 ಪ್ರಕರಣ ವಿಚಾರಣೆ ಹಂತದಲ್ಲಿದೆ. ಆದರೆ, ಇಂತಹ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತಿಲ್ಲ. ಹೀಗಾಗಿ, ಇಂತಹ ಪ್ರಕರಣಗಳನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ವಿಶೇಷ ನ್ಯಾಯಾಲಯ ಸ್ಥಾಪಿಸುವ ಅಗತ್ಯವಿದೆ' ಎಂದರು.

'170 ಹುದ್ದೆಗಳ ಮಂಜೂರಾತಿಗೆ ಪ್ರಸ್ತಾವ'

ಆಹಾರ ಸುರಕ್ಷತಾ ಪ್ರಾಧಿಕಾರಕ್ಕೆ 170 ಹುದ್ದೆ ಮಂಜೂರಾತಿ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ.

ಪ್ರಾಧಿಕಾರದಲ್ಲಿ 2017ರಲ್ಲಿ 382 ಹುದ್ದೆಗಳನ್ನು ಸೃಷ್ಟಿಸಲಾಗಿದೆ. ಆರೋಗ್ಯ ಇಲಾಖೆಯಿಂದ 130 ಅಧಿಕಾರಿಗಳು ಎರವಲು ಮೇರೆಗೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಎರವಲು ಮಾಡಿದ್ದ 27 ತಜ್ಞ ವೈದ್ಯರ ಪೈಕಿ 18 ಮಂದಿಯ ಎರವಲು ಸೇವೆ ರದ್ದುಗೊಳಿಸಿ ಆದೇಶಿಸಲಾಗಿದೆ. ಇದನ್ನು ಪ್ರಶ್ನಿಸಿ ಕೆಲವರು ಕೆಎಟಿಯಿಂದ ತಡೆಯಾಜ್ಞೆ ತಂದಿದ್ದು, ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

ಜೆಡಿಎಸ್‌ನ ಟಿ.ಎ. ಶರವಣ ಪ್ರಶ್ನೆಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉತ್ತರ

'ವಿ.ವಿ– ಬಾಕಿ ಹೊರೆ ವರ್ಗಾಯಿಸಲು ಚಿಂತನೆ'

ಎಂ.ಸಿ. ಸುಧಾಕರ್

ಮೂಲ ವಿಶ್ವವಿದ್ಯಾಲಯಗಳ ಬಾಕಿ ಹೊರೆಯನ್ನು ವಿಭಜಿತ ವಿಶ್ವವಿದ್ಯಾಲಯಗಳಿಗೆ ವರ್ಗಾಯಿಸಲು ಚಿಂತನೆ ನಡೆಸಲಾಗಿದೆ. ವಿಶ್ವವಿದ್ಯಾಲಯಗಳು ವಿಭಜನೆಯಾದ ಸಂದರ್ಭದಲ್ಲೇ ಬಾಕಿ ಹೊಣೆಗಾರಿಕೆ ಹಂಚಿಕೆ ಆಗಬೇಕಿತ್ತು. ಮೂಲ ವಿಶ್ವವಿದ್ಯಾಲಯಗಳ ಮೇಲೆ ಬಾಕಿಯ ಹೊರೆ ಬಿದ್ದಿದೆ

ಬಿಜೆಪಿಯ ಎಸ್.ವಿ. ಸಂಕನೂರ ಪ್ರಶ್ನೆಗೆ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಉತ್ತರ.

'ಗಡಿಪಾರು ನಿಯಮ ಸಡಿಲಿಸಲು ಮನವಿ'

ರಾಜ್ಯದಲ್ಲಿ ಅನಧಿಕೃತವಾಗಿ ನೆಲಸಿರುವ ವಿದೇಶಿ ಪ್ರಜೆಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. ಗಡಿಪಾರು ನಿಯಮ ಇನ್ನಷ್ಟು ಸರಳೀಕರಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಒಮ್ಮೆ ವ್ಯಕ್ತಿ ವಿರುದ್ಧ ಅಪರಾಧ ಪ್ರಕರಣ ದಾಖಲಾದರೆ, ಆ ಪ್ರಕರಣ ಇತ್ಯರ್ಥ ಆಗುವವರೆಗೂ ನ್ಯಾಯಾಲಯದ ವ್ಯಾಪ್ತಿ ಬಿಟ್ಟು ತೆರಳುವಂತಿಲ್ಲ. ವಿದೇಶಿಯರು ಈ ಅವಕಾಶವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ.

ಬಿಜೆಪಿಯ ಪಿ.ಎಚ್. ಪೂಜಾರ್ ಪ್ರಶ್ನೆಗೆ ಗೃಹ ಸಚಿವ ಜಿ. ಪರಮೇಶ್ವರ ಉತ್ತರ

'ಯುವನಿಧಿ ನೀಡಲು ಸರ್ಕಾರ ಬದ್ಧ'

ಪಂಚ ಗ್ಯಾರಂಟಿಗಳಲ್ಲೊಂದಾದ ಯುವನಿಧಿ ಯೋಜನೆಯನ್ನು ಯಾವುದೇ ಕಾರಣಕ್ಕೂ ಸ್ಥಗಿತಗೊಳಿಸುವುದಿಲ್ಲ. ಯುವನಿಧಿ ಯೋಜನೆಯಡಿ ನಿರುದ್ಯೋಗ ಭತ್ಯೆ ಕೋರಿ 2,62,207 ಮಂದಿ ಅರ್ಜಿ ಸಲ್ಲಿಸಿದ್ದು, 1,74,170 ಫಲಾನುಭವಿಗಳಿಗೆ ಭತ್ಯೆ ನೀಡಲಾಗುತ್ತಿದೆ

ಬಿಜೆಪಿಯ ಡಿ.ಎಸ್. ಅರುಣ್ ಪ್ರಶ್ನೆಗೆ ಕೌಶಲಾಭಿವೃದ್ಧಿ ಸಚಿವ ಡಾ. ಶರಣಪ್ರಕಾಶ್ ಪಾಟೀಲ ಉತ್ತರ

'ದೈಹಿಕ ಶಿಕ್ಷಕರಿಗೆ ಮುಂಬಡ್ತಿ ಅಸಾಧ್ಯ'

ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ದೈಹಿಕ ಶಿಕ್ಷಣ ಶಿಕ್ಷಕರಿಗೆ ಮುಖ್ಯ ಶಿಕ್ಷಕ ಹುದ್ದೆಗೆ ಮುಂಬಡ್ತಿ ನೀಡಲು ಸಾಧ್ಯವಿಲ್ಲ. ಮುಖ್ಯ ಶಿಕ್ಷಕ ಹುದ್ದೆಯ ಬಡ್ತಿಗೆ ಪದವಿ ಜತೆಗೆ ಬಿ.ಇಡಿ ಪದವಿಯನ್ನು ಕೂಡ ನಿಗದಿಪಡಿಸಲಾಗಿದೆ. ಆದರೆ, ದೈಹಿಕ ಶಿಕ್ಷಣ ಶಿಕ್ಷಕರು ಬಿ.ಇಡಿ ಪದವಿ ಹೊಂದಿರುವುದಿಲ್ಲ. ಆದರೂ ಈ ಬಗ್ಗೆ ಚರ್ಚಿಸಿ, ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು

ಕಾಂಗ್ರೆಸ್‌ನ ರಾಮೋಜಿಗೌಡ ಪ್ರಶ್ನೆಗೆ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಉತ್ತರ

ಸರ್ಕಾರಿ ಜಮೀನು ಒತ್ತುವರಿ ಮಾಡಿದ ಆರೋಪ

ಎಚ್‌ಡಿಕೆ ಪ್ರಕರಣ: ಬ್ರೈನ್ ಮ್ಯಾಪಿಂಗ್ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಮನಗರ ಜಿಲ್ಲೆ ಕೇತಗಾನಹಳ್ಳಿ ವ್ಯಾಪ್ತಿಯಲ್ಲಿ 14 ಎಕರೆ ಸರ್ಕಾರಿ ಜಮೀನು ಒತ್ತುವರಿ ಮಾಡಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ರಾಜ್ಯ ಸರ್ಕಾರ ಯಾರ ಅನುಮತಿ ಪಡೆದು ವಿಶೇಷ ತನಿಖಾ ದಳ (ಎಸ್‌ಐಟಿ) ರಚಿಸಿದೆ' ಎಂದು ಕೆಂಡ ಕಾರಿರುವ ಹೈಕೋರ್ಟ್, 'ಪ್ರಕರಣದಲ್ಲಿನ ಎಲ್ಲ ಆರೋಪಿಗಳನ್ನೂ ಬ್ರೈನ್ ಮ್ಯಾಪಿಂಗ್‌ಗೆ ಒಳಪಡಿಸಲು ಆದೇಶಿಸಿದರೆ ಸತ್ಯ ಹೊರಬರಲಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದೆ.

'ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹಾಗೂ ಅವರ ಸಂಬಂಧಿ ಮಾಜಿ ಶಾಸಕ ಡಿ.ಸಿ. ತಮ್ಮಣ್ಣ ಮತ್ತಿತರರ ವಿರುದ್ಧದ ಭೂ ಕಬಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ನೀಡಿರುವ ಆದೇಶ ಜಾರಿಗೊಳಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ' ಎಂದು ಆಕ್ಷೇಪಿಸಿ ಎಸ್.ಆರ್.ಹಿರೇಮಠ ನೇತೃತ್ವದ 'ಸಮಾಜ ಪರಿವರ್ತನಾ ಸಮುದಾಯ' ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಕೆ.ಸೋಮಶೇಖರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡ ನ್ಯಾಯಪೀಠ, 'ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕಟಾರಿಯಾ ಎಸ್‌ಐಟಿ ರಚಿಸಿದ್ದಾರೆ. ಕಂದಾಯ ಇಲಾಖೆ ಎಸ್‌ಐಟಿ ರಚಿಸುವಷ್ಟು ಶಕ್ತಿಶಾಲಿಯೇ? ಎಸ್‌ಐಟಿ ರಚಿಸಬೇಕು ಎಂದು ನ್ಯಾಯಾಲಯ ಹೇಳಿತ್ತೇ? ರಾಜ್ಯ ಸರ್ಕಾರವು ಸಂವಿಧಾನಕ್ಕಿಂತ ಮಿಗಿಲಾಗಿದೆಯೇ? ಈ ಪ್ರಕರಣದಲ್ಲಿ 14 ಎಕರೆ ಒತ್ತುವರಿ ತೆರವು ಮಾಡಲಾಗಿದೆ ಎಂದು ತಿಳಿಸಲಾಗಿದೆ. ಉಳಿದ 71 ಎಕರೆ ಒತ್ತುವರಿ ತೆರವುಗೊಳಿಸಬೇಕಿದೆಯಲ್ಲವೇ? ಸರ್ಕಾರ ಈ ದಿಸೆಯಲ್ಲಿ ಯಾವ ರೀತಿಯ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ? ಎಷ್ಟು ಎಕರೆ ತೆರವು ಮಾಡಲಾಗಿದೆ' ಎಂದು ಪ್ರಶ್ನೆಗಳ ಮಳೆಗರೆಯಿತು.

ಕೆಲ ಕಾಲ ವಾದ ಆಲಿಸಿದ ನ್ಯಾಯಪೀಠ, 'ಮೇಲ್ನೋಟಕ್ಕೆ ಆರೋಪಿಗಳ ವಿರುದ್ಧ ನ್ಯಾಯಿಕ ಪ್ರಕ್ರಿಯೆ ಮುಂದುವರಿಸಲು ದಾಖಲೆಗಳು ಇವೆ. ಎಸ್‌ಐಟಿ ರಚಿಸಿರುವ ರಾಜೇಂದ್ರ ಕಟಾರಿಯಾ ಅವರ ಕ್ರಮವನ್ನು ಗಂಭೀರವಾಗಿ ಪರಿಗಣಿಸಲಾಗುವುದು. ಈ ಸಂಬಂಧ ವಿವರಣೆ ನೀಡಲು ಮುಂದಿನ ವಿಚಾರಣೆಗೆ ರಾಜೇಂದ್ರ ಕಟಾರಿಯಾ ನ್ಯಾಯಾಲಯಕ್ಕೆ ಖುದ್ದು ಹಾಜರಾಗಬೇಕು' ಎಂದು ಆದೇಶಿಸಿ ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಿತು. ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಕಿರಣ್ ವಿ.ರೋಣ ಹಾಗೂ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಸ್. ಬಸವರಾಜು ಹಾಜರಿದ್ದರು.

ಮಂಗಳವಾರ, ಮಾರ್ಚ್ 18, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 77 | ಪುಟ 16

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಹೃದಯಾಘಾತದ ಕಾರಣಗಳನ್ನು ತಿಳಿದಿದ್ದರೆ ಆಘಾತದ ಅಪಾಯದಿಂದ ಪಾರಾಗುವ ಸಾಧ್ಯತೆ ಹೆಚ್ಚು



ಆಳ-ಅಗಲ ಬಿಸಿಗಾಳಿ ಎದುರಿಸಲು ಸಜ್ಜಾಗಿ

2012ರ ಪ್ರಕರಣದಲ್ಲಿ ಅದಾನಿ ದೋಷಮುಕ್ತ 10

ಲೋಪಕ್ಕೆ 'ಕೃಪಾಂಕ': ಕೆಪಿಎಸ್‌ಸಿ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
74,169	22,508	₹92,180 (ಬೆಂಗಳೂರು)	₹1.05 ಲಕ್ಷ (ಬೆಂಗಳೂರು)	86.81

ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಮಾತಿಗೆ ಆಕ್ಷೇಪ ● ಕಾಂಗ್ರೆಸ್ – ಬಿಜೆಪಿ ಸದಸ್ಯರ ಗದ್ದಲ

ಆರ್‌ಎಸ್‌ಎಸ್: ಕಲಾಪ ಕಲಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಕುರಿತು ವಿಧಾನಸಭೆಯಲ್ಲಿ ಸೋಮವಾರ ಆಡಿದ ಮಾತು ಭಾರಿ ಕೋಲಾಹಲಕ್ಕೆ ಕಾರಣವಾಯಿತು. ಇದಕ್ಕೆ ಪ್ರತಿಯಾಗಿ ಬಿಜೆಪಿ ಸದಸ್ಯರು ಎಐಸಿಸಿ ವರಿಷ್ಠರ ಕುರಿತು ಮಾಡಿದ ಟೀಕೆಗಳು ಉರಿಯುವ ಬೆಂಕಿಗೆ ತುಪ್ಪ ಸುರಿಯಿತು. ಜಿಂದಾಬಾದ್, ಮುರ್ದಾಬಾದ್, ಧಿಕ್ಕಾರ ಘೋಷಣೆಗಳು ಮತ್ತು ಪರಸ್ಪರ ಏಕವಚನದ ಬಳಕೆಯಿಂದ ಕಲಾಪ ಕಮರಿತು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಉತ್ತರ ನೀಡುತ್ತಿದ್ದ ವೇಳೆ ಸಿದ್ದರಾಮಯ್ಯ ಅವರ ಮಾತಿಗೆ ಬಿಜೆಪಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಕಾಂಗ್ರೆಸ್ ಸದಸ್ಯರು, ತಮ್ಮ ನಾಯಕನ ಪರ ನಿಂತು ವಾಗ್ವಾದಕ್ಕೆ ಇಳಿದರು. ಕಲಾಪ ಅನೇಕ ಬಾರಿ ಗೊಂದಲದ ಗೂಡಾಯಿತು.

ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಹೊರ ಹೋಗಿದ್ದ ವೇಳೆಯಲ್ಲಿ ಈ ಗದ್ದಲ ಆರಂಭವಾಯಿತು. ಮರಳಿ ಬಂದ ಖಾದರ್ ಅವರು, ಆಡಳಿತ ಮತ್ತು ವಿರೋಧ ಪಕ್ಷಗಳ ನಾಯಕರ ಸಭೆ ನಡೆಸಿ ಎರಡೂ ಕಡೆಯ ಕೋಪವನ್ನು ತಣಿಸಿದರು. ಎರಡೂ ಕಡೆಯುವರೂ ಆಡಿದ್ದ 'ಸೂಕ್ಷ್ಮ' ಮಾತುಗಳನ್ನು ಕಡತದಿಂದ ತೆಗೆಸಿ ಮುಖ್ಯಮಂತ್ರಿಯವರು ಉತ್ತರ ಮುಂದುವರಿಸಲು ಅನುವು ಮಾಡಿಕೊಟ್ಟರು.

> ನಿಮಗೆಲ್ಲ ಹೆದರಿಕೊಳ್ಳಲ್ಲ. ನಿಮ್ಮನ್ನು ಎದುರಿಸಲು ನಾನು ತಯಾರಿದ್ದೇನೆ. ನನ್ನ ಹೇಳಿಕೆಯನ್ನು ಹಿಂದಕ್ಕೆ ಪಡೆಯುವುದಿಲ್ಲ. ಏನಾಗುತ್ತೋ ನೋಡೋಣ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> ಆರ್‌ಎಸ್‌ಎಸ್ ಬಗ್ಗೆ ಇಲ್ಲಿ ಮಾತನಾಡಬೇಡಿ . ಧಮ್ ಇದ್ರೆ ಹೊರಗೆ ಹೋಗಿ ಮಾತಾಡಿ, ಸದನದ ರಕ್ಷಣೆ ಪಡೆದು ಇಲ್ಲಿ ಮಾತನಾಡಬೇಡಿ
> **ಆರ್.ಅಶೋಕ,** ವಿರೋಧಪಕ್ಷದ ನಾಯಕ

ಧಮ್ಕಿ ಹಾಕ್ತಿಯೇನೊ ಆಚೆ ಬಾ...

ಬಿಜೆಪಿಯ ಭರತ್ ಶೆಟ್ಟಿ ಅವರು ಮುಖ್ಯಮಂತ್ರಿ ಕಡೆ ಕೈತೋರಿಸಿ 'ಸರಿಯಾದ ಉತ್ತರ ನೀಡಿ' ಎಂದಿದ್ದನ್ನು ಕೇಳಿ ಕಾಂಗ್ರೆಸ್‌ನ ನರೇಂದ್ರಸ್ವಾಮಿ ಅವರು ಭರತ್ ಶೆಟ್ಟಿ ವಿರುದ್ಧ ಗರಂ ಆದರು. ಆಗ ಮಧ್ಯ ಪ್ರವೇಶಿಸಿದ ಬೈರತಿ ಬಸವರಾಜ ಅವರು, 'ಎಲ್ಲದಕ್ಕೂ ಮೂಗು ತೂರಿಸಬೇಡ' ಎಂದು ನರೇಂದ್ರ ಸ್ವಾಮಿ ಅವರನ್ನು ಉದ್ದೇಶಿಸಿ ಹೇಳಿದರು.

'ಕೈ ತೋರಿಸಿ ಮಾತನಾಡುವುದೇನು? ಗೂಂಡಾಗಿರಿ ಮಾಡ್ತೀರಾ ನಾನು ತೋರಿಸುತ್ತೇನೆ' ಎಂದು ನರೇಂದ್ರ ಸ್ವಾಮಿ ಹೇಳಿದರು. ಆಗ ಸಿಟ್ಟಾದ ಬೈರತಿ ಬಸವರಾಜ, 'ಏನ್ ಧಮ್ಕಿ ಹಾಕ್ತಿಯೇನೊ ಆಚೆ ಬಾ...' ಎಂದು ನರೇಂದ್ರ ಸ್ವಾಮಿಗೆ ಸವಾಲು ಹಾಕಿದರು.

ಉತ್ತರ ನೀಡುವ ವೇಳೆ ಮುಖ್ಯಮಂತ್ರಿ, 'ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತಕ್ಕೆ ಬಂದ ಮೇಲೆ ಅಪರಾಧಗಳ ಸಂಖ್ಯೆ ಕಡಿಮೆ ಆಗಿವೆ' ಎಂದರಲ್ಲದೇ, ಬಿಜೆಪಿ ಮತ್ತು ಕಾಂಗ್ರೆಸ್ ಸರ್ಕಾರದ ಅವಧಿಯ ಅಪರಾಧಗಳ ಅಂಕಿ–ಅಂಶಗಳನ್ನು ವಿವರಿಸಿದರು. ಆ ಬಳಿಕ ಅವರು 'ಎಲ್ಲ ಅಪರಾಧಗಳು, ದ್ವೇಷ, ರಾಜಕೀಯ ಅಪರಾಧ ಹೆಚ್ಚಲು ಸಂಘ ಪರಿವಾರದ ಸಂಘಟನೆಗಳೇ ಕಾರಣ' ಎಂದು ಹೇಳಿದ್ದು ಬಿಜೆಪಿ ಸದಸ್ಯರನ್ನು ಕೆರಳಿಸಿತು.

ತಕ್ಷಣವೇ ಎದ್ದು ನಿಂತ ಬಿಜೆಪಿ ಸದಸ್ಯರು, 'ಮುಖ್ಯಮಂತ್ರಿಯವರು ಆರ್‌ಎಸ್‌ಎಸ್ ಕುರಿತು ಆಡಿದ ಮಾತನ್ನು ವಾಪಸ್ ಪಡೆಯಬೇಕು' ಎಂದು ಮುಗಿಬಿದ್ದರು. ಇದನ್ನು ಲೆಕ್ಕಿಸದ ಸಿದ್ದರಾಮಯ್ಯ 'ಅಲ್ಲಿರುವ (ಬಿಜೆಪಿ) ಹೆಚ್ಚಿನವರು ಆರ್‌ಎಸ್‌ಎಸ್‌ನವರಲ್ಲ. ಅಶೋಕನೂ ಆರ್‌ಎಸ್‌ಎಸ್ ಅಲ್ಲ. ಆತ ಚೆಡ್ಡಿ ಹಾಕಿಲ್ಲ' ಎಂದು ಹೇಳಿದ್ದು, ಅಶೋಕ ಸೇರಿ ಬಿಜೆಪಿ ಸದಸ್ಯರನ್ನು ಮತ್ತಷ್ಟು ಆಕ್ರೋಶಕ್ಕೆ ದೂಡಿತು. ಆಗ ಗದ್ದಲ ತಾರಕಕ್ಕೇರಿ, 'ನಾನೂ ಆರ್‌ಎಸ್‌ಎಸ್' ಎಂಬ ಘೋಷಣೆಗಳನ್ನು ಬಿಜೆಪಿ ಸದಸ್ಯರು ಹಾಕಿದರು.

11ನೇ ಪುಟ ನೋಡಿ

ಅಂಬೇಡ್ಕರ್ ಸೋಲು ಕೋಲಾಹಲ

ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಲೋಕಸಭಾ ಚುನಾವಣೆಯಲ್ಲಿ ಸೋಲಿಸಿದವರು ಯಾರು ಎಂಬ ಪ್ರಶ್ನೆ ವಿಧಾನಸಭೆಯಲ್ಲಿ ಸೋಮವಾರ ಕೋಲಾಹಲ ಎಬ್ಬಿಸಿತು. ಆಡಳಿತ ಮತ್ತು ವಿರೋಧ ಪಕ್ಷಗಳ ಮಧ್ಯೆ ಸವಾಲು– ಪ್ರತಿಸವಾಲಿಗೂ ಕಾರಣವಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 'ಪರಿಶಿಷ್ಟರ ಅಭಿವೃದ್ಧಿ ವಿಷಯದಲ್ಲಿ ಬಿಜೆಪಿಗೆ ಬದ್ಧತೆ ಇಲ್ಲ' ಎಂದು ಟೀಕಿಸಿದರು.

ಆಗ ಬಿಜೆಪಿಯ ಡಿ. ವೇದವ್ಯಾಸ ಕಾಮತ್, ಹರೀಶ್ ಪೂಂಜ, ಡಾ. ಚಂದ್ರು ಲಮಾಣಿ, ದೊಡ್ಡನಗೌಡ ಪಾಟೀಲ, ಸಿಮೆಂಟ್ ಮಂಜು, ಬಸನಗೌಡ ಪಾಟೀಲ ಯತ್ನಾಳ, ವಿರೋಧ ಪಕ್ಷದ ಉಪ ನಾಯಕ ಅರವಿಂದ ಬೆಲ್ಲದ ಮತ್ತಿತರರು ಅಂಬೇಡ್ಕರ್ ವಿಷಯ ಪ್ರಸ್ತಾಪಿಸಿದರು.

11ನೇ ಪುಟ ನೋಡಿ

'ಸದನದಿಂದ ಬಿಸಾಕಬೇಕಾಗುತ್ತದೆ'

'ಇಷ್ಟವಿಲ್ಲದಿದ್ದರೆ ಸದನದಿಂದ ಹೊರ ನಡೆಯಿರಿ. ಇಲ್ಲದಿದ್ದರೆ ತೆಗೆದು ಬಿಸಾಕಬೇಕಾಗುತ್ತದೆ' ಎಂದು ಯು.ಟಿ. ಖಾದರ್ ಅವರು ಸದಸ್ಯರಿಗೆ ಎಚ್ಚರಿಕೆ ನೀಡಿದರು. ಅಂಬೇಡ್ಕರ್ ಅವರ ವಿಷಯದಲ್ಲಿ ಸದನದಲ್ಲಿ ದೀರ್ಘ ಕಾಲ ಗದ್ದಲ ಮುಂದುವರಿಯಿತು. ವಿರೋಧ ಮತ್ತು ಆಡಳಿತ ಪಕ್ಷದ ಸದಸ್ಯ ಮಾತಿನ ಚಕಮಕಿ ಜೋರಾಯಿತು. ಗದ್ದಲ ನಿಯಂತ್ರಣಕ್ಕೆ ಬಾರದಿದ್ದಾಗ ಸಿಟ್ಟಾದ ಖಾದರ್ ಮೇಲಿನಂತೆ ಎಚ್ಚರಿಕೆ ನೀಡಿದರು. ಸ್ಪೀಕರ್ ಮಾತನ್ನೂ ಬಿಜೆಪಿಯವರು ಆಕ್ಷೇಪಿಸಿದರು. ಕೆಲ ಸಮಯದ ಬಳಿಕ ಪರಿಸ್ಥಿತಿ ತಿಳಿಯಾಯಿತು.

ಪ್ರತಿಭಟನೆ ಪ್ರತಿ ತಿಂಗಳಿಗೆ ₹10 ಸಾವಿರ ಗೌರವ ಧನ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

10 ವರ್ಷದಲ್ಲಿ ₹16.35 ಲಕ್ಷ ಕೋಟಿ ರೈಟ್ ಆಫ್: ನಿರ್ಮಲಾ

ನಿರ್ಮಲಾ

ನವದೆಹಲಿ (ಪಿಟಿಐ): ಕಳೆದ ಹತ್ತು ಆರ್ಥಿಕ ವರ್ಷಗಳಲ್ಲಿ ಬ್ಯಾಂಕ್‌ಗಳು ರೈಟ್ ಆಫ್ ಮಾಡಿರುವ ವಸೂಲಾಗದ ಸಾಲದ (ಎನ್‌ಪಿಎ) ಒಟ್ಟು ಮೊತ್ತವು ₹16.35 ಲಕ್ಷ ಕೋಟಿ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ತಿಳಿಸಿದ್ದಾರೆ.

2023–24ರಲ್ಲಿ ಬ್ಯಾಂಕ್‌ಗಳು ಒಟ್ಟು ₹1.70 ಲಕ್ಷ ಕೋಟಿ ಮೊತ್ತದ ವಸೂಲಾಗದ ಸಾಲವನ್ನು ರೈಟ್ ಆಫ್ ಮಾಡಿವೆ, 2022–23ರಲ್ಲಿ ರೈಟ್ ಆಫ್ ಆದ ವಸೂಲಾಗದ ಸಾಲದ ಮೊತ್ತ ₹2.16 ಲಕ್ಷ ಕೋಟಿ ಎಂದು ನಿರ್ಮಲಾ ಅವರು ಮಾಹಿತಿ ನೀಡಿದ್ದಾರೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಮಾರ್ಗಸೂಚಿ ಹಾಗೂ ಆಡಳಿತ ಮಂಡಳಿ ಒಪ್ಪಿದ ನೀತಿಗೆ ಅನುಗುಣವಾಗಿ ಬ್ಯಾಂಕ್‌ಗಳು ತಾವು ನೀಡಿದ ಸಾಲವು ವಸೂಲಾಗದ ಸಾಲ ಎಂದು ವರ್ಗೀಕರಣ ಆದ ನಾಲ್ಕು ವರ್ಷಗಳ ನಂತರ, ಆ ಸಾಲವನ್ನು ರೈಟ್ ಆಫ್ ಮಾಡುತ್ತವೆ ಎಂದು ಸಚಿವೆ ವಿವರಿಸಿದ್ದಾರೆ.

ರೈಟ್ ಆಫ್ ಅಂದರೆ ಸಾಲ ಪಡೆದವನ ಹೊಣೆಯೇನೂ ತಗ್ಗುವುದಿಲ್ಲ. ಆತನಿಗೆ ಇದರಿಂದ ಲಾಭವೇನೂ ಆಗುವುದಿಲ್ಲ. ಬ್ಯಾಂಕ್‌ಗಳು ಸಾಲ ವಸೂಲಾತಿ ಪ್ರಕ್ರಿಯೆಯನ್ನು ವಿವಿಧ ಮಾರ್ಗಗಳ ಮೂಲಕ ಮುಂದುವರಿಸುತ್ತವೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಆರ್‌ಬಿಐ ನೀಡಿರುವ ಮಾಹಿತಿ ಪ್ರಕಾರ, 2024ರ ಡಿಸೆಂಬರ್ 31ರವರೆಗೆ ವಾಣಿಜ್ಯ ಬ್ಯಾಂಕ್‌ಗಳಲ್ಲಿ ತಲಾ ₹1,000 ಕೋಟಿಗಿಂತ ಹೆಚ್ಚು ಸಾಲ ಪಡೆದು ಅದನ್ನು ಸರಿಯಾಗಿ ಮರಳಿಸದ 29 ಕಂಪನಿಗಳು ದೇಶದಲ್ಲಿವೆ. ಈ ಕಂಪನಿಗಳ ಸಾಲ ಖಾತೆಯನ್ನು 'ವಸೂಲಾಗದ ಸಾಲ' ಎಂದು ವರ್ಗೀಕರಿಸಲಾಗಿದೆ. ಇಂತಹ ಕಂಪನಿಗಳಿಂದ ಮರುಪಾವತಿ ಆಗಬೇಕಿರುವ ಸಾಲದ ಒಟ್ಟು ಮೊತ್ತ ₹61,027 ಕೋಟಿ.

ರೈಟ್ ಆಫ್ ವಿವರ

₹2.36 ಲಕ್ಷ ಕೋಟಿ — 2018–19ರಲ್ಲಿ ರೈಟ್‌ಆಫ್ ಆದ ಸಾಲದ ಮೊತ್ತ. ಇದು ಹತ್ತು ವರ್ಷಗಳ ಗರಿಷ್ಠ

₹58,786 ಕೋಟಿ — 2014–15ರಲ್ಲಿ ರೈಟ್‌ಆಫ್ ಆದ ಸಾಲದ ಮೊತ್ತ. ಇದು ಹತ್ತು ವರ್ಷಗಳ ಕನಿಷ್ಠ

ನೇರ ತೆರಿಗೆ ಸಂಗ್ರಹ ಏರಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಮಾರ್ಚ್ 16ರ ವರೆಗೆ ₹21.26 ಲಕ್ಷ ಕೋಟಿ ನಿವ್ವಳ ನೇರ ತೆರಿಗೆ ಸಂಗ್ರಹವಾಗಿದೆ ಎಂದು ಕೇಂದ್ರೀಯ ನೇರ ತೆರಿಗೆಗಳ ಮಂಡಳಿಯು (ಸಿಬಿಡಿಟಿ) ಸೋಮವಾರ ಬಿಡುಗಡೆ ಮಾಡಿರುವ ವರದಿ ತಿಳಿಸಿದೆ.

10

ಒಳಪುಟಗಳಲ್ಲಿ

ಭಾರತ ವಿರೋಧಿ ಚುಟುವಟಿಕೆ ಬಗ್ಗೆ ಕಳವಳ 11
ಚಿನ್ನಸ್ವಾಮಿ ಅಂಗಳದಲ್ಲಿ ಭೋರ್ಗರೆದ ಆರ್‌ಸಿಬಿ ಆರ್ಮಿ! 12

ಮಣಿಪುರ ಗಲಭೆ ಗುವಾಹಟಿಯಲ್ಲೇ ವಿಚಾರಣೆ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ನಡೆದ ಜನಾಂಗೀಯ ಹಿಂಸಾಚಾರದ ಪ್ರಕರಣಗಳ ವಿಚಾರಣೆಯು ಅಸ್ಸಾಂನ ರಾಜಧಾನಿ ಗುವಾಹಟಿಯಲ್ಲಿ ನಡೆಯಲಿದೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ. ಜನಾಂಗೀಯ ಹಿಂಸಾಚಾರ ಪ್ರಕರಣಗಳ ತನಿಖೆಯನ್ನು ಸಿಬಿಐ ನಡೆಸಿದೆ.

11

ಪೊಲೀಸರ ಮೇಲೆ ಕಲ್ಲು ತೂರಾಟ: 15 ಜನರ ಬಂಧನ

ನಾಗ್ಪುರ ಗಲಭೆ: 9 ಜನರಿಗೆ ಗಾಯ

ನಾಗ್ಪುರ (ಪಿಟಿಐ): ಮೊಘಲ್ ದೊರೆ ಔರಂಗಜೇಬ್ ಸಮಾಧಿ ತೆರವುಗೊಳಿಸುವಂತೆ ಆಗ್ರಹಿಸಿ ಬಜರಂಗದಳದ ಸದಸ್ಯರು ಸೋಮವಾರ ನಡೆಸಿದ ಪ್ರತಿಭಟನೆ ವೇಳೆ, ಮುಸ್ಲಿಂ ಸಮುದಾಯದ ಪವಿತ್ರ ಗ್ರಂಥ ಕುರಾನ್ ಅನ್ನು ಸುಟ್ಟುಹಾಕಲಾಗಿದೆ ಎಂಬ ವದಂತಿ ಹಬ್ಬಿದ ಪರಿಣಾಮ ನಾಗ್ಪುರದ ಕೇಂದ್ರ ಭಾಗದಲ್ಲಿ ಹಿಂಸಾಚಾರ ನಡೆದಿದೆ.

ಈ ವೇಳೆ, ಉದ್ರಿಕ್ತರ ಗುಂಪು ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದೆ. ಗಲಭೆಯಲ್ಲಿ ಡಿಸಿಪಿ ನಿಕೇತನ್ ಕದಂ ಸೇರಿದಂತೆ ಮೂವರು ಪೊಲೀಸರು ಹಾಗೂ ಆರು ನಾಗರಿಕರು ಗಾಯಗೊಂಡಿದ್ದು, ಹಲವು ವಾಹನಗಳು ಬೆಂಕಿಗಾಹುತಿಯಾಗಿವೆ. ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಪೊಲೀಸರು 15 ಜನರನ್ನು ಬಂಧಿಸಿದ್ದಾರೆ. ಗಲಭೆ ಪೀಡಿತ ಪ್ರದೇಶಗಳಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

3B ಪುಟ ನೋಡಿ

ನಾಗ್ಪುರದಲ್ಲಿ ಸೋಮವಾರ ನಡೆದ ಗಲಭೆಯನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು – ಪಿಟಿಐ ಚಿತ್ರ

ವದಂತಿಗಳನ್ನು ನಂಬಬೇಡಿ: ಸಿ.ಎಂ

ಶಾಂತಿ ಕಾಯ್ದುಕೊಳ್ಳುವಂತೆ ಮನವಿ ಮಾಡಿರುವ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು, ವದಂತಿಗಳನ್ನು ನಂಬಬೇಡಿ ಎಂದಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ವಿಶೇಷ ರಹದಾರಿ ಆನ್‌ಲೈನ್‌ನಲ್ಲೇ ಲಭ್ಯ

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬೇರೆ ರಾಜ್ಯಗಳಿಗೆ ತೆರಳುವ ಬಸ್ ಮತ್ತು ಮ್ಯಾಕ್ಸಿಕ್ಯಾಬ್‌ಗಳಿಗೆ ವಿಶೇಷ ರಹದಾರಿಯನ್ನು (ಸ್ಪೆಷಲ್ ಪರ್ಮಿಟ್) ಆನ್‌ಲೈನ್ ಮೂಲಕ ಇನ್ನು ಮುಂದೆ ಪಡೆಯಬಹುದು.

ಒಪ್ಪಂದದ ಮೇರೆಗೆ ಸಂಚರಿಸುವ ಕಾಂಟ್ರಾಕ್ಟ್ ಕ್ಯಾರೇಜ್ ಬಸ್‌ಗಳು, ಮ್ಯಾಕ್ಸಿಕ್ಯಾಬ್‌ಗಳು ಬೇರೆ ರಾಜ್ಯಗಳಿಗೆ ಹೋಗಬೇಕಿದ್ದರೆ ವಿಶೇಷ ರಹದಾರಿ ಪಡೆಯಬೇಕಿತ್ತು. ಕೇಂದ್ರೀಕೃತ ವ್ಯವಸ್ಥೆ ಇದ್ದುದರಿಂದ ಬೆಂಗಳೂರಿನ ಶಾಂತಿನಗರದಲ್ಲಿರುವ ರಾಜ್ಯ ಸಾರಿಗೆ ಪ್ರಾಧಿಕಾರದಿಂದ (ಎಸ್‌ಟಿಎ) ರಹದಾರಿ ಪಡೆಯಬೇಕಿತ್ತು. ವಾಹನ ನೋಂದಣಿ ಪ್ರಮಾಣಪತ್ರದ ಪ್ರತಿ ನೀಡಿದ ಮೇಲೆ ಎಲ್ಲ ಮಾಹಿತಿಗಳನ್ನು ವಾಹನ್–1 ಸಾಫ್ಟ್‌ವೇರ್‌ನಲ್ಲಿ ಭರ್ತಿ ಮಾಡಿ ಅಧಿಕಾರಿಗಳು ರಹದಾರಿ ನೀಡುತ್ತಿದ್ದರು.

ಬಸ್, ಮ್ಯಾಕ್ಸಿಕ್ಯಾಬ್ ಮಾಲೀಕರ ಬೇಡಿಕೆ ಈಡೇರಿಕೆ

6ನೇ ಪುಟ ನೋಡಿ

ಕ್ಯೂಆರ್ ಕೋಡ್‌ನಲ್ಲಿ ಸಿಗಲಿದೆ ಮಾಹಿತಿ

ವಿಶೇಷ ರಹದಾರಿಯಲ್ಲಿ ಕ್ಯೂಆರ್ ಕೋಡ್ ಇರುತ್ತದೆ. ಯಾವುದೇ ರಾಜ್ಯದಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ ವಾಹನದ ಪೂರ್ಣ ಮಾಹಿತಿ ಸಿಗುತ್ತದೆ. ವಾಹನದ ನೋಂದಣಿ ಸಂಖ್ಯೆ ಹಾಕಿದರೂ ಮಾಹಿತಿ ಸಿಗುತ್ತದೆ. ಅಂಥ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ ಎಂದು ಸಾರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತ ಜ್ಞಾನೇಂದ್ರ ಕುಮಾರ್ ತಿಳಿಸಿದರು.

ವಾಹನಗಳ ಯೋಗ್ಯತಾ ಪ್ರಮಾಣಪತ್ರ, ತೆರಿಗೆ, ಮೂಲ ರಹದಾರಿಗಳು ಸರಿ ಇವೆಯೇ ಎಂದು ವಾಹನ್–4 ಪರಿಶೀಲನೆ ಮಾಡುತ್ತದೆ. ಸರಿ ಇದ್ದರೆ ಹಣ ತುಂಬುವ ಆಯ್ಕೆ ಬರುತ್ತದೆ ಎಂದು ಮಾಹಿತಿ ನೀಡಿದರು.

'ಕಟ್ಟಡ ರೇಖೆ' ನಿಯಮ: ಜಿಲ್ಲಾ ಮುಖ್ಯ ರಸ್ತೆಗೂ ವಿಸ್ತರಣೆ

'ಇ–ಸ್ವತ್ತಿ'ಗೆ ಗ್ರಾಮೀಣರ ಪರದಾಟ

● ಜಿ.ಬಿ.ನಾಗರಾಜ್

ದಾವಣಗೆರೆ: ರಾಜ್ಯ ಹೆದ್ದಾರಿಯ ಇಕ್ಕೆಲಗಳಲ್ಲಿ ಕಟ್ಟಡ ನಿರ್ಮಿಸುವಾಗ 6 ಮೀಟರ್ ಸ್ಥಳ ಬಿಟ್ಟುಬಿಡಬೇಕು ಎಂಬ ನಿರ್ಬಂಧವನ್ನು ಜಿಲ್ಲಾ ಮುಖ್ಯ ರಸ್ತೆಗಳಿಗೂ ವಿಸ್ತರಿಸಿ ಲೋಕೋಪಯೋಗಿ ಇಲಾಖೆ ಪರಿಷ್ಕೃತ ಆದೇಶ ಹೊರಡಿಸಿದೆ. ಇದರಿಂದ ಗ್ರಾಮೀಣ ಪ್ರದೇಶದ ರಸ್ತೆ ಬದಿಯಲ್ಲಿರುವ ಕಟ್ಟಡಗಳಿಗೆ 'ಇ-ಸ್ವತ್ತು' ಪಡೆಯಲು ಮಾಲೀಕರು ಪರದಾಡುವಂತಾಗಿದೆ.

ಜಿಲ್ಲಾ ಮುಖ್ಯ ರಸ್ತೆ ಹಾಗೂ ರಾಜ್ಯ ಹೆದ್ದಾರಿಗಳು ಹಾದು ಹೋಗಿರುವ ಗ್ರಾಮಗಳಲ್ಲಿ 'ಇ-ಸ್ವತ್ತು' ಪಡೆಯಲು ಹೊಸದೊಂದು ಸಮಸ್ಯೆ ತಲೆದೋರಿದೆ. 'ಇ-ಸ್ವತ್ತು' ಕೇಳಿ ಸಲ್ಲಿಕೆಯಾಗುವ ಅರ್ಜಿಗಳಿಗೆ ಲೋಕೋಪಯೋಗಿ ಇಲಾಖೆಯ ಪರಿಷ್ಕೃತ ಮಾರ್ಗಸೂಚಿಯನ್ನು ಉಲ್ಲೇಖಿಸಿ ಗ್ರಾಮ ಪಂಚಾಯಿತಿಗಳು ಹಿಂಬರಹ ನೀಡುತ್ತಿವೆ. ಕಟ್ಟಡ ನಿರ್ಮಾಣ, ಪರಭಾರೆ ಸೇರಿ ಇತರ ಚಟುವಟಿಕೆಗಳಿಗೆ ತೊಂದರೆ ಉಂಟಾಗಿದೆ.

ರಾಜ್ಯ ಹೆದ್ದಾರಿ ಬದಿಯ ಕಟ್ಟಡಗಳಿಗೆ ಲೋಕೋಪಯೋಗಿ ಇಲಾಖೆ 2004ರಲ್ಲಿ 'ಕಟ್ಟಡ ರೇಖೆ' ಹೆಸರಿನಲ್ಲಿ ಮಾರ್ಗಸೂಚಿಯನ್ನು ಪ್ರಕಟಿಸಿತ್ತು. ಗ್ರಾಮ ಪಂಚಾಯಿತಿ, ನಗರ ಹಾಗೂ ಪಟ್ಟಣಗಳ ವ್ಯಾಪ್ತಿಯಲ್ಲಿ ಹೆದ್ದಾರಿ ಬದಿಯ ಅಂಚಿನಿಂದ 6 ಮೀಟರ್‌ವರೆಗೆ ಯಾವುದೇ ಕಟ್ಟಡ ನಿರ್ಮಾಣ ಮಾಡದಂತೆ ಸೂಚಿಸಿತ್ತು. ಗ್ರಾಮ ಪಂಚಾಯಿತಿಯ ಪರಿಮಿತಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗೂ ಈ ನಿಯಮ ಅನ್ವಯವಾಗುತ್ತದೆಯೇ ಎಂಬುದಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಯಲ್ಲಿ ಸ್ಪಷ್ಟತೆ ಇರಲಿಲ್ಲ.

ಈ ಮಾರ್ಗಸೂಚಿ ಪರಿಷ್ಕರಿಸುವಂತೆ ಜನಪ್ರತಿನಿಧಿಗಳು ಮಾಡಿಕೊಂಡ ಮನವಿಗೆ ಸ್ಪಂದಿಸಿದ ಲೋಕೋಪಯೋಗಿ ಇಲಾಖೆ ಫೆ.17ರಂದು ಹೊಸ ಆದೇಶ ಹೊರಡಿಸಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಟ್ಟಡ ಹಾಗೂ ಜಿಲ್ಲಾ ಮುಖ್ಯ ರಸ್ತೆಗೂ 2004ರ ಮಾರ್ಗಸೂಚಿ ಅನ್ವಯ ಆಗುತ್ತದೆ ಎಂಬುದನ್ನು ಸ್ಪಷ್ಟಪಡಿಸಿದೆ.

11ನೇ ಪುಟ ನೋಡಿ

ಆಸ್ತಿಗಳ ಬಗ್ಗೆ ಇಲ್ಲ ಮಾಹಿತಿ

ಜಿಲ್ಲಾ ಮುಖ್ಯ ರಸ್ತೆ ಹಾಗೂ ರಾಜ್ಯ ಹೆದ್ದಾರಿ ಬದಿಯ 6 ಮೀಟರ್ ಪರಿಮಿತಿಯಲ್ಲಿ ಎಷ್ಟು ಆಸ್ತಿಗಳಿವೆ ಎಂಬ ಅಂದಾಜು ಇಲ್ಲ. ರಸ್ತೆಯ ಅಂಚು ಗುರುತು ಮಾಡುವುದು ಇನ್ನೂ ಬಾಕಿ ಇರುವ ಕಾರಣಕ್ಕೆ ಸ್ಥಳೀಯ ಸಂಸ್ಥೆಗಳು ಕೂಡ ಲೋಕೋಪಯೋಗಿ ಇಲಾಖೆಯನ್ನು ಸಂಪರ್ಕಿಸುತ್ತಿವೆ.

ಜಿಲ್ಲಾ ಮುಖ್ಯ ರಸ್ತೆಗಳ ಪೈಕಿ ಕೆಲವು ವಿಸ್ತರಣೆಯಾಗಿವೆ. ಹಲವು ರಸ್ತೆಗಳು ವಿಸ್ತರಣೆಗೆ ಬಾಕಿ ಇವೆ. ವಿಸ್ತರಣೆಯಾಗದ ರಸ್ತೆಯ ಬದಿಯಲ್ಲಿರುವ ನಿವಾಸಿಗಳಲ್ಲಿ ಪರಿಷ್ಕೃತ ಮಾರ್ಗಸೂಚಿ ಹೆಚ್ಚಿನ ಆತಂಕ ಮೂಡಿಸಿದೆ.

> ಈ ನಿಯಮವನ್ನು 2004ರಲ್ಲಿ ರೂಪಿಸಿದರೂ ಜನರು ಗಂಭೀರವಾಗಿ ಪರಿಗಣಿಸಲಿಲ್ಲ. ಪರಿಷ್ಕೃತ ಆದೇಶದ ಪ್ರಕಾರ ನೂತನ ಕಟ್ಟಡ ನಿರ್ಮಾಣಕ್ಕೆ ಅನುಮತಿ, ಹಳೆ ಕಟ್ಟಡಗಳಿಗೆ 'ಇ-ಸ್ವತ್ತು'ಗೆ ಅವಕಾಶವಿಲ್ಲ
> **ಜಿ.ನರೇಂದ್ರ ಬಾಬು,** ಇಇ, ಲೋಕೋಪಯೋಗಿ ಇಲಾಖೆ

SIKSHA 'O' ANUSANDHAN
SAAT-2025

APPROVAL & RECOGNITION

Accredited by NAAC with Grade 'A++' | UGC Graded Autonomy(Category-I) | NBA Accredited | ICAR Accredited | NABL Accredited | NABH Accredited
AICTE Approved | NMC Approved | DCI Approved | PCI Approved | BCI Approved | INC Approved | VCI Approved

PROGRAMMES OFFERED

B.TECH PROGRAMMES
Civil Engineering
Electrical Engineering
Mechanical Engineering
Electrical and Electronics Engineering
Electronics and Communication Engineering
Computer Science and Engineering
Computer Science and Information Technology
Computer Science and Engineering (AI and ML)
Computer Science and Engineering (Cyber Security)
Computer Science and Engineering (Data Science)
Computer Science and Engineering (Internet of Things)

M.TECH PROGRAMMES
Structural Engineering
Electric Vehicle Technology
Machine Design and Robotics
Embedded System and VLSI Design
Computer Science and Engineering

MANAGEMENT PROGRAMMES
BBA
MBA
Integrated MBA
MBA (Hospital Administration)
MBA (Artificial Intelligence and Data Science)

M.Sc. PROGRAMMES
Physics
Chemistry
Mathemetics
Biotechnology
Integrated (M.Sc. Biotechnology)

COMPUTER APPLICATIONS PROGRAMMES
Bachelor of Computer Applications (BCA)
Master of Computer Applications (MCA)

PHARMACEUTICAL PROGRAMMES
B.Pharm.
M.Pharm.

LAW PROGRAMMES
BA LLB (H) - Integrated Law
BBA LLB (H) - Integrated Law
LLB (H) - 3 Years Law
LLM

HOTEL MANAGEMENT PROGRAMMES
BHMCT (Bachelor of Hotel Management & Catering Technology)
MBA (Hospitality Management)

NURSING PROGRAMMES
B.Sc. (Nursing) (Basic)
B.Sc. (Nursing) (Post Basic)
M.Sc. (Nursing)

AGRICULTURAL PROGRAMMES
B.Sc. (H) Agriculture
M.Sc. Agriculture

VETERINARY SCIENCE AND ANIMAL HUSBANDRY PROGRAMME
Bachelor of Veterinary Science & Animal Husbandry (B.V.Sc. & A.H.)

nirf National Institutional Ranking Framework 2024
14th in University Category
26th in Engineering Category
21st in Medical Category
09th in Dental Category
09th in Law Category

QS WORLD UNIVERSITY RANKINGS 2025
64 in QS Southern Asia University Ranking
278 in QS Asia University Ranking
1201- 1400 in QS World University Ranking
Instituion of Happiness
Recognized by QS I-Guage

THE WORLD UNIVERSITY RANKINGS 2024
801-1000 in THE World University Ranking
401- 500 in Engineering Technology
601- 800 in Computer Science
801-1000 in Health Sciences

To apply for admission through SAAT 2025,
Visit: www.soa.ac.in

ರಾಜಭವನದ ಗಾಜಿನ ಮನೆಯಲ್ಲಿ ಸೋಮವಾರ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಯು.ಟಿ.ಖಾದರ್ ಅವರನ್ನು ಸ್ಕೌಟ್ಸ್–ಗೈಡ್ಸ್ ಹೆಚ್ಚುವರಿ ರಾಜ್ಯ ಮುಖ್ಯ ಆಯುಕ್ತರಾಗಿ ನೇಮಿಸಿದರು. ಪಿ.ಜಿ.ಆರ್. ಸಿಂಧ್ಯ, ಎಂ.ಎ. ಖಾಲಿದ್ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

ರಾಜ್ಯ ಪುರಸ್ಕಾರ ಪ್ರದಾನ ಮಾಡಿದ ರಾಜ್ಯಪಾಲ ಥಾವರಚಂದ್ ಗೆಹಲೋತ್

‘ಜೀವನದಲ್ಲಿ ಧೈರ್ಯ, ಸೇವೆ ಇರಲಿ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 6738 ವಿದ್ಯಾರ್ಥಿಗಳಿಗೆ ಪ್ರಶಸ್ತಿ
- ಸ್ಕೌಟ್ಸ್‌ಗೆ ಶ್ಲಾಘನೆ
- ದೇಶದ ಭದ್ರತೆ ಕಾಪಾಡಿ

ಬೆಂಗಳೂರು: ಧೈರ್ಯ, ಸಂಕಲ್ಪ, ನಿಸ್ವಾರ್ಥ ಸೇವೆಯಂತಹ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮೌಲ್ಯಗಳನ್ನು ಜೀವನದಲ್ಲಿಯೂ ಅಳವಡಿಸಿಕೊಳ್ಳಿ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಸಲಹೆ ನೀಡಿದರು.

ರಾಜಭವನದ ಗಾಜಿನಮನೆಯಲ್ಲಿ ಸೋಮವಾರ ಚತುರ್ಥ ಚರಣ್ ಕಬ್ಸ್, ಹೀರಕ್ ಪಂಖ್ ಬುಲ್ ಬುಲ್ಸ್ ರಾಜ್ಯ ಪುರಸ್ಕಾರ, ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಪ್ರಶಸ್ತಿ ನೀಡಿ ಅವರು ಮಾತನಾಡಿದರು.

‘ಸನ್ನದ್ಧರಾಗಿರಿ ಮತ್ತು ಸೇವೆ ಮಾಡಿ’ ಎಂಬ ಸ್ಕೌಟ್ ಮತ್ತು ಗೈಡ್ಸ್‌ನ ಘೋಷವಾಕ್ಯ ಪಾಲಿಸಬೇಕು. ದೇಶದ ಭದ್ರತೆ, ಸಾರ್ವಭೌಮತೆ ಕಾಪಾಡುವಲ್ಲಿ ಕೊಡುಗೆ ನೀಡಬೇಕು ಎಂದರು.

ಸ್ಕೌಟ್ಸ್ ಮತ್ತು ಗೈಡ್ಸ್, ಯುವಜನರಲ್ಲಿ ದೈಹಿಕ, ಮಾನಸಿಕ, ಬೌದ್ಧಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಜ್ಞಾನ ಮತ್ತು ಕೌಶಲಗಳನ್ನು ಅಭಿವೃದ್ಧಿಪಡಿಸುವ ಕೆಲಸ ಮಾಡುತ್ತಿದೆ. ಆ ಮೂಲಕ ಜವಾಬ್ದಾರಿಯುತ ನಾಗರಿಕರಾಗಿ, ಅವರು ರಾಷ್ಟ್ರೀಯ ಹಿತಾಸಕ್ತಿ ಮತ್ತು ಸಾರ್ವಜನಿಕ ಹಿತಾಸಕ್ತಿಯ ಸೇವೆಗೆ ಕೊಡುಗೆ ನೀಡಬಹುದು ಎಂದರು.

ರಾಜ್ಯದಲ್ಲಿ 100 ವರ್ಷಗಳಲ್ಲಿ 7.50 ಲಕ್ಷಕ್ಕೂ ಅಧಿಕ ಸ್ವಯಂಸೇವಕರನ್ನು ಸ್ಕೌಟ್ಸ್, ಗೈಡ್ಸ್ ನೀಡಿದೆ. ಈ ವರ್ಷ 987 ಕಬ್, 1075 ಬುಲ್‌ಬುಲ್‌ಗಳು, 1935 ಸ್ಕೌಟ್ಸ್, 2099 ಗೈಡ್ಸ್, 293 ರೋವರ್ಸ್ ಮತ್ತು 349 ರೇಂಜರ್‌ಗಳು, ಒಟ್ಟು 6738 ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಲಾಗುತ್ತಿದೆ ಎಂದು ವಿವರಿಸಿದರು.

ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಪಿ.ಜಿ. ಆರ್. ಸಿಂಧ್ಯ, ಸ್ಕೌಟ್ಸ್ ರಾಜ್ಯ ಕಮಿಷನರ್ ಎಂ.ಎ. ಖಾಲಿದ್, ಮಾರ್ಗದರ್ಶಕಿ ಗೀತಾ ನಟರಾಜ್ ಉಪಸ್ಥಿತರಿದ್ದರು.

₹10 ಸಾವಿರ ಗೌರವ ಧನ ಆದೇಶ ಹೊರಡಿಸಲು ಆಗ್ರಹ

ಬೆಂಗಳೂರು: ಆಶಾ ಕಾರ್ಯಕರ್ತೆಯರಿಗೆ ಪ್ರತಿ ತಿಂಗಳು ₹ 10 ಸಾವಿರ ಗೌರವ ಧನ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಸದಸ್ಯರು ಸೋಮವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

‘ಆಶಾ ಕಾರ್ಯಕರ್ತೆಯರು ಹೆಚ್ಚುವರಿ ಕೆಲಸ ಮಾಡಿದರೆ ಅವರಿಗೆ ಪ್ರೋತ್ಸಾಹ ಧನ ನೀಡಬೇಕು. ರಾಜ್ಯದಲ್ಲಿರುವ 42 ಸಾವಿರ ಆಶಾ ಕಾರ್ಯಕರ್ತೆಯರಿಗೂ ಬಜೆಟ್‌ನಲ್ಲಿ ಘೋಷಿಸಿರುವ ₹ 1 ಸಾವಿರ ಗೌರವ ಧನ ನೀಡಬೇಕು. ಆರೋಗ್ಯ ಇಲಾಖೆ ಸಚಿವರ ನೇತೃತ್ವದಲ್ಲಿ ಸಭೆ ನಡೆಸಿ, ಆಶಾ ಕಾರ್ಯಕರ್ತೆಯರ ಸಮಸ್ಯೆಗಳಿಗೆ ಪರಿಹಾರ ನೀಡಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘60 ವರ್ಷ ಮೇಲ್ಪಟ್ಟ ಆಶಾ ಕಾರ್ಯಕರ್ತೆಯರನ್ನು ಕೆಲಸದಿಂದ ತೆಗೆಯುವ ಆದೇಶವನ್ನು ಹಿಂಪಡೆಯಬೇಕು. ಬೇರೆ ರಾಜ್ಯಗಳಲ್ಲಿ ಆಶಾ ಕಾರ್ಯಕರ್ತೆಯರ ನಿವೃತ್ತಿ ವಯಸ್ಸನ್ನು 62 ವರ್ಷಕ್ಕೆ ನಿಗದಿಪಡಿಸಲಾಗಿದೆ. ಕರ್ನಾಟಕದಲ್ಲೂ ಆಶಾ ಕಾರ್ಯಕರ್ತೆಯರ ನಿವೃತ್ತಿ ವಯಸ್ಸನ್ನು 62 ವರ್ಷಕ್ಕೆ ಹೆಚ್ಚಿಸಬೇಕು’ ಎಂದು ಒತ್ತಾಯಿಸಿದರು.

ಶ್ರೀ ಕಾಳಿದಾಸ ಸಹಕಾರ ಬ್ಯಾಂಕ್ ನಿಯಮಿತ

ಕರ್ನಾಟಕ ಪ್ರದೇಶ ಕುರುಬರ ಸಂಘದ ಕಟ್ಟಡ, 2ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು–560 009. ದೂರವಾಣಿ ಸಂಖ್ಯೆ: 080 22263868/41662039

ಬ್ಯಾಂಕಿನ ಗ್ರಾಹಕರು ಹಾಗೂ ಸದಸ್ಯರ ಗಮನಕ್ಕೆ

ಶ್ರೀ ಕಾಳಿದಾಸ ಸಹಕಾರ ಬ್ಯಾಂಕ್ ನಿಯಮಿತ, ಕರ್ನಾಟಕ ಪ್ರದೇಶ ಕುರುಬರ ಸಂಘದ ಕಟ್ಟಡ, 2ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು 09, ಈ ಬ್ಯಾಂಕಿನ ಕಚೇರಿಯನ್ನು **ದಿ. 24.03.2025ರ ಸೋಮವಾರದಿಂದ** ಇದೇ ರಸ್ತೆಯ ನಂ. 2, ಮೊದಲನೇ ಮಹಡಿ, 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಕಾನಿಷ್ಕ ಹೋಟೆಲ್ ಹಾಗೂ ತೇರಾಪಂಥ್ ಭವನದ ಮುಂಭಾಗ, ಗಾಂಧಿನಗರ, ಬೆಂಗಳೂರು–09, ಈ ಕಟ್ಟಡಕ್ಕೆ ಸ್ಥಳಾಂತರಿಸಿ ಬ್ಯಾಂಕಿನ ವ್ಯವಹಾರವನ್ನು ನಿರ್ವಹಿಸಲಾಗುವುದು. ಆದುದರಿಂದ ಬ್ಯಾಂಕಿನ ಗ್ರಾಹಕರು ಮತ್ತು ಸದಸ್ಯರುಗಳು ಇನ್ನು ಮುಂದೆ ಮೇಲ್ಕಂಡ ವಿಳಾಸಕ್ಕೆ ಬಂದು ಬ್ಯಾಂಕಿನ ವ್ಯವಹಾರವನ್ನು ಮಾಡಲು ಈ ಮೂಲಕ ಕೋರುತ್ತೇವೆ. ಹೆಚ್ಚಿನ ವಿವರಗಳಿಗೆ ಬ್ಯಾಂಕಿನ ದೂರವಾಣಿ ಮೂಲಕ ಸಂಪರ್ಕಿಸಲು ಕೋರುತ್ತೇವೆ.

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ,
ಸಹಿ/–
ಮನು
ಮುಖ್ಯಕಾರ್ಯನಿರ್ವಹಣಾಧಿಕಾರಿ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಅಇಂ(ವಿ)/ಪ್ರ(ಕಾ)/ವೃತ್ತ–ದಕ್ಷಿಣ/ಕಾನಿಇಂ(ಕ)/ಸಕಾನಿಇಂ(ವಿ)–1/2024-25/9611-13 ದಿನಾಂಕ: 15.03.2025

ಟೆಂಡರ್ ಪ್ರಕಟಣೆ (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

ಕವಿಪ್ರನಿನಿಯು ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ/ಟಿಆರ್(ಎಂ)/ಬಿಎಂಎಝಡ್(ಎಸ್)/ಇಇ(ಓ)/ಎಇಇ–1/24–25/ಇ.ಪಿ.ಆರ್–03, ಕರೆ–3, ದಿನಾಂಕ: 24.06.2024 ಬೆಂ.ಮ.ಕ್ಷೇ.ವ. ದಕ್ಷಿಣ ವೃತ್ತದ ಅಡಿಯಲ್ಲಿ ಬರುವ ಸೋಮನಹಳ್ಳಿ ಟಿ.ಎಲ್.ಎಂ. ಉಪ–ವಿಭಾಗ ಕಛೇರಿಗೆ ಬಾಡಿಗೆ ಆಧಾರದ ಮೇಲೆ 01 ಸಂಖ್ಯೆಯ ಟೆಂಪೋ ಟ್ರಾವೆಲರ್‌ನ ಸೇವೆಯನ್ನು ಒದಗಿಸುವುದಕ್ಕಾಗಿ ಬಿಡ್‌ಗಳನ್ನು ಆಹ್ವಾನಿಸಿದೆ.

ಟೆಂಡರೆಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in** ಗೆ ಹೈಪರ್‌ಲಿಂಕ್ "E Procurement KPTCL" ನಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ದಿನಾಂಕ: 17.03.2025 ರ ನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾರ್ಯಾಚರಣೆ) ವೃತ್ತ–ದಕ್ಷಿಣ, ಕ.ವಿ.ಪ್ರ.ನಿ.ನಿ., ನೆಲ ಮಹಡಿ, ಕಛೇರಿ ಸಂಕೀರ್ಣ, ಆನಂದರಾವ್ ವೃತ್ತ, ಬೆಂಗಳೂರು–09. ಫೋನ್: 080–2238668685.

ಕರ್ನಾಟಕ ಸರ್ಕಾರ

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

ಸಹಾಯಕ ಆಯುಕ್ತರ ಕಛೇರಿ, ಮುಜರಾಯಿ ಕಾಮಗಾರಿಗಳು, ನಗರಸಭಾ ವಲಯ, 4ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು–560001.
ದೂರವಾಣಿ ಸಂಖ್ಯೆ: 080–22869850 Email.ld.endowmentacurban@gmail.com

File No. HRICE-ACU0ADMS/3/2024-E-1708219 ದಿನಾಂಕ: ಮಾರ್ಚ್ 15, 2025

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಪ್ರಕಟಣೆ

ಬೆಂಗಳೂರು ನಗರ ಸಭಾವಲಯ ವ್ಯಾಪ್ತಿಗೆ ಒಳಪಡುವ ದೇವಾಲಯಗಳಿಗೆ ಅಗತ್ಯವಾದ ಮಾನವ ಸಂಪನ್ಮೂಲವನ್ನು ಹೊರಗುತ್ತಿಗೆ ಆಧಾರದ ಮೇರೆಗೆ ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ಅಧಿಕೃತ ಸಂಸ್ಥೆಗಳಿಂದ ದಿನಾಂಕ: **01.04.2025** ರಿಂದ ದಿನಾಂಕ: **31.03.2026** ರ ಅವಧಿಗೆ ಟೆಂಡರ್‌ನ್ನು ಆನ್‌ಲೈನ್ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.kppp.karnataka.gov.in** ನಲ್ಲಿ ದ್ವಿ–ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್) ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಬಂದಿಸಿದ ದೇವಾಲಯ ಹಾಗೂ ಈ ಕಛೇರಿಯನ್ನು ಸಂಪರ್ಕಿಸಬಹುದು.

1.	ಟೆಂಡರ್ ಮಾಡುವ ವಿಧಾನ	ಇ–ಟೆಂಡರ್ ಹರಾಜು ಮೂಲಕ
2.	ಷರತ್ತು ಮತ್ತು ನಿಬಂಧನೆಗಳ ವಿವರಗಳನ್ನು ಟೆಂಡರ್ ವಿವರಗಳನ್ನು ಆನ್‌ಲೈನ್‌ನಲ್ಲಿ ಪ್ರಕಟಿಸುವ ದಿನಾಂಕ:	ದಿನಾಂಕ: 17.03.2025
3.	ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ	ದಿನಾಂಕ: 24.03.2025 ಸಮಯ: 05.00 P.M
4.	ಸ್ವೀಕೃತಗೊಂಡ ಟೆಂಡರ್‌ಗಳನ್ನು ತೆರೆಯುವ ದಿನಾಂಕ	ದಿನಾಂಕ: 25.03.2025 ಸಮಯ: 05.00 P.M
5.	ಆರ್ಥಿಕ ಬಿಡ್ ತೆರೆಯುವ ದಿನಾಂಕ:	ದಿನಾಂಕ: 27.03.2025 ಸಮಯ 11.00 A.M
6.	ಇ.ಎಂ.ಡಿ ಮೊತ್ತ	ರೂ.50,000/–
7.	ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ:	080–22869850 ಇ–ಪ್ರೊಕ್ಯೂರ್‌ಮೆಂಟ್ (E-procurement) ಸೆಂಟರ್ 080–25501216 & 25501227.

ಸಹಿ/– ಸಹಾಯಕ ಆಯುಕ್ತರು
ಮುಜರಾಯಿ ಕಾಮಗಾರಿಗಳು, ನಗರಸಭಾ ವಲಯ, ಬೆಂಗಳೂರು

ವಾಸಸಂಇ/ವಾ.ಪ್ರ/5737/ಎಸ್‌ಎಸ್‌ಸಿ/2024–25

ನಗರಸಭೆ ಕಾರ್ಯಾಲಯ
ಚಿಕ್ಕಬಳ್ಳಾಪುರ

ಇ–ಮೇಲ್: itstaff_ulb_chickballapur@yahoo.co.in, ದೂರವಾಣಿ: 08156–275557, ಫ್ಯಾಕ್ಸ್:08156–274742, ವೆಬ್‌ಸೈಟ್: www.chikkaballapurcity.gov.in

ಸಂಖ್ಯೆ: ನ.ಸ.ಚಿ/ತಾ.ಶಾ/ಸಿ.ಆರ್/ಟೆಂ–31/2024–25
ದಿನಾಂಕ : 12.03.2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರಂತೆ ನಗರಸಭಾ ನಿಧಿಯಡಿಯಲ್ಲಿ ಈ ಕೆಳಕಂಡ ಕಾಮಗಾರಿ ಕೆಲಸವನ್ನು ನಿರ್ವಹಿಸಲು ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರ್‌ನ್ನು (ಇ–ಪ್ರೊಕ್ಯೂರ್‌ಮೆಂಟ್–2.0) ಆಹ್ವಾನಿಸಲಾಗಿದೆ. ವೆಬ್ ಸೈಟ್ **https:kppp.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಈ ಮೂಲಕ ಕೋರಲಾಗಿದೆ. ಭರ್ತಿ ಮಾಡಿದ ಟೆಂಡರ್‌ಗಳ ಕುರಿತು ಆಕ್ಷೇಪಣೆಗಳನ್ನು ಸಲ್ಲಿಸಲು **ಕಡೆಯ ದಿನಾಂಕ: 27.03.2025 ರಂದು ಬೆಳಿಗ್ಗೆ 11.00 ಗಂಟೆಯವರೆಗೆ,** ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ **ಕಡೆಯ ದಿನಾಂಕ: 27.03.2025 ರಂದು ಸಂಜೆ 5.30 ಗಂಟೆಯವರೆಗೆ** ಮತ್ತು ಟೆಂಡರ್ ತೆರೆಯುವ **ದಿನಾಂಕ: 29.03.2025 ರಂದು ಬೆಳಿಗ್ಗೆ 11.00 ಗಂಟೆಗೆ** ಹಾಗೂ ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಗಳನ್ನು ಪರಿಗಣಿಸಲಾಗುವುದು. **(1)** ಪ್ಯಾಕೇಜ್ ನಂ.01 **DMA/2024-25/OW/WORK_INDENT37159** ಅಂದಾಜು ಮೊತ್ತ ರೂ. **2,41,000.00, (2)** ಪ್ಯಾಕೇಜ್ ನಂ.02 **DMA/2024-25/OW/WORK_INDENT37161** ಅಂದಾಜು ಮೊತ್ತ ರೂ.**1,83,000.00, (3)** ಪ್ಯಾಕೇಜ್ ನಂ.03 **DMA/2024- 25/OW/WORK_INDENT37162** ಅಂದಾಜು ಮೊತ್ತ ರೂ.**3,54,000.00, (4) DMA/2024-25/OW/WORK_INDENT37164** ಅಂದಾಜು ಮೊತ್ತ ರೂ.**5,00,000.00.**

ಸಹಿ/– ಅಧ್ಯಕ್ಷರು, ನಗರಸಭೆ, ಚಿಕ್ಕಬಳ್ಳಾಪುರ
ಸಹಿ/– ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:423/ಕೆಎಸ್‌ಎಂಸಿಎ/2024–25

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052. ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/79/2024-25 ದಿನಾಂಕ: 15.03.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **“ವ್ಯವಸಾಯ”** ವಲಯದಿಂದ **“ವಾಣಿಜ್ಯ”** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಬಿ.ಸಿ. ಕೇಶವ ಬಿನ್ ಲೇಟ್ ಬೈಯಣ್ಣ, ವಿಲ್ಲಾ ನಂ. 724, ಆದರ್ಶ್ ಫಾಮ್ ರಿಟ್ರೀಟ್, ಫೇಸ್–3, ಆರ್.ಎಂ.ಝಡ್ ಎಕೋವರ್ಲ್ಡ್ ಹತ್ತಿರ, ಬೆಳ್ಳಂದೂರು ಬೆಂಗಳೂರು–560 103	ದೇವನಹಳ್ಳಿ	ಕಸಬಾ	ಶೆಟ್ಟೇರಹಳ್ಳಿ	9/2	4–02¼ ಪೈಕಿ 3–38¼	ವ್ಯವಸಾಯ	ವಾಣಿಜ್ಯ

ಷರಾ:– ಅರ್ಜಿದಾರರ ಪ್ರಸ್ತಾವನೆಯಲ್ಲಿ ಸದರಿ ಪ್ರದೇಶದಲ್ಲಿ ವಾಣಿಜ್ಯ ಬೆಳವಣಿಗೆಗೆ ಬೇಡಿಕೆ ಇದ್ದು, ವಾಣಿಜ್ಯ ಬೆಳವಣಿಗೆಯಿಂದ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **ವ್ಯವಸಾಯ** ವಲಯದಿಂದ **ವಾಣಿಜ್ಯ** ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–,
ಸದಸ್ಯ ಕಾರ್ಯದರ್ಶಿಗಳು (ಅ.ಪ್ರ) ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾಸಾಸಂಇ/ವಾಪ್ರ/ಎಲ್‌ಸಿ/5748/2024–25

PUBLIC AUCTION NOTICE
AUCTION SALE OF FLATS ON 03.04.2025

That pursuant the order of the Hon'ble Commercial Court, Bangalore CCH-89 in COM.EX 1366/2019, the property is morefully described in the schedule herein below will be sold in public auction, to be held on 03.04.2025 at the schedule premises. Any person/s or institution/s interested to participate in the auction may do so, subject to the following terms and conditions.

1. The particulars specified in the schedule below have been stated to the best of the information of the court but the court will not be answerable for any error, mis- statement or omission in the proclamation. The property is being sold in an as is where is condition.
2. The amount by which the biddings are to be increased shall be determined by the officer conducting the sale. In the event of any dispute arising as to the amount of bid or as to the bidder the lot shall at once be again put up to auction.
3. The highest bidder shall be declared to be the purchaser of any lot provided always that he is legally qualified to bid, and provided that it shall be in the discretion of the court or officer holding the sale to decline acceptance of the highest bid when the price ordered appears so clearly inadequate as to make it advisable to do so.
4. For reasons recorded, it shall be in the discretion of the officer conducting the sale to adjourn it subject always to the provisions of Rule 69 Order XXI.
5. The person declared to be the purchaser shall pay immediately after such declaration a deposit of 25 per cent on the amount of his purchase money to the office conducting the sale, and in default of such deposit the property shall forthwith be put up again and resold.
6. The full amount of the purchase money shall be paid by the purchaser before the Court closes on the fifteenth day after the sale of the property exclusive of such day or if the fifteenth day be Sunday or other holiday, then on the first office day after the fifteenth day.
7. In default of payment of this balance of purchase money within the period allowed, the property shall be resold after the issue of a fresh notification of sale. The deposit after defraying the expenses of the sale may, if the court thinks first be forfeited to the Government and the defaulting purchaser shall forfeit all claim to the property or to any part of the sum of which it may be subsequently sold.

SCHEDULE (83 Flats)

Flat No	SBA	Flat No.	SBA	Flat No.	SBA	Flat No.	SBA	Flat No.	SBA	Flat No.	SBA	Flat No	SBA
A-002	1980	A-702	1980	B-602	1300	D-201	1300	E-401	1340	F-401	1340	G-203	1800
A-003	1780	A-703	1780	B-603	1750	D-204	1750	E-502	1265	F-402	1300	G-205	1335
A-004	1785	A-704	1785	C-002	1300	D-401	1300	F-001	1340	F-601	1340	G-402	1235
A-201	1945	B-004	1810	C-003	1750	D-402	1300	F-002	1300	F-602	1300	G-403	1800
A-202	1980	B-103	1750	C-004	1810	D-601	1300	F-003	1760	F-604	1760	G-404	1810
A-203	1780	B-104	1810	C-103	1750	D-602	1300	F-004	1760	G-001	1255	G-405	1335
A-204	1785	B-203	1750	C-301	1300	D-603	1800	F-203	1760	G-101	1255	G-603	1800
A-302	1980	B-402	1300	C-402	1300	E-101	1340	F-204	1760	G-102	1235	G-604	1810
A-304	1785	B-403	1750	C-502	1300	E-102	1265	F-301	1340	G-103	1800	G-702	1235
A-501	1945	B-404	1810	C-503	1750	E-204	1720	F-302	1300	G-104	1810	G-704	1810
A-502	1980	B-501	1300	C-504	1810	E-302	1265	F-303	1760	G-201	1255	G-705	1335
A-701	1945	B-502	1300	D-001	1300	E-304	1720	F-304	1760	G-202	1235		

All Flats measuring more than 1700 sq feet are 3 BHKs and below are 2 BHK

The flats mentioned above are located in the “Mittal Palms” Project which has been developed on residentially converted lands in Sy No. 32/2, 3, 4 & 33/3, 4 situated at Shivanahalli Village, Yelahanka Hobli, Bangalore North Taluk, Bangalore. The entire land measuring an extent of 3 acres 13 guntas and bounded on the

East by : Road and Lake
West by : Property belonging to J. N Krishnappa
North by : Property belonging to Hanumakka and remaining portion of the property
South by : Arakavathy BDA layout and BDA road

Any enquiry contact For Decree Holder **9986334530**

ನಗರಸಭೆ ಕಾರ್ಯಾಲಯ
ಕೋಲಾರ

ಸಂಖ್ಯೆ:ನಸಕೋ/ತಾಂತ್ರಿಕ/ಟೆಂಡರ್/ಸಿಆರ್/11/2024–25 ದಿನಾಂಕ: 15.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೆ ಒಳಪಟ್ಟು ಇ–ಟೆಂಡರ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999–2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಕೆಳಕಂಡಂತೆ 2024–25 ನಗರಸಭೆ ನಿಧಿ, ಪ್ರವಾಸೋದ್ಯಮ ಇಲಾಖೆಯ ಮತ್ತು ಮುಜರಾಯಿ ಇಲಾಖೆಯ ಅನುದಾನದಲ್ಲಿ ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ನಮೂದಿಸಿರುವ ಇಂಡೆಂಟ್ ಸಂಖ್ಯೆ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇಲಾಖಾ ವೆಬ್‌ಸೈಟ್ **https://kppp.karnataka.gov.in** ರಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ.

(1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಲು **ಕೊನೆಯ ದಿನಾಂಕ: 24.03.2025 ರ ಸಂಜೆ 17.30 ಗಂಟೆವರೆಗೆ.**

(2) ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ:26.03.2025 ರ ಬೆಳಿಗ್ಗೆ 11.00 ಗಂಟೆಗೆ.** ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 28.03.2025 ರ ಬೆಳಿಗ್ಗೆ 11.00 ಗಂಟೆಗೆ** ಅಥವಾ ಸೂಚಿತ ದಿನಾಂಕದಂದು ತೆರೆಯಲಾಗುವುದು.

ಪ್ಯಾ ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷ ಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ)	ಕಾಲಾವಧಿ
1	DMA/2024-25/RD/WORK_INDENT37500 ಕೋಲಾರ ನಗರದ ಗಂಗರ ಕಾಲದ ಪ್ರಸಿದ್ಧ ದೇವಾಲಯಗಳಾದ ಶ್ರೀ ಕೋಲಾರಮ್ಮ ಮತ್ತು ಶ್ರೀ ಸೋಮೇಶ್ವರ ದೇವಾಲಯಗಳ ರಸ್ತೆ, ಪಾದಚಾರಿ ಮಾರ್ಗ ಮತ್ತು ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ.	70.75	1,19,000.00	3 ತಿಂಗಳು

ಸೂಚನೆ: ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಹಾಗೂ **www.kolarcity.mrc.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.

ಸಹಿ/– ಕೆ.ಲಕ್ಷ್ಮೀದೇವಮ್ಮ ರಮೇಶ್, ಅಧ್ಯಕ್ಷರು, ನಗರಸಭೆ, ಕೋಲಾರ
ಸಹಿ/– ಸಂಗೀತ.ವಿ ಜಗದೀಶ್, ಉಪಾಧ್ಯಕ್ಷರು, ನಗರಸಭೆ, ಕೋಲಾರ
ಸಹಿ/– ಫೈರೋಜ್ ಖಾನ್, ಸ್ಥಾಯಿ ಸಮಿತಿ ಅಧ್ಯಕ್ಷರು, ನಗರಸಭೆ, ಕೋಲಾರ
ಸಹಿ/– ಪೌರಾಯುಕ್ತರು, ನಗರಸಭೆ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:530/ಕೆಎಸ್‌ಎಂಸಿಎ/2024–25

‘ಹಿಂದೂಗಳ ಕಿವಿಗೆ ಹೂವಿಟ್ಟ ಸರ್ಕಾರ’

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕೆ

ಪ್ರಜಾವಾಣಿ ವಾರ್ತೆ

ವಿಜಯೇಂದ್ರ

ಬೆಂಗಳೂರು: ‘ಎಲ್ಲಾ ವರ್ಗದಲ್ಲೂ ಬಡವರಿದ್ದಾರೆ. ಹಿಂದೂಗಳಲ್ಲೂ ಬಡವರಿದ್ದಾರೆ. ಮುಸ್ಲಿಮರಿಗೆ ಸರ್ಕಾರಿ ಕಾಮಗಾರಿಗಳ ಟೆಂಡರ್‌ಗಳಲ್ಲಿ ಶೇ 4 ಮೀಸಲಾತಿ ಕೊಡುವುದಾದರೆ ಹಿಂದೂಗಳೇನು ಅಪರಾಧ ಮಾಡಿದ್ದಾರೆ. ಹಿಂದೂಗಳಲ್ಲಿ ಬಡವರಿಲ್ಲವೇ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಶ್ನಿಸಿದ್ದಾರೆ.

ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಸರ್ಕಾರಿ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಶೇ 4 ರಷ್ಟು ಮೀಸಲಾತಿ ಅನುಷ್ಠಾನಕ್ಕೆ ನಾವು ಅವಕಾಶ ಕೊಡುವುದಿಲ್ಲ. ರಾಜ್ಯವ್ಯಾಪಿ ಹೋರಾಟ ನಡೆಸುತ್ತೇವೆ’ ಎಂದರು.

‘ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕುವೆಂಪು ಅವರ ನಾಡಗೀತೆಯನ್ನು ನೆನಪಿಸಿಕೊಂಡಿದ್ದಾರೆ. ಸರ್ವ ಜನಾಂಗದ ಶಾಂತಿಯ ತೋಟದ ನೆನಪನ್ನು ಅವರು ಮಾಡಿಕೊಟ್ಟಿದ್ದಾರೆ. ಕಾಂಗ್ರೆಸ್ ಸರ್ಕಾರವು ರಾಜ್ಯದಲ್ಲಿ ಸರ್ವಜನಾಂಗದ ಶಾಂತಿಯ ತೋಟಕ್ಕೆ ವಿಷ ಬೀಜವನ್ನು ಬಿತ್ತುವ ಕೆಲಸ ಮಾಡುತ್ತಿದೆ’ ಎಂದು ಕಿಡಿಕಾರಿದರು.

‘ವಿಷ ಬೀಜ ಬಿತ್ತುವ ಕೆಲಸವನ್ನು ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಮಾಡಲು ಹೊರಟ್ಟಿದ್ದಾರೆ. ಇದನ್ನು ಬಿಜೆಪಿ ವಿರೋಧಿಸುತ್ತದೆ. ಪ್ರವರ್ಗ 2 ಬಿ ಅಡಿ ಜೈನರು ಬರುತ್ತಾರಾ? ಮುಸ್ಲಿಮರು ಬಿಟ್ಟರೆ ಯಾರು ಬರುತ್ತಾರೆ? ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಹಿಂದೂಗಳ ಕಿವಿಗೆ ಹೂವಿಡುವ ಕೆಲಸ ಮಾಡುತ್ತಿದ್ದಾರೆ’ ಎಂದು ಟೀಕಿಸಿದರು.

‘ಬಿಜೆಪಿ ಮುಸ್ಲಿಮರ ವಿರೋಧಿಯಲ್ಲ. ಆದರೆ, ಅಲ್ಪಸಂಖ್ಯಾತರು ಅಥವಾ ಮುಸ್ಲಿಮರ ತುಷ್ಟೀಕರಣದ ರಾಜಕೀಯ ನೀತಿಯನ್ನು ಕಾಂಗ್ರೆಸ್ ಅನುಸರಿಸುತ್ತಿದ್ದು, ಅದನ್ನು ನಾವು ವಿರೋಧಿಸುತ್ತಿದ್ದೇವೆ. ಮುಸ್ಲಿಮರಿಗೆ ಎಂಎಲ್‌ಸಿ ಮಾಡಿ, ರಾಜ್ಯಸಭಾ ಸದಸ್ಯತ್ವ ಕೊಡಿ ಎಂದು ಡಿ.ಕೆ.ಶಿವಕುಮಾರ್ ಅವರು ಸವಾಲು ಹಾಕಿದ್ದಾರೆ. ಬಿಜೆಪಿ ಸರ್ಕಾರ ಇದ್ದಾಗ ಡಾ.ಎ.ಪಿ. ಜೆ.ಅಬ್ದುಲ್ ಕಲಾಂ ಅವರನ್ನು ರಾಷ್ಟ್ರಪತಿಗಳನ್ನಾಗಿ ನಾವು ಮಾಡಿದೆವು. ಕಾಂಗ್ರೆಸ್ ಅಲ್ಲ’ ಎಂದರು.

ನರೇಂದ್ರ ಮೋದಿ ಅವರ ಸರ್ಕಾರ ಬಂದ ಬಳಿಕ ನೆಜ್ಮಾ ಹೆಪ್ತುಲ್ಲಾ, ನ್ಯಾ. ಅಬ್ದುಲ್ ನಜೀರ್, ಆರಿಫ್ ಮಹಮದ್ ಅವರನ್ನು ರಾಜ್ಯಪಾಲರನ್ನಾಗಿ ಮಾಡಲಾಯಿತು. ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರಿಗೆ ಭಾರತ ರತ್ನ ಕೊಟ್ಟಿದ್ದು ಕಾಂಗ್ರೆಸ್‌ನವರಲ್ಲ ಎಂದು ಅವರು ಹೇಳಿದರು.

ವಿಧಾನಸಭೆಯಲ್ಲಿ ಬಿಜೆಪಿ–ಕಾಂಗ್ರೆಸ್ ಸದಸ್ಯರ ವಾಗ್ವಾದ

ಮೊಬೈಲ್ ಚಿತ್ರೀಕರಣ– ರಾಷ್ಟ್ರಧ್ವಜದ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಲ್ಲಿ ಸೋಮವಾರ ಆರ್‌ಎಸ್‌ಎಸ್ ವಿಷಯದಲ್ಲಿ ನಡೆಯುತ್ತಿದ್ದ ಗದ್ದಲವನ್ನು ಮೊಬೈಲ್‌ನಲ್ಲಿ ಚಿತ್ರೀಕರಣ ಮಾಡುತ್ತಿದ್ದ ಸಂಗತಿ ಬಿಜೆಪಿ–ಕಾಂಗ್ರೆಸ್ ಸದಸ್ಯರ ನಡುವೆ ವಾಗ್ವಾದಕ್ಕೆ ಕಾರಣವಾಯಿತು.

ಕಾಂಗ್ರೆಸ್‌ನ ನರೇಂದ್ರಸ್ವಾಮಿ ಅವರು, ‘ಬಿಜೆಪಿ ಸದಸ್ಯರೊಬ್ಬರು ಗದ್ದಲವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸುತ್ತಿದ್ದಾರೆ’ ಎಂದು ಆರೋಪಿಸಿ, ‘ಮೊಬೈಲ್ ವಶಕ್ಕೆ ತೆಗೆದುಕೊಳ್ಳಬೇಕು’ ಎಂದು ಆಗ್ರಹಿಸಿದರು.

ಸಭಾಧ್ಯಕ್ಷ ಪೀಠದಲ್ಲಿದ್ದ ಕೆ.ಎಂ. ಶಿವಲಿಂಗೇಗೌಡ ಅವರು, ‘ಮೊಬೈಲ್‌ನಲ್ಲಿ ಚಿತ್ರೀಕರಣ ಮಾಡಿದ್ದರೆ. ಅದು ತಪ್ಪು, ಅದನ್ನು ಪರಿಶೀಲಿಸಬೇಕಾಗುತ್ತದೆ’ ಎಂದರು. ಇದಕ್ಕೆ ಧ್ವನಿಗೂಡಿಸಿದ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಇದು ಅತ್ಯಂತ ಗಂಭೀರ ವಿಚಾರ. ಚಿತ್ರೀಕರಣ ಮಾಡಿದ್ದು ಯಾರು ಎಂಬುದನ್ನು ಹೆಸರಿಸಬೇಕು ಎಂದು ಸಭಾಧ್ಯಕ್ಷರನ್ನು ಒತ್ತಾಯಿಸಿದರು. ‘ನಮ್ಮ ಕಡೆಯಲ್ಲಿ ಯಾರೂ ವಿಡಿಯೊ ಚಿತ್ರೀಕರಣ ಮಾಡಿಲ್ಲ’ ಎಂದು ಆರ್. ಅಶೋಕ ಸಮಜಾಯಿಷಿ ನೀಡಿದರು.

ಆಗ ಬಿಜೆಪಿಯ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಅವರು, ‘ಸದನದ ಒಳಗೆ ಕೆಲವರು ರಾಷ್ಟ್ರಧ್ವಜವನ್ನು ಬೇಕಾಬಿಟ್ಟಿ ಪ್ರದರ್ಶಿಸಿ ಅಗೌರವ ತೋರಿಸಿದ್ದಾರೆ. ಅವರ ವಿರುದ್ಧ ಕ್ರಮ ಜರುಗಿಸಬೇಕು. ನಿಮ್ಮ ಕಣ್ಣ ಮುಂದೆಯೇ ಅಗೌರವ ತೋರಿಸಿರುವುದನ್ನು ನೋಡಿಕೊಂಡು ಸುಮ್ಮನೆ ಏಕೆ ಕುಳಿತಿದ್ದೀರಿ’ ಎಂದು ಶಿವಲಿಂಗೇಗೌಡ ಅವರನ್ನು ಪ್ರಶ್ನಿಸಿದರು.

‘ರಾಷ್ಟ್ರಧ್ವಜ ಸದನದ ಒಳಗೆ ತರುವುದು ಸರಿಯೋ, ತಪ್ಪೋ ಎಂಬುದನ್ನು ಇನ್ನರ್ಧ ಗಂಟೆಯೊಳಗೆ ಪರಾಮರ್ಶೆ ನಡೆಸಿ ರೂಲಿಂಗ್ ನೀಡುತ್ತೇನೆ’ ಎಂದು ಶಿವಲಿಂಗೇಗೌಡ ಹೇಳಿದ್ದನ್ನು ಯಾರೂ ಕಿವಿಗೆ ಹಾಕಿಕೊಳ್ಳಲಿಲ್ಲ.

‘ಸತ್ಯ ಕಹಿ: ನಮ್ಮ ಮಾತು ಕೇಳಲ್ಲ’

‘ನಿಮ್ಮ ಉತ್ತರ ಏಕಮುಖವಾಗಿದೆ. ದಾಖಲೆ ಸಮೇತ ನಾವು ಹೇಳುವ ಅಂಕಿ ಅಂಶಗಳನ್ನು ಒಪ್ಪುವುದಿಲ್ಲ. ಸದನದ ಮತ್ತು ರಾಜ್ಯದ ಗಮನ ಬೇರೆಡೆ ಸೆಳೆಯಲು ಬೇಕೆಂದೇ ಆರ್‌ಎಸ್‌ಎಸ್ ಮುಂತಾದ ವಿವಾದ ಹುಟ್ಟುಹಾಕುತ್ತೀರಿ’ ಎಂದು ಬಿಜೆಪಿಯ ವಿ.ಸುನಿಲ್‌ಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಉದ್ದೇಶಿಸಿ ಹೇಳಿದರು.

‘ಪರಿಶಿಷ್ಟರ ಕಲ್ಯಾಣ ನಿಧಿ ದುರ್ಬಳಕೆ, ಅದರಲ್ಲೂ ಗ್ಯಾರಂಟಿಗಳಿಗೆ ವಿನಿಯೋಗಿಸುತ್ತಿರುವ ಕುರಿತ ನಮ್ಮ ಪ್ರಶ್ನೆಗಳಿಗೆ ಉತ್ತರ ನೀಡಲು ನಿಮಗೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ದಾರಿ ತಪ್ಪಿಸುವ ಮಾರ್ಗ ಕಂಡುಕೊಂಡಿದ್ದೀರಿ. ನಿಮ್ಮ ಸರ್ಕಾರದ ಯೋಗ್ಯತೆ ಬಯಲಾಗಿದೆ ನೋಡಿ’ ಎಂದು ಅವರು ‘ಪ್ರಜಾವಾಣಿ’ಯಲ್ಲಿ ಪ್ರಕಟವಾಗಿದ್ದ ವರದಿಯನ್ನು ಪ್ರದರ್ಶಿಸಿದರು.

ನಗರದಲ್ಲಿ ಇಂದು

ಸೌಜನ್ಯ ನ್ಯಾಯಕ್ಕೆ ಆಗ್ರಹಿಸಿ, ಊಳಿಗಮಾನ್ಯ ದರ್ಪದ ವಿರುದ್ಧ ಸಾಹಿತಿ, ಚಿಂತಕ, ಹೋರಾಟಗಾರರ ಹೋರಾಟದ ದಿಕ್ಸೂಚಿ ಸಭೆ: ಸ್ಥಳ: ಎಐಟಿಯುಸಿ ಸಭಾಂಗಣ, ಶೇಷಾದ್ರಿಪುರ, ಸಂಜೆ 5

ಭಜನೆ: ವಿದ್ಯಾರಣ್ಯಪುರದ ವಿಜಯ ವಿಠ್ಠಲ ಭಜನಾ ಮಂಡಳಿ, ‘ಮಹಾಭಾರತದ ಮಹಾನ್ ಸ್ತ್ರೀಯರು’ ಪ್ರವಚನ: ಚಂದ್ರಶೇಖರ ಆಚಾರ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಅಲಸೂರಮ್ಮ ರಾಯರ ಮಠ, ವಿದ್ಯಾರಣ್ಯಪುರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಮಹಾಭಾರತದ ಪ್ರವಚನ ಮಾಲಿಕೆ–8 (ಸಭಾಪರ್ವ): ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ: ಪೂರ್ಣಪ್ರಜ್ಞ ಪ್ರತಿಷ್ಠಾನ, ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ, ಸಂಜೆ 6.30



ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರು ಬಡಾವಣೆಯಲ್ಲಿ ಚರಂಡಿ ಮತ್ತು ರಸ್ತೆ ಮರುಡಾಂಬರೀಕರಣ ಕಾಮಗಾರಿಗೆ ಕಂದಾಯ ಸಚಿವ ಕೃಷ್ಣಬೈರೇಗೌಡ ಚಾಲನೆ ನೀಡಿದರು

₹2 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರು ಬಡಾವಣೆಯಲ್ಲಿ ಚರಂಡಿ ಅಭಿವೃದ್ಧಿ ಮತ್ತು ಮರುಡಾಂಬರೀಕರಣ ಹಾಗೂ ದಾಸರಹಳ್ಳಿಯ ಆಕಾಶವಾಣಿ ಬಡಾವಣೆ ಮೂಲಕ ಮಾನ್ಯತಾ ಟೆಕ್ ಪಾರ್ಕ್‌ಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಅಭಿವೃದ್ಧಿ ಕಾಮಗಾರಿಗೆ ಕಂದಾಯ ಸಚಿವ ಕೃಷ್ಣಬೈರೇಗೌಡ ಚಾಲನೆ ನೀಡಿದರು.

‘ಜಕ್ಕೂರು ಬಡಾವಣೆಯಲ್ಲಿ ಈ ಹಿಂದೆ ನಿರ್ಮಿಸಿದ್ದ ಚರಂಡಿಗಳು ಹಾಗೂ ರಸ್ತೆಗಳು ಹಾಳಾಗಿ ಸ್ಥಳೀಯರಿಗೆ ಸಮಸ್ಯೆಯಾಗುತ್ತಿತ್ತು. ಅಲ್ಲದೆ ದಾಸರಹಳ್ಳಿಯ ಆಕಾಶವಾಣಿ ಬಡಾವಣೆ ಮೂಲಕ ಮಾನ್ಯತಾ ಟೆಕ್ ಪಾರ್ಕ್‌ಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯು ಹಾಳಾಗಿ ವಾಹನಸಂಚಾರಕ್ಕೆ ತೊಂದರೆಯಾಗುತ್ತಿತ್ತು. ಈ ದಿಸೆಯಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕೆಂಬ ಸ್ಥಳೀಯರ ಮನವಿಯ ಮೇರೆಗೆ ₹2 ಕೋಟಿ ವೆಚ್ಚದಲ್ಲಿ ಈ ಎರಡೂ ಕಾಮಗಾರಿಗೆ ಚಾಲನೆ ನೀಡಲಾಗಿದೆ’ ಎಂದು ತಿಳಿಸಿದರು.

ಕಾಂಗ್ರೆಸ್ ಮುಖಂಡರಾದ ಎನ್.ಎನ್.ಶ್ರೀನಿವಾಸಯ್ಯ, ಎಂ. ಜಯಗೋಪಾಲಗೌಡ, ಡಿ.ಬಿ. ಸುರೇಶ್ ಗೌಡ, ಕೆ.ಗೌರೀಶ್, ಕೃಷ್ಣ, ಪ್ರೇಮಾ ಸುರೇಶ್, ಡಿ.ಸಿ. ಮುನಿರಾಜು, ಡಿ.ಸಿ. ಮುನಿಸ್ವಾಮಿ, ಕಾರ್ತಿಕ್ ರಾಜ್, ಬಿಬಿಎಂಪಿ ಕಾರ್ಯನಿರ್ವಾಹಕ ಎಂಜಿನಿಯರ್ ಸೋಮಶೇಖರ್. ಜಿ.ಎಲ್, ಸಹಾಯಕ ಎಂಜಿನಿಯರ್ ಸುರೇಶ್ ದೇವತ್ ರಾಜ್ ಉಪಸ್ಥಿತರಿದ್ದರು.

ಬ್ಯಾಂಕ್ ನೌಕರರ ಮುಷ್ಕರ 24ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕಿಂಗ್ ಕ್ಷೇತ್ರದ ಎಲ್ಲ ವಿಭಾಗಗಳಲ್ಲಿ ಹೊಸ ನೇಮಕಾತಿ ಮಾಡಿಕೊಳ್ಳಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮಾರ್ಚ್ 24ರಿಂದ 25ರವರೆಗೆ ಮುಷ್ಕರ ಹಮ್ಮಿಕೊಳ್ಳಲಾಗುವುದು ಎಂದು ಯುನೈಟೆಡ್ ಫೋರಂ ಆಫ್ ಬ್ಯಾಂಕ್ ಯೂನಿಯನ್ ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಯೂನಿಯನ್ ಸಂಚಾಲಕ ಗಿರಿರಾಜ, 'ಬ್ಯಾಂಕಿಂಗ್ ಉದ್ಯಮದಲ್ಲಿ ವಾರದ ಐದು ದಿನಗಳನ್ನು ಮಾತ್ರ ಕೆಲಸದ ದಿನಗಳೆಂದು ಪರಿಗಣಿಸಬೇಕು. ಬ್ಯಾಂಕ್‌ಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ಮೇಲೆ ಆಗುವ ಹಲ್ಲೆಗಳನ್ನು ನಿಯಂತ್ರಿಸಿ, ಸಿಬ್ಬಂದಿಗೆ ರಕ್ಷಣೆ ನೀಡಬೇಕು. ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು' ಎಂದು ಆಗ್ರಹಿಸಿದರು.

ಬೆಂಗಳೂರು–ಕೋಲಾರ ರೈಲು ಮಾರ್ಗ: ಸಂಸದ ಒತ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು–ಕೋಲಾರ ನಡುವೆ ನೂತನ ರೈಲು ಮಾರ್ಗದ ಯೋಜನೆ ಅನುಷ್ಠಾನಗೊಳಿಸಬೇಕು ಎಂದು ಕೋಲಾರ ಸಂಸದ ಎಂ. ಮಲ್ಲೇಶಬಾಬು ಆಗ್ರಹಿಸಿದರು.

ಲೋಕಸಭೆಯಲ್ಲಿ ಸೋಮವಾರ ನಡೆದ ರೈಲ್ವೆ ಇಲಾಖೆ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು

ಮಾತನಾಡಿದ ಅವರು, 'ರೈಲು ಮಾರ್ಗ ನಿರ್ಮಿಸಿದರೆ ನರಸಾಪುರ ಕೈಗಾರಿಕಾ ಪ್ರದೇಶಕ್ಕೆ ಹೋಗುವವರಿಗೆ ಅನುಕೂಲವಾಗಲಿದೆ. ಜತೆಗೆ, ಕೋಲಾರ–ತಿರುಪತಿ, ಶ್ರೀನಿವಾಸಪುರ–ಮದನಪಲ್ಲಿ ನಡುವೆ ನೂತನ ಮಾರ್ಗಗಳನ್ನು ನಿರ್ಮಿಸಬೇಕು' ಎಂದು ಒತ್ತಾಯಿಸಿದರು.

'ಕೋಲಾರಕ್ಕೆ ರೈಲ್ವೆ ಕೋಚ್ ಕಾರ್ಖಾನೆಯನ್ನು ಘೋಷಣೆ ಮಾಡಿ 12 ವರ್ಷಗಳು ಕಳೆದಿವೆ. ಇದೊಂದು ಬಹುಕಾಲದ ಬೇಡಿಕೆ. ಕೇಂದ್ರ ಸರ್ಕಾರ ವಿಶೇಷ ಮುತುವರ್ಜಿ ವಹಿಸಿ ಕೋಚ್ ಕಾರ್ಖಾನೆ ಸ್ಥಾಪಿಸಬೇಕು' ಎಂದು ಅವರು ಮನವಿ ಮಾಡಿದರು.

ಚಿಕ್ಕತಿರುಪತಿಯಲ್ಲಿ ರೈಲು ನಿಲ್ದಾಣ ಸ್ಥಾಪಿಸಬೇಕು. ಪ್ರತಿ ರೈಲ್ವೆ ನಿಲ್ದಾಣದಲ್ಲಿ ಮಿನಿ ವೈದ್ಯಕೀಯ ಕಿಯೋಸ್ಕ್‌ಗಳನ್ನು ಆರಂಭಿಸಬೇಕು. ರಾಜ್ಯಕ್ಕೆ ಈ ವರ್ಷ ರೈಲ್ವೆ ಬಜೆಟ್‌ನಲ್ಲಿ ₹7,564 ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ. ಬಾಕಿ ಉಳಿಸಿರುವ ಹಾಗೂ ಹೊಸ ರೈಲ್ವೆ ಯೋಜನೆಗಳನ್ನು ಕಾರ್ಯಗತಗೊಳಿಸಲು ಅನುದಾನ ಪ್ರಮಾಣ ಹೆಚ್ಚಿಸಬೇಕು' ಎಂದು ಅವರು ಕೋರಿದರು.

ಕರ್ನಾಟಕ ಮಾನವ ಸಂಪನ್ಮೂಲ ಸೇವೆ ಒದಗಿಸುವ ಗುತ್ತಿಗೆದಾರ ಸಂಘಕ್ಕೆ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಮಾನವ ಸಂಪನ್ಮೂಲ ಸೇವೆ ಒದಗಿಸುವ ಗುತ್ತಿಗೆದಾರ ಸಂಘ'ದ ರಾಜ್ಯ ಘಟಕದ ಮೊದಲ ಅಧ್ಯಕ್ಷರಾಗಿ ಬೆಂಗಳೂರಿನ ಮಹಾಲಿಂಗಪ್ಪ (ಮಹಾಲಿಂಗೇಗೌಡ ಮುದ್ದನಗಟ್ಟ) ಆಯ್ಕೆಯಾಗಿದ್ದಾರೆ.

ಮಹಾಲಿಂಗಪ್ಪ

ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಸಂಘದ ಉಪಾಧ್ಯಕ್ಷರಾಗಿ ಶಿವಮೊಗ್ಗದ ಸುರೇಶ್ ಕೆ. ಬಾಳೆಗುಂಡಿ, ಮೈಸೂರಿನ ಎಂ. ನಾಗರಾಜು ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಬೆಂಗಳೂರಿನ ರಾಘವೇಂದ್ರ ರೆಡ್ಡಿ ಅವರನ್ನು ಆಯ್ಕೆ ಮಾಡಲಾಗಿದೆ.

ಖಜಾಂಚಿಯಾಗಿ ದಾವಣಗೆರೆಯ ಬಿ.ಎಸ್. ರಾಜಶೇಖರ್, ಜಂಟಿ ಕಾರ್ಯದರ್ಶಿಗಳಾಗಿ ಕಲಬುರಗಿಯ ಯಲ್ಲಪ್ಪ ಬಿ. ಕಂದಕೂರ, ಬೆಂಗಳೂರಿನ ದಯಾನಂದ ಟಿ.ಆರ್, ಸಂಘಟನಾ ಕಾರ್ಯದರ್ಶಿಗಳಾಗಿ ಬೆಂಗಳೂರಿನ ಶಿವಕುಮಾರ್, ರಾಜಪ್ಪ ಟಿ, ಗೋಪಾಲ ಡಿ, ಬಾಗಲಕೋಟೆಯ ಗಣಪತಿ ಬಿ ಹೋಟಾಕರ್ ಆಯ್ಕೆಯಾಗಿದ್ದಾರೆ ಎಂದು ಸಂಘದ ಪ್ರಕಟಣೆಯು ತಿಳಿಸಿದೆ.

ಕಾರ್ಯಕಾರಿ ಸಮಿತಿ ಸದಸ್ಯರಾಗಿ ಬೆಂಗಳೂರಿನ ಎ. ಅಶ್ವಿನ್ ಕುಮಾರ್, ಕೆ. ಭದ್ರೇಗೌಡ, ಗಂಗಾಧರ ಟಿ.ಎನ್. ನಾಗಪ್ಪ, ಪದ್ಮನಾಭ ರೆಡ್ಡಿ, ರವಿಶಂಕರ್ ಎಸ್, ವಿಜಯಪುರದ ಭುಟಾಲೆಪ್ಪ ಮನ್ನೂರ, ಧಾರವಾಡದ ನಾಗಪ್ಪ ಗುರುಬಸಪ್ಪ ಬಿದರಿ, ಚಿತ್ರದುರ್ಗದ ಚೇತನ್ ಕುಮಾರ್ ಆರ್, ಶಿವಮೊಗ್ಗದ ಗಿರಿಜ, ಮೈಸೂರಿನ ಶಿವಣ್ಣ, ಶಂಕರೇಗೌಡ ಕೆ.ಎಸ್, ಎಂ. ಶಶಿಕಾಂತ, ರಾಮನಗರದ ಪುಟ್ಟಸ್ವಾಮಿ ಎಚ್.ಟಿ ಆಯ್ಕೆಯಾಗಿದ್ದಾರೆ.

ಯಲಹಂಕದ ಅಮಾನಿ ಕೆರೆಯ ಆವರಣದಲ್ಲಿ ಬಿಬಿಎಂಪಿ ವತಿಯಿಂದ ನಿರ್ಮಿಸಿರುವ ಹೈಟೆಕ್ ಈಜ್ಞೀ ಶೌಚಾಲಯವನ್ನು ಶಾಸಕ ಎಸ್‌ಆರ್‌ ವಿಶ್ವನಾಥ್ ಅವರು ಸೋಮವಾರ ಉದ್ಘಾಟಿಸಿದರು

ಈಜ್ಞೀ ಶೌಚಾಲಯ ಉದ್ಘಾಟನೆ

ಯಲಹಂಕ: ಅಮಾನಿ ಕೆರೆಯ ಆವರಣದಲ್ಲಿ ಬಿಬಿಎಂಪಿಯಿಂದ ನಿರ್ಮಿಸಿರುವ ಹೈಟೆಕ್ ಈಜ್ಞೀ ಶೌಚಾಲಯವನ್ನು ಸೋಮವಾರ ಉದ್ಘಾಟಿಸಲಾಯಿತು.

ಬಿಬಿಎಂಪಿ ಶುಭ್ರ ಬೆಂಗಳೂರು ಅನುದಾನದಡಿಯಲ್ಲಿ ₹30 ಲಕ್ಷ ವೆಚ್ಚದಲ್ಲಿ ಪ್ರೀಕಾಸ್ಟ್ ಮಾದರಿಯಲ್ಲಿ ಅತ್ಯಾಧುನಿಕ ತಂತ್ರಜ್ಞಾನದಿಂದ ನಿರ್ಮಿಸಿರುವ ಶೌಚಾಲಯದಲ್ಲಿ ಸೆನ್ಸಾರ್ ಆಧಾರಿತ ಯೂರಿನಲ್ಸ್ ಅಳವಡಿಸಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ಶಾಸಕ ಎಸ್.ಆರ್.ವಿಶ್ವನಾಥ್ ಮಾತನಾಡಿ, 'ಬೆಂಗಳೂರಿನಲ್ಲಿ ಶೌಚಾಲಯದ ಕೊರತೆಯಿದೆ. ಯಲಹಂಕದಲ್ಲಿ ಕೆರೆಗಳ ಅಭಿವೃದ್ಧಿ ಆಗುತ್ತಿದ್ದು, ಅಪಾರ ಜನರು ಯೋಗ, ವ್ಯಾಯಾಮ ಹಾಗೂ ವಾಕಿಂಗ್ ಮಾಡಲು ಬರುವುದರಿಂದ ಶೌಚಾಲಯದ ಅಗತ್ಯವಿತ್ತು. ಈ ದಿಸೆಯಲ್ಲಿ ಬಿಬಿಎಂಪಿ ಪರಿಸರಸ್ನೇಹಿ ಹೈಟೆಕ್ ಶೌಚಾಲಯ ನಿರ್ಮಿಸಿರುವುದು ಶ್ಲಾಘನೀಯ' ಎಂದರು.

ಬಿಬಿಎಂಪಿ ಕಾರ್ಯಪಾಲಕ ಎಂಜಿನಿಯರ್ (ಆರೋಗ್ಯ ಮತ್ತು ನೈರ್ಮಲ್ಯ) ಭೀಮೇಶ್ ಮಾತನಾಡಿ, 'ಬೆಂಗಳೂರಿನಾದ್ಯಂತ ಇದೇ ಮಾದರಿಯ 40 ಶೌಚಾಲಯಗಳನ್ನು ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಈ ಹಿಂದೆ ನಿರ್ಮಿಸುತ್ತಿದ್ದ ಶೌಚಾಲಯಗಳಲ್ಲಿ ವೆಂಟಿಲೇಟರ್ ಕಿಟಕಿಯ ಗಾತ್ರ ಕಡಿಮೆಯಿದ್ದು, ಸ್ವಾಭಾವಿಕ ಗಾಳಿ-ಬೆಳಕು ಸರಾಗವಾಗಿ ಒಳಗೆ ಪ್ರವೇಶಿಸಲು ಸಾಧ್ಯವಾಗದೆ ವಾಸನೆ ಹರಡುತ್ತಿತ್ತು. ಕೇವಲ ವಿದ್ಯುತ್ ಸಂಪರ್ಕದ ಮೇಲೆ ಅವಲಂಬಿತವಾಗಬೇಕಾಗಿತ್ತು. ಆದರೆ ಹೈಟೆಕ್ ಈಜ್ಞೀ ಶೌಚಾಲಯದಲ್ಲಿ ಪರ್ಫೊರೇಟೆಡ್ ಶೀಟ್ ಅಳವಡಿಸಿರುವುದರಿಂದ ಸ್ವಾಭಾವಿಕ ಗಾಳಿ-ಬೆಳಕಿನ ಸದುಪಯೋಗ ಪಡೆಯಬಹುದಾಗಿದೆ' ಎಂದು ತಿಳಿಸಿದರು.

ಬಿಬಿಎಂಪಿ ಕಾರ್ಯಪಾಲಕ ಎಂಜಿನಿಯರ್ ಅನಿಲ್‌ಕುಮಾರ್ ಎಸ್, ಪ್ರಾಜೆಕ್ಟ್ ಎಂಜಿನಿಯರ್ ಅರ್ಜುನ್ ಗಿರಿ, ಜಲಸಿರಿ ಪ್ರತಿಷ್ಠಾನದ ಅಧ್ಯಕ್ಷ ಮು.ಕೃಷ್ಣಮೂರ್ತಿ, ಬಿಜೆಪಿ ಮುಖಂಡರಾದ ಮುರಾರಿರಾಮು.ವೈ.ಕೆ, ಈಶ್ವರಪ್ಪ, ಶೇಖರ್ ಪೂಜಾರಿ, ದಶರಥ, ರೇವಣ್ಣ, ಬಾಬು, ಗೋಪಿನಾಥ್. ವೈ.ಎನ್, ಶೌಚಾಲಯದ ವಿನ್ಯಾಸಗಾರ ಡಿ.ರೋಹನ್ ಉಪಸ್ಥಿತರಿದ್ದರು.

ಲೋಕಾಯುಕ್ತ ಸೋಗಿನಲ್ಲಿ ಹಣಕ್ಕೆ ಬೇಡಿಕೆ: ಬಂಧನ

ಗೌರಿಬಿದನೂರು: ಲೋಕಾಯುಕ್ತರ ಸೋಗಿನಲ್ಲಿ ಪೌರಾಯುಕ್ತರ ಬಳಿ ಹಣಕ್ಕಾಗಿ ಬೇಡಿಕೆ ಇಟ್ಟಿದ್ದ ಆರೋಪಿಯನ್ನು ಗೌರಿಬಿದನೂರು ಪೊಲೀಸರು ಬಂಧಿಸಿದ್ದಾರೆ.

ಆರೋಪಿಯನ್ನು ಆಂಧ್ರಪ್ರದೇಶ ಮೂಲದ ನಾಗಿರೆಡ್ಡಿ ಪ್ರಭಾಕರರೆಡ್ಡಿ (21) ಎಂದು ಗುರುತಿಸಲಾಗಿದೆ. ವಿಚಾರಣೆ ವೇಳೆ ತಾನು ಮತ್ತು ಧನುಶ್ ರೆಡ್ಡಿ ಸೇರಿಕೊಂಡು ಈ ಕೃತ್ಯ ಎಸಗಿದ್ದಾಗಿ ಆರೋಪಿಯು ಒಪ್ಪಿಕೊಂಡಿದ್ದಾನೆ. ತಲೆ ಮರೆಸಿಕೊಂಡಿರುವ ಧನುಶ್ ರೆಡ್ಡಿಗಾಗಿ ಕಾರ್ಯಾಚರಣೆ ಮುಂದುವರಿಸಲಾಗಿದೆ. ಈ ಕಾರ್ಯಾಚರಣೆಯಲ್ಲಿ ಚಿಕ್ಕಬಳ್ಳಾಪುರ ಮತ್ತು ಗೌರಿಬಿದನೂರು ಪೊಲೀಸರು ಪಾಲ್ಗೊಂಡಿದ್ದರು.

275 ಕೋಟಿ ಲೀಟರ್ ದ್ರವತ್ಯಾಜ್ಯ ಸಂಸ್ಕರಣೆಗೆ ಮೂರೂವರೆ ವರ್ಷ; ₹474 ಕೋಟಿ ವೆಚ್ಚ: ತುಷಾರ್ ಗಿರಿನಾಥ್

‘2,500 ಟನ್ ಮಿಶ್ರತ್ಯಾಜ್ಯ ಭೂಭರ್ತಿಗೆ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ದೊಡ್ಡಬಳ್ಳಾಪುರ ಟೆರ್ರಾಫಾರ್ಮ್ ಬಳಿ 100 ಎಕರೆಯಲ್ಲಿ ಸಂಸ್ಕರಣೆ ಘಟಕ
- ಗೊಲ್ಲರಹಳ್ಳಿಯಲ್ಲಿ ನೈಸ್ ರಸ್ತೆ ನೀಡಿದ್ದ 100 ಎಕರೆ ಭೂಮಿಯಲ್ಲಿ ಮತ್ತೊಂದು ಘಟಕ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಸುಮಾರು ಒಂದು ಸಾವಿರ ಟನ್ ತ್ಯಾಜ್ಯ ಸಂಸ್ಕರಣೆಯಾಗುತ್ತಿದ್ದು, ಪ್ರತಿದಿನ ಸುಮಾರು 2,500 ಟನ್ ಮಿಶ್ರತ್ಯಾಜ್ಯ ಭೂಭರ್ತಿಯಾಗುತ್ತಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಮಿಟ್ಟಗಾನಹಳ್ಳಿ- ಕಣ್ಣೂರು ಭೂಭರ್ತಿ ಪ್ರದೇಶದಲ್ಲಿ ಕಸ ವಿಲೇವಾರಿಗೆ ಉದ್ಭವಿಸಿದ್ದ ಸಮಸ್ಯೆಯನ್ನು ಬಗೆಹರಿಸಲಾಗಿದ್ದು, ಎಂದಿನಂತೆ ತ್ಯಾಜ್ಯ ವಿಲೇವಾರಿಯಾಗುತ್ತಿದೆ ಎಂದು ಸುದ್ದಿಗಾರರಿಗೆ ಸೋಮವಾರ ಮಾಹಿತಿ ನೀಡಿದರು.

ಮಿಟ್ಟಗಾನಹಳ್ಳಿ, ಕಣ್ಣೂರಿನ ಸ್ಥಳೀಯರು ಹಾಗೂ ಗುತ್ತಿಗೆದಾರರು–ಅಧಿಕಾರಿಗಳ ನಡುವೆ ಸಂವಹನ ಕೊರತೆಯಿಂದ ಸಮಸ್ಯೆಯಾಗಿತ್ತು. ₹500 ಕೋಟಿ ವೆಚ್ಚದಲ್ಲಿ ಗ್ರಾಮಗಳ ಅಭಿವೃದ್ಧಿಗೆ ಕಾರ್ಯಾದೇಶ ನೀಡಿ ಕೂಡಲೇ ಕಾಮಗಾರಿ ಆರಂಭಿಸಲಾಗುತ್ತದೆ ಎಂದರು.

ಮಿಟ್ಟಗಾನಹಳ್ಳಿ ಭೂಭರ್ತಿಯಲ್ಲಿ ರಾತ್ರಿ ವೇಳೆ ಕಸ ವಿಲೇವಾರಿ ಮಾಡಲಾಗುತ್ತಿದ್ದು, ಹಗಲಿನಲ್ಲಿಯೂ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಸಣ್ಣ-ಪುಟ್ಟ ಸಮಸ್ಯೆಗಳನ್ನು ಬಗೆಹರಿಸಲಾಗಿದೆ ಎಂದು ಹೇಳಿದರು.

ಮಿಟ್ಟಗಾನಹಳ್ಳಿ ಭೂಭರ್ತಿ ಘಟಕದಲ್ಲಿ ಸುಮಾರು 275 ಕೋಟಿ ಲೀಟರ್ ದ್ರವತ್ಯಾಜ್ಯ (ಲಿಚೆಟ್) ಸಂಗ್ರಹ ವಾಗಿದ್ದು, ಅದನ್ನು ಸಂಸ್ಕರಿಸಲು ₹474 ಕೋಟಿ ವೆಚ್ಚ ಮಾಡಲಾಗುತ್ತದೆ. ಅದಕ್ಕಾಗಿ ಶೀಘ್ರವೇ ಟೆಂಡರ್ ಕರೆಯಲಾಗುತ್ತದೆ. ಮಿಟ್ಟಗಾನಹಳ್ಳಿಯಲ್ಲಿರುವ 50 ಕೆಎಲ್‌ಡಿಯ ಎರಡು ದ್ರವತ್ಯಾಜ್ಯ ಸಂಸ್ಕರಣೆ ಘಟಕಗಳಿಂದ ಸಂಸ್ಕರಣೆ ಮಾಡಿದರೆ ಹತ್ತು ವರ್ಷ ಬೇಕಾಗುತ್ತದೆ. ಎರಡು ಎಂಎಲ್‌ಡಿ ಸಾಮರ್ಥ್ಯದ ಸಂಸ್ಕರಣ ಘಟಕ ಸ್ಥಾಪಿಸಿ, ಮೂರೂವರೆ ವರ್ಷಗಳಲ್ಲಿ ಸಂಸ್ಕರಣೆ ಮಾಡಲಾಗುತ್ತದೆ ಎಂದು ವಿವರಿಸಿದರು.

ನಗರದಲ್ಲಿ ಸಮಗ್ರ ಘನತ್ಯಾಜ್ಯ ನಿರ್ವಹಣೆಗೆ ಹೊಸ ಯೋಜನೆಯಂತೆ ಟೆಂಡರ್ ಕರೆಯಲಾಗಿತ್ತು. ಆ ಟೆಂಡರ್‌ನಲ್ಲಿ ಕಡಿಮೆ ಜನರು ಭಾಗವಹಿಸಿದ್ದರು. ಕೆಲವು ಅಂಶಗಳನ್ನು ತೆಗೆದು ಮತ್ತೆ ಟೆಂಡರ್ ಕರೆಯಲಾಗುತ್ತಿದೆ. 100 ಎಕರೆ ಜಾಗವನ್ನು ದೊಡ್ಡಬಳ್ಳಾಪುರದಲ್ಲಿ ಟೆರ್ರಾಫಾರ್ಮ್ ಬಳಿ ಅಂತಿಮಗೊಳಿಸಲಾಗಿದೆ ಎಂದರು.

ಸರ್ಕಾರದ 50 ಎಕರೆ ಭೂಮಿ ಇದ್ದು, ಖಾಸಗಿಯವರಿಂದ ಸುಮಾರು 65 ಎಕರೆ ಖರೀದಿಸಲಾಗುತ್ತಿದೆ. ಅಲ್ಲದೆ, ನೈಸ್ ರಸ್ತೆಗೆ ಗೊಲ್ಲರಹಳ್ಳಿ ಬಳಿ ನೀಡಿರುವ ಭೂಮಿಯಲ್ಲಿ 100 ಎಕರೆ ಪಡೆದುಕೊಳ್ಳಲಾಗುತ್ತಿದೆ. ಈ ಎರಡೂ ಸ್ಥಳಗಳಲ್ಲಿ ಸಮಗ್ರ ಘನತ್ಯಾಜ್ಯ ವಿಲೇವಾರಿ, ಸಂಸ್ಕರಣೆ ಪ್ರಾರಂಭವಾಗಲಿದೆ ಎಂದರು.

ಮಿಟ್ಟಗಾನಹಳ್ಳಿ ಭೂಭರ್ತಿ ಘನತ್ಯಾಜ್ಯ ವಿಲೇವಾರಿ ಘಟಕ ಪ್ರದೇಶ
ಚಿತ್ರ: ಎಂ.ಎಸ್.ಮಂಜುನಾಥ್

27ರಂದು ಬಿಬಿಎಂಪಿ ಬಜೆಟ್

‘ಬಿಬಿಎಂಪಿ ಬಜೆಟ್ ಅನ್ನು ಮಾರ್ಚ್ 27ರಂದು ಮಂಡಿಸಲಾಗುತ್ತದೆ. ಆಡಳಿತಾಧಿಕಾರಿಯವರು ನಗರದ ಎಲ್ಲ ಶಾಸಕರಿಗೆ ಆಹ್ವಾನ ನೀಡಿದ್ದು, 24ರಂದು ಸಭೆ ನಡೆಯಲಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೂ ಸಭೆಯಲ್ಲಿ ಭಾಗವಹಿಸುತ್ತಾರೆ’ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

‘ಕಸ ನಿರ್ವಹಣೆಗೆ ಬಳಕೆದಾರರ ಶುಲ್ಕ ಏಪ್ರಿಲ್ 1ರಿಂದಲೇ ಜಾರಿಗೆ ಬರಲಿದೆ. ವಾಣಿಜ್ಯ ಕಟ್ಟಡಗಳಿಗೆ ಸಂಬಂಧಿಸಿದಂತೆ ಗೊಂದಲ ಇದೆ. ದಿನಸಿ ಅಂಗಡಿ, ತರಕಾರಿ ಮಳಿಗೆ, ಹೋಟೆಲ್‌ಗೆ ಒಂದೇ ರೀತಿಯಲ್ಲಿ ಶುಲ್ಕ ವಿಧಿಸಲು ಸಾಧ್ಯವಿಲ್ಲ. ಹೀಗಾಗಿ, ಈ ಬಗ್ಗೆ ಒಂದು ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತದೆ’ ಎಂದರು.

ಸರ್ಕಾರಿ ಕಟ್ಟಡಗಳ ಆಸ್ತಿ ತೆರಿಗೆ: 31ರವರೆಗೆ ಒಟಿಎಸ್

ಬಿಬಿಎಂಪಿ ವ್ಯಾಪ್ತಿಯ ವಿಧಾನಸೌಧ, ವಿಕಾಸಸೌಧ ಸೇರಿದಂತೆ ಸರ್ಕಾರದ ಕಟ್ಟಡಗಳು ಹಾಗೂ ಸರ್ಕಾರದ ಅಂಗ ಸಂಸ್ಥೆಗಳು, ಕೇಂದ್ರ ಸರ್ಕಾರದ ಕಟ್ಟಡಗಳು ತೆರಿಗೆ ಪಾವತಿಸಲು ಮಾರ್ಚ್ 31ರ ಗಡುವು ನೀಡಲಾಗಿದೆ. ಒಂದು ಬಾರಿ ಪರಿಹಾರ (ಒಟಿಎಸ್) ಯೋಜನೆಯನ್ನು 31ರವರೆಗೆ ಜಾರಿಗೊಳಿಸಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಒಟಿಎಸ್ ಜಾರಿಯಲ್ಲಿರುವುದರಿಂದ ಬಡ್ಡಿ ಹಾಗೂ ದಂಡ ಕಟ್ಟುವಂತಿಲ್ಲ. ಮಾರ್ಚ್ 31ರೊಳಗೆ ಆಸ್ತಿ ತೆರಿಗೆ ಪಾವತಿಸದಿದ್ದರೆ 2025ರ ಏಪ್ರಿಲ್‌ನಿಂದ ತೆರಿಗೆಯ ದುಪ್ಪಟ್ಟು ಮೊತ್ತ ಪಾವತಿಸಬೇಕಾಗುತ್ತದೆ. ಈ ಬಗ್ಗೆ ಇಲಾಖೆಗಳ ಅಧಿಕಾರಿಗಳಿಗೆ ಪತ್ರ ಬರೆದು, ತೆರಿಗೆ ಪಾವತಿ ಮಾಡುವಂತೆ ತಿಳಿಸಬೇಕು ಎಂದು ವಲಯ ಆಯುಕ್ತರಿಗೆ ಸೂಚಿಸಲಾಗಿದೆ ಎಂದರು. ಒಟಿಎಸ್ ಜಾರಿಗೆ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ. ನಾಗರಿಕರಿಗಾಗಿ ಜಾರಿಯಾಗಿದ್ದ ಒಟಿಎಸ್ ಯೋಜನೆಯಿಂದ ₹1,277 ಕೋಟಿ ಸಂಗ್ರಹಿಸಲಾಗಿದೆ ಎಂದೂ ಈ ಆದೇಶದಲ್ಲಿ ತಿಳಿಸಲಾಗಿದೆ.

ತುಷಾರ್ ಗಿರಿನಾಥ್

ಕೃಷಿ ಸಿಂಚಾಯಿಗೆ ಭೀಮಾ ಏತ ನೀರಾವರಿ ಯೋಜನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಭೀಮಾ ಏತ ನೀರಾವರಿ ಯೋಜನೆ ಹಾಗೂ ರಾಮೇಶ್ವರ ನೀರಾವರಿ ಯೋಜನೆ ಸೇರ್ಪಡೆ ಮಾಡಲಾಗಿದೆ ಎಂದು ಜಲಶಕ್ತಿ ಖಾತೆ ರಾಜ್ಯ ಸಚಿವ ರಾಜ್ ಭೂಷಣ್ ಚೌಧರಿ ತಿಳಿಸಿದರು.

ರಾಜ್ಯಸಭೆಯಲ್ಲಿ ಬಿಜೆಪಿ ಸದಸ್ಯ ನಾರಾಯಣ ಕೊರಗಪ್ಪ ಸೋಮವಾರ ಕೇಳಿದ ಪ್ರಶ್ನೆಗೆ ಉತ್ತರಿಸಿರುವ ಸಚಿವರು, ‘ಭೀಮಾ ಏತ ನೀರಾವರಿ ಯೋಜನೆಯ ವೆಚ್ಚ ₹964 ಕೋಟಿ. ವೇಗವರ್ಧಿತ ನೀರಾವರಿ ಪ್ರಯೋಜನ ಕಾರ್ಯಕ್ರಮಕ್ಕೆ ₹52 ಕೋಟಿ ಆಗಲಿದೆ. ರಾಮೇಶ್ವರ ಯೋಜನೆ ವೆಚ್ಚ ₹331 ಕೋಟಿ. ವೇಗವರ್ಧಿತ ನೀರಾವರಿ ಪ್ರಯೋಜನ ಕಾರ್ಯಕ್ರಮಕ್ಕೆ ₹56 ಕೋಟಿ ವೆಚ್ಚವಾಗಲಿದೆ. ಭೀಮಾ ಯೋಜನೆಗೆ ಕೇಂದ್ರದಿಂದ ₹3.4 ಕೋಟಿ ಒದಗಿಸಲಾಗಿದೆ’ ಎಂದರು.

‘ನಿಲುಕದ ನಕ್ಷತ್ರವಾದ ವೈದ್ಯಕೀಯ ಚಿಕಿತ್ಸೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೈದ್ಯಕೀಯ ಚಿಕಿತ್ಸೆಗಳಿಗೆ ಜನಸಾಮಾನ್ಯರು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ತೆರಳಲು ಆತಂಕಪಡುವ ಸ್ಥಿತಿ ಇದೆ. ದುಬಾರಿ ಚಿಕಿತ್ಸೆ ನಿಲುಕದ ನಕ್ಷತ್ರವಾಗಿದೆ’ ಎಂದು ವೈದ್ಯೆ ಹಾಗೂ ಲೇಖಕಿ ಡಾ.ನೀರಜಾ ನಾಗೇಂದ್ರ ಕುಮಾರ್ ವಿಷಾದಿಸಿದರು.

ಮೇಘ ಮೈತ್ರಿ ಕನ್ನಡ ಸಾಹಿತ್ಯ ಸಂಘ ಹಾಗೂ ಭಾರತೀಯ ಸ್ತ್ರೀ ಶಕ್ತಿ ಸಂಘಟನಾ ಟ್ರಸ್ಟ್ ಜಂಟಿಯಾಗಿ ನಗರದಲ್ಲಿ ಶನಿವಾರ ಏರ್ಪಡಿಸಿದ್ದ ವೈದ್ಯರ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಅವರು ಮಾತನಾಡಿದರು.

ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳ ವ್ಯಾಪಾರೀಕರಣಕ್ಕೆ ಬೇಸರ ವ್ಯಕ್ತಪಡಿಸಿದರು. ‘ವೈದ್ಯರನ್ನು ದೇವರಿಗೆ ಹೋಲಿಸಲಾಗುತ್ತದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಶುಷ್ಕ ಮನಸ್ಸಿನ ವ್ಯಾಪಾರೀಕರಣದಿಂದಾಗಿ, ವೈದ್ಯ ವೃತ್ತಿ ಪಾವಿತ್ರ್ಯತೆ ಕಳೆದುಕೊಂಡಿದೆ’ ಎಂದರು.

‘ರೋಗ ಗುಣಪಡಿಸುವುದಕ್ಕಿಂತಲೂ ಜೇಬು ತುಂಬಿಸಿಕೊಳ್ಳುವ ಪ್ರವೃತ್ತಿ ಕಾರ್ಪೊರೇಟ್ ಆಸ್ಪತ್ರೆಗಳಲ್ಲಿ ಹೆಚ್ಚುತ್ತಿದೆ. ಸರ್ಕಾರವು ಉತ್ತಮ ವೈದ್ಯರನ್ನು ಸರ್ಕಾರಿ ಆಸ್ಪತ್ರೆಗಳಿಗೆ ನೇಮಿಸಿ, ಗುಣಮಟ್ಟ ಸುಧಾರಿಸಬೇಕು. ಆಧುನಿಕ ಸೌಲಭ್ಯಗಳು ಜನಸಾಮಾನ್ಯರಿಗೂ ಕೈಗೆಟಕುವ ದರದಲ್ಲಿ ಸಿಗುವಂತೆ ಮಾಡಬೇಕು’ ಎಂದರು.

ಕರ್ನಾಟಕ ಹೋಮಿಯೋಪಥಿ ಮಂಡಳಿ ಅಧ್ಯಕ್ಷ ಡಾ.ಬಿ.ಟಿ. ರುದ್ರೇಶ್ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ನಿವೃತ್ತ ಐಎಎಸ್ ಅಧಿಕಾರಿ ಸಿ.ಸೋಮಶೇಖರ್ ಅವರು ವೈದ್ಯಕೀಯ ಹಾಗೂ ವಿವಿಧ ಕ್ಷೇತ್ರಗಳ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ನೈರುತ್ಯ ರೈಲ್ವೆ
ಮುಕ್ತ ಟೆಂಡರ್ ಪ್ರಕಟಣೆ ಸಂಖ್ಯೆ. ಬಿಇ–ಟಿಎಲ್‌ಎಸಿ–ಪಿಸಿ–ಗ್ರೀವ್ಸ್ –2025–3 ದಿನಾಂಕ. 10.03.2025 (ಇ–ಟೆಂಡರ್ ಮೂಲಕ)
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ	4,06,80,376.46

ಇಐಜಿ/ಎಚ್‌ಒಜಿ ಮೋಡ್‌ನಲ್ಲಿ ಪವರ್ ಕಾರ್‌ನ ನಿರ್ವಹಣೆ, ಎಸ್ಕಾರ್ಟಿಂಗ್ ಮತ್ತು ಕಾರ್ಯಾಚರಣೆ. ಒಂದು ವರ್ಷದ ಅವಧಿಗೆ ಗ್ರೀವ್ಸ್‌ನ ಡಿಎ ಸೆಟ್‌ಗಳೊಂದಿಗೆ
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 01–04–2025 ರಂದು 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಳಿಗಾಗಿ ಲಾಗಿನ್ ಮಾಡಿ www.ireps.gov.in
ವಿಭಾಗೀಯ ವಿದ್ಯುತ್ ಅಭಿಯಂತರರು/ಸಾಮಾನ್ಯ/ ಬೆಂಗಳೂರು
ಪಿಯುಬಿ/852/ಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2024–25
South Western Railway - SWR SWRRLY SWRRLY

IN THE COURT OF HON'BLE I ADDL. SENIOR CIVIL JUDGE AND J.M.F.C. AT DODDABALLAPURA
O.S. No. 237/2012
BETWEEN: Smt. Nalini & Others ...PLAINTIFFS
AND: Smt. R. Shanthamma & Others ...DEFENDANTS
Proposed Defendant No. 10
10. Smt. Pushpadevi, W/o. Manmal Lunia Jain Aged about 71 years
Proposed Defendant No. 11
11. Sri. Munmal Jain S/o. Late Agarchand Aged about 79 Years
Both Proposed Defendant No. 10 & 11 Residing at No.59, Lakshman Rao Road, B.V.K. Iyengar Road, Bangalore-560 053.
NOTICE TO DEFENDANT NO. 10 & 11
Whereas, the plaintiff has instituted the above petition against the Defendants for partition and separate possession.
You (the Defendant No. 10 & 11) is hereby summoned to appear in this Court in person or by a pleader duly instructed and able to answer all questions relating to the suit for partition and separate possession on 19.04.2025 at 11 a.m. to answer the claim of plaintiff.
Take notice that in default of your appearance on the day aforesaid mentioned the suit will be proceeded and determined in your absence, exparte.
SCHEDULE PROPERTY
All that piece and parcel of the agricultural land bearing Sy.No.81, measuring 3 acres 39 guntas, situated at Varadahalli Village, Kasaba Hobli, Doddaballapura Taluk, Bangalore Rural District and bounded as follows:
East by : Road, West by: Private Property, North By: Road, South by: Private property.
Given under my hand and seal of the court on this 17.3.2025.
By order of the Court, Chief Ministerial Officer, Senior Civil Judge & JMFC, Doddaballapura
A. RAJESH, Advocate
No. 16, Ground Floor, 6th Main, Gandhinagar Bangalore-560 009. Mob. 9739950350

ಸಂಭ್ರಮದಿಂದ ನಡೆದ ‘ಕೆರೆ ಕನೆಕ್ಟ್ ಹಬ್ಬ’

ಬೆಂಗಳೂರು: ದೇಸಿ ಆಟಗಳು, ಪರಿಸರ ಉಳಿಸುವ ವಿವಿಧ ಪ್ರಾತ್ಯಕ್ಷಿಕೆಗಳು, ಮಕ್ಕಳಿಗೆ ಪರಿಸರದ ಬಗ್ಗೆ ಚಿತ್ರ ಬಿಡಿಸುವ ಸ್ಪರ್ಧೆ... ಹೀಗೆ ವಿವಿಧ ಕಾರ್ಯಕ್ರಮಗಳಿಗೆ ಶ್ರೀಗಂಧದಕಾವಲು ಕೆರೆಯಲ್ಲಿ ಶನಿವಾರ ನಡೆದ ‘ಕೆರೆ ಕನೆಕ್ಟ್ ಹಬ್ಬ’ ವೇದಿಕೆಯಾಯಿತು.

ಪರಿಸರ ಮತ್ತು ಕೆರೆಯ ಬಗ್ಗೆ ಮೂರು ಹಂತಗಳಲ್ಲಿ ನಡೆದ ಚಿತ್ರ ಬಿಡಿಸುವ ಸ್ಪರ್ಧೆಯಲ್ಲಿ 200 ಮಕ್ಕಳು ಭಾಗವಹಿಸಿದ್ದರು. ಶ್ರೀಗಂಧದ ಕಾವಲು ಕೆರೆ ಹೇಗಿತ್ತು? ಹೇಗಾಗಿದೆ? ಏನಾಗಬೇಕಿದೆ ಎಂಬ ಬಗ್ಗೆ ಉಸಿರು ಸಂಸ್ಥೆಯ ಶೋಭಾ ಭಟ್, ಇಕೊ ವಾಚ್ ಸಂಸ್ಥೆಯ ಅಕ್ಷಯ್ ಹೆಬ್ಲೀಕರ್ ಮಾತನಾಡಿದರು.

ಕಸದಿಂದ ಹಸಿ ಕಸದ ಗೊಬ್ಬರ ತಯಾರಿಸಿ, ತೋಟದಿಂದ ಊಟ ಮಾಡುವ ಟೆರೇಸ್ ಗಾರ್ಡನ್ ಬಗ್ಗೆ ರಾಜೇಂದ್ರ ಹೆಗ್ಡೆ ಪ್ರಾತ್ಯಕ್ಷಿಕೆ ನೀಡಿದರು. ಕಲಾ ಪ್ರದರ್ಶನ, ಸಂಗೀತ, ನೃತ್ಯ, ಯೋಗ, ಜನಪದ ಗೀತೆ, ಪ್ರಕೃತಿ ಗೀತೆ ಸಹಿತ ಅನೇಕ ಕಾರ್ಯಕ್ರಮಗಳು ನಡೆದವು. ದೇಸಿ ಆಟಗಳಲ್ಲಿ ಮಕ್ಕಳು ಭಾಗವಹಿಸಿ ಸಂಭ್ರಮಪಟ್ಟವರು.

ಸುಸ್ಥಿರತೆಯ ಅರಿವಿನ ಪ್ರದರ್ಶನಾ ಮಳಿಗೆಗಳು, ಬಟ್ಟೆಯಿಂದ ಚೀಲ, ಹಳೆ ಪಾದರಕ್ಷೆ ಸಂಗ್ರಹ, ಮಣ್ಣಿನ ಕುಂಬಾರಿಕೆ ಪ್ರಾತ್ಯಕ್ಷಿಕೆಗಳು ನಡೆದವು. ಕಲಶದಲ್ಲಿ ಕಾವೇರಿ ಮತ್ತು ಗಂಗಾ ಜಲ ತುಂಬಿಸಿ, ಪ್ರಾರ್ಥನೆ ಮಾಡಿ, ದೀಪೋತ್ಸವ ನಡೆಸಲಾಯಿತು.

ಮೂರು ವಲಯಗಳ ವ್ಯಾಪ್ತಿಯಲ್ಲಿ 1,350ಕ್ಕೂ ಹೆಚ್ಚು ಫ್ಲೆಕ್ಸ್, ಬ್ಯಾನರ್ ತೆರವು

ಫ್ಲೆಕ್ಸ್: 12 ಎಫ್‌ಐಆರ್, ₹12 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಭಾನುವಾರ ರಾತ್ರಿ ಹಾಗೂ ಸೋಮವಾರ ಬೆಳಿಗ್ಗೆ ಫ್ಲೆಕ್ಸ್, ಬ್ಯಾನರ್‌ಗಳನ್ನು ತೆರವುಗೊಳಿಸಿ, 12 ಎಫ್‌ಐಆರ್ ದಾಖಲಿಸಿ ₹12 ಲಕ್ಷ ದಂಡ ವಸೂಲಿ ಮಾಡಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಪೂರ್ವ, ಪಶ್ಚಿಮ ಹಾಗೂ ಯಲಹಂಕ ಸೇರಿದಂತೆ ಮೂರೂ ವಲಯಗಳಲ್ಲಿ ಭಾನುವಾರ ಸಂಜೆಯಿಂದ 1,350ಕ್ಕೂ ಹೆಚ್ಚು ಫ್ಲೆಕ್ಸ್, ಬ್ಯಾನರ್‌ಗಳನ್ನು ತೆರವುಗೊಳಿಸಲಾಗಿದೆ. 600ಕ್ಕೂ ಹೆಚ್ಚು ಪಕ್ಷದ ಧ್ವಜಗಳನ್ನು ತೆರವುಗೊಳಿಸಲಾಗಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ಬಳ್ಳಾರಿ ರಸ್ತೆಯಲ್ಲಿ ಫ್ಲೆಕ್ಸ್, ಬ್ಯಾನರ್‌ಗಳನ್ನು ಅಳವಡಿಸಲಾಗಿದ್ದು, ಅವುಗಳನ್ನು ತೆರವುಗೊಳಿಸಿ ದಂಡ ವಿಧಿಸಿ, ಎಫ್‌ಐಆರ್ ದಾಖಲಿಸಿ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾನುವಾರ ಸಂಜೆ ಸೂಚಿಸಿದ್ದರು.

ನಗರದ ಎಲ್ಲ ಭಾಗಗಳಲ್ಲೂ ಅನಧಿಕೃತವಾಗಿ ಅಳವಡಿಸುವ ಫ್ಲೆಕ್ಸ್, ಬ್ಯಾನರ್‌ಗಳನ್ನು ತೆರವುಗೊಳಿಸಬೇಕು. ದುಪ್ಪಟ್ಟು ದಂಡ ವಿಧಿಸುವ ಜೊತೆಗೆ ಎಫ್‌ಐಆರ್ ದಾಖಲಿಸಲು ಅಧಿಕಾರಿಗಳ ಸಭೆಯಲ್ಲಿ ತುಷಾರ್ ಗಿರಿನಾಥ್ ಸೋಮವಾರ ಸೂಚಿಸಿದರು.

ಕೆರೆ ಒತ್ತುವರಿ ತೆರವಿಗೆ ಸೂಚನೆ: ಬಿಬಿಎಂಪಿ ವ್ಯಾಪ್ತಿಯ ಕೆರೆಗಳ ಒತ್ತುವರಿಯನ್ನು ಶೀಘ್ರ ತೆರವುಗೊಳಿಸಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಹೈಕೋರ್ಟ್ ನಿರ್ದೇಶನದಂತೆ, ಕೆರೆಗಳ ಒತ್ತುವರಿ ತೆರವುಗೊಳಿಸಬೇಕು. 183 ಕೆರೆಗಳಲ್ಲಿ, ಕಂದಾಯ ಇಲಾಖೆಯ ಭೂಮಾಪಕರು 168 ಕೆರೆಗಳಲ್ಲಿ ಸರ್ವೆ ಮಾಡಿದ್ದಾರೆ. 126 ಕೆರೆಗಳಲ್ಲಿ 28 ಕೆರೆಗಳಲ್ಲಿ ಒತ್ತುವರಿ ಇಲ್ಲ. ಇನ್ನೂ 26 ಕೆರೆಗಳಲ್ಲಿ ಸರ್ಕಾರಿ ಒತ್ತುವರಿ ಇದೆ. ಇನ್ನುಳಿದ 78 ಕೆರೆಗಳಲ್ಲಿನ ಒತ್ತುವರಿ ತೆರವುಗೊಳಿಸಲು ವಲಯಗಳ ಕಾರ್ಯಪಾಲಕ ಎಂಜಿನಿಯರ್‌ಗೆ ಜವಾಬ್ದಾರಿ ನೀಡಲಾಗಿದೆ. ಅವರು ಕೂಡಲೇ ನೋಟಿಸ್ ಜಾರಿ ಮಾಡಿ, ಕಾರ್ಯಾಚರಣೆ ನಡೆಸಬೇಕು ಎಂದು ಆದೇಶಿಸಿದರು.

ಅರಣ್ಯ, ಪರಿಸರ ಹಾಗೂ ಹವಾಮಾನ ವೈಪರೀತ್ಯ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹಲೋತ್, ವಲಯ ಆಯುಕ್ತರಾದ ಸತೀಶ್, ದಿಗ್ವಿಜಯ್ ಬೋಡ್ಕೆ, ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ವಿಜಯ್ ಕುಮಾರ್ ಹರಿದಾಸ್ ಉಪಸ್ಥಿತರಿದ್ದರು.

ನಗರದ ಅರಮನೆ ಮೈದಾನದ ಬಳಿ ಅಳವಡಿಸಲಾಗಿದ್ದ ಅನಧಿಕೃತ ಫ್ಲೆಕ್ಸ್‌ಗಳನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದರು – ಪ್ರಜಾವಾಣಿ ಚಿತ್ರ

ದಂಡ ಯಾರಿಗೆ?

‘ಯುವ ಸಂಕಲ್ಪ’ ಕುರಿತ ಕಾರ್ಯಕ್ರಮದ ಫ್ಲೆಕ್ಸ್/ ಬ್ಯಾನರ್ ಅಳವಡಿಸಿದ್ದ ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಮಂಜುನಾಥ ಗೌಡ, ಉಪಾಧ್ಯಕ್ಷ ಬಾಲಾ ಪ್ರದೀಪ್, ಬೆಂಗಳೂರು ಕೇಂದ್ರ ಯುವ ಕಾಂಗ್ರೆಸ್ ಅಧ್ಯಕ್ಷ ಆರ್. ರಂಜಿತ್‌ಕುಮಾರ್, ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ರಾಜ್ಯ ಉಪಾಧ್ಯಕ್ಷೆ ಚೈತ್ರಾ ವಿ. ಗಿರೀಶ್, ಕೇಂದ್ರ ಯುವ ಕಾಂಗ್ರೆಸ್ ಮಾಜಿ ಪ್ರಧಾನ ಕಾರ್ಯದರ್ಶಿ ದರ್ಶನ್ ಸುಧಾಕರ್, ಬೆಂಗಳೂರು ಕೇಂದ್ರ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದರ್ಶನ್ ದಿವಾಕರ್, ಐಎನ್‌ಟಿಯುಸಿ ರಾಜ್ಯ ಸಂಘಟನಾ ಕಾರ್ಯದರ್ಶಿ ಕುಂದಲಗುರ್ಕಿ ಮುನೀಂದ್ರ ಅವರಿಗೆ ನೋಟಿಸ್ ನೀಡಿ, ತಲಾ ₹1 ಲಕ್ಷ ದಂಡ ವಿಧಿಸಲಾಗಿದೆ. ಜೊತೆಗೆ, ₹5 ಸಾವಿರವನ್ನು ಫ್ಲೆಕ್ಸ್ ತೆರವಿನ ಶುಲ್ಕವಾಗಿ ಪಾವತಿಸಲು ಸೂಚಿಸಲಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
This is to inform the general public that, my client is intended to purchase the schedule property from Sri. G.M. Dyavanna S/o Sri. Muninanjappa, R/at Gopasandra Channarayapattana Hobli, Devanahalli Taluk, Bengaluru Rural District. Any person/s who claims any right, title or interest of any nature or any lien/charge or enforceable right in relation to the schedule property has any objection of any nature to the transaction should lodge such claim/objection in writing to the undersigned together with supporting documents within 7 days thereof, failing which it will be presumed that no valid claim/s or objections subsists and my client would proceed to complete the sale transaction.
SCHEDULE
All that piece and parcel of the agricultural land bearing Sy. No. 155/5, measuring 2 acres and 10 guntas kharab situated at Ibasapura Village, Channarayapattana Hobli, Devanahalli Taluk, Bengaluru Rural District, and bounded on:
East by: Land belongs to Sri. Venkatappa, West by: Road.
North by: Land belongs to Muni Venkatappa and Shankarappa.
South by: Land belongs to Sri. Dharmachandra.
Sd/-
Sri. N. Sridhar, Advocate,
No. 113, 3rd Floor, Hospital Road, Bengaluru-560053, Mobile: 8105659114
Place: Bengaluru
Date: 14.03.2025.

PERSONAL

Change of Name

I, NAGARAJA S/o.Mayappa R/a Binnamangala Village Kasaba Hobli, Devanahalli Taluk Bangalore Rual District- 562110 have changed my Name to NAGARAJU M. Vide affidavit dated:12.2.2025 before Notary S.P.Gandhi, Bengaluru.

CHANGE OF NAME
I, SHASHANK G KULKARNI also known as SHASHANK G K residing at 229/39,1st Floor, 13th Cross,4th Main, Vyalikaval, Bangalore - 560003, have changed my name to SHASHANK KULKARNI vide affidavit dated:08-07-2024, before notary B.R.Shashikala, Bangalore

CHANGE OF NAME
I, Madhusudan Bhandarkar S/o B Janardhan Bhandary, residing at #175, “Girishree” 14th Cross, Girinagar 3rd Phase, BSK 3rd Stage, Bangalore 560085. have changed my name to BANTWAL MADHUSUDAN BHANDARKAR vide affidavit dated 12.02.2025 before notary H.G. Venkataramu, Bangalore.

I, LAXMESH S ANDOOR, Residing at-310, Arya Lotus Apartments, Abhayadhama Road, Whitefield, Bengaluru-560066, have changed my Minor son’s name ANSHUL ANDOOR to New name ANSHUL LAXMESH ANDOOR, vide affidavit dated:15/03/2025 before notary-RAJANNA.

CHANGE OF NAME
I, Kumara L, residing at No. 17/1, 1st Main Road, Krishnappa Layout, Rajarajeshwari Nagar, Bangalore-560098, have changed my name to KUMAR L vide affidavit dated 17.03.2025 before notary V Rajashekhara, Bangalore.

I, SRIKANTH, S/O: Ramakrishna Dindukurthi, R/O: No-243, 6th Main, M.S Ramaiah Enclave, Bangalore-560073. Have Changed my Name as Srikanth Dindukurthi Ramakrishna. Affidavit dated on 15/03/25.

Lost

LOST
I, Mohammed Tanveer, residing at No.43/44, Zubeda Heavens, Kanakanagar, JP Nagar Post, Bangalore, have lost my Sale Deed of the above property (Document No./ Identification: 10263 while in transit. If found please contact: 9880661616.

TOURS & TRAVEL

Travel

VISIT BHUTAN, the most Wonderful Country with Expert Guide and Best Arrangements. GANESH SHENOY 8310028157

JOB OPPORTUNITIES

Marketing & Sales

LOOKING FOR experienced ASm/SO/SR in OTC & Cosmetic products to all districts of Karnataka contact -9353420785

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH DECCAN HERALD Classifieds More value, more impact
ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
+91 9731810277 | +91 9845114560 | +91 9900428036

ವ್ಯಕ್ತಿತ್ವ ಬದಲಿಸಿದ ವಚನ ಸಾಹಿತ್ಯ: ಮೀನಾಕ್ಷಿ ಬಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತತ್ವಪದಗಳು ಮತ್ತು ವಚನ ಸಾಹಿತ್ಯ ನನ್ನ ವ್ಯಕ್ತಿತ್ವದ ಮಜಲನ್ನು ಬದಲಿಸುವುದರ ಜೊತೆಗೆ ಸಮಾಜಮುಖಿಯಾಗಿ ತೊಡಗಿಸಿಕೊಳ್ಳುವಂತೆ ಮಾಡಿದವು’ ಎಂದು ಸಾಮಾಜಿಕ ಹೋರಾಟಗಾರ್ತಿ ಮೀನಾಕ್ಷಿ ಬಾಳಿ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶನಿವಾರ ಆಯೋಜಿಸಿದ್ದ ಮನೆಯಂಗಳದಲ್ಲಿ ಮಾತುಕತೆ ಸಮಾರಂಭದಲ್ಲಿ ತಿಂಗಳ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

‘ಕಡಕೋಳ ಮಡಿವಾಳಪ್ಪ ಮತ್ತು ಅವರ ಶಿಷ್ಯರ ತತ್ವಪದಗಳು, ನಿಂಬರಗಿ ಮಹಾರಾಜರು ಹೀಗೆ ತತ್ವಪದಕಾರರ ಹಾಡುಗಳನ್ನು ಕೇಳುತ್ತಿದ್ದೆ. ಪುಸ್ತಕ ರೂಪದಲ್ಲಿ ತರಲು ಪ್ರಯತ್ನಿಸಿದೆ. ತತ್ವಪದಗಳನ್ನು ಮನೆ ಮನೆಗೆ ಮುಟ್ಟಿಸುವ ಕೆಲಸ ಆಗಬೇಕು ಎಂದರು.

‘ಹಲವು ಅಡೆತಡೆಗಳ ನಡುವೆ ಶಿಕ್ಷಣ ಪಡೆದೆ. ಉನ್ನತ ಶಿಕ್ಷಣ ಪಡೆದ ಬಳಿಕ ಸಾಕಷ್ಟು ಹೆಣ್ಣು ಮಕ್ಕಳು ಶಿಕ್ಷಣ ಪಡೆಯಲು ಸಾಧ್ಯವಾಗುತ್ತಿಲ್ಲ ಎಂಬುದರ ಬಗ್ಗೆ ಚಿಂತಿಸಿದ್ದು ಉಂಟು’ ಎಂದರು.

‘ಕಲ್ಯಾಣ ಕರ್ನಾಟಕ ಕೋಮು ಸೌಹಾರ್ದಕ್ಕೆ ಹೆಸರಾದ ನೆಲ. ಆದರೆ, ಕಲ್ಯಾಣ ಕರ್ನಾಟಕಕ್ಕೆ ಅವಕಾಶಗಳು ವಂಚನೆಯಾಗುತ್ತಿವೆ. ಹೋರಾಟದ ಮೂಲಕವೇ ಬದುಕು ಕಟ್ಟಿಕೊಳ್ಳುವ ಅನಿವಾರ್ಯತೆಯಿಂದ ಈ ಭಾಗದ ಜನರ ವಲಸೆ ಹೆಚ್ಚಾಗಿದೆ’ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ.ಗಾಯತ್ರಿ, ಜಂಟಿ ನಿರ್ದೇಶಕಿ ಬನಶಂಕರಿ ಅಂಗಡಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಮಾನಸ, ಕಲಾವಿದ ಅಪ್ಪಗೆರೆ ತಿಮ್ಮರಾಜು ಹಾಜರಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮೀನಾಕ್ಷಿ ಬಾಳಿ ಅವರನ್ನು ಕೆ.ಎಂ.ಗಾಯತ್ರಿ ಸನ್ಮಾನಿಸಿದರು. ಬನಶಂಕರಿ ಅಂಗಡಿ ಇದ್ದಾರೆ

ಕಾವೇರಿ ಆರತಿ: ಜಲ ಜಾಗೃತಿ

ಸ್ಯಾಂಕಿ ಕೆರೆ: ವಿಶ್ವ ಜಲ ಪ್ರತಿಜ್ಞೆ ಸ್ವೀಕಾರ ಅಭಿಯಾನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರಕ್ಕೆ ನೀರು ಪೂರೈಸುವ ಕಾವೇರಿ ನದಿಗೆ ಗೌರವ ಸಲ್ಲಿಸಲು ಹಾಗೂ ಜಲಸಂರಕ್ಷಣೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ರಾಜ್ಯ ಸರ್ಕಾರ, ಜಲಮಂಡಳಿ ಮತ್ತು ಇತರೆ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಇದೇ ಮೊದಲ ಬಾರಿಗೆ ನಗರದಲ್ಲಿ ‘ಕಾವೇರಿ ಆರತಿ’ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ಮಾರ್ಚ್ 21ರ ಸಂಜೆ 6 ಗಂಟೆಗೆ ಸದಾಶಿವ ನಗರದಲ್ಲಿರುವ ಸ್ಯಾಂಕಿ ಕೆರೆಯಲ್ಲಿ ‘ಕಾವೇರಿ ಆರತಿ’ ಆಯೋಜಿಸಲಾಗುತ್ತಿದೆ. ಇದೇ ಸಂದರ್ಭದಲ್ಲಿ ‘ವಿಶ್ವ ಜಲ ಪ್ರತಿಜ್ಞೆ’ ಸ್ವೀಕಾರ ಅಭಿಯಾನಕ್ಕೂ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ಸ್ಯಾಂಕಿ ಕೆರೆ ಆವರಣದಲ್ಲಿ ಸೋಮವಾರ ಕಾವೇರಿ ಆರತಿ’ ಕಾರ್ಯಕ್ರಮದ ಸಿದ್ಧತೆಗಳನ್ನು ಪರಿಶೀಲಿಸಿ ಮಾತನಾಡಿದ ಅವರು, ‘ಇದು ಕೇವಲ ಒಂದು ಕಾರ್ಯಕ್ರಮವಲ್ಲ. ಜಲ ಸಂರಕ್ಷಣೆ, ಸುಸ್ಥಿರ ನೀರು ನಿರ್ವಹಣಾ ಪದ್ಧತಿಗಳ ಅಳವಡಿಕೆ, ಸಂಸ್ಕರಿಸಿದ ನೀರಿನ ಮರು ಬಳಕೆ, ಅಂತರ್ಜಲ ಮರುಪೂರಣ ಹಾಗೂ ಮಳೆ ನೀರು ಸಂಗ್ರಹ ವಿಧಾನ ಅಳವಡಿಸಿಕೊಳ್ಳುವ ಕುರಿತು ಜನಜಾಗೃತಿ ಮೂಡಿಸುವ ಅಭಿಯಾನವಾಗಿದೆ ಎಂದು ವಿವರಿಸಿದರು.

ಬೆಂಗಳೂರು ಜಲಮಂಡಳಿ 60 ವರ್ಷಗಳು ಪೂರೈಸಿರುವ ಹಿನ್ನಲೆಯಲ್ಲಿ ಆಯೋಜಿಸಿರುವ ವಜ್ರಮಹೋತ್ಸವದ ವಿವಿಧ ಕಾರ್ಯಕ್ರಮಗಳಲ್ಲಿ ಇದೊಂದು ವಿನೂತನ ಕಾರ್ಯಕ್ರಮವಾಗಿದೆ. ಜನರ ಧಾರ್ಮಿಕ ಭಾವನೆಗೆ ಒತ್ತು ನೀಡುತ್ತಾ, ಆ ಮೂಲಕ ಜಲಜಾಗೃತಿ ಮೂಡಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ವಿವರ: ‘ಕಾವೇರಿ ಆರತಿ’ ಪ್ರಯುಕ್ತ ಕೊಡಗು ಜಿಲ್ಲೆ ಭಾಗಮಂಡಲದಿಂದ ಕಲಶಗಳ ಮೂಲಕ ಕಾವೇರಿ ನೀರನ್ನು ತಂದು ಸ್ಯಾಂಕಿ ಕೆರೆ ಆವರಣದಲ್ಲಿಟ್ಟು ಪೂಜೆ ಸಲ್ಲಿಸಲಾಗುತ್ತದೆ. ಅಂದು ಸಂಜೆ 6 ಗಂಟೆ ಬಳಿಕ ಕಾವೇರಿ ಆರತಿ ಹಮ್ಮಿಕೊಳ್ಳಲಾಗುವುದು. ನಂತರ ಜಲ ಜಾಗೃತಿಯ ಸಂದೇಶಗಳನ್ನು ಸಾರಲಾಗುವುದು ಎಂದು ಅವರು ವಿವರಿಸಿದರು.

ಸ್ಯಾಂಕಿ ಕೆರೆಯ ಆವರಣದಲ್ಲಿ ‘ಕಾವೇರಿ ಆರತಿ’ ಕಾರ್ಯಕ್ರಮದ ಸಿದ್ಧತೆ ಪರಿಶೀಲಿಸಿದ ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್

‘ಎನ್‌ಎಸ್‌ಎಸ್ ಜನಾಂದೋಲನವಾಗಿ ರೂಪಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳು ಅಧ್ಯಯನದ ಜೊತೆಗೆ ರಾಷ್ಟ್ರೀಯ ಸೇವಾ ಯೋಜನೆಗೆ (ಎನ್‌ಎಸ್‌ಎಸ್) ಸೇರ್ಪಡೆಗೊಂಡು, ಸಮಾಜ ಸುಧಾರಣಾ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಕರೆ ನೀಡಿದರು.

ರಾಜ್ಯ ಎನ್‌ಎಸ್‌ಎಸ್ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಸೋಮವಾರ ರಾಜಭವನದ ಗಾಜಿನಮನೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 2022–23ನೇ ಸಾಲಿನ ಎನ್‌ಎಸ್‌ಎಸ್ ರಾಜ್ಯ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಎನ್‌ಎಸ್‌ಎಸ್ ಯೋಜನೆಯನ್ನು ಜನಾಂದೋಲನವಾಗಿ ರೂಪಿಸಿ. ಸಕಾರಾತ್ಮಕ ಚಿಂತನೆಗಳೊಂದಿಗೆ, ಸದಾ ಸಮಾಜದ ಹಿತಕ್ಕಾಗಿ ಕೆಲಸ ಮಾಡಿ. ಗ್ರಾಮ ಮತ್ತು ನಗರಗಳಲ್ಲಿರುವ ಹಿಂದುಳಿದ ಪ್ರದೇಶಗಳನ್ನು ದತ್ತು ತೆಗೆದುಕೊಂಡು ಅಭಿವೃದ್ಧಿಪಡಿಸಿ. ಈ ಮೂಲಕ ಸಮಾಜ ಸುಧಾರಣೆಯಲ್ಲಿ ಪ್ರಮುಖ ಪಾತ್ರವಹಿಸುವಂತೆ ಅವರು ಕಿವಿಮಾತು ಹೇಳಿದರು.

ಎನ್‌ಎಸ್‌ಎಸ್‌ನ ಸ್ವಯಂ ಸೇವಕರು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸ್ವಚ್ಛತಾ ಅಭಿಯಾನ, ಆರೋಗ್ಯ ಜಾಗೃತಿ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ಸ್ವಚ್ಛ ಭಾರತ್ ಮಿಷನ್‌ನಂತಹ ಯೋಜನೆಗಳಲ್ಲಿ ಪಾಲ್ಗೊಳ್ಳುತ್ತಾ ‘ಸ್ವಚ್ಛ ಮತ್ತು ಹಸಿರು ಭಾರತ ನಿರ್ಮಾಣ’ಕ್ಕೆ ಪ್ರಮುಖ ಕೊಡುಗೆ ನೀಡುತ್ತಿದ್ದಾರೆ ಎಂದು ಪ್ರಶಂಸಿಸಿದರು.

ಎನ್‌ಎಸ್‌ಎಸ್ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ ಎರಡು ಅತ್ಯುತ್ತಮ ವಿಶ್ವವಿದ್ಯಾಲಯ/ ನಿರ್ದೇಶನಾಲಯ, ಇಬ್ಬರು ಅತ್ಯುತ್ತಮ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿಗಳು, 12 ಅತ್ಯುತ್ತಮ ಎನ್‌ಎಸ್‌ಎಸ್ ಘಟಕ, 12 ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿಗಳು ಹಾಗೂ 20 ಅತ್ಯುತ್ತಮ ಎನ್‌ಎಸ್‌ಎಸ್ ಸ್ವಯಂ ಸೇವಕ/ಸೇವಕಿಯರು ಸೇರಿ 48 ಪ್ರಶಸ್ತಿಗಳನ್ನು ರಾಜ್ಯಪಾಲರು ಪ್ರದಾನ ಮಾಡಿದರು.

ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ರಾಜ್ಯ ಪ್ರಶಸ್ತಿ ವಿಜೇತರ ಕೈಪಿಡಿಯನ್ನು ಬಿಡುಗಡೆ ಮಾಡಿದರು.

ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕಾರ್ಯದರ್ಶಿ ರಂದೀಪ್.ಡಿ, ಇಲಾಖೆಯ ಆಯುಕ್ತ ಚೇತನ್ ಆರ್., ರಾಜ್ಯ ಎನ್.ಎಸ್.ಎಸ್. ಅಧಿಕಾರಿಗಳಾದ ಪ್ರತಾಪ್ ಲಿಂಗಯ್ಯ ಮತ್ತು ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶಕ ಕಾರ್ತಿಗೇಯನ್.ಡಿ ಮತ್ತಿತರರು ಉಪಸ್ಥಿತರಿದ್ದರು.

ರಾಜಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಜ್ಯ ಮಟ್ಟದ ಎನ್‌ಎಸ್‌ಎಸ್ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು

ಶೇ 20 ರಿಯಾಯಿತಿ ನೀಡಲು ಆಗ್ರಹ

ಬೆಂಗಳೂರು: ನಮ್ಮ ಮೆಟ್ರೊ ಪ್ರಯಾಣಿಕರಿಗೆ ದಟ್ಟಣೆ ಅವಧಿಯಲ್ಲಿ ಶೇ 15 ಹಾಗೂ ದಟ್ಟಣೆ ರಹಿತ ಅವಧಿಯಲ್ಲಿ ಶೇ 20 ರಿಯಾಯಿತಿ ನೀಡಬೇಕು ಎಂದು ಬೆಂಗಳೂರು ಮೆಟ್ರೊ ಮತ್ತು ಉಪನಗರ ರೈಲು ಪ್ರಯಾಣಿಕರ ಸಂಘದ ಅಧ್ಯಕ್ಷ ಪ್ರಕಾಶ್ ಮಂಡೋತ್ ಆಗ್ರಹಿಸಿದ್ದಾರೆ.

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಸೋಮವಾರ ಮನವಿ ಸಲ್ಲಿಸಿರುವ ಅವರು, 'ಸ್ಮಾರ್ಟ್‌ಕಾರ್ಡ್ ಮಾತ್ರವಲ್ಲ ಕ್ಯೂಆರ್ ಕೋಡ್ ಬಳಸಿ ಪ್ರಯಾಣ ಮಾಡುವವರಿಗೂ ಈ ರಿಯಾಯಿತಿಯನ್ನು ಒದಗಿಸಬೇಕು. ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ತಿಂಗಳ ಪಾಸ್‌ಗಳನ್ನು ಶೇ 35ರಷ್ಟು ರಿಯಾಯಿತಿಯಲ್ಲಿ ಒದಗಿಸಲು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

ಸ್ಮಾರ್ಟ್ ಕಾರ್ಡ್‌ಗಳ ಟಾಪ್‌ಅಪ್‌ಗಳಿಗೆ ವಿಶೇಷ ರಿಯಾಯಿತಿಯನ್ನು ನೀಡಬೇಕು. ₹1,000 ಟಾಪ್‌ಅಪ್ ಮಾಡಿಸುವವರಿಗೆ ಶೇ 10 ರಿಂದ ಶೇ 15ರಷ್ಟು ಹೆಚ್ಚುವರಿ ಮೌಲ್ಯ ಜಮಾ ಮಾಡಬೇಕು ಎಂದು ಸಲಹೆ ನೀಡಿದ್ದಾರೆ. ಕೊನೆಯ ಮೈಲ್ ಸಂಪರ್ಕಕ್ಕಾಗಿ ಬಿಎಂಟಿಸಿ ಬಸ್‌ಗಳನ್ನು ಹೆಚ್ಚಿಸಬೇಕು. ಕೈಗೆಟಕುವ ದರದಲ್ಲಿ ಇ–ರಿಕ್ಷಾ, ಇ.ಸ್ಕೂಟರ್‌ಗಳನ್ನು ಪರಿಚಯಿಸಬೇಕು. ಪ್ರಯಾಣೇತರ ಆದಾಯ ಹೆಚ್ಚಿಸಲು ಕೊರಿಯರ್ ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದ್ದಾರೆ.

ಧ್ವನಿ ಎತ್ತಿದ ಕನ್ನಡ ಪರ ಹೋರಾಟಗಾರರು • ಪ್ರತಿಭಟನೆ ನಡೆಸಿದ ವಿವಿಧ ಸಂಘಟನೆಗಳು

ಮೆಟ್ರೊ: ಕನ್ನಡಿಗರಿಗೆ ಅವಕಾಶ ನೀಡಿ

ಪ್ರಜಾವಾಣಿ ವಾರ್ತೆ

ಯುವ ಕರ್ನಾಟಕ ವೇದಿಕೆ ಮತ್ತು ನವ ಕರ್ನಾಟಕ ಸೇನೆಯ ಪದಾಧಿಕಾರಿಗಳು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರರಾವ್ ಅವರಿಗೆ ಮನವಿ ಸಲ್ಲಿಸಿದರು

ಬೆಂಗಳೂರು: ಕನ್ನಡಿಗರು ಅರ್ಜಿ ಹಾಕಲು ಸಾಧ್ಯವಾಗದ ರೀತಿಯ ಷರತ್ತು ವಿಧಿಸಿ ನಮ್ಮ ಮೆಟ್ರೊ ಚಾಲಕರನ್ನು (ಲೋಕೊ ಪೈಲಟ್) ನೇಮಕ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಿರುವುದನ್ನು ವಿವಿಧ ಸಂಘಟನೆಗಳು, ಕನ್ನಡ ಪರ ಹೋರಾಟಗಾರರು ಖಂಡಿಸಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಸಹಿತ ಹಲವರು ಮೆಟ್ರೊ ವಿರುದ್ಧ ಧ್ವನಿ ಎತ್ತಿದ್ದಾರೆ.

ಯುವ ಕರ್ನಾಟಕ ವೇದಿಕೆ ಮತ್ತು ನವ ಕರ್ನಾಟಕ ಸೇನೆಯು ಶಾಂತಿನಗರದಲ್ಲಿರುವ ಬಿಎಂಆರ್‌ಸಿಎಲ್ ಕಚೇರಿ ಎದುರು ಪ್ರತಿಭಟನೆ ನಡೆಸಿತು. ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರರಾವ್ ಅವರು ಪ್ರತಿಭಟನಕಾರರಿಂದ ಮನವಿ ಸ್ವೀಕರಿಸಿದರು.

'ಗೊಂದಲವಾಗಿದ್ದರೆ, ಅಧಿಸೂಚನೆಯಲ್ಲಿ ಅಕ್ಷರ ತಪ್ಪಾಗಿದ್ದರೆ ಸರಿಪಡಿಸುತ್ತೇವೆ. ಕನ್ನಡಿಗರನ್ನು ನೇಮಿಸಿಕೊಳ್ಳಲು ನಿಯಮ ಪ್ರಕಾರ ಕ್ರಮ ಕೈಗೊಳ್ಳುತ್ತೇವೆ' ಎಂದು ಪ್ರತಿಭಟನಕಾರರಿಗೆ ಭರವಸೆ ನೀಡಿದರು. 'ಭರವಸೆ ಸುಳ್ಳಾದರೆ, ಬೇರೆ ಭಾಷಿಕರನ್ನು ಮೆಟ್ರೊ ಚಾಲಕರನ್ನಾಗಿ ನೇಮಕ ಮಾಡಿಕೊಂಡರೆ ಮೆಟ್ರೊ ಸಂಚರಿಸಲು ಬಿಡುವುದಿಲ್ಲ' ಎಂದು ಪ್ರತಿಭಟನಕಾರರು ಎಚ್ಚರಿಸಿದರು.

ಅಧಿಸೂಚನೆಯಿಂದ ಕನ್ನಡಿಗರಿಗೆ ಆಗುವ ಅನ್ಯಾಯವನ್ನು ಸರಿಪಡಿಸುವಂತೆ ಬಿಎಂಆರ್‌ಸಿಎಲ್ ನೌಕರರ ಕನ್ನಡ ಸಂಘ ಕೂಡ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿ ಸಲ್ಲಿಸಿದೆ. ಬಿಎಂಆರ್‌ಸಿಎಲ್‌ನ ನಡೆಯ ವಿರುದ್ಧ ಅನೇಕರು ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಧಿಸೂಚನೆ ವಾಪಸ್

ವಿವಾದ ಸೃಷ್ಟಿಸಿದ್ದ ಅಧಿಸೂಚನೆಯನ್ನು ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್) ಸೋಮವಾರ ರಾತ್ರಿ ವಾಪಸ್ ಪಡೆದಿದೆ.

ಮೆಟ್ರೊ ರೈಲು ಚಾಲಕರ (ಟಿಐ) 50 ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಏಪ್ರಿಲ್ 12ರಂದು ಹೊರಡಿಸಿದ್ದ ಅಧಿಸೂಚನೆಯನ್ನು ವಾಪಸ್ ಪಡೆಯಲಾಗಿದೆ ಎಂದು ಬಿಎಂಆರ್‌ಸಿಎಲ್ ಪ್ರಧಾನ ವ್ಯವಸ್ಥಾಪಕ (ಎಚ್.ಆರ್) ಸುತ್ತೋಲೆ ಹೊರಡಿಸಿದ್ದಾರೆ.

ಕನ್ನಡಿಗ ಉದ್ಯೋಗಾಕಾಂಕ್ಷಿಗಳಿಗೆ ಅನ್ಯಾಯ ಮಾಡುವ ನಮ್ಮ ಮೆಟ್ರೊ ಅಧಿಸೂಚನೆಯನ್ನು ರದ್ದು ಮಾಡಬೇಕು. ಸರಿಪಡಿಸಿ ಅಧಿಸೂಚನೆ ಹೊರಡಿಸಬೇಕು ಎಂದು ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ ಆಗ್ರಹಿಸಿದೆ. 'ನಮ್ಮ ಮೆಟ್ರೊ ಕನ್ನಡದ ವಿರೋಧಿಗಳಾಗಿದ್ದಾರೆ. ಅಲ್ಲಿ ಕನ್ನಡಿಗರಿಗೆ ಉದ್ಯೋಗವಿಲ್ಲ. ಮೆಟ್ರೊ ಒಂದೇ ಅಲ್ಲ. ಬೆಂಗಳೂರೇ ಬಿಹಾರ, ಉತ್ತರ ಪ್ರದೇಶ, ಆಂಧ್ರ, ತಮಿಳುನಾಡು ಆಗಿದೆ' ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಆಕ್ರೋಶ ವ್ಯಕ್ತಪಡಿಸಿದರು.

'ಉದ್ಯೋಗವಿಲ್ಲದೇ ಕನ್ನಡಿಗರು ಇಲ್ಲಿ ಪರದಾಡುತ್ತಿದ್ದಾರೆ. ಬಿಎಂಆರ್‌ಸಿಎಲ್‌ನ ಆಯಕಟ್ಟಿನ ಜಾಗದಲ್ಲಿ ಕುಳಿತಿರುವ ಅನ್ಯಭಾಷಿಗರು ಬೇರೆ ರಾಜ್ಯದವರಿಗೆ ಅನುಕೂಲ ಮಾಡಿಕೊಡುವ ರೀತಿಯಲ್ಲಿ ನಿಯಮಗಳನ್ನು ರೂಪಿಸುತ್ತಿದ್ದಾರೆ' ಎಂದು ಬಿಎಂಆರ್‌ಸಿಎಲ್ ನೌಕರರ ಯೂನಿಯನ್ ಉಪಾಧ್ಯಕ್ಷ ಸೂರ್ಯನಾರಾಯಣ ಮೂರ್ತಿ ಬೇಸರ ವ್ಯಕ್ತಪಡಿಸಿದರು.

ಬಿಳಿಮಲೆ ಪತ್ರ: ಕರ್ನಾಟಕದ ಸಂಸ್ಥೆಯೊಂದು ಅನ್ಯಭಾಷಿಕರಿಗೆ ನೀಡುವ ಈ ರೀತಿಯ ಆಹ್ವಾನ ಕನ್ನಡಿಗರ ಆತ್ಮಸ್ಥೈರ್ಯವನ್ನು ಕಸಿಯುವುದಷ್ಟೇ ಅಲ್ಲ. ಸಾಂವಿಧಾನಿಕ ಆಶಯಗಳ ಉಲ್ಲಂಘನೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

ಅನ್ಯಭಾಷಿಗರಿಗೆ ಅನುಕೂಲ ಮಾಡಿಕೊಡುವ ನೇಮಕಾತಿ ಅಧಿಸೂಚನೆ ಕನ್ನಡಿಗರಿಗೆ ವೇದನೆ ಉಂಟು ಮಾಡಿದೆ. ನೇಮಕಾತಿ ನಿಯಮಗಳಲ್ಲಿ ಕನ್ನಡಿಗರಿಗೆ ಪ್ರಾಧಾನ್ಯವನ್ನು ಉಲ್ಲೇಖಿಸಿದ್ದರೆ ಈ ರೀತಿಯ ಸಮಸ್ಯೆಯಾಗುತ್ತಿರಲಿಲ್ಲ. ತಾಂತ್ರಿಕ ಹುದ್ದೆಯ ನೆಪವೊಡ್ಡಿ ಕನ್ನಡಿಗರನ್ನು ನೇಮಕಾತಿ ಪ್ರಕ್ರಿಯೆಯಿಂದ ದೂರವಿರಿಸುವುದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಈ ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿಯಬೇಕು. ಹಿಂದೆ ನೇಮಕಗೊಂಡಿರುವ ಕನ್ನಡೇತರರಿಗೆ ಕನ್ನಡ ಕಲಿಸಬೇಕು. ಕನ್ನಡ ಕಲಿಯದವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಬೇಕು. ತಾಂತ್ರಿಕ, ತಾಂತ್ರಿಕೇತರ ಹುದ್ದೆಗಳಿಗೆ ಸಂಪೂರ್ಣವಾಗಿ ಕನ್ನಡಿಗರನ್ನು ನೇಮಕ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

'ಸರಿಪಡಿಸುತ್ತೇವೆ'

'ನಮ್ಮ ಮೆಟ್ರೊ' ಮಾರ್ಗಸೂಚಿಯಲ್ಲಿ ಏನಿದೆ? ಅಧಿಸೂಚನೆಯಲ್ಲಿ ಏನು ತಿದ್ದುಪಡಿ ಮಾಡಬೇಕು ಎಂಬುದನ್ನು ಪರಿಶೀಲಿಸಿ ಅಗತ್ಯ ಬದಲಾವಣೆಗಳನ್ನು ಮಾಡಲಾಗುವುದು ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರರಾವ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಕನ್ನಡ ಪರ ಸಂಘಟನೆಗಳು, ಹೋರಾಟಗಾರರು ಮನವಿ ಸಲ್ಲಿಸಿದ್ದಾರೆ. ಕೂಲಂಕಷವಾಗಿ ಪರಿಶೀಲನೆ ಮಾಡಿ ಸರಿಪಡಿಸಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಸೈಬರ್ ಗಾಳ

ಪ್ರಜಾವಾಣಿ ವಾರ್ತೆ

ತುಮಕೂರು: ಉದ್ಯೋಗಸ್ಥರು, ನಿರುದ್ಯೋಗಿಗಳು, ಗೃಹಿಣಿಯರ ಜತೆಗೆ ವಿದ್ಯಾರ್ಥಿಗಳಿಗೂ ಸೈಬರ್ ಆರೋಪಿಗಳು ಬಲೆ ಬೀಸುತ್ತಿದ್ದಾರೆ. ಆನ್‌ಲೈನ್ ಮೂಲಕ ದುಪ್ಪಟ್ಟು ಲಾಭ ಗಳಿಸುವ ಆಮಿಷವೊಡ್ಡಿ ಕಾಲೇಜು ವಿದ್ಯಾರ್ಥಿಗಳಿಂದ ಹಣ ವಂಚಿಸುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ.

'ಟಾಸ್ಕ್‌ನಲ್ಲಿ ಹಣ ಹೂಡಿಕೆ ಮಾಡಿ ಹೆಚ್ಚಿನ ಲಾಭ ಗಳಿಸಬಹುದು' ಎಂಬ ಆಮಿಷಕ್ಕೆ ಒಳಗಾಗಿ ಶಿರಾ ತಾಲ್ಲೂಕು ಕಳ್ಳಂಬೆಳ್ಳ ಹೋಬಳಿ ಗಾಂಧಿನಗರದ ವಿದ್ಯಾರ್ಥಿನಿ ಜಿ.ಎಚ್.ಚೇತನಾ ₹4.35 ಲಕ್ಷ ಕಳೆದುಕೊಂಡಿದ್ದಾರೆ.

ಟೆಲಿಗ್ರಾಮ್‌ನಲ್ಲಿ ಕಳುಹಿಸಿದ ಲಿಂಕ್ ಕ್ಲಿಕ್ ಮಾಡಿದ ನಂತರ ಚೇತನಾ ಅವರನ್ನು 'ಎನ್‌ಎಸ್‌ಇ– ಅಫೀಶಿಯಲ್' ಎಂಬ ಗ್ರೂಪ್‌ಗೆ ಸೇರಿಸಿದ್ದಾರೆ. ಸದರಿ ಗ್ರೂಪ್‌ನಲ್ಲಿ ಜ್ಯುವೆಲರ್ಸ್ ಬಗ್ಗೆ ಜಾಹೀರಾತು ಹಂಚಿಕೊಂಡಿದ್ದಾರೆ. ಇದನ್ನು ಎಲ್ಲರಿಗೂ ಶೇರ್ ಮಾಡಿದರೆ ಕಮಿಷನ್ ನೀಡಲಾಗುವುದು ಎಂದು ತಿಳಿಸಿದ್ದಾರೆ. ಬಳಿಕ ಟಾಸ್ಕ್‌ಗಳ ಬಗ್ಗೆ ಚರ್ಚಿಸಿದ್ದಾರೆ. ಸೈಬರ್ ಆರೋಪಿಗಳ ಬ್ಯಾಂಕ್ ಖಾತೆಗೆ ಚೇತನಾ ₹1 ಸಾವಿರ ವರ್ಗಾವಣೆ ಮಾಡಿದ್ದಾರೆ. ವಾಪಸ್ ಅವರ ಖಾತೆಗೆ ₹2 ಸಾವಿರ ಬಂದಿದೆ. ಇದಾದ ಬಳಿಕ ಟಾಸ್ಕ್‌ಗಾಗಿ ₹2 ಸಾವಿರ ಹೂಡಿಕೆ ಮಾಡಿದ್ದು, ₹3,900 ಮರಳಿಸಿದ್ದಾರೆ. ಇದನ್ನು ನಂಬಿ ಒಟ್ಟು ₹4,44,710 ಹಣವನ್ನು ವಿವಿಧ ಖಾತೆಗಳಿಗೆ ವರ್ಗಾಯಿಸಿದ್ದಾರೆ. ಇದರಲ್ಲಿ ಅವರಿಗೆ ₹8,900 ಮಾತ್ರ ಸಿಕ್ಕಿದೆ. ಟಾಸ್ಕ್ ಹೆಸರಿನಲ್ಲಿ ಮೋಸ ಮಾಡಿದವರನ್ನು ಪತ್ತೆ ಹಚ್ಚಿ, ಹಣ ವಾಪಸ್ ಕೊಡಿಸುವಂತೆ ಸೈಬರ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ಕೆ.ಎಂ.ಗೌತಮ್ ಇದೇ ರೀತಿಯಾಗಿ ಸೈಬರ್ ವಂಚನೆಗೆ ಒಳಗಾಗಿ ₹2.99 ಲಕ್ಷ ಕಳೆದುಕೊಂಡಿದ್ದಾರೆ. ಹಣ ಹೂಡಿಕೆ ಮಾಡಿ ಟಾಸ್ಕ್ ಪೂರ್ಣಗೊಳಿಸಿದರೆ ಉತ್ತಮ ಲಾಭ ಸಿಗುತ್ತದೆ ಎಂದು ನಂಬಿಸಿ ವಂಚಿಸಲಾಗಿದೆ.

ಉಡುಗೊರೆ ನೆಪದಲ್ಲಿ ವಂಚನೆ

ಐ–ಫೋನ್, ಕೈ ಗಡಿಯಾರ, ಲ್ಯಾಪ್‌ಟಾಪ್, ಆಭರಣ, 600 ಪೌಂಡ್ ಉಡುಗೊರೆಯಾಗಿ ನೀಡುವುದಾಗಿ ನಂಬಿಸಿ ನಗರದ ಪ್ರಗತಿ ಬಡಾವಣೆಯ ವಿದ್ಯಾರ್ಥಿನಿ ಸಿಂಧು ಎಂಬುವರಿಗೆ ₹4.10 ಲಕ್ಷ ವಂಚಿಸಲಾಗಿದೆ.

'ವಾಟ್ಸ್ ಆ್ಯಪ್ ಕರೆ ಮಾಡಿ ಜೆ.ಜೆ.ಕಮ್ಯುನಿಕೇಷನ್ಸ್ ವತಿಯಿಂದ ಮಾತನಾಡುತ್ತಿರುವುದಾಗಿ ಪರಿಚಯಿಸಿಕೊಂಡರು. ನಿಮಗೆ ಕೆಲ ಉಡುಗೊರೆ ಕಳುಹಿಸಲಾಗುತ್ತಿದೆ. ನೀವು ಬ್ಯಾಂಕ್ ಖಾತೆ ವಿವರ ಸಲ್ಲಿಸಿ ಎಂದು ಹೇಳಿದರು. ನಂತರ ನಿಮ್ಮ ಉಳಿತಾಯ ಖಾತೆಯ ಲಿಮಿಟ್ ಹೆಚ್ಚಿಸಬೇಕು ಎಂದು ತಿಳಿಸಿದರು. ಅವರು ಕಳುಹಿಸಿದ ಕ್ಯೂ ಆರ್ ಕೋಡ್ ಸ್ಕ್ಯಾನರ್‌ಗೆ ಹಣ ವರ್ಗಾಯಿಸಿದೆ' ಎಂದು ಸಿಂಧು ನೀಡಿದ ದೂರಿನಲ್ಲಿ ನಮೂದಿಸಿದ್ದಾರೆ.

'ಇನ್ನೂ ಹೆಚ್ಚಿನ ಹಣ ಕಳುಹಿಸಿ ನಾವೇ ನಿಮ್ಮ ಖಾತೆಗೆ ವರ್ಗಾವಣೆ ಮಾಡುತ್ತೇವೆ ಎಂದು ಹೇಳಿದ್ದರು. ಇದನ್ನು ನಂಬಿ ನನ್ನ ಗೆಳತಿ, ತಾಯಿಯ ಖಾತೆಯಿಂದ ಒಟ್ಟು ₹4,10,950 ವರ್ಗಾಯಿಸಿದ್ದೇನೆ. ಇದುವರೆಗೆ ಯಾವುದೇ ಉಡುಗೊರೆ ಬಂದಿಲ್ಲ. ಮೋಸ ಮಾಡಿದವರನ್ನು ಪತ್ತೆ ಹಚ್ಚಿ, ಹಣ ವಾಪಸ್ ಕೊಡಿಸುವಂತೆ' ಕೋರಿ ಸೈಬರ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ಹಣ್ಣಿನ ವ್ಯಾಪಾರಿಯಿಂದ ಕೃತ್ಯ: ಸಿ.ಸಿ.ಟಿ.ವಿ ದೃಶ್ಯಾವಳಿ ಪರಿಶೀಲನೆ

ಬಾಲಕಿ ಮೇಲೆ ಅತ್ಯಾಚಾರ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿ ಮೇಲೆ ಅತ್ಯಾಚಾರವೆಸಗಿ ಪರಾರಿಯಾಗಿದ್ದ ಹಣ್ಣಿನ ವ್ಯಾಪಾರಿಯನ್ನು ರಾಜಾಜಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಂಗಾರಪೇಟೆಯ ನಿವಾಸಿ ಸುನಿಲ್ ಬಂಧಿತ ಆರೋಪಿ.

'ಮೆಜೆಸ್ಟಿಕ್ ಬಳಿ ಹಣ್ಣಿನ ವ್ಯಾಪಾರ ಮಾಡುವ ಆರೋಪಿ, ಮೂರು ದಿನದ ಹಿಂದೆ ಬಾಲಕಿಯನ್ನು ಪರಿಚಯಿಸಿಕೊಂಡು, ತಿರುಪತಿ ಹಾಗೂ ವಿವಿಧ ಕಡೆ ಸುತ್ತಾಡಿಸಿ ಅತ್ಯಾಚಾರ ಮಾಡಿದ್ದಾನೆ' ಎಂದು ಬಾಲಕಿಯ ಪೋಷಕರು ದೂರು ನೀಡಿದ್ದಾರೆ ಎಂದು ಪೊಲೀಸರು ತಿಳಿಸಿದರು.

'ಪ್ರಕರಣ ದಾಖಲಿಸಿಕೊಂಡು ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಿ, ಆರೋಪಿಯನ್ನು ಬಂಧಿಸಲಾಯಿತು. ಪ್ರಕರಣವನ್ನು ಉಪ್ಪಾರಪೇಟೆ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಲಾಗಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಳ್ಳಲಿದ್ದಾರೆ' ಎಂದು ಹೇಳಿದರು.

ಕಾನ್‌ಸ್ಟೆಬಲ್ ಶವ ಪತ್ತೆ: ಆತ್ಮಹತ್ಯೆ ಶಂಕೆ

ಮುಬಾರಕ್ ಮುಜಾವರ್

ಬೆಂಗಳೂರು: ನಗರದ ಆಡುಗೋಡಿ ಪೊಲೀಸ್ ವಸತಿ ಗೃಹದಲ್ಲಿ ಸೋಮವಾರ ಕೊಳೆತ ಸ್ಥಿತಿಯಲ್ಲಿ ಕಾನ್‌ಸ್ಟೆಬಲ್ ಶವ ಪತ್ತೆಯಾಗಿದ್ದು, ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ನಗರ ಸಶಸ್ತ್ರ ಮೀಸಲು ಪಡೆಯಲ್ಲಿ (ಸಿಎಆರ್) ಕೆಲಸ ಮಾಡುತ್ತಿದ್ದ ಬೆಳಗಾವಿಯ ಮುಬಾರಕ್ ಮುಜಾವರ್ (29) ಎಂದು ಗುರುತಿಸಲಾಗಿದೆ. 'ವಸತಿ ಗೃಹದಿಂದ ದುರ್ವಾಸನೆ ಬರುತ್ತಿರುವ ಬಗ್ಗೆ ಸ್ಥಳೀಯರು ತಿಳಿಸಿದರು. ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದಾಗ, ಮನೆಯ ಕೊಠಡಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವುದು ಕಂಡು ಬಂತು. ಒಂದು ತಿಂಗಳ ಹಿಂದೆಯೇ ಮೃತಪಟ್ಟಿರುವ ಸಾಧ್ಯತೆ ಇದ್ದು, ಶವ ಸಂಪೂರ್ಣ ಕೊಳೆತು ಹೋಗಿದೆ' ಎಂದು ಹೇಳಿದ್ದಾರೆ.

'ಮುಬಾರಕ್ ಅವರ ಪತ್ನಿ ಹೆರಿಗೆಗಾಗಿ ಅಥಣಿಗೆ ತೆರಳಿದ್ದು, ಅವರು ಬಂದ ಬಳಿಕ ಹೆಚ್ಚಿನ ಮಾಹಿತಿ ಗೊತ್ತಾಗಲಿದೆ. ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ತಿಳಿಸಿದರು.

ಅಪರಾಧ ಸುದ್ದಿ

ಮ್ಯಾಕ್ಸಿ ಕ್ಯಾಬ್ ಡಿಕ್ಕಿ: ವ್ಯಕ್ತಿ ಸಾವು

ಬೆಂಗಳೂರು: ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿಗೆ ಮ್ಯಾಕ್ಸಿಕ್ಯಾಬ್ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಚಿಕ್ಕಜಾಲ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಚಿಕ್ಕಜಾಲ ನಿವಾಸಿ ಸದಾನಂದ ಹಿರೇಮಠ (53) ಮೃತ ವ್ಯಕ್ತಿ. ಸಾದರಹಳ್ಳಿ ಗೇಟ್ ಬಳಿಯ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುತ್ತಿದ್ದ ಸದಾನಂದ ಅವರು, ಭಾನುವಾರ ರಾತ್ರಿ 8.30ರ ಸಮಯದಲ್ಲಿ ಮನೆಗೆ ತರಕಾರಿ ತೆಗೆದುಕೊಂಡು ಹೋಗುವಾಗ ಮ್ಯಾಕ್ಸಿ ಕ್ಯಾಬ್ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡು ಸ್ಥಳದಲ್ಲೇ ಅಸುನೀಗಿದರು. ಚಿಕ್ಕಜಾಲ ಠಾಣೆ ಪೊಲೀಸರು, ಸ್ಥಳಕ್ಕೆ ಭೇಟಿ ನೀಡಿ ವಾಹನ ಹಾಗೂ ಚಾಲಕನನ್ನು ವಶಕ್ಕೆ ಪಡೆದು, ತನಿಖೆ ಕೈಗೊಂಡಿದ್ದಾರೆ.

ಯಲಹಂಕ ಹಳೇನಗರ ಭಾಗದ ದಿನಪತ್ರಿಕೆ ವಿತರಕರಿಂದ ಪುನೀತ್ ರಾಜಕುಮಾರ್ ಅವರ 50ನೇ ವರ್ಷದ ಜನ್ಮದಿನವನ್ನು ಆಚರಿಸಲಾಯಿತು. ದಿನಪತ್ರಿಕೆ ವಿತರಕರ ಸಂಘದ ಉಪಾಧ್ಯಕ್ಷರಾದ ಶಂಕರ್, ಕುಮಾರ್, ಖಜಾಂಚಿ ವೀರಭದ್ರ ವೈ.ಸಿ, ವೀರೇಶ್, ಉಮೇಶ್, ಶಶಿ, ಗೌರೀಶ್, ನಾಗಾರ್ಜುನ, ನವೀನ್, ದಿನೇಶ್ ಭಾಗವಹಿಸಿದ್ದರು

ನಾಗ್ಪುರ ಗಲಭೆ: 9 ಜನರಿಗೆ ಗಾಯ

ಒಂದನೇ ಪುಟದಿಂದ...

ಚಿಟ್ನಿಸ್ ಪಾರ್ಕ್ ಮತ್ತು ಮಹಲ್ ಪ್ರದೇಶಗಳಲ್ಲಿ ಗುಂಪನ್ನು ಚದುರಿಸಲು ಪೊಲೀಸರು ಅಶ್ರುವಾಯು ಶೆಲ್ ದಾಳಿ ನಡೆಸಿ, ಲಾಠಿ ಪ್ರಹಾರ ಮಾಡಿದರು. ಕ್ರಮೇಣ ಹಿಂಸಾಚಾರವು ನಗರದ ಕೊಟ್ವಾಲಿ, ಗಣೇಶಪೇಟೆ ಕಡೆಗೂ ವಿಸ್ತರಿಸಿತು. ಹಿಂಸಾಚಾರದ ವೇಳೆ ಗಲಭೆಕೋರರು ಕೆಲ ವಾಹನಗಳಿಗೆ ಬೆಂಕಿ ಹಚ್ಚಿದ್ದಾರೆ ಮತ್ತು ಹಲವು ಮನೆಗಳ ಮೇಲೆ ಕಲ್ಲು ಎಸೆದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ವಿವರ: ಮಹಲ್ ಪ್ರದೇಶದ ಛತ್ರಪತಿ ಶಿವಾಜಿ ಪ್ರತಿಮೆ ಬಳಿ ಬಜರಂಗದಳ ಸದಸ್ಯರು ಪ್ರತಿಭಟನೆ ನಡೆಸಿದರು. ಇದರ ಬೆನ್ನಲ್ಲೇ ಗಲಭೆ ಆರಂಭವಾಯಿತು. ಪ್ರತಿಭಟನೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿದ ಕೂಡಲೇ, ಕುರಾನ್ ಅನ್ನು ಸುಡಲಾಗಿದೆ ಎಂಬ ವದಂತಿ ಹರಡಿತು. ಇದು ಮುಸ್ಲಿಂ ಸಮುದಾಯದವರ ಆಕ್ರೋಶಕ್ಕೆ ಕಾರಣವಾಯಿತು.

ಕುರಾನ್ ಸುಟ್ಟುಹಾಕಲಾಗಿದೆ ಎಂದು ಆರೋಪಿಸಿ ಗಣೇಶಪೇಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಆದರೆ ಬಜರಂಗದಳದ ಪದಾಧಿಕಾರಿಗಳು ಈ ಆರೋಪಗಳನ್ನು ನಿರಾಕರಿಸಿದ್ದಾರೆ. ಪ್ರತಿಭಟನೆ ವೇಳೆ ಔರಂಗಜೇಬ್‌ನ ಪ್ರತಿಕೃತಿಯನ್ನು ಮಾತ್ರ ಸುಟ್ಟುಹಾಕಿದ್ದಾಗಿ ಪ್ರತಿಕ್ರಿಯಿಸಿದ್ದಾರೆ.ಗಲಭೆ, ಹಿಂಸಾಚಾರದ ಕಾರಣ ನಾಗ್ಪುರದ ಸೂಕ್ಷ್ಮ ಪ್ರದೇಶದಲ್ಲಿ ಪೊಲೀಸ್ ಭದ್ರತೆಯನ್ನು ಬಿಗಿಗೊಳಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈಶಾನ್ಯ ಭಾರತ ಕ್ಷೇತ್ರ ಮರುವಿಂಗಡಣೆ: ಕೇಂದ್ರಕ್ಕೆ ಗಡುವು

ನವದೆಹಲಿ (ಪಿಟಿಐ): ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮಣಿಪುರ ಮತ್ತು ಅಸ್ಸಾಂನಲ್ಲಿ ಕ್ಷೇತ್ರ ಮರುವಿಂಗಡಣೆ ಕಾರ್ಯವನ್ನು ನಡೆಸಲು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಮೂರು ತಿಂಗಳ ಗಡುವು ನೀಡಿದೆ.

ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ನೇತೃತ್ವದ ಪೀಠವು ವಿಚಾರಣೆಯನ್ನು ಜು. 21ಕ್ಕೆ ಮುಂದೂಡಿದೆ. 'ಮರುವಿಂಗಡಣೆ ಮುಂದೂಡಿದ್ದನ್ನು ರದ್ದುಪಡಿಸಿ ರಾಷ್ಟ್ರಪತಿ ಆದೇಶಿಸಿದರೆ ಕೆಲಸ ಆರಂಭಿಸಲು ಅಷ್ಟೇ ಸಾಕಾಗುತ್ತದೆ. ಇಲ್ಲಿ ಸರ್ಕಾರಕ್ಕೆ ಏನು ಕೆಲಸ' ಎಂದು ಪೀಠವು ಪ್ರಶ್ನಿಸಿತು.

ಕೆ.ಆರ್.ಪುರ ಸಮೀಪದ ಕಾಚರಕನಹಳ್ಳಿಯಲ್ಲಿ ಸರ್ವಜ್ಞನಗರ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಡಾ.ರಾಜಯೋಗ ವಿದ್ಯಾಲಯದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನ ಕಾರ್ಯಕ್ರಮದಲ್ಲಿ ಮಹಿಳೆಯರನ್ನು ಗೌರವಿಸಲಾಯಿತು. ಕಸಾಪ ನಗರ ಜಿಲ್ಲೆ ಸಮಿತಿ ಸದಸ್ಯೆ ಇಂದಿರಾ ಶರಣ್, ಪದ್ಮಶ್ರೀ ಚಂದ್ರಪ್ರಕಾಶ್, ಕವಿತಾ ರವೀಂದ್ರ, ಕ್ಷೇತ್ರದ ಅಧ್ಯಕ್ಷ ಯೋಗಶ್ರೀ ವರ್ಧಮಾನ ಕಳಸೂರು, ವರ್ಧಮಾನ ಸುಜಾತ ಶ್ರೀಕಾಂತ್, ಗಂಗಾಧರ್ ಉಪಸ್ಥಿತರಿದ್ದರು

ಎಂಟು ದ್ವಿಚಕ್ರ ವಾಹನ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ತಮಿಳುನಾಡಿನ ಆರೋಪಿಯನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿ, ₹ 9 ಲಕ್ಷ ಮೌಲ್ಯದ ಎಂಟು ವಾಹನ ವಶಪಡಿಸಿಕೊಂಡಿದ್ದಾರೆ

ತಮಿಳುನಾಡಿನ ಕಂಬಿಕೊಲ್ಲೈ ಗ್ರಾಮದ ಕುಟ್ಟವೇಡಿ ಮುರುಗೇಶ್ (21) ಬಂಧಿತ ಆರೋಪಿ. ವಿಕ್ಟರ್ ಎಂಬುವರು ಕಮ್ಮನಹಳ್ಳಿಯ ಚಾಯ್ ಡೇ ಮುಂಭಾಗ ಬೆಳಿಗ್ಗೆ ಸ್ಕೂಟಿ ನಿಲ್ಲಿಸಿ, ಸಂಜೆ ವಾಪಸ್ ಬಂದು ನೋಡಿದಾಗ ವಾಹನ ಇರಲಿಲ್ಲ. ಈ ಬಗ್ಗೆ ಅವರು ಪೊಲೀಸರಿಗೆ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಘಟನಾ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲನೆ ನಡೆಸಿ, ಆರೋಪಿಯ ಚಹರೆ ಪತ್ತೆ ಮಾಡಿ ಬಂಧಿಸಿದ್ದಾರೆ.

'ಆರೋಪಿಯು ತಮಿಳುನಾಡಿನ ನಿವಾಸಿಯಾಗಿದ್ದು, ನಗರದಲ್ಲಿರುವ ತನ್ನ ಅಜ್ಜಿ ಮನೆಯಲ್ಲಿ ಆರು ತಿಂಗಳಿನಿಂದ ವಾಸವಿದ್ದಾನೆ. ಕೆ.ಜಿ.ಹಳ್ಳಿ ಹಳೇ ಬಾಗಲೂರು ಬಡಾವಣೆಯಲ್ಲಿ ಗಾರೆ ಕೆಲಸ ಮಾಡುತ್ತಿದ್ದು, ದುಶ್ಚಟಗಳಿಗೆ ದಾಸನಾಗಿದ್ದ. ಮದ್ಯ ಹಾಗೂ ಸಿಗರೇಟ್‌ಗೆ ಹಣ ಹೊಂದಿಸುವ ಸಲುವಾಗಿ ರಸ್ತೆ ಬದಿ ಹಾಗೂ ಪಾರ್ಕಿಂಗ್ ಸ್ಥಳಗಳಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಆರ್.ಟಿ. ನಗರ, ಬಾಣಸವಾಡಿ, ಗೋವಿಂದಪುರ ವ್ಯಾಪ್ತಿಗಳಲ್ಲಿ ದ್ವಿಚಕ್ರ ವಾಹನಗಳನ್ನು ಕಳವು ಮಾಡಿರುವುದಾಗಿ ತಿಳಿಸಿದ್ದಾನೆ. ಕೆಲವು ದ್ವಿಚಕ್ರ ವಾಹನಗಳ ಬಿಡಿ ಭಾಗಗಳನ್ನು ಬಿಚ್ಚಿ ಶಿವಾಜಿ ನಗರದಲ್ಲಿರುವ ಗುಜರಿಗೆ ಮಾರಾಟ ಮಾಡಿದ್ದ. ಆರೋಪಿ ನೀಡಿದ ಮಾಹಿತಿ ಆಧರಿಸಿ ಖಾಲಿ ಜಾಗದಲ್ಲಿ ನಿಲ್ಲಿಸಿದ್ದ ಎಂಟು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಹೇಳಿದ್ದಾರೆ.

ಕಾನ್‌ಸ್ಟೆಬಲ್ ಗುರುತಿನ ಚೀಟಿ ನಕಲು

ಬೆಂಗಳೂರು: ಪೊಲೀಸ್ ಕಾನ್‌ಸ್ಟೆಬಲ್ ಗುರುತಿನ ಚೀಟಿಯ ಸಂಖ್ಯೆ ಬಳಸಿ ಇನ್‌ಸ್ಪೆಕ್ಟರ್ ಎಂದು ಬರೆಸಿಕೊಂಡು ಓಡಾಡುತ್ತಿದ್ದ ಆರೋಪಿ ವಿರುದ್ಧ ಸಿಸಿಬಿಯ ಸಂಘಟಿತ ಅಪರಾಧ ನಿಯಂತ್ರಣ ದಳದ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಇನ್‌ಸ್ಪೆಕ್ಟರ್ ಎಂದು ನಮೂದಾಗಿರುವ ಹಾಗೂ ಹಿರಿಯ ಅಧಿಕಾರಿಗಳ ಸಹಿ ಇರದ ಗುರುತಿನ ಚೀಟಿ ಹೊಂದಿದ್ದ ಎಸ್.ಆನಂದ್ ಅವರ ವಿರುದ್ಧ ಪ್ರಕರಣ ದಾಖಲಾಗಿದೆ. ಆರೋಪಿಯು ನಕಲಿ ಗುರುತಿನ ಚೀಟಿ ಬಳಸುತ್ತಿರುವುದರ ಬಗ್ಗೆ ಬಂದ ಮಾಹಿತಿ ಆಧರಿಸಿ ಪೊಲೀಸರು ಪರಿಶೀಲನೆ ನಡೆಸಿದ್ದರು. ಗುರುತಿನ ಚೀಟಿ ನೀಡುವ ವಿವಿಐಪಿ ಭದ್ರತಾ ವಿಭಾಗದಲ್ಲಿ ಮಾಹಿತಿ ಪಡೆದಾಗ ಅದರಲ್ಲಿರುವ ನಂಬರ್ ಎಸ್. ಆರ್. ನಗರ ಠಾಣೆಯ ಕಾನ್‌ಸ್ಟೆಬಲ್ ಕೆ. ದೊಡ್ಡಬಸಪ್ಪ ಅವರದ್ದು ಎಂದು ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾನ್‌ಸ್ಟೆಬಲ್ ಐಡಿ ನಂಬರ್ ಬಳಸಿ, ತನ್ನ ಫೋಟೋ ಹಾಕಿ ಇನ್‌ಸ್ಪೆಕ್ಟರ್ ಎಂದು ತಿದ್ದುಪಡಿ ಮಾಡಿ ಆರೋಪಿ ಬಳಸುತ್ತಿದ್ದ ಎಂಬುದು ಖಚಿತವಾಗಿದೆ. ಆರೋಪಿಗಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ವಿದ್ಯುತ್ ಕಂಬ ಬಿದ್ದು ಇಬ್ಬರು ಮಹಿಳೆಯರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಕಂಬ ಬಿದ್ದು ಇಬ್ಬರು ಮಹಿಳೆಯರು ಮೃತಪಟ್ಟಿದ್ದಾರೆ.

ಸದ್ದುಗುಂಟೆ ಪಾಳ್ಯದಲ್ಲಿ ಸೋಮವಾರ ಈ ಘಟನೆ ನಡೆದಿದ್ದು, ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಸುಮತಿ (35) ಮತ್ತು ಸೋನಿ (36) ಮೃತಪಟ್ಟಿದ್ದಾರೆ.

ರಸ್ತೆ ಕಾಮಗಾರಿ ನಡೆಯುವ ವೇಳೆ ಬೆಳಿಗ್ಗೆ ವಿದ್ಯುತ್ ಕಂಬಕ್ಕೆ ಜೆಸಿಬಿ ಡಿಕ್ಕಿ ಹೊಡೆದಿತ್ತು. ಸಂಜೆ ವೇಳೆಗೆ ಕಂಬ ಮಹಿಳೆಯರ ಮೇಲೆ ಬಿದ್ದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಬೈಯಪ್ಪನಹಳ್ಳಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ರಸ್ತೆ ಕಾಮಗಾರಿ ಗುತ್ತಿಗೆ ಪಡೆದಿರುವ ಗುತ್ತಿಗೆದಾರನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

'ಉದ್ಯೋಗ ಪ್ರಗತಿಗೆ ಜಪಾನಿ ಕಲಿಯಿರಿ'

ಬೆಂಗಳೂರು: 'ಜಪಾನಿ ಭಾಷೆಯ ಕಲಿಕೆಯ ಅವಕಾಶವನ್ನು ಬಳಸಿಕೊಳ್ಳಿ. ಉನ್ನತ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿ' ಎಂದು ನಗರದಲ್ಲಿರುವ ಜಪಾನ್ ಕಾನ್ಸಲ್ ಜನರಲ್ ನಕಾನೆ ಟ್ಸುತೊಮು ಅವರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿರುವ(ಬಿಸಿಯು) ಜಾಗತಿಕ ಭಾಷೆಗಳ ಅಧ್ಯಯನ ಕೇಂದ್ರದ 40ನೇ ವಾರ್ಷಿಕೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ನಂತರ ನಡೆದ ವಿಚಾರ ಸಂಕಿರಣದಲ್ಲಿ ಆನ್‌ಲೈನ್ ಮೂಲಕ ಭಾಗವಹಿಸಿ 'ಜಪಾನ್‌ನಲ್ಲಿ ಪ್ರಸ್ತುತ ಉದ್ಯೋಗಾವಕಾಶ' ಕುರಿತು ಮಾತನಾಡಿದ ಜಪಾನ್ ವಿದೇಶಾಂಗ ಸಚಿವಾಲಯದ ಸಲಹೆಗಾರ ಪ್ರೊ. ಅಶೋಕ್ ಕುಮಾರ್ ಚಾವ್ಲಾ, 'ಜಪಾನ್, ಭಾರತದ ಪ್ರತಿಭಾವಂತರಿಗೆ ಉತ್ತಮ ಅವಕಾಶಗಳನ್ನು ಒದಗಿಸುತ್ತಿದೆ' ಎಂದು ತಿಳಿಸಿದರು.

ಬಿಸಿಯು ಕುಲಪತಿ ಪ್ರೊ. ಲಿಂಗರಾಜ ಗಾಂಧಿ, ಜಪಾನ್ ಕಾನ್ಸುಲೇಟ್ ಜನರಲ್ ಕಚೇರಿಯ ಅಧಿಕಾರಿ ಮೇಘನಾ, ಜಾಗತಿಕ ಭಾಷೆಗಳ ಕೇಂದ್ರದ ಅಧ್ಯಕ್ಷೆ ಪ್ರೊ. ಜ್ಯೋತಿ ವೆಂಕಟೇಶ್, ಬಿಸಿಯು ಕುಲಸಚಿವ (ಮೌಲ್ಯಮಾಪನ) ಪ್ರೊ. ರಮೇಶ್ .ಬಿ. ವಿತ್ತಾಧಿಕಾರಿ ಎಂ.ವಿ. ವಿಜಯಲಕ್ಷ್ಮಿ ಉಪಸ್ಥಿತರಿದ್ದರು.

ಆಹಾರ ಸಚಿವ ಕೆ.ಎಚ್. ಮುನಿಯಪ್ಪ ವಿಶ್ವಾಸ

'3 ತಿಂಗಳೊಳಗೆ ಒಳ ಮೀಸಲಾತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟರಲ್ಲಿನ ಎಲ್ಲ ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಳಮೀಸಲಾತಿ ನೀಡುವ ಮಹತ್ವದ ನಿರ್ಧಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮೂರು ತಿಂಗಳ ಒಳಗೆ ಪ್ರಕಟಿಸಲಿದ್ದಾರೆ' ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ಜಂಟಿ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಕೆಲವು ಹೋರಾಟಗಾರರು ಮತ್ತು ವಿರೋಧ ಪಕ್ಷಗಳು ರಾಜಕೀಯ ಲಾಭಕ್ಕಾಗಿ ಒಳ ಮೀಸಲಾತಿ ವಿಚಾರದಲ್ಲಿ ಸರ್ಕಾರದ ವಿರುದ್ಧ ಭ್ರಾಂತಿ ಮೂಡಿಸುವ ಹಾಗೂ ತಪ್ಪು ಮಾಹಿತಿ ಹರಡುವ ಕೆಲಸ ಮಾಡುತ್ತಿದ್ದಾರೆ' ಎಂದರು.

'ಪಕ್ಷದ ನಾಯಕರ ವಿರುದ್ಧ ಅಪಮಾನಕರ ಶಬ್ದಗಳನ್ನು ಬಳಸುವುದು ಸೂಕ್ತವಲ್ಲ. ಸಮುದಾಯದ ಸಂಘಟನೆಗಳು ಹಾಗೂ ಸಂಘ ಸಂಸ್ಥೆಗಳು ಅಶಾಂತಿ ಮೂಡಿಸುವ ಹೋರಾಟಗಳಿಂದ ದೂರ ಇರಬೇಕು. ಮುಂದಿನ ಮೂರು ತಿಂಗಳು ಶಾಂತಿಯಿಂದ ಇರಬೇಕು' ಎಂದು ಸಮುದಾಯದ ನಾಯಕರಿಗೆ ಅವರು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಬಿ.ಎನ್. ಚಂದ್ರಪ್ಪ, ಎಚ್. ಆಂಜನೇಯ, ಕೆ.ಎಚ್. ಮುನಿಯಪ್ಪ, ಆರ್.ಬಿ. ತಿಮ್ಮಾಪುರ ಉಪಸ್ಥಿತರಿದ್ದರು

'ಒಳ ಮೀಸಲಾತಿ ಜಾರಿಗೆ ಸಚಿವ ಸಂಪುಟ ಸಭೆ ಈಗಾಗಲೇ ತಾತ್ವಿಕ ಒಪ್ಪಿಗೆ ನೀಡಿದೆ. ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ನೇತೃತ್ವದಲ್ಲಿ ಏಕ ಸದಸ್ಯ ಆಯೋಗ ರಚಿಸಿ, ಮೂರು ತಿಂಗಳ ಒಳಗೆ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ. ಅದರಂತೆ ಪ್ರಕ್ರಿಯೆ ಮುಂದುವರಿದಿದೆ. ಒಳ ಮೀಸಲಾತಿ ಜಾರಿಗೆ ಬರುವವರೆಗೂ ಹೊಸ ನೇಮಕಾತಿಗೆ ಅಧಿಸೂಚನೆ ಹೊರಡಿಸದಿರಲು ಕೂಡಾ ಈಗಾಗಲೇ ನಿರ್ಧರಿಸಲಾಗಿದೆ' ಎಂದರು.

'ಮಾದಿಗ ದಂಡೋರ, ಮಾದಿಗ ಮೀಸಲಾತಿ ಹೋರಾಟ ಸಮಿತಿಗಳು, ವಿವಿಧ ದಲಿತ ಸಂಘಟನೆಗಳು ಒಳ ಮೀಸಲಾತಿಗಾಗಿ 30 ವರ್ಷಗಳಿಂದ ಹೋರಾಟ ನಡೆಸುತ್ತಿವೆ. ಈ ಹೋರಾಟದ ಫಲವಾಗಿ ಆಯಾ ರಾಜ್ಯಗಳಿಗೆ ಒಳ ಮೀಸಲಾತಿ ಜಾರಿಗೆ ತರುವ ಅಧಿಕಾರವನ್ನು ಸುಪ್ರೀಂ ಕೋರ್ಟ್ ನೀಡಿದೆ. ಈ ತೀರ್ಪಿನಿಂದ ಶೋಷಿತ ಸಮುದಾಯಗಳಿಗೆ ನ್ಯಾಯ ಸಿಗುವಂತಾಗಿದೆ. ತೆಲಂಗಾಣದಲ್ಲಿ ಕಾಂಗ್ರೆಸ್ ಸರ್ಕಾರ ಒಳಮೀಸಲಾತಿ ಜಾರಿಗೆ ಈಗಾಗಲೇ ಕ್ರಮ ತೆಗೆದುಕೊಂಡಿದೆ' ಎಂದರು.

'ಒಮ್ಮತದ ಅಭಿಪ್ರಾಯ'

'ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅವರ ನಿವಾಸದಲ್ಲಿ ನಾನು, ಸಚಿವರಾದ ಜಿ. ಪರಮೇಶ್ವರ, ಆರ್.ಬಿ. ತಿಮ್ಮಾಪುರ, ಪ್ರಿಯಾಂಕ್ ಖರ್ಗೆ, ಶಿವರಾಜ ತಂಗಡಗಿ, ಶಾಸಕರಾದ ಪ್ರಸಾದ್ ಅಬ್ಬಯ್ಯ, ಪಿ.ಎಂ. ನರೇಂದ್ರಸ್ವಾಮಿ, ಎಂ. ರೂಪಕಲಾ, ಎ.ಆರ್. ಕೃಷ್ಣಮೂರ್ತಿ, ನಯನಾ ಮೋಟಮ್ಮ, ಕೆ.ಎಸ್. ಬಸವಂತಪ್ಪ, ಎ.ಸಿ. ಶ್ರೀನಿವಾಸ್, ದರ್ಶನ್ ಧ್ರುವನಾರಾಯಣ, ಪರಿಷತ್ ಸದಸ್ಯರಾದ ಡಾ.ಡಿ. ತಿಮ್ಮಯ್ಯ, ಎಚ್.ಪಿ ಸುಧಾಮ ದಾಸ್ ಮುಂತಾದವರು ಸಭೆ ಸೇರಿ ಒಳಮೀಸಲಾತಿ ಜಾರಿಗೆ ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿದ್ದೇವೆ' ಎಂದು ಮುನಿಯಪ್ಪ ಅವರು ಹೇಳಿದರು.

ಎಡಗೈ- ಬಲಗೈ ಸಚಿವರು, ಶಾಸಕರ ಚರ್ಚೆ: ಒಮ್ಮತದಿಂದ ಇರಲು ನಿರ್ಧಾರ

ಪ್ರಜಾವಾಣಿ ವಾರ್ತೆ

ಸಚಿವ ಎಚ್.ಸಿ. ಮಹದೇವಪ್ಪ ಅವರ ನಿವಾಸದಲ್ಲಿ ಎಡಗೈ ಮತ್ತು ಬಲಗೈ ಸಮುದಾಯದ ಸಚಿವರು, ಶಾಸಕರ ಸಭೆ ಸೋಮವಾರ ರಾತ್ರಿ ನಡೆಯಿತು

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಅನುಷ್ಠಾನ ಕುರಿತು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅವರ ನಿವಾಸದಲ್ಲಿ ಗೃಹ ಸಚಿವ ಜಿ. ಪರಮೇಶ್ವರ ನೇತೃತ್ವದಲ್ಲಿ ಎಡಗೈ ಮತ್ತು ಬಲಗೈ ಸಮುದಾಯದ ಸಚಿವರು, ಶಾಸಕರ ಸಭೆ ಸೋಮವಾರ ರಾತ್ರಿ ನಡೆಯಿತು.

ಒಳ ಮೀಸಲಾತಿ ಸಂಬಂಧಿಸಿದಂತೆ ಶಿಫಾರಸು ಮಾಡಲು ರಚಿಸಿರುವ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ನೇತೃತ್ವದ ಆಯೋಗದಿಂದ ಆದಷ್ಟು ಬೇಗ ವರದಿ ಪಡೆದುಕೊಳ್ಳಲು ಮತ್ತು ಒಳ ಮೀಸಲಾತಿ ಪ್ರಮಾಣ ಹಂಚಿಕೆ ವಿಚಾರದಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ನೀಡದೆ ಒಮ್ಮತದಿಂದ ಇರಲು ಸಭೆಯಲ್ಲಿ ಚರ್ಚೆ ನಡೆಯಿತು ಎಂದು ಗೊತ್ತಾಗಿದೆ.

ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ವಿವಿಧ ದಲಿತ ಸಂಘಟನೆಗಳು ಪ್ರತಿಭಟನೆ ನಡೆಸುತ್ತಿವೆ. ಇದೇ 21ರಂದು ದೊಡ್ಡ ಮಟ್ಟದಲ್ಲಿ ಹೋರಾಟ ರೂಪಿಸಲು ಕೂಡಾ ಸಂಘಟನೆಗಳು ಸಜ್ಜಾಗುತ್ತಿವೆ. ಒಳ ಮೀಸಲಾತಿ ಜಾರಿಗಾಗಿ ಸರ್ಕಾರದ ಮಟ್ಟದಲ್ಲಿ ನಡೆಯುತ್ತಿರುವ ಪ್ರಕ್ರಿಯೆಯ ಕುರಿತು ಈ ಸಂಘಟನೆಗಳ ನಾಯಕರ ಜೊತೆ ಸಮಾಲೋಚನೆ ನಡೆಸಿ, ಪ್ರತಿಭಟನೆಯಿಂದ ಹಿಂದೆಸರಿಯುವಂತೆ ಮನವೊಲಿಸುವ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಿತು.

ಒಳ ಮೀಸಲಾತಿ ಕಾರಣದಿಂದ ಮುಂಬರುವ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಯಲ್ಲಿ ಸಮುದಾಯದ ಮತಗಳು ಚದುರಿ ಹೋಗದಂತೆ ವಹಿಸಬೇಕಾದ ಎಚ್ಚರಿಕೆ ಮತ್ತು ರೂಪಿಸಬೇಕಾದ ಕಾರ್ಯತಂತ್ರಗಳ ಬಗ್ಗೆಯೂ ಸಮಾಲೋಚನೆ ನಡೆಯಿತು. ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲು ಪೂರಕವಾಗಿ ಒಗ್ಗಟ್ಟಿನಿಂದ ಕೆಲಸ ಮಾಡಲು ಕೂಡಾ ಎಡಗೈ- ಬಲಗೈ ಸಮುದಾಯದ ನಾಯಕರು ಚರ್ಚೆ ನಡೆಸಿದರು ಎಂದು ಮೂಲಗಳು ಹೇಳಿವೆ.

ಸಚಿವರಾದ ಕೆ. ಎಚ್. ಮುನಿಯಪ್ಪ, ಆರ್.ಬಿ. ತಿಮ್ಮಾಪುರ, ಸತೀಶ ಜಾರಕಿಹೊಳಿ, ಶಿವರಾಜ ತಂಗಡಗಿ, ಶಾಸಕರಾದ ಆನೇಕಲ್ ಶಿವಣ್ಣ, ಪಿ.ಎಂ. ನರೇಂದ್ರ ಸ್ವಾಮಿ, ಪ್ರಸಾದ್ ಅಬ್ಬಯ್ಯ, ಎ.ಸಿ. ಶ್ರೀನಿವಾಸ್, ದರ್ಶನ್ ಧ್ರುವನಾರಾಯಣ, ವೆಂಕಟೇಶ್, ವಿಧಾನ ಪರಿಷತ್ ಸದಸ್ಯರಾದ ಡಾ. ಡಿ. ತಿಮ್ಮಯ್ಯ, ಎಚ್. ಪಿ. ಸುಧಾಮದಾಸ್, ವಸಂತ್ ಕುಮಾರ್ ಮುಂತಾದವರು ಇದ್ದರು.

ಕ್ಷೇಮ ಕುಶಲ



ಹೃದಯಾಘಾತ ಹೇಗೆ ಆಗುತ್ತದೆ?



ಡಾ. ಶ್ರೀಕಾಂತ್ ಕೆ. ವಿ.

ನಮ್ಮ ದೇಹದಲ್ಲಿ ಹಲವಾರು ಅಂಗಗಳಿವೆ. ಪ್ರತಿಯೊಂದು ಅಂಗವೂ ತನ್ನ ಕೆಲಸವನ್ನು ಇತರ ಅಂಗಗಳ ಕೆಲಸಕ್ಕೆ ಪೂರಕವಾಗಿ ಕಾರ್ಯವನ್ನು ನಿರ್ವಹಿಸುತ್ತದೆ. ಆರೋಗ್ಯವಂತ ಶರೀರದ ಪ್ರತಿಯೊಂದು ಅಂಗವ್ಯವಸ್ಥೆಯೂ, ಅವುಗಳ ಜೀವಕೋಶಗಳೂ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರಬೇಕು. ಇದಕ್ಕಾಗಿ ಜೀವಕೋಶಗಳಿಗೆ ನಿರಂತರವಾಗಿ ಆಕ್ಸಿಜನ್ ಮತ್ತು ಪೋಷಕಾಂಶಗಳ ಪೂರೈಕೆ ಆಗುತ್ತಲೇ ಇರಬೇಕು. ಜೀವಕೋಶಗಳ ಚಯಾಪಚಯಗಳ ಕಾಲದಲ್ಲಿ ಉತ್ಪತ್ತಿ ಆಗುವ ಕಾರ್ಬನ್ ಡೈಆಕ್ಸೈಡ್‌ನಂತಹ ಮಾಲಿನ್ಯಗಳ ತೆರವು ಸಾಧ್ಯವಾಗಬೇಕು. ಈ ಪ್ರಕ್ರಿಯೆಗಳನ್ನು ನಿರ್ವಹಿಸುವ ರಕ್ತಪರಿಚಲನಾ ವ್ಯವಸ್ಥೆಯ ಕೇಂದ್ರಬಿಂದುವಾಗಿರುವ ಹೃದಯ, ಸದಾ ರಕ್ತವನ್ನು ಪಂಪ್ ಮಾಡುತ್ತಾ, ರಕ್ತನಾಳಗಳ ಬೃಹತ್ ಜಾಲದ ಮೂಲಕ ಎಲ್ಲ ಜೀವಕೋಶಗಳಿಗೂ ರಕ್ತವನ್ನು ಪೂರೈಸುತ್ತದೆ.

ಹೃದಯದೊಳಗೆ ರಕ್ತದ ಮಡುವಿದ್ದರೂ, ಅದನ್ನು ತನ್ನ ಸ್ವಂತ ಕೆಲಸಕ್ಕೆ ಬಳಸಿಕೊಳ್ಳಲಾಗದು. ಹೀಗಾಗಿ, ಸ್ವಂತ ಜೀವಕೋಶಗಳ ಕಾರ್ಯನಿರ್ವಹಣೆಗಾಗಿ ಹೃದಯವು 'ಕರೊನರಿ' ರಕ್ತನಾಳಗಳೆನ್ನುವ ಮೂರು ಪ್ರತ್ಯೇಕ ರಕ್ತನಾಳಗಳನ್ನು ಹೊಂದಿದೆ. ಕ್ಷಣದ ಬಿಡುವೂ ಇಲ್ಲದಂತೆ ಕೆಲಸ ಮಾಡುವ ಹೃದಯಕ್ಕೆ, ನಿಮಿಷದ ಗಡುವೂ ಇಲ್ಲದಂತೆ ನಿರಂತರವಾಗಿ ರಕ್ತದ ಪೂರೈಕೆ ಆಗುತ್ತಲೇ ಇರಬೇಕು. ಕರೊನರಿ ರಕ್ತನಾಳಗಳ ರಕ್ತದ ಪ್ರವಹನಕ್ಕೆ ಅಡೆತಡೆಗಳು ಉಂಟಾದರೆ ಹೃದಯ ಕೆಲಸ ಮಾಡಲಾಗದು. ಆಗ ಇಡೀ ಶರೀರದ ವ್ಯವಸ್ಥೆ ಕುಸಿದು, ಜೀವಕ್ಕೆ ಮಾರಕವಾಗಬಹುದು.

ಆರೋಗ್ಯವಂತ ವ್ಯಕ್ತಿಯ ನೂರು ಮಿಲಿಲೀಟರ್ ಶುದ್ಧ ರಕ್ತದಲ್ಲಿ, ಸುಮಾರು 20 ಮಿಲಿಲೀಟರ್ ಆಕ್ಸಿಜನ್ ಇರುತ್ತದೆ. ಬಹುತೇಕ ಅಂಗಾಂಗಗಳು ಇದರಲ್ಲಿ 5 ಮಿಲಿಲೀಟರ್ ಆಕ್ಸಿಜನನ್ನು ಮಾತ್ರ ಹೀರಿ, 15 ಮಿಲಿಲೀಟರ್ ಆಕ್ಸಿಜನ್ ಉಳಿಸಿರುತ್ತವೆ. ಅಂಗಗಳಿಗೆ ಹೆಚ್ಚಿನ ಆಕ್ಸಿಜನ್ ಅವಶ್ಯಕತೆ ಇರುವಾಗ, 5 ಮಿಲಿಲೀಟರ್'ಗಿಂತ ಹೆಚ್ಚು ಪ್ರಮಾಣದ ಆಕ್ಸಿಜನ್ ಅನ್ನು ಸೆಳೆದುಕೊಳ್ಳಬೇಕು. ಜೊತೆಗೆ, ರಕ್ತದ ಹರಿವಿನ ಪ್ರಮಾಣ ಹೆಚ್ಚಿಸಿಕೊಳ್ಳುತ್ತಾ, ಬೇಕಿರುವಷ್ಟು ಆಕ್ಸಿಜನ್ ಅನ್ನು ಪಡೆದುಕೊಳ್ಳಬೇಕು. ಉಳಿದ ಅಂಗಗಳಿಗೆ ಹೋಲಿಸಿದರೆ, ಹೃದಯ ಹೆಚ್ಚಿನ ಪ್ರಮಾಣದಲ್ಲಿ ಆಕ್ಸಿಜನ್ ಹೀರುತ್ತದೆ. ಸಾಮಾನ್ಯ ಕೆಲಸದ ವೇಳೆ ಹೃದಯವು 100 ಮಿಲಿಲೀಟರ್ ರಕ್ತದಿಂದ 15 ಮಿಲಿಲೀಟರ್ ಆಕ್ಸಿಜನ್ ಸೆಳೆಯುತ್ತದೆ. ಹೀಗಾಗಿ, ಹೃದಯಕ್ಕೆ ಆಕ್ಸಿಜನ್ ಅಗತ್ಯ ಅಧಿಕವಾದಾಗ, ರಕ್ತನಾಳಗಳು ಹಿಗ್ಗಿ, ರಕ್ತದ ಹರಿವನ್ನು ಹೆಚ್ಚಿಸಿಕೊಳ್ಳುವ ಮೂಲಕ ಬೇಡಿಕೆಯನ್ನು ಪೂರೈಸಿಕೊಳ್ಳುತ್ತದೆ. ಅತಿಶ್ರಮದ ಕೆಲಸ ಮಾಡುವಾಗ ಆರೋಗ್ಯವಂತ ವ್ಯಕ್ತಿಯ ಹೃದಯವು ರಕ್ತ ಹರಿಯುವ ಪ್ರಮಾಣವನ್ನು ಐದರಿಂದ ಆರು ಪಟ್ಟು ಹೆಚ್ಚಾಗಿಸಿ, ಆಕ್ಸಿಜನ್ನಿನ ಬೇಡಿಕೆಯನ್ನು ಈಡೇರಿಸಿಕೊಳ್ಳುತ್ತದೆ.

ಭಾಗ 1

ದೈಹಿಕ ಚಟುವಟಿಕೆ, ವ್ಯಾಯಾಮ, ಮಾನಸಿಕ ಒತ್ತಡದ, ಸೋಂಕು, ಹಾಗೂ ಅನಾರೋಗ್ಯದ ಸಮಯಗಳಲ್ಲಿ ನಮ್ಮ ರಕ್ತದ ಪರಿಚಲನೆಯು ಹೆಚ್ಚಾಗಿ, ಹೃದಯವು ಹೆಚ್ಚಿನ ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ. ಆರೋಗ್ಯವಂತ ಹೃದಯ ಇಂತಹ ಪರಿಸ್ಥಿತಿಯನ್ನು ಸುಸೂತ್ರವಾಗಿ ನಿಭಾಯಿಸಬಲ್ಲದು. ವಿಶ್ರಾಂತಿ ಪಡೆದ ಕೂಡಲೇ ಪರಿಸ್ಥಿತಿ ಸಾಮಾನ್ಯ ಹಂತಕ್ಕೆ ಬರುತ್ತದೆ. ರಕ್ತದಲ್ಲಿ ಹಿಮೊಗ್ಲೊಬಿನ್ ಅಂಶ ಕಡಿಮೆಯಾದಾಗ ಅಥವಾ ಶ್ವಾಸಕೋಶಗಳ ಸಮಸ್ಯೆ ಇದ್ದಾಗ ಆಕ್ಸಿಜನ್ ಕೊಂಡೊಯ್ಯುವ ಶಕ್ತಿ ಇಳಿಮುಖವಾಗುತ್ತದೆ. ಅಧಿಕ ರಕ್ತದೊತ್ತಡ, ಹೃದಯ ಬಡಿತದ ಅಸಹಜ ಏರುವಿಕೆ, ಹೃದಯದ ಕವಾಟಗಳ ಕಾಯಿಲೆ, ಹೃದಯದ ಸ್ನಾಯುಗಳ ಹಿಗ್ಗುವಿಕೆಯ ಸಂದರ್ಭಗಳಲ್ಲಿ ಆಕ್ಸಿಜನ್ನಿನ ಅವಶ್ಯಕತೆಯೂ ಹೆಚ್ಚಾಗುತ್ತದೆ.

ಹೃದಯ ರಕ್ತನಾಳಗಳ ಒಳಭಾಗದಲ್ಲಿ ಕೊಬ್ಬಿನ ಅಂಶ ಸೇರಿದಾಗ ಆಂತರಿಕ ವ್ಯಾಸ ಕಿರಿದಾಗಿ, ರಕ್ತದ ಒಳಹರಿವು ಕಡಿಮೆಯಾಗುತ್ತದೆ. ವಿಶ್ರಾಂತಿಯ ಸ್ಥಿತಿಯಲ್ಲಿ ಅಗತ್ಯ ಆಕ್ಸಿಜನ್ ಪೂರೈಕೆ ಆಗುತ್ತದಾದರೂ, ದೈಹಿಕ/ಮಾನಸಿಕ ಶ್ರಮದ ವೇಳೆ ರಕ್ತನಾಳಗಳ ವ್ಯಾಸ ಹಿಗ್ಗಲಾರದೆ, ಹೃದಯದ ರಕ್ತಪೂರೈಕೆ ಕುಂಠಿತಗೊಳ್ಳುತ್ತದೆ. 'ಅಥೆರೊಸ್ಕ್ಲೀರೊಸಿಸ್' ಎನ್ನಲಾಗುವ ಇದು ಅತ್ಯಂತ ಸಾಮಾನ್ಯವಾಗಿ ಕಂಡುಬರುವ ಹೃದ್ರೋಗ. ಹೀಗೆ, ಆಕ್ಸಿಜನ್ನಿನ ಬೇಡಿಕೆ-ಪೂರೈಕೆಗಳ ಅಸಮತೋಲನದಿಂದ ಹೃದಯಾಘಾತ ಉಂಟಾಗುತ್ತದೆ; ಎದೆನೋವು, ಉಸಿರಾಟದ ತೊಂದರೆ, ಗಂಟಲು–ಉರಿ, ಬೆನ್ನಿನ ನೋವು, ಆತಂಕಗಳು ಕಾಣಿಸಿಕೊಳ್ಳುತ್ತವೆ.

ರಕ್ತನಾಳಗಳ ಸಮಸ್ಯೆಯಿಂದ ಹೃದಯಕ್ಕೆ ಉಂಟಾಗುವ ತಾತ್ಕಾಲಿಕ ಆಕ್ಸಿಜನ್ ಕೊರತೆಯು ವಿಶ್ರಾಂತಿ ತೆಗೆದುಕೊಂಡ ಕೂಡಲೇ ನಿವಾರಣೆಯಾಗಬೇಕು; ಇಲ್ಲವಾದರೆ ರೋಗವು ತೀವ್ರವಾಗಿದೆ ಎಂದರ್ಥ. ಅಗತ್ಯ ಪ್ರಮಾಣದ ರಕ್ತಪೂರೈಕೆ ಆಗದೆ ಹೃದಯದ ಜೀವಕೋಶಗಳು ಸಾವನ್ನಪ್ಪಿದರೆ, 'ಟ್ರೋಪೋನಿನ್' ಎಂಬ ಪ್ರೊಟೀನ್ ಬಿಡುಗಡೆಯಾಗುತ್ತದೆ. ಹೃದಯಾಘಾತದ ವೇಳೆ ಏರುಪ್ರಮಾಣದ ಟ್ರೋಪೋನಿನ್ ರಕ್ತದಲ್ಲಿ ಕಂಡುಬರುತ್ತದೆ. ಅಂತಹ ರೋಗಿಗೆ ತೀವ್ರ-ನಿಗಾ ಘಟಕಗಳಲ್ಲಿ ತುರ್ತುಚಿಕಿತ್ಸೆ ನೀಡಬೇಕು.

'ಕರೊನರಿ ಅಥಿರೋಸ್ಕ್ಲೀರೋಸಿಸ್'ಗೆ ಪ್ರಮುಖ ಕಾರಣಗಳು ಅತಿಯಾದ ರಕ್ತದೊತ್ತಡ, ಮಧುಮೇಹ, ಅಧಿಕ ಕೊಬ್ಬಿನ ಪ್ರಮಾಣ, ತಂಬಾಕು ಸೇವನೆ, ಅನಾರೋಗ್ಯಕರ ಆಹಾರ, ಮಾನಸಿಕ ಒತ್ತಡ, ಬೊಜ್ಜು, ಸೋಮಾರಿತನದ ಜೀವನಶೈಲಿ, ಆನುವಂಶೀಯತೆ. ಇಂತಹವರಲ್ಲಿ ಹೆಚ್ಚಿನ ಶ್ರಮಪಟ್ಟು ಕೆಲಸ ಮಾಡಿದಾಗ ಅಥವಾ ಮಾನಸಿಕ ಒತ್ತಡವಾದಾಗ ಎದೆನೋವಾಗುತ್ತದೆ. ಹೃದಯದ ಬಡಿತದಲ್ಲಿ ಏರುಪೇರು, ಅಸಹಜ ಎದೆಬಡಿತ, ಪ್ರಜ್ಞೆಯನ್ನು ಕಳೆದುಕೊಳ್ಳುವುದು, ರಕ್ತಚಲನೆಯು ನಿಂತು, ಸಾವನ್ನಪ್ಪಬಹುದು. ರಕ್ತದ ಕೊರತೆಯ ಕಾರಣ ಹೃದಯದ ಸ್ನಾಯುಗಳು ಶಕ್ತಿಗುಂದಿ, ಹೃದಯವೈಫಲ್ಯವೂ ಆಗಬಹುದು.

(ಮುಂದಿನ ಭಾಗದಲ್ಲಿ: 'ಕರೋನರಿ ಅಥಿರೋಸ್ಕ್ಲೀರೋಸಿಸ್ ಗುರುತಿಸುವುದು ಮತ್ತು ಚಿಕಿತ್ಸಾ ವಿಧಾನಗಳು') ❖

ತಲೆಯ ಬಗ್ಗೆ ತಲೆಕೆಡಿಸಿಕೊಳ್ಳಿ!

ಮಾ.20 ತಲೆಗಾಯದ ಬಗ್ಗೆ ಅರಿವು ಮೂಡಿಸುವ ದಿನ

ಡಾ. ಅನಿರುದ್ಧ ಕುಲಕರ್ಣಿ

ಹುಟ್ಟಿನಿಂದ ಸಾವಿನವರೆಗೆ ಸತತವಾಗಿ ಕಾರ್ಯನಿರತವಾಗಿರುವ ನಮ್ಮ ಮಿದುಳಿನ ಬಗ್ಗೆ ಕಾಳಜಿ ತೆಗೆದುಕೊಳ್ಳುವುದು ಅತಿ ಅವಶ್ಯಕ. ತಲೆಯ ಗಾಯದ ಪ್ರಮುಖ ಕಾರಣಗಳಲ್ಲಿ ಒಂದು ರಸ್ತೆ ಅಪಘಾತ. ರಸ್ತೆ ಅಪಘಾತಗಳಲ್ಲಿ ಬಲಿಪಶುಗಳಾಗುವವರಲ್ಲಿ ಮುಖ್ಯವಾಗಿ ಪಾದಚಾರಿಗಳು, ದ್ವಿಚಕ್ರ ವಾಹನಸವಾರರು, ಹಿಂಬದಿ ಸವಾರರು, ಸೈಕಲ್ ಚಲಾಯಿಸುವವರು. 'ಟ್ರಾಮಾಟಿಕ್ ಬ್ರೈನ್ ಇಂಜುರಿ' ಎಂದು ಕರೆಯಲಾಗುವ ಮಿದುಳಿನ ಆಘಾತಕಾರಿ ಗಾಯವು ಪ್ರಪಂಚದಲ್ಲಿ ಬಹಳಷ್ಟು ಯುವಜನರ ಸಾವಿಗೆ ಮುಖ್ಯ ಕಾರಣವಾಗಿದೆ.

ಭಾರತವೊಂದರಲ್ಲೇ ತಲೆಗಾಯದಿಂದ ಪ್ರತಿ ವರ್ಷ ಐದು ಲಕ್ಷಕ್ಕೂ ಹೆಚ್ಚು ಜನ ಜೀವ ಕಳೆದುಕೊಳ್ಳುತ್ತಿದ್ದಾರೆ. 1.5 ಕೋಟಿಯಷ್ಟು ಜನರು ಆಸ್ಪತ್ರೆಗೆ ದಾಖಲಾಗುತ್ತಾರೆ. ಇದರಲ್ಲಿ ಬಹಳಷ್ಟು ಜನರು ಕುಟುಂಬದ ಆಧಾರಸ್ತಂಭವಾಗಿರುವ ಯುವಕರೇ ಹೆಚ್ಚಾಗಿರುವುದು ಆಘಾತಕಾರಿ ಸಂಗತಿ. ಇನ್ನು ತಲೆಗಾಯದಿಂದ ಬದುಕುಳಿದವರು ದೈಹಿಕ ಅಸಮರ್ಥತೆ, ಅರಿವು, ಸ್ಮರಣೆ ಹಾಗೂ ಮಾತಿನ ತೊಂದರೆಯಿಂದ ಬಳಲುವ ಸಾಧ್ಯತೆಯೂ ಇದೆ.

ತಲೆಯ ಅಂಗರಚನಾಶಾಸ್ತ್ರವನ್ನು ನೋಡಿದರೆ ಮಿದುಳನ್ನು ದಪ್ಪವಾದ ತಲೆಬುರುಡೆಯಲ್ಲಿ ಚೆನ್ನಾಗಿ ರಕ್ಷಿಸಲಾಗಿದೆ. ತಲೆಬುರುಡೆಯಡಿ 'ಡ್ಯೂರಾ ಮ್ಯಾಟರ್', 'ಅರೆಕ್ನಾಯ್ಡ್ ಮ್ಯಾಟರ್' ಹಾಗೂ 'ಪೈಯ ಮ್ಯಾಟರ್' ಎನ್ನುವ ಮೂರು ಪದರುಗಳ ಹೊದಿಕೆಯಿದ್ದು ಇವು ತಾಯಿಯಂತೆ ಮಿದುಳನ್ನು ರಕ್ಷಿಸುತ್ತವೆ. ಹೀಗಾಗಿ ಮಿದುಳಿಗೆ ಗಾಯವಾಗಬೇಕಿದ್ದಲ್ಲಿ ತಲೆಗೆ ತೀವ್ರ ಪೆಟ್ಟು ಬೀಳಬೇಕಾಗುತ್ತದೆ. ತಲೆಗೆ ಬಲವಾದ ಪೆಟ್ಟು ಬಿದ್ದಾಗ ಮಿದುಳಿನಲ್ಲಿ ವಿವಿಧ ಘಟನೆಗಳ ಪ್ರಕ್ರಿಯೆ ನಡೆದು ಹೋಗುತ್ತವೆ.

ಮಿದುಳಿನಲ್ಲಿ ಎರಡು ವಿಧದ ಗಾಯಗಳಾಗುತ್ತವೆ. ಪ್ರಾಥಮಿಕ ಗಾಯದ ಪ್ರಮಾಣಕ್ಕೆ ಅನುಗುಣವಾಗಿ ಮಿದುಳಿನ ಜೀವಕೋಶಗಳಿಗೆ ನೇರವಾದ ಪೆಟ್ಟುಬಿದ್ದು, ಕೆಲವೊಮ್ಮೆ ಸರಿಪಡಿಸಲಾಗದ ಗಾಯವಾಗಬಹುದು. ಎರಡನೇ ವಿಧದಲ್ಲಿ, ತಲೆಯ ಜೀವಕೋಶಗಳಿಗೆ ಊತವಾಗಿ ಆಮ್ಲಜನಕದ ಪೂರೈಕೆ ಕಡಿಮೆ ಆಗಿ ವಿವಿಧ ತೊಂದರೆಗಳು ಉಂಟಾಗಬಹುದು. ಎಲ್ಲಾ ತಲೆಗಾಯದ ನಿರ್ವಹಣೆಯ ತಂತ್ರಗಳು ಈ ಎರಡನೇ ವಿಧದ ಗಾಯವನ್ನು ಕಡಿಮೆ ಮಾಡುವ ಕಡೆಗೆ ಹೆಚ್ಚು ಗಮನ ಹರಿಸಬೇಕಾಗುತ್ತದೆ.

'ಗೋಲ್ಡನ್ ಅವರ್'ನಲ್ಲಿ ಕರೆತನ್ನಿರಿ

ಅಪಘಾತದ ನಂತರದ ಮೊದಲ ಒಂದರಿಂದ ಎರಡು ಗಂಟೆಗಳನ್ನು 'ಗೋಲ್ಡನ್ ಅವರ್' ಎನ್ನಲಾಗುತ್ತದೆ. ಇದು ರೋಗಿಯ ಮೇಲಿನ ದೀರ್ಘಕಾಲೀನ ಪರಿಣಾಮವನ್ನು ನಿರ್ಧರಿಸುವ ನಿರ್ಣಾಯಕ ಘಟ್ಟ. ಹೀಗಾಗಿ ಹೆಚ್ಚು ಸಮಯ ವ್ಯರ್ಥವಾಗದಂತೆ ತಲೆಗೆ ಏಟು ಬಿದ್ದ ರೋಗಿಯನ್ನು ತುರ್ತಾಗಿ ನರಶಸ್ತ್ರಚಿಕಿತ್ಸಕರಿರುವ ಆಸ್ಪತ್ರೆಗೆ ದಾಖಲು ಮಾಡುವುದು ಅತಿ ಅವಶ್ಯಕ. ಅಪಘಾತವಲಯದಲ್ಲಿ ರೋಗಿಗೆ ಉಸಿರಾಟ ಸರಾಗವಾಗುವಂತೆ ಗಾಳಿಬರುವಂತೆ ನೋಡಿಕೊಳ್ಳಬೇಕು. ಇದು ತೀವ್ರತರ ತಲೆಗಾಯವಾದಲ್ಲಿ ಆಗುವ ಅಸ್ವಸ್ಥತೆ ಹಾಗೂ ಸಾವಿನ ಪ್ರಮಾಣವನ್ನು ತಗ್ಗಿಸುತ್ತದೆ.

ಬಾಯಿ ಮತ್ತು ಮೂಗಿನಿಂದ ಉಸಿರಾಡುವಂತೆ ಮಾಡುವುದು, ಬ್ಯಾಗ್ ಮಾಸ್ಕ್ ವೆಂಟಿಲೇಷನ್, ಹೃದಯ ಹಾಗೂ ಶ್ವಾಸಕೋಶದ ಪ್ರಚೋದನೆ, ದೇಹದ ಗಾಯದಿಂದ ರಕ್ತ ಹರಿದು ಹೋಗುವುದನ್ನು ನಿಯಂತ್ರಿಸುವುದು ಮುಖ್ಯ. ರೋಗಿಯನ್ನು ಅಪಘಾತ ವಲಯದಿಂದ ಆಸ್ಪತ್ರೆಗೆ ಸ್ಥಳಾಂತರಿಸುವಾಗ ಮೂಳೆಮುರಿತ ಹಾಗೂ ಬೆನ್ನುಹುರಿಯ ಆರೈಕೆ ಬಹುಮುಖ್ಯವಾಗಿದ್ದು ರೋಗಿಗೆ ಕುತ್ತಿಗೆ ಮತ್ತು ಬೆನ್ನು ಮೂಳೆಗಳ ಪಟ್ಟಿ ಹಾಕಿ ಸ್ಥಳಾಂತರಿಸಬೇಕು. ಸಂಚಾರ ನಿಯಂತ್ರಿಸುವ ಪೊಲೀಸರಿಗೆ ಹಾಗೂ ನಿರ್ವಾಹಕರಿಗೆ ಪ್ರಥಮ ಚಿಕಿತ್ಸೆಯ ಬಗ್ಗೆ ಸಂಪೂರ್ಣ ತರಬೇತಿ ನೀಡಿರಬೇಕು. ಹೀಗೆ ಮಾಡಿದರೆ ರೋಗಿಯ ಜೀವ ಉಳಿಸುವುದಲ್ಲದೆ ಗಾಯದ ತೀವ್ರತೆಯನ್ನು ಗಣನೀಯವಾಗಿ ತಗ್ಗಿಸಬಹುದು. ಆದ್ದರಿಂದ ಪ್ಯಾರಾಮೆಡಿಕಲ್ ಸಿಬ್ಬಂದಿ, ಆ್ಯಂಬುಲೆನ್ಸ್ ಸಿಬ್ಬಂದಿ ಹಾಗೂ ಟ್ರಾಫಿಕ್ ಪೊಲೀಸ್ ಸಿಬ್ಬಂದಿಗೆ ಇಂಥ ಜೀವಾಧಾರ ಸೇವೆಗಳ ತರಬೇತಿ ನೀಡುವುದು ಬಲು ಅವಶ್ಯಕ.

ತಲೆಗೆ ಗಾಯವಾದ ರೋಗಿಯನ್ನು ಆಸ್ಪತ್ರೆಗೆ ಸಾಗಿಸುವಾಗ ಆ್ಯಂಬುಲೆನ್ಸ್‌ನಲ್ಲಿ ಸೂಕ್ತವಾದ ಆರೈಕೆ ಮಾಡಬೇಕು ಹಾಗೂ ನೇರವಾಗಿ 'ನ್ಯೂರೋ ಟ್ರಾಮಾ' ಆಸ್ಪತ್ರೆಗೆ ವರ್ಗಾಯಿಸಬೇಕು. ಇದು ರೋಗಿಯ ಜೀವವನ್ನು ಉಳಿಸುವುದರಲ್ಲಿ ಬಹಳ ಮಹತ್ವದ ಪಾತ್ರ ವಹಿಸುತ್ತದೆ. ಮಿದುಳಿನ ಗಾಯ ಗುರುತಿಸುವ 'ಟ್ರಾಮಾ ಸೆಂಟರ್' ಹಾಗೂ ಆ್ಯಂಬುಲೆನ್ಸ್‌ಗಳಲ್ಲಿ ತರಬೇತಿ ಪಡೆದ ಸಿಬ್ಬಂದಿಯೊಂದಿಗೆ ಸಂವಹನ ನಡೆಸುವುದು ಬಹಳ ಅವಶ್ಯಕ. ಇದರಿಂದ ಅನಗತ್ಯವಾಗಿ ಸ್ಥಳೀಯ ಆಸ್ಪತ್ರೆಗಳಿಗೆ ರೋಗಿಯನ್ನು ಸಾಗಿಸುವುದು ಮತ್ತು ಅದಕ್ಕೆ ತಾಗುವ ಅಮೂಲ್ಯ ಸಮಯವನ್ನು ಉಳಿಸುತ್ತದೆ.

ಆಸ್ಪತ್ರೆಯಲ್ಲಿ ಚಿಕಿತ್ಸೆ

'ನ್ಯೂರೋ ಟ್ರಾಮಾ' ಆಸ್ಪತ್ರೆಯಲ್ಲಿ ನರಶಸ್ತ್ರಚಿಕಿತ್ಸಕರು (ನ್ಯೂರೊ ಸರ್ಜನ್) ಹಾಗೂ ನ್ಯೂರೊಇಂಟೆನ್ಸಿವಿಸ್ಟ್‌ಗಳ ತಂಡದೊಂದಿಗೆ ತುರ್ತಾಗಿ ಹಾಗೂ ಸರಿಯಾಗಿ ಚಿಕಿತ್ಸೆ ಆರಂಭಿಸಬಹುದು. ರೋಗಿಯ ಸಮಸ್ಯೆಯನ್ನು ಆಧರಿಸಿ ನಿಖರವಾದ ಚಿಕಿತ್ಸೆಯನ್ನು ಸರಿಯಾದ ಸಮಯದಲ್ಲಿ ಕೊಟ್ಟಲ್ಲಿ ಸಾಕಷ್ಟು ಜೀವಗಳನ್ನು ಉಳಿಸಬಹುದು.

ಪ್ರಸ್ತುತ ನಮ್ಮ ದೇಶವು ನುರಿತ ಸಿಬ್ಬಂದಿ ಹಾಗೂ ಅತ್ಯುತ್ತಮ ಮೂಲಸೌಕರ್ಯಗಳನ್ನು ಹೊಂದಿರುವ ಕೆಲವೇ ಕೆಲವು ಟ್ರಾಮಾ ಸೆಂಟರ್‌ಗಳನ್ನು ಹೊಂದಿದೆ. ಆದಾಗ್ಯೂ ಹಿಂದಿನ ದಶಕಗಳೇ ಹೋಲಿಸಿದರೆ ಈಗ ನುರಿತತಜ್ಞರು ಹೆಚ್ಚು ಲಭ್ಯವಿದ್ದು ರೋಗಿಗಳ ಮರಣ ಪ್ರಮಾಣವನ್ನು ಶೇ 50ರಷ್ಟು ತಗ್ಗಲು ಕಾರಣವಾಗಿದೆ.

ಮಿದುಳಿನ ಗಾಯ ಜೀವಕ್ಕೆ ಅಪಾಯಕಾರಿ. ದೇಹ ಮತ್ತು ಮನಸ್ಸಿನ ಶಾಶ್ವತ ದುರ್ಬಲತೆಗೆ ಕಾರಣವಾಗುತ್ತದೆ. ಮಿದುಳಿನ ಗಾಯದಿಂದ ಪ್ರತಿವರ್ಷ 1.50 ಲಕ್ಷ ರೋಗಿಗಳಿಗೆ ಪುನರ್ವಸತಿ ಕಲ್ಪಿಸುವ ಅಗತ್ಯವಿರುತ್ತದೆ. ಅರಿವು, ದೃಷ್ಟಿ, ಮಾತು ಮತ್ತು ಭಾಷಾ ನಡವಳಿಕೆಗಳ ಬಗ್ಗೆ ಸರಿಯಾದ ಮೌಲ್ಯಮಾಪನ ಮಾಡಿ ಸೂಕ್ತ ಚಿಕಿತ್ಸೆ ನೀಡಬೇಕಾಗುತ್ತದೆ. ಇದರಲ್ಲಿ ನಮ್ಮ ನರರೋಗತಜ್ಞರ ಪಾತ್ರ ನಿರ್ಣಾಯಕ. ಭೌಗೋಳಿಕವಾಗಿ ಅಪಘಾತ ವಲಯಗಳನ್ನಾಧರಿಸಿ ಹೆಚ್ಚೆಚ್ಚು 'ನ್ಯೂರೋ ಟ್ರಾಮಾ ಸೆಂಟರ್'ಗಳನ್ನು ಸ್ಥಾಪಿಸುವುದು ಅಗತ್ಯ. ಜೊತೆಗೆ ವೈಜ್ಞಾನಿಕವಾಗಿ ದೃಢೀಕರಿಸಲಾದ ತಲೆಗಾಯದ ಚಿಕಿತ್ಸಾ ವಿಧಾನಗಳ ಮಾರ್ಗಸೂಚಿಗಳನ್ನು ಪಾಲಿಸಿದಲ್ಲಿ ಸಾಕಷ್ಟು ಜೀವಗಳನ್ನು ಉಳಿಸಬಹುದು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

ಎಸ್ಸೆಸ್ಸೆಲ್ಸಿ - ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

38) 10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ ಎಷ್ಟು?

ಪರಿಹಾರ:– (.......ಹಿಂದಿನ ಸಂಚಿಕೆಯಿಂದ)

ಕೊನೆಯ ಪದ (l)= 248

Then nth term $= l$

$$a+(n-1)d = 248$$
$$12+(n-1)(4) = 248$$
$$(n-1)4 = 248-12$$
$$(n-1)4 = 236$$
$$(n-1) = \frac{236}{4}$$
$$(n-1) = 59$$
$$n = 59+1 = 60$$

10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ = 60

39) ಚಿತ್ರದಲ್ಲಿ ಕೊಟ್ಟಿರುವ ನಕ್ಷೆಯ ಸಹಾಯದಿಂದ Pಮತ್ತು Qಬಿಂದುಗಳ ನಿರ್ದೇಶಾಂಕಗಳನ್ನು ಕಂಡುಹಿಡಿದು PQನ ಉದ್ದವನ್ನು ದೂರ ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ



ಉತ್ತರ

P (1, 1) ಮತ್ತು Q (5, 4)

$$PQ=\sqrt{(x_2-x_1)^2+(y_2-y_1)^2}$$
$$PQ=\sqrt{(5-1)^2+(4-1)^2}$$
$$PQ=\sqrt{4^2+3^2}$$
$$PQ=\sqrt{16+9}$$
$$PQ=\sqrt{25}$$

$PQ = 5$ ಮಾನಗಳು

40) ಕೆಳಗಿನ ದತ್ತಾಂಶಗಳಿಗೆ ಸರಾಸರಿಯನ್ನು ಕಂಡುಹಿಡಿಯಿರಿ

ವರ್ಗಾಂತರ	ಆವೃತ್ತಿ
2 — 6	2
7 — 11	4
12 — 16	5
17 — 21	3
22 — 26	1

ಉತ್ತರ:–

ವರ್ಗಾಂತರ	ಆವೃತ್ತಿ (f_i)	ಮಧ್ಯಬಿಂದು x_i	$x_i f_i$
2 — 6	2	4	08
7 — 11	4	9	36
12 — 16	5	14	70
17 — 21	3	19	57
22 — 26	1	24	24
	$\Sigma f_i = 15$		$\Sigma f_i x_i = 195$

ಸರಾಸರಿ $\overline{X} = \frac{\sum f_i x_i}{\sum f_i}$

$= \frac{195}{15}$

ಸರಾಸರಿ $(\overline{X}) = 13$

41) ಚಿತ್ರದಲ್ಲಿ 'r' ತ್ರಿಜ್ಯವಿರುವ ತ್ರಿಜ್ಯಾಂತರ ಖಂಡ AOBPA ಯ ವಿಸ್ತೀರ್ಣವು 231 cm^2 ಹಾಗೂ APB ಕಂಸದ ಉದ್ದವು 22 cm ಗಳಾಗಿವೆ. ತ್ರಿಜ್ಯಾಂತರ ಖಂಡದ ತ್ರಿಜ್ಯ ಮತ್ತು ಕೋನ 'θ' ದ ಬೆಲೆಗಳನ್ನು ಕಂಡುಹಿಡಿಯಿರಿ.



ಉತ್ತರ:–

'θ' ಕೋನವನ್ನು ಹೊಂದಿರುವ ತ್ರಿಜ್ಯಾಂತರ ಖಂಡದ ಕಂಸದ ಉದ್ದ

$$= \frac{\theta}{360^\circ} \times 2\pi r$$
$$\therefore \frac{\theta}{360^\circ} \times 2\pi r = 22$$
$$\frac{\theta}{360^\circ} \times \pi r = 11 \quad \ldots\ldots\ldots\ldots (1)$$

θ ಕೋನವಿರುವ ತ್ರಿಜ್ಯಾಂತರ ಖಂಡದ ವಿಸ್ತೀರ್ಣ

$$= \frac{\theta}{360^\circ} \times 2\pi r^2$$
$$\therefore \frac{\theta}{360^\circ} \times \pi r \times r = 231 \qquad |(1) \text{ ರಿಂದ}|$$
$$\therefore 11r = 231$$
$$r = \frac{231}{11} = 21$$
$$\boxed{r = 21 \text{ cm}}$$
$$\frac{\theta}{360^\circ} \times 2\pi r = 22$$
$$\frac{\theta}{360^\circ} \times 2 \times \frac{22}{7} \times 21 = 22$$
$$6\theta = 360$$
$$\theta = \frac{360}{6} = 60^\circ$$
$$\boxed{\theta = 60^\circ}$$

42) ಚಿತ್ರದಲ್ಲಿ ROQP ಆಯತವು ವೃತ್ತ ಚತುರ್ಥಕದಲ್ಲಿ ಅಂತಸ್ಥವಾಗಿದೆ. ಆಯತದ ಉದ್ದ ಮತ್ತು ಅಗಲಗಳು ಕ್ರಮವಾಗಿ 16 cm ಮತ್ತು 12 cm ಗಳಾದರೆ ಛಾಯೀಕೃತ ಭಾಗದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.



ಉತ್ತರ:–

ಚಿತ್ರದಲ್ಲಿ, ROQP ಒಂದು ಆಯತ.

$\therefore$ OQP ಯು ಒಂದು ಲಂಬಕೋನ ತ್ರಿಭುಜ, $\angle OQP = 90^\circ$

$\therefore OP^2 = OQ^2 + PQ^2$ (ಪೈಥಾಗೋರಸ್ ಪ್ರಮೇಯ)

$$= 12^2 + 16^2$$
$$= 144 + 256$$
$$= 400$$
$$\therefore OP = \sqrt{400} = 20 \text{ cm}$$
$$r = 20 \text{ cm}$$

ಛಾಯೆಗೊಳಿಸಿದ ಭಾಗದ ವಿಸ್ತೀರ್ಣ =

ವೃತ್ತ ಚತುರ್ಥಕ ವಿಸ್ತೀರ್ಣ – ಆಯತದ ವಿಸ್ತೀರ್ಣ

$= \frac{1}{4} \times \pi r^2 -$ (ಉದ್ದ × ಅಗಲ)

$$= \frac{1}{4} \times \pi \times 20^2 - (16 \times 12)$$
$$= \frac{1}{4} \times \pi \times 400 - 192$$
$$= 100\pi - 192$$
$$= 100 \times \frac{22}{7} - 192$$
$$= \frac{2200}{7} - 192$$
$$= 314.28 - 192$$

$= 122.28$ ಚದರ ಸೆಂ.ಮೀ.

PUC-CET PHYSICS

22) A body starts from rest and moves with constant acceleration for t seconds It travels a distance x_1 in first half time and x_2 in next half of time, then

(a) $x_2 = 3x_1$ (b) $x_2 = x_1$
(c) $x_2 = 4x_1$ (d) $x_2 = 2x_1$

Ans: (a):

Expln:- As the body starts from rest,

$\therefore u = 0$

Let a be constant acceleration of the body.

Distance travelled by the body in(t /2)s is

$$x_1 = \frac{1}{2}a\left(\frac{t}{2}\right)^2 = \frac{1}{8}at^2 \ldots\ldots\ldots\ldots\ldots\text{(i)}$$

Distance travelled by the body in t s is

$$x_1 + x_2 = \frac{1}{2}at^2 = 4x_1 \qquad \text{(Using (i))}$$
$$\therefore x_2 = 4x_1 - x_1 = 3x_1$$

23). A person is driving a vehicle at uniform speed of 5 m s^{-1} on a level curved track of radius 5m. The coefficient of static friction between tyres and road is 0.1. Will the person slip while taking the turn with the same speed? (Take g = 10 m s^{-2})

Choose the correct statement.

(a) A person will slip if $v^2 < 5$ m s^{-1}.
(b) A person will slip if $v^2 = 5$ m s^{-1}.
(c) A person will slip if $v^2 > 10$ m s^{-1}.
(d) A person will slip if $v^2 > 5$ m^2 s^{-2}.

Ans: (d): the person will not slip if

$$V^2 \le \mu_s Rg$$

Here, $\mu_s = 0.1$, R = 5 m, g = 10 m s^{-2}

$\mu_s Rg = 0.1 \times 5\text{m} \times 10\text{m s}^{-2}$

Or $v^2 \le 5$ m^2 s^{-2}

Therefore the person will slip if $v^2 > 5m^2 s^{-2}$.

24) The electric field intensity produced by the radiations coming from 100 W bulb at a 3 m distance is E. The electric field intensity produced by the radiations coming from 50 W bulb at the same distance is...............

a) $\frac{E}{2}$ b) 2E
c) $\frac{E}{\sqrt{2}}$ d) $\sqrt{2}$ E

Ans: d

25) If E and B represent electric and magnetic field vectors of the electromagnetic wave, the direction of propagation of electromagnetic wave is along..................

a) E b) B
c) B x E d) E x B

Ans:-d

26) The ratio of contributions made by the electric field and magnetic field components to the intensity of an EM wave is.................

a) c : 1 b) c^2 : 1
c) 1 : 1 d) $\sqrt{c}$: 1

Ans:- C

27) Two poles are by a distance of 3.14 m. The resolving power of human eye is minute of an arc. The maximum distance from which he can identify the two poles distinctly is

a. 376 m b. 10.8 km
c. 5.4 km d. 188 m

Ans: b (KCET 2020)

Expln:-

Given the lateral separation of the poles d=3.14 m

The resolving power of the eye is

θ=1min=π/(60×180) rad

The maximum distance from which poles are distinctly visible is D=d/θ

⇒D=(3.14×60×180)/π=10800m=10.8 km

28) A stone is thrown vertically at a speed of 30 m s^{-1} making an angle of 45° with the horizontal. What is the maximum height reached by the stone? Take g = 10 m s^{-2}.

a) 15m b) 30 m
c) 10 m d) 22.5 m

Ans: (d): Maximum height reached by the stone is

$$H_{max} = \frac{u^2 \sin^2\theta}{2g}$$

Here, u = 30 m s^{-1}, θ = 45°, g = 10 m s^{-2}

$$\therefore H_{max} = \frac{(30)^2 \sin^2 45^\circ}{2 \times 10} = \frac{30 \times 30 \times \left(\frac{1}{\sqrt{2}}\right)^2}{2 \times 10}$$
$$= \frac{45}{2} = 22.5 \text{ m}$$

29) A ray light incident at an angle θ on a refracting face of a prism emerges from the other face normally. If the angle of the prism is 5° and the prism is made of a material of refractive index 1.5, the angle of incidence is...........

a) 7.5° b) 5°
c) 15° d) 2.5°

Ans:- a

30) A short pulse of white light is incident from air to a glass slab at normal incidence. After travelling through the slab, the first colour to emerge is

a) blue b) green
c) violet d) red

Ans:- d



₹ 30 ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಹಲಸೂರು ಕೆರೆಗೆ ಹೊಸ ರೂಪ

106 ಎಕರೆ ಕೆರೆಯ ವಿಸ್ತೀರ್ಣ

• ಖಲೀಲಅಹ್ಮದ ಶೇಖ

ಬೆಂಗಳೂರು: ನಗರದ ಹೃದಯ ಭಾಗದಲ್ಲಿರುವ ಐತಿಹಾಸಿಕ ಹಲಸೂರು ಕೆರೆಗೆ ಆಧುನಿಕ ಸ್ಪರ್ಶ ನೀಡಲಾಗುತ್ತಿದೆ. ಕೆರೆಯಲ್ಲಿ ತೇಲುವ ಸೇತುವೆ ನಿರ್ಮಾಣ, ದೋಣಿ ವಿಹಾರ, ಉದ್ಯಾನದ ಅಭಿವೃದ್ಧಿ, ನಡಿಗೆ ಪಥಗಳ ನಿರ್ಮಾಣ ಹಾಗೂ ಕೆರೆಯ ಸೌಂದರ್ಯೀಕರಣದ ಕಾಮಗಾರಿಗಳು ಭರದಿಂದ ಸಾಗಿವೆ. ಇದನ್ನು ನಗರದ ಜನರ ಆಕರ್ಷಣೆಯ ಕೇಂದ್ರವನ್ನಾಗಿ ಮಾಡಲಾಗುತ್ತಿದೆ.

ಅಂದಾಜು 106 ಎಕರೆಯಷ್ಟು ಪ್ರದೇಶದಲ್ಲಿ ಹರಡಿಕೊಂಡಿರುವ ಈ ಕೆರೆಯ ನಡುವೆ ಅಲ್ಲಲ್ಲಿ ನಡುಗಡ್ಡೆಗಳಿವೆ. ಅಲ್ಲಿ ಈಗಾಗಲೆ ಹಸಿರು ತುಂಬಿದ ಮರಗಳಿವೆ. ಇನ್ನಷ್ಟು ವಿಶಿಷ್ಟ ಪ್ರಭೇದದ ಗಿಡಗಳನ್ನು ನೆಡುವ ಮೂಲಕ ಪಕ್ಷಿಗಳನ್ನು ಸೆಳೆಯಲಾಗುತ್ತದೆ. ಇದಕ್ಕಾಗಿ ತಜ್ಞರ ನೇತೃತ್ವದಲ್ಲಿ ಯೋಜನೆಯೊಂದನ್ನು ರೂಪಿಸಲಾಗುತ್ತಿದೆ. ಇವು ಕೆರೆಯ ಆಕರ್ಷಣೆಯನ್ನು ಮತ್ತಷ್ಟು ಹೆಚ್ಚಿಸಲಿವೆ.

ಬಿಬಿಎಂಪಿ, ಜಲಮಂಡಳಿ, ಮಾಲಿನ್ಯ ನಿಯಂತ್ರಣ ಮಂಡಳಿ ವಿವಿಧ ಕಾರ್ಯಕ್ರಮಗಳ ಮೂಲಕ ಕೆರೆ ಶುದ್ಧೀಕರಣ ಕಾರ್ಯ ಕೈಗೊಂಡಿವೆ. ಗುಣಮಟ್ಟದ ನಡಿಗೆ ಪಥಗಳನ್ನು ನಿರ್ಮಿಸಲಾಗುತ್ತಿದೆ. ಕೆರೆಯ ನಡುವೆ ಆಕರ್ಷಕ ಕಾರಂಜಿಗಳ ಅಳವಡಿಕೆಗೂ ವ್ಯವಸ್ಥೆ ಮಾಡಲಾಗುತ್ತಿದೆ. ನಗರದ ಜನರ ವಿಹಾರಕ್ಕೆ ಪ್ರಶಸ್ತ ನೆಲೆಯನ್ನಾಗಿ ಅಭಿವೃದ್ಧಿ ಮಾಡಲಾಗುತ್ತದೆ.

ಹಲಸೂರು ಕೆರೆಯಲ್ಲಿನ ಹೂಳು ತೆಗೆಯುವುದು, ದ್ವಿಪಥ ಪಾದಚಾರಿ ಮಾರ್ಗ ನಿರ್ಮಾಣ, ಕೆರೆಯ ಸುತ್ತಲೂ ತಡೆ ಗೋಡೆಯನ್ನು ನಿರ್ಮಿಸುವುದು ಸೇರಿದಂತೆ ₹30 ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕ ರಿಜ್ವಾನ್ ಅರ್ಷದ್ ಅವರು ಇತ್ತೀಚೆಗೆ ಚಾಲನೆ ನೀಡಿದ್ದಾರೆ.

'ಗಣೇಶ ಮೂರ್ತಿಗಳನ್ನು ವಿಸರ್ಜಿಸುವ ಕಲ್ಯಾಣಿಯ ಹಿಂಭಾಗದಲ್ಲಿರುವ ಒಳಚರಂಡಿಯ ಮೂಲಕ ಕಲುಷಿತ ನೀರು ಕೆರೆಯ ಒಡಲು ಸೇರದಂತೆ ತಡೆಗೋಡೆ ನಿರ್ಮಿಸಲಾಗುತ್ತಿದೆ. ಈಗಾಗಲೇ ಈ ಭಾಗದಲ್ಲಿನ ಹೂಳನ್ನು ತೆಗೆಯುವ ಕಾಮಗಾರಿ ಪ್ರಾರಂಭಿಸಲಾಗಿದೆ. ಕೆರೆ ಸುತ್ತಲೂ ಇರುವ ತಡೆಗೋಡೆ ಶಿಥಿಲಗೊಂಡಿದ್ದು, ಅದನ್ನು ದುರಸ್ತಿ ಮಾಡಲಾಗುವುದು' ಎಂದು ಶಾಸಕ ರಿಜ್ವಾನ್ ಅರ್ಷದ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಕೆರೆಯ ನಡುಗಡ್ಡೆಗಳ ತಡೆಗೋಡೆ ಹಾಳಾಗಿದೆ. ಅವುಗಳನ್ನು ಪುನರ್ ನಿರ್ಮಿಸಲಾಗುವುದು. ಈ ನಡುಗಡ್ಡೆಗಳಿಗೆ ಹಿಂದೆ ದೇಶ–ವಿದೇಶಗಳ ಹಕ್ಕಿಗಳು ಬರುತ್ತಿದ್ದವು. ಆದರೆ ಈಗ ಬರುತ್ತಿಲ್ಲ. ಆದ್ದರಿಂದ ಈ ಹಕ್ಕಿಗಳನ್ನು ಆಕರ್ಷಿಲು ವಿವಿಧ ಬಗೆಯ ಗಿಡಗಳನ್ನು ನೆಟ್ಟು ಬೆಳೆಸಲಾಗುವುದು. ಇದರಿಂದ ಮತ್ತೊಮ್ಮೆ ಕೆರೆಯ ಗತ ವೈಭವವನ್ನು ಮರು ಸ್ಥಾಪಿಸಲಾಗುವುದು' ಎಂದರು.

'ಕೆರೆ ನೀರಿನಲ್ಲಿ ಆಮ್ಲಜನಕದ ಮಟ್ಟವನ್ನು ಸುಧಾರಿಸಲು ನಾಲ್ಕು ಏರೇಟರ್‌ಗಳನ್ನು ಅಳವಡಿಸಲಾಗುತ್ತದೆ. ಕೆರೆಯ ಸುತ್ತಲೂ ಆಲಂಕಾರಿಕ ದೀಪಗಳನ್ನು ಅಳವಡಿಸಲಾಗುತ್ತಿದೆ. ಯೋಗ ಮಾಡುವ ವೇದಿಕೆ ನಿರ್ಮಿಸುವುದೂ ಕೆರೆ ಪುನಾರಭಿವೃದ್ಧಿಯ ಯೋಜನೆಯಲ್ಲಿದೆ. ಕೆರೆಯ ಸುತ್ತಲೂ ತಂತಿಬೇಲಿ ಅಳವಡಿಕೆ, ಕೆರೆಗೆ ಪ್ರವೇಶ ಕಲ್ಪಿಸುವ ಎಲ್ಲ ಮುಖ್ಯದ್ವಾರಗಳನ್ನು ದುರಸ್ತಿ ಮಾಡಲಾಗುವುದು' ಎಂದು ಹೇಳಿದರು.

'ಹಲಸೂರು ಕೆರೆಯನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಲು ರೂಪರೇಶೆಗಳನ್ನು ತಯಾರಿಸಲಾಗಿದೆ. ಈಗಾಗಲೇ ಪಾದಚಾರಿ ಮಾರ್ಗದ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ. ಶೇಕಡಾ 80 ರಷ್ಟು ಸಮೀಕ್ಷೆಯನ್ನು ಕೈಗೊಳ್ಳಲಾಗಿದ್ದು, ಅಗತ್ಯ ಇರುವ ಕಡೆ ಮಾತ್ರ ಹೂಳು ತೆಗೆಯಲಾಗುವುದು' ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ಹಲಸೂರು ಕೆರೆಯಲ್ಲಿನ ಹೂಳು ತೆಗೆಯುತ್ತಿರುವುದು

ಹಲಸೂರು ಕೆರೆಯ ಆವರಣದಲ್ಲಿ ಪಾದಚಾರಿ ಮಾರ್ಗದ ಕಾಮಗಾರಿ ನಡೆಯುತ್ತಿರುವುದು

ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್‌.ಜಿ.

'ಮಾದರಿ ಕೆರೆ' ಸಂಕಲ್ಪ

'ಹಲಸೂರು ಕೆರೆಯನ್ನು ಮಾದರಿ ಕೆರೆಯನ್ನಾಗಿ ರೂಪಿಸಲು ಸಂಕಲ್ಪ ಮಾಡಿದ್ದೇವೆ. ಇಲ್ಲಿರುವ ಉದ್ಯಾನದಲ್ಲಿ ಮಕ್ಕಳಿಗೆ ಆಟವಾಡಲು ಕ್ರೀಡಾ ಪರಿಕರಗಳನ್ನು ಅಳವಡಿಸಲಾಗುವುದು. ಹೊರಾಂಗಣ ಜಿಮ್‌ಗೆ ಬೇಕಾಗುವ ಸಲಕರಣೆಗಳ ಪೂರೈಕೆ ಮಾಡಲಾಗುತ್ತದೆ. ಚಿಕ್ಕ ಫುಟ್‌ಬಾಲ್ ಮೈದಾನವನ್ನೂ ಅಭಿವೃದ್ಧಿ ಮಾಡುವುದಿದೆ. ಕೆರೆಯ ದಡದಲ್ಲಿ ಒಂದು ಚಿಕ್ಕ ಗ್ರಂಥಾಲಯವನ್ನು ನಿರ್ಮಿಸುವ ಯೋಜನೆಯನ್ನೂ ರೂಪಿಸಲಾಗಿದೆ. ಸದ್ಯ ₹30 ಕೋಟಿ ವೆಚ್ಚದಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. ಇನ್ನೂ ₹30 ಕೋಟಿಯಿಂದ ₹40 ಕೋಟಿ ಅನುದಾನ ಬೇಕಾಗುತ್ತದೆ. ಸಣ್ಣ ನೀರಾವರಿ ಸಚಿವ ಎನ್‌.ಎಸ್‌. ಬೋಸರಾಜು ಅವರು ಅನುದಾನ ನೀಡುವ ಭರವಸೆ ನೀಡಿದ್ದಾರೆ' ಎಂದು ರಿಜ್ವಾನ್ ಅರ್ಷದ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕಲುಷಿತ ನೀರು ಸೇರದಂತೆ ಕ್ರಮ ಕೈಗೊಳ್ಳಿ'

ಚಿನ್ನಪ್ಪ ಗಾರ್ಡನ್ ಮತ್ತು ಜೀವನಹಳ್ಳಿ ಕಡೆಯಿಂದ ಕಲುಷಿತ ನೀರು ಹಲಸೂರು ಕೆರೆಯ ಒಡಲಿಗೆ ಸೇರುತ್ತಿದೆ. ಕೆರೆಯ ಮತ್ತೊಂದು ಬದಿಯಲ್ಲಿ ತ್ಯಾಜ್ಯ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ) ನಿರ್ಮಾಣ ಮಾಡಲಾಗಿದೆ. ಆದರೆ, ಎಸ್‌ಟಿಪಿಗೂ ಮತ್ತು ರಾಜಕಾಲುವೆಗೂ ಸಂಪರ್ಕ ಕಲ್ಪಿಸಿಲ್ಲ. ಹೀಗಾಗಿ, ಕಲುಷಿತ ನೀರು ನೇರವಾಗಿ ಕೆರೆ ಸೇರುತ್ತಿದೆ. ಈ ಸಮಸ್ಯೆಯನ್ನು ಪರಿಹರಿಸಬೇಕು. ಒಟ್ಟಾರೆ ಕೆರೆಯನ್ನು ಸಂಪೂರ್ಣವಾಗಿ ಅಭಿವೃದ್ಧಿ ಮಾಡಬೇಕು.

ಮೋಹನರಾಜ್ ಸುಬ್ಬಯ್ಯ
ಹಲಸೂರು ನಿವಾಸಿ

ಹಲಸೂರು ಕೆರೆಯಲ್ಲಿ ತೇಲುತ್ತಿರುವ ಕುಂಡಗಳು

ಕೆರೆಯ ಅಭಿವೃದ್ಧಿ ಕಾಮಗಾರಿಗಳಿಗೆ ಬೇಕಾಗುವ ಸಲಕರಣೆಗಳನ್ನು ಸಂಗ್ರಹಿಸಿರುವುದು

ಹಲಸೂರ ಕೆರೆಯ ಡಿಜಿಟಲ್ ಮಾದರಿ

ಪ್ರಮುಖ ರಾಜಕಾರಣಿ ಕೈವಾಡದ ಆರೋಪ: 3 ತಿಂಗಳಲ್ಲಿ ವರದಿ ಸಲ್ಲಿಕೆಗೆ ಹೈಕೋರ್ಟ್ ಸೂಚನೆ

ಶ್ರೀನಿವಾಸ್ ಹತ್ಯೆ: ಸಿಬಿಐ ತೆಕ್ಕೆಗೆ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಲಾರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರೂ ಆಗಿದ್ದ ಕಾಂಗ್ರೆಸ್ ಪಕ್ಷದ ಮುಖಂಡ ಎಂ.ಶ್ರೀನಿವಾಸ್ ಕೊಲೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿ ಹೈಕೋರ್ಟ್ ತೀರ್ಪು ನೀಡಿದೆ.

ಈ ಕುರಿತಂತೆ ಮೃತ ಶ್ರೀನಿವಾಸ್ ಅವರ ಪತ್ನಿ ಡಾ.ಎಸ್.ಚಂದ್ರಕಲಾ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪ್ರಕಟಿಸಿತು.

'ಸಿಐಡಿ ನಡೆಸಿರುವ ತನಿಖೆಯಲ್ಲಿ ಗಂಭೀರವಾದ ಲೋಪಗಳಿರುವುದು ವೇದ್ಯವಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ, 'ತನಿಖೆಯನ್ನು ಸಿಬಿಐಗೆ ವರ್ಗಾಯಿಸಬೇಕು. ತನಿಖೆಯನ್ನು ಹೊಸದಾಗಿ ಪುನರಾರಂಭಿಸಬೇಕು (ಡಿ ನೋವೊ ಇನ್ವೆಸ್ಟಿಗೇಷನ್) ಹಾಗೂ ತನಿಖೆ ಆರಂಭಿಸಿದ 3 ತಿಂಗಳ ಒಳಗೆ ಅಂತಿಮ ವರದಿಯನ್ನು ಸಲ್ಲಿಸಬೇಕು' ಎಂದು ಆದೇಶಿಸಿದೆ. ಅಂತೆಯೇ, 'ತನಿಖೆಗೆ ಅಗತ್ಯವಿರುವ ಎಲ್ಲ ಸಹಕಾರವನ್ನು ರಾಜ್ಯ ಪೊಲೀಸರು ಸಿಬಿಐಗೆ ನೀಡಬೇಕು' ಎಂದೂ ನಿರ್ದೇಶಿಸಿದೆ.

ಪ್ರಕರಣದಲ್ಲಿ ವಿಶೇಷ ಪ್ರಾಸಿಕ್ಯೂಟರ್ ಆಗಿ ನೇಮಕಗೊಂಡಿದ್ದ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ಅವರು, 'ಪ್ರಕರಣದಲ್ಲಿ ಸಿಐಡಿ ಹಾಗೂ ಶ್ರೀನಿವಾಸಪುರ ಪೊಲೀಸರು ಮುಚ್ಚಿಟ್ಟಿರುವ ಸತ್ಯವನ್ನು ಹೊರತೆಗೆದು, ಅರ್ಜಿದಾರರಿಗೆ ನ್ಯಾಯ ಒದಗಿಸಬೇಕಾದರೆ, ಮುಂದಿನ ತನಿಖೆಯನ್ನು ಸಿಬಿಐಗೆ ವಹಿಸುವುದೇ ಸೂಕ್ತ' ಎಂದು ಪ್ರತಿಪಾದಿಸಿದ್ದರು.

ಈ ವಾದಾಂಶ ನಡೆದ ಬೆನ್ನಲ್ಲೇ ಸರ್ಕಾರ ಸಿ.ಎಚ್.ಹನುಮಂತರಾಯ ಅವರ ವಿಶೇಷ ಪ್ರಾಸಿಕ್ಯೂಟರ್ ನೇಮಕಾತಿ ರದ್ದುಪಡಿಸಿ, ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಅವರು ಹಾಜರಾಗುವಂತೆ ಆದೇಶಿಸಿತ್ತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ.ಚೌಟ, 'ತನಿಖೆ ನಡೆಸಿದ್ದ ಶ್ರೀನಿವಾಸಪುರ ಪೊಲೀಸರು, ಮೊದಲ ದಿನದಿಂದಲೇ, ಉದ್ದೇಶಪೂರ್ವಕವಾದ ಅನೇಕ ಲೋಪಗಳನ್ನು ಎಸಗಿದ್ದಾರೆ. ಪ್ರಕರಣದ ಹಿಂದಿರುವ ಕಾಣದ ಕೈಗಳ ಬಗ್ಗೆ ಯಾವುದೇ ತನಿಖೆ ನಡೆಸದೆ, ಕೊಲೆಗೆ ಸಂಬಂಧಪಟ್ಟ ಎಲ್ಲ ಅಗತ್ಯ ಸಾಕ್ಷಿಗಳನ್ನು ನಾಶಪಡಿಸಲು ಪೂರಕವಾದ ತನಿಖೆ ನಡೆದಿದೆ' ಎಂದು ಆರೋಪಿಸಿದ್ದರು.

ಏತನ್ಮಧ್ಯೆ ಅರ್ಜಿದಾರರು, 'ಕೊಲೆಯ ಹಿಂದೆ ಪ್ರಮುಖ ರಾಜಕೀಯ ವ್ಯಕ್ತಿಗಳ ಕೈವಾಡ ಇದೆ' ಎಂದು ಆರೋಪಿಸಿ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ಇದರ ಮೇರೆಗೆ ಸರ್ಕಾರ ತನಿಖೆಯನ್ನು ಸಿಐಡಿಗೆ ವರ್ಗಾಯಿಸಿತ್ತು. 'ತನಿಖೆ ಕೈಗೆತ್ತಿಕೊಂಡಿದ್ದ ಸಿಐಡಿ, ಶ್ರೀನಿವಾಸಪುರ ಪೊಲೀಸ್ ಠಾಣೆಯ ತನಿಖಾಧಿಕಾರಿ ಅಲ್ಲಿಯವರೆಗೂ ನಡೆಸಿದ್ದ ತನಿಖೆಯ ಅಂಶಗಳನ್ನೇ ಅಡಕಗೊಳಿಸಿ 9 ಜನ ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದೆ' ಎಂದು ಅರ್ಜಿದಾರರು ವಿವರಿಸಿದ್ದರು.

ಜಿಲ್ಲೆಯ ಪರಿಶಿಷ್ಟ ಜಾತಿಯ ಪ್ರಭಾವಿ ಮುಖಂಡ ಎನಿಸಿದ್ದ ಎಂ.ಶ್ರೀನಿವಾಸ್ ಅವರ ಮೇಲೆ ಶ್ರೀನಿವಾಸಪುರ ಹೊರವಲಯದಲ್ಲಿ 2024ರ ಅಕ್ಟೋಬರ್ 23ರಂದು ದುಷ್ಕರ್ಮಿಗಳು ಮಚ್ಚಿನಿಂದ ಹಲ್ಲೆ ನಡೆಸಿ ಪರಾರಿಯಾಗಿದ್ದರು. ನಂತರ ಶ್ರೀನಿವಾಸ್ ಖಾಸಗಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದರು.

ಸಾಲ ವಸೂಲಿ ಸುಗ್ರೀವಾಜ್ಞೆ: ಎತ್ತಿಹಿಡಿದ ಹೈಕೋರ್ಟ್

ಬಲವಂತದ ಸಾಲ ವಸೂಲಿ ಮತ್ತು ಸಾಲಗಾರರಿಗೆ ಕಿರುಕುಳ ನೀಡುವುದನ್ನು ತಪ್ಪಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಅನುಷ್ಠಾನಗೊಳಿಸಿರುವ, 'ಕರ್ನಾಟಕ ಕಿರು ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ತಡೆ) ಸುಗ್ರೀವಾಜ್ಞೆ-2025, ಸಾಮಾಜಿಕ ನ್ಯಾಯದ ಬಸಿರ ಸೀಳಿ ಹೊರಬಂದಿರುವ ಶಾಸನ' ಎಂದು ಬಣ್ಣಿಸಿರುವ ಹೈಕೋರ್ಟ್ ಸರ್ಕಾರದ ನಿಲುವನ್ನು ಎತ್ತಿಹಿಡಿದಿದೆ.

ಈ ಕುರಿತಂತೆ, 'ಕರ್ನಾಟಕ ಹೈರ್ ಪರ್ಚೇಸಿಂಗ್ ಅಸೋಸಿಯೇಷನ್' ಕಾರ್ಯದರ್ಶಿ ವಿಜಯರಾಜ ಛಜ್ಜೇದ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪ್ರಕಟಿಸಿದ್ದು, ಅರ್ಜಿ ವಜಾಗೊಳಿಸಿ ಆದೇಶಿಸಿದೆ.

'ಈ ಪ್ರಕರಣದಲ್ಲಿ ಬಾಧಿತರು ಯಾರೂ ನ್ಯಾಯಾಲಯದ ಮುಂದೆ ಬಂದಿಲ್ಲ' ಎಂಬ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಮಂಡಿಸಿದ್ದ ವಾದವನ್ನು ಪುರಸ್ಕರಿಸಿರುವ ನ್ಯಾಯಪೀಠ, 'ಈ ಶಾಸನದಲ್ಲಿ ಯಾವುದೇ ಸಾಂವಿಧಾನಿಕ ಉಲ್ಲಂಘನೆ ಆಗಿದೆ ಎಂಬ ಅರ್ಜಿದಾರರ ವಾದವನ್ನು ಒಪ್ಪಲು ಆಗದು' ಎಂದು ಸ್ಪಷ್ಟಪಡಿಸಿದೆ.

ಭದ್ರತೆ ಕೋರಿ ಮಹೇಶ್ ಜೋಶಿ ಅರ್ಜಿ: ನೋಟಿಸ್

'ನನಗೆ ಜೀವ ಬೆದರಿಕೆ ಇದ್ದು ಕೂಡಲೇ ಸೂಕ್ತ ಪೊಲೀಸ್ ರಕ್ಷಣೆ ಒದಗಿಸಬೇಕು' ಎಂದು ಕೋರಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಮಹೇಶ್ ಜೋಶಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಸ್.ಬಸವರಾಜ್, 'ಮಹೇಶ್ ಜೋಶಿ ಅವರ ಜೀವಕ್ಕೆ ಅಪಾಯವಿದೆ. ಬೆದರಿಕೆ ಇರುವ ಹಿನ್ನೆಲೆಯಲ್ಲಿ ಅವರು ತಮ್ಮ ಕರ್ತವ್ಯವನ್ನು ಮುಕ್ತವಾಗಿ ನಿರ್ವಹಿಸಲು ತೊಂದರೆ ಆಗಿದೆ. ಆದ್ದರಿಂದ ಅವರಿಗೆ 24X7 ಭದ್ರತೆ ಒದಗಿಸುವ ಗನ್‌ಮೆನ್ ಜೊತೆಗೆ ಸೂಕ್ತ ಪೊಲೀಸ್ ರಕ್ಷಣೆ ಒದಗಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿದ್ದಾರೆ.

ವಾದ ಆಲಿಸಿದ ನ್ಯಾಯಪೀಠ ರಾಜ್ಯ ಪ್ರಾಸಿಕ್ಯೂಟರ್ ರಾಹುಲ್ ಕಾರ್ಯಪ್ಪ ಅವರಿಗೆ ನೋಟಿಸ್ ಪಡೆಯಲು ಆದೇಶಿಸಿ ವಿಚಾರಣೆಯನ್ನು ಇದೇ 20ಕ್ಕೆ ಮುಂದೂಡಿತು.

ನಗರದಲ್ಲಿ ಸೋಮವಾರ ಭಾರತಿ ಭಾಷಾ ಅಭಿಯಾನ ಆಯೋಜಿಸಿದ್ದ 'ನ್ಯಾಯಾಂಗದಲ್ಲಿ ಕನ್ನಡ ಅನುಷ್ಠಾನ' ಕಾರ್ಯಕ್ರಮದಲ್ಲಿ (ಎಡದಿಂದ) ಪದಾಂಕಿತ ಹಿರಿಯ ವಕೀಲ ಸಿ.ಆರ್‌. ಗೋಪಾಲಸ್ವಾಮಿ, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ವಿಧಾನ ಪರಿಷತ್ ಸದಸ್ಯ ಕೇಶವ ಪ್ರಸಾದ್, ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಆರ್‌. ದೇವದಾಸ್, ಹಿರಿಯ ನ್ಯಾಯಮೂರ್ತಿ ಕೃಷ್ಣ ಎಸ್‌. ದೀಕ್ಷಿತ್ ಮತ್ತು ಭಾರತಿ ಭಾಷಾ ಅಭಿಯಾನದ ರಾಷ್ಟ್ರೀಯ ಸಂಯೋಜಕ ವಿನೋದ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಕಲ್ಲು ಗಣಿಗಾರಿಕೆ; ಇಬ್ಬರಿಗೆ ಗಾಯ

ಕೋಲಾರ: ಕಲ್ಲು ಕುಸಿದು ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಮಾಲೂರು (ಕೋಲಾರ): ತಾಲ್ಲೂಕಿನ ಟೇಕಲ್ ಹೋಬಳಿ ಮಾಕಾರಹಳ್ಳಿಯಲ್ಲಿ ಸೋಮವಾರ ಕಲ್ಲು ಗಣಿಗಾರಿಕೆ ವೇಳೆ ಕಲ್ಲು ಕುಸಿದು ವ್ಯಕ್ತಿಯೊಬ್ಬರು ಮೃತಪಟ್ಟಿದ್ದು, ಇಬ್ಬರು ಗಾಯಗೊಂಡಿದ್ದಾರೆ.

ವೆಂಕಟೇಶ್

ಕಲ್ಲು ಕ್ವಾರಿಯಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದ ಕಾರ್ಮಿಕ ಆಂಧ್ರ ಪ್ರದೇಶದ ವೆಂಕಟೇಶ್ (65) ಮೃತ ವ್ಯಕ್ತಿ. ಮಧ್ಯಪ್ರದೇಶದ ಈಶ್ವರ್ (36) ಹಾಗೂ ತಮಿಳುನಾಡಿನ ಹರೀಶ್ (32) ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಕೋಲಾರದ ಜಾಲಪ್ಪ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಬೆಳಗ್ಗೆ 8 ಗಂಟೆ ಸುಮಾರಿಗೆ ಬಂಡೆಕಲ್ಲು ಸ್ಫೋಟ ಮಾಡಲು ಡ್ರಿಲ್ಲಿಂಗ್ ಯಂತ್ರದ ಮೂಲಕ ಕೊರೆಯುವಾಗ ಕಲ್ಲುಗಳು ಕುಸಿದು ಬಿದ್ದಿವೆ. ಬಂಡೆ ಕೆಳಗಡೆ ಇದ್ದ ವೆಂಕಟೇಶ್ ಕಲ್ಲಿನಡಿ ಸಿಲುಕಿ ಸಾವನ್ನಪ್ಪಿದ್ದಾರೆ. ಪ್ರಕರಣ ದಾಖಲಾಗಿದೆ.

ಮಾಲೂರು ತಾಲ್ಲೂಕಿನ ಟೇಕಲ್ ಹೋಬಳಿ ಮಾಕಾರಹಳ್ಳಿ ಬಳಿ ಕಲ್ಲು ಕ್ವಾರಿಯಲ್ಲಿ ಕಲ್ಲುಗಳು ಕುಸಿದಿರುವುದು

ಸಮಗ್ರ ವರದಿಗೆ ಸೂಚನೆ

ಕಲ್ಲು ಸ್ಫೋಟ ಮಾಡಲು ಡ್ರಿಲ್ಲಿಂಗ್ ಮಾಡುತ್ತಿದ್ದರು. ಜಾಗ ಪರಿಶೀಲಿಸಿದಾಗ ಯಾವುದೇ ಸ್ಫೋಟಕ ಬಳಸಿರುವುದು ಪತ್ತೆಯಾಗಿಲ್ಲ. ಪ್ರಕರಣ ಕುರಿತು ಇನ್‌ಸ್ಪೆಕ್ಟರ್ ಹಂತದ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಗಣಿ ಮತ್ತು ಭೂವಿಜ್ಞಾನ ಇಲಾಖೆಗೂ ನೋಟಿಸ್ ನೀಡಿ ಘಟನೆ ಬಗ್ಗೆ ಸಮಗ್ರ ವರದಿ ಕೇಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ. ತಿಳಿಸಿದರು.

ಕಲಾಗ್ರಾಮದಲ್ಲಿ 'ಸೂರ್ಯ ಕಲೋತ್ಸವ–2025'

'ಕಲೆ, ಸಂಸ್ಕೃತಿ ಸೇವೆ ವಿಸ್ತರಿಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಂಗಭೂಮಿ ಎಂಬುದು ನಟನೆಯ ಬೇರು. ಇಂಥ ನಾಟಕ, ಕಾರ್ಯಕ್ರಮಗಳ ಮೂಲಕ ಆ ಬೇರುಗಳನ್ನು ಗಟ್ಟಿಗೊಳಿಸಬೇಕು. ಕಲೆಯನ್ನು ಹೆಮ್ಮರವಾಗಿ ಬೆಳೆಸಬೇಕು' ಎಂದು ಸಂತ ಕವಿ ಕನಕದಾಸರು ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ ಸಲಹೆ ನೀಡಿದರು.

ನಗರದ ಮಲ್ಲತ್ತಹಳ್ಳಿಯಲ್ಲಿರುವ ಕಲಾಗ್ರಾಮದ ಬಯಲು ರಂಗಮಂದಿರದಲ್ಲಿ ಬೆಂಗಳೂರಿನ ಸೂರ್ಯ ಕಲಾವಿದರು ಆಯೋಜಿಸಿದ್ದ 'ಸೂರ್ಯ ಕಲೋತ್ಸವ 2025' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸೂರ್ಯ ಕಲಾವಿದರ ತಂಡ ಸುದೀರ್ಘವಾಗಿ ಕಲಾ ಬೇರುಗಳಿಗೆ ನೀರೆರೆಯುತ್ತಾ, ಬೆಳೆಸುತ್ತಾ ಬಂದಿದೆ. ಸಂಸ್ಥೆಯ ಕಲೆ, ಸಂಸ್ಕೃತಿ ಸೇವೆ ನಿರಂತರವಾಗಿರಲಿ' ಎಂದು ಹಾರೈಸಿದರು.

'ಲಾಕ್ ಔಟ್ ಅಲ್ಲ ನಾಕ್ ಔಟ್' ನಾಟಕ ಪ್ರದರ್ಶನದ ಒಂದು ದೃಶ್ಯ

ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಮಾತನಾಡಿ, 'ನಾಟಕದ ಹವ್ಯಾಸಗಳು ಮತ್ತು ಅದನ್ನು ಪ್ರೋತ್ಸಾಹಿಸುವರ ಸಂಖ್ಯೆ ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ಸೂರ್ಯ ಕಲಾವಿದರ ತಂಡ, ಐದು ದಶಕಗಳಿಂದ ನಾಟಕ ಪರಂಪರೆಯನ್ನು ಮುಂದುವರಿಸುತ್ತಿರುವುದು ಶ್ಲಾಘನೀಯ. ಇದು ಇನ್ನಷ್ಟು ವಿಸ್ತರಿಸಲಿ' ಎಂದು ಹಾರೈಸಿದರು.

ಸೂರ್ಯ ಕಲಾವಿದರ ಸಂಸ್ಥೆ ಸಂಸ್ಥಾಪಕ ಸಂಜಯ್ ಸೂರಿ, ಸಂಸ್ಥೆಯ ಕಲಾ ಚಟುವಟಿಕೆ ಮತ್ತು ತಮ್ಮ ಕುಟುಂಬದ ಕಲಾ ಸೇವೆಯನ್ನು ವಿವರಿಸಿದರು.

ಹಾಸ್ಯ ಬರಹಗಾರರ ಎಂ.ಎಸ್. ನರಸಿಂಹಮೂರ್ತಿ ರಚನೆಯ, ಕಿರುತೆರೆ ನಟ ವಿಕ್ರಂ ಸೂರಿ ನಿರ್ದೇಶಿಸಿ ಅಭಿನಯಿಸಿದ 'ಲಾಕ್ ಔಟ್ ಅಲ್ಲ ನಾಕ್ ಔಟ್' ಎಂಬ ಹಾಸ್ಯಮಯ ನಾಟಕವನ್ನು ಪ್ರದರ್ಶಿಸಲಾಯಿತು. ವಿಕ್ರಂ ಸೂರಿ ಅವರಪತ್ನಿನಟಿನಮಿತಾರಾವ್,ಕಲಾವಿದರಾದ ಪ್ರೊ. ಯೋಗೇಶ್ ಎ.ಎಚ್. ರಮೇಶ್ ಗುರುರಾಜ್ ರಾವ್, ಕಾವ್ಯಾ ಜಿ.ರಾವ್, ಚೇತನ್ ಕುಮಾರ್ ಮತ್ತು ಗುರು ನಾಟಕದಲ್ಲಿ ಅಭಿನಯಿಸಿದ್ದರು.

ರಸಗೊಬ್ಬರ ಅಕ್ರಮ ಸಾಗಣೆ: ಲಾರಿ ವಶ

ಪ್ರಜಾವಾಣಿ ವಾರ್ತೆ

ಕೋಲಾರ: ₹13.16 ಲಕ್ಷ ಮೌಲ್ಯದ 720 ಚೀಲ ಬೇವು ಲೇಪಿತ ಯೂರಿಯಾ ರಸಗೊಬ್ಬರವನ್ನು ನಕಲಿ ದಾಖಲೆ ಸೃಷ್ಟಿಸಿ ಕಾರ್ಖಾನೆಗಳಲ್ಲಿ ಬಳಸಲು ಬಳ್ಳಾರಿ ಜಿಲ್ಲೆಯಿಂದ ಅಕ್ರಮವಾಗಿ ಸಾಗಿಸುತ್ತಿದ್ದ ಲಾರಿಯನ್ನು ಮಾಲೂರು-ಹೊಸಕೋಟೆ ರಸ್ತೆ ಚೊಕ್ಕಂಡಹಳ್ಳಿ ಗ್ರಾಮದ ಬಳಿ ಜಪ್ತಿ ಮಾಡಲಾಗಿದೆ.

ರಸಗೊಬ್ಬರ ನಿಯಂತ್ರಣ ಆದೇಶ ಹಾಗೂ ಅಗತ್ಯ ವಸ್ತುಗಳ ಅಧಿನಿಯಮದಡಿ ಮಾಲೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ದಾಳಿಯಲ್ಲಿ ವಾಣಿಜ್ಯ ತೆರಿಗೆ ಡೆಪ್ಯುಟಿ ಕಮಿಷನರ್ ರಘುನಾಥಗೌಡ, ಜಂಟಿ ಕೃಷಿ ನಿರ್ದೇಶಕಿ ಎಂ.ಆರ್. ಸುಮಾ, ಕೋಲಾರದ ಸಹಾಯಕ ಕಮಿಷನರ್ ದಯಾನಂದ್, ವಾಣಿಜ್ಯ ತೆರಿಗೆ ಅಧಿಕಾರಿ(ಜಾರಿ-2) ಜೀವನ್ ಮತ್ತು ಸಹಾಯಕ ಕೃಷಿ ನಿರ್ದೇಶಕ (ಜಾರಿದಳ) ಮುರಳೀಧರ.ಎಂ ಪಾಲ್ಗೊಂಡಿದ್ದರು.

ಹಾಳಾದ ರಸ್ತೆ, ಜಲ್ಲಿಕಲ್ಲುಗಳ ಮೇಲೆ ಸವಾರರ ಹರಸಾಹಸ

ಎನ್‌ಎಂಎಚ್ ಬಡಾವಣೆ: ಸಂಚಾರ ದುಸ್ತರ

• ಪ್ರಸನ್ನ ಕುಮಾರ್ ಯಾದವ್

ಪೀಣ್ಯ ದಾಸರಹಳ್ಳಿ: ಹಾಳಾದ ರಸ್ತೆ, ಹರಡಿದ ಜಲ್ಲಿಕಲ್ಲುಗಳ ಮೇಲೆ ಸವಾರರು ಹರಸಾಹಸ ಪಟ್ಟು ವಾಹನ ಚಲಾಯಿಸುತ್ತಾರೆ. ಹಿರಿಯರು ಓಡಾಡಲು ಕಷ್ಟಪಡುತ್ತಾರೆ. ಆಟೊ, ಟ್ಯಾಕ್ಸಿಗಳವರು ಈ ರಸ್ತೆಗಳಲ್ಲಿರುವ ಮನೆಗಳಿಗೆ ಬರಲು ಹಿಂದೇಟು ಹಾಕುತ್ತಾರೆ...!

ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಾಗಲಗುಂಟೆ ವಾರ್ಡ್‌ನಲ್ಲಿರುವ ಎನ್‌ಎಂಎಚ್ ಬಡಾವಣೆಯ ಒಂದರಿಂದ ನಾಲ್ಕನೇ ಅಡ್ಡರಸ್ತೆಗಳ ದುಸ್ಥಿತಿ ಇದು.

ಕಾವೇರಿ ನೀರು ಪೂರೈಕೆಯ ಕೊಳವೆ ಹಾಕಲು ರಸ್ತೆಗಳನ್ನು ಅಗೆದು ಹಾಗೆ ಬಿಡಲಾಗಿದೆ. ರಸ್ತೆಗಳು ಗುಂಡಿಬಿದ್ದಿವೆ. ಜಲ್ಲಿಕಲ್ಲುಗಳು ರಸ್ತೆಯಲ್ಲಿ ಹರಡಿದೆ. ಮ್ಯಾನ್‌ಹೋಲ್‌ಗಳು ರಸ್ತೆಯ ಮೇಲೆ ಉಬ್ಬಿಕೊಂಡಿವೆ. ವಾಹನ ಸವಾರರು ಬಿದ್ದಿರುವ ಉದಾಹರಣೆಗಳಿವೆ. ಮಹಿಳೆಯರು, ಮಕ್ಕಳು ಓಡಾಡಲು ಕಷ್ಟವಾಗಿದೆ' ಎಂದು ಎನ್‌ಎಂಎಚ್ ಬಡಾವಣೆಯ ನಿವಾಸಿ ಸಂಜೀವ್ ಕುಮಾರ್ ಹೇಳಿದರು.

'ಮೂರ್ನಾಲ್ಕು ವರ್ಷಗಳಿಂದ ಈ ರಸ್ತೆಯ ಪರಿಸ್ಥಿತಿ ಹೀಗೆಯೇ ಇದೆ. ರಸ್ತೆ ದುರಸ್ತಿಗೊಳಿಸಲು ಹಲವು ಬಾರಿ ಅಧಿಕಾರಿಗಳಿಗೆ ಕೋರಿದ್ದೇವೆ. ಅಕ್ಕಪಕ್ಕದ ಬಡಾವಣೆಗಳ ರಸ್ತೆಗಳಿಗೆ ಡಾಂಬರ್ ಹಾಕಿದ್ದು, ಈ ರಸ್ತೆಗಳತ್ತ ಗಮನಹರಿಸಿಲ್ಲ' ಎಂದು ಆಕ್ಷೇಪಿಸಿದರು.

'ಬಡಾವಣೆಗಳ ರಸ್ತೆಗಳು ಗುಂಡಿ ಬಿದ್ದು ಹಾಳಾಗಿದೆ. ಹೀನಾಯ ಸ್ಥಿತಿಯಲ್ಲಿ ವಾಸ ಮಾಡುತ್ತಿದ್ದೇವೆ' ಎಂದು ನಿವಾಸಿ ಕೆಂಪೇಗೌಡ ಬೇಸರ ವ್ಯಕ್ತಪಡಿಸಿದರು.

'ಎನ್‌ಎಂಎಚ್ ಬಡಾವಣೆಯ ರಸ್ತೆಗಳ ಸ್ಥಿತಿ ಗಮನಕ್ಕೆ ಬಂದಿದೆ. ಮುಂದಿನ ವಾರದಲ್ಲೇ ಈ ಬಡಾವಣೆಯ ರಸ್ತೆಗಳನ್ನೂ ಡಾಂಬರೀಕರಣ ಮಾಡಲಾಗುತ್ತದೆ' ಎಂದು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮಂಜೇಗೌಡ ಅವರು ತಿಳಿಸಿದ್ದಾರೆ.

ಎನ್‌ಎಂಎಚ್ ಬಡಾವಣೆಯ ರಸ್ತೆಯ ದುಸ್ಥಿತಿ

ಮುಖ್ಯಾಂಶಗಳು

- ಹದಗೆಟ್ಟ ರಸ್ತೆಗಳು, ಸ್ಥಳೀಯರ ಆಕ್ರೋಶ
- ನೀರು ಪೂರೈಕೆಗಾಗಿ ರಸ್ತೆ ಅಗೆದ ಜಲಮಂಡಳಿ
- ರಸ್ತೆಗಳತ್ತ ಗಮನಹರಿಸದಿರುವುದಕ್ಕೆ ನಿವಾಸಿಗಳ ಅಸಮಾಧಾನ

ರಾಮನಗರದಲ್ಲಿ ಸೋಮವಾರ ಮಳೆ ಸುರಿಯಿತು

ರಾಮನಗರ, ಮೈಸೂರಿನ ವಿವಿಧೆಡೆ ತಂಪೆರೆದ ಮಳೆ

ಪ್ರಜಾವಾಣಿ ವಾರ್ತೆ

ರಾಮನಗರ/ ಮೈಸೂರು: ರಾಮನಗರ ಜಿಲ್ಲೆ ಮತ್ತು ಮೈಸೂರು ಜಿಲ್ಲೆಯ ವಿವಿಧೆಡೆ ಸೋಮವಾರ ಮಳೆಯಾಗಿದೆ. ರಾಮನಗರಲ್ಲಿ ಸೋಮವಾರ ಮಧ್ಯಾಹ್ನ ಧಾರಾಕಾರ ಮಳೆ ಸುರಿಯಿತು. ಕನಕಪುರ ತಾಲ್ಲೂಕಿನ ವಿವಿಧೆಡೆ ಸುಮಾರು ಅರ್ಧ ತಾಸು ಸಾಧಾರಣ ಮಳೆಯಾದರೆ, ಚನ್ನಪಟ್ಟಣದಲ್ಲಿ ಕೆಲವೇ ಕ್ಷಣ ತುಂತುರು ಮಳೆ ಆಗಿದೆ.

ರಾಮನಗರದಲ್ಲಿ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ನಡೆಯುತ್ತಿರುವ ಅನಿಲ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಹಾಗೂ ನಗರಸಭೆ ವತಿಯಿಂದ ನಡೆಯುತ್ತಿರುವ ಚರಂಡಿ ಸ್ವಚ್ಛತೆ ಕೆಲಸಕ್ಕೆ ಮಳೆಯಿಂದಾಗಿ ಅಡ್ಡಿಯಾಯಿತು. ಈಗಾಗಲೇ ಹೂ ಬಿಟ್ಟು ಕಾಯಿ ಕಟ್ಟುತ್ತಿರುವ ಮಾವು ಬೆಳೆಗೆ ಅಕಾಲಿಕ ಮಳೆಯಿಂದಾಗಿ ಯಾವುದೇ ತೊಂದರೆ ಇಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮೈಸೂರು ಜಿಲ್ಲೆಯ ವಿವಿಧೆಡೆ ಸೋಮವಾರ ಮಧ್ಯಾಹ್ನ ಗುಡುಗು–ಸಿಡಿಲು ಸಹಿತ ಸಾಧಾರಣ ಮಳೆ ಸುರಿದು ತಂಪೆರೆಯಿತು. ಹುಣಸೂರು ನಗರ ಸೇರಿದಂತೆ ಸುತ್ತಲಿನ ಗ್ರಾಮಗಳಲ್ಲಿ ಈ ವರ್ಷದ ಮೊದಲ ಮಳೆ ಬಿದ್ದಿತು. ಸಾರ್ವಜನಿಕರಲ್ಲಿ ಹರ್ಷ ಮೂಡಿಸಿತು. ಕೊಡಗಿನ ಶ್ರೀಮಂಗಲದಲ್ಲಿ ಆಲಿಕಲ್ಲು ಸಹಿತ ಮಳೆಯಾಗಿದೆ.

ಬಾಳೆಗೆ ಹಾನಿ: ಎಚ್‌.ಡಿ. ಕೋಟೆ ತಾಲ್ಲೂಕಿನ ವಿವಿಧೆಡೆ ಭಾನುವಾರ ರಾತ್ರಿ ಬೀಸಿದ ಬಿರುಗಾಳಿಯಿಂದ ಬಾಳೆ ಬೆಳೆಗೆ ಹಾನಿಯಾಗಿದೆ. ತಾಲ್ಲೂಕಿನ ನಾಗನಹಳ್ಳಿಯ ರೈತ ಬಾಲರಾಜ್, ಕಟ್ಟೇಮನುಗನಹಳ್ಳಿಯ ನಾಗರಾಜು ಅವರ ಜಮೀನಿನಲ್ಲಿ ಬೆಳೆದಿದ್ದ ಬಾಳೆಗಿಡಗಳು ಗೊನೆಗಳ ಸಮೇತ ಮುರಿದುಬಿದ್ದಿವೆ.

ಮಂಡ್ಯ ಜಿಲ್ಲೆಯ ಭಾರತೀನಗರ, ಮಳವಳ್ಳಿ ತಾಲ್ಲೂಕಿನ ಹಲಗೂರು ಸುತ್ತಮುತ್ತಲಿನ ಗ್ರಾಮಗಳಲ್ಲಿ ಕೆಲಕಾಲ ತುಂತುರು ಮಳೆ ಆಗಿದೆ.

ಕೆಪಿಎಸ್‌ಸಿ ಪೂರ್ವಭಾವಿ ಮರು ಪರೀಕ್ಷೆಗೆ ₹13.24 ಕೋಟಿ ವೆಚ್ಚ

ಲೋಪಕ್ಕೆ ‘ಕೃಪಾಂಕ’: ಕೆಪಿಎಸ್‌ಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳಿಗೆ ನೇಮಕಾತಿಗೆ ಡಿ. 29ರಂದು ನಡೆದಿದ್ದ ಪೂರ್ವಭಾವಿ ಮರು ಪರೀಕ್ಷೆಗೆ ಸಂಬಂಧಿಸಿದಂತೆ ವಿಷಯ ತಜ್ಞರ ಸಮಿತಿ ನೀಡಿರುವ ವರದಿಯನ್ನು ಪರಿಗಣಿಸಿ ಭಾಷಾಂತರ ಮತ್ತು ತಾಂತ್ರಿಕ ದೋಷದ ಕಾರಣಕ್ಕೆ 5 ಪ್ರಶ್ನೆಗಳಿಗೆ ಕೃಪಾಂಕ ನೀಡಲಾಗಿದೆ. ಒಂದು ಪ್ರಶ್ನೆಯ ಸರಿ ಉತ್ತರವನ್ನು ಪರಿಷ್ಕರಿಸಲಾಗಿದೆ ಎಂದು ಕೆಪಿಎಸ್‌ಸಿ ತಿಳಿಸಿದೆ.

2024ರ ಆಗಸ್ಟ್ 27ರಂದು ನಡೆದಿದ್ದ ಪೂರ್ವಭಾವಿ ಪರೀಕ್ಷೆಯಲ್ಲಿ ಭಾಷಾಂತರ ದೋಷ ಕಾಣಿಸಿಕೊಂಡಿದೆ ಎಂದು ಅಭ್ಯರ್ಥಿಗಳು ಮತ್ತು ಕನ್ನಡಪರ ಸಂಘಟನೆಗಳು ಪ್ರತಿಭಟನೆ ನಡೆಸಿದ ಕಾರಣ ಕೆಪಿಎಸ್‌ಸಿ ಮರು ಪರೀಕ್ಷೆ ನಡೆಸಿತ್ತು.

‘ಮರು ಪರೀಕ್ಷೆಯಲ್ಲೂ ಭಾಷಾಂತರ ಲೋಪ ಉಂಟಾಗಿದ್ದು, ಕನ್ನಡಿಗ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ. ಹೀಗಾಗಿ, ಮತ್ತೆ ಮರು ಪರೀಕ್ಷೆ ನಡೆಸಬೇಕು ಅಥವಾ ಹೊಸತಾಗಿ ಅಧಿಸೂಚನೆ ಹೊರಡಿಸಬೇಕು’ ಎಂಬ ಕೂಗಿನ ಮಧ್ಯೆಯೇ ಕೆಪಿಎಸ್‌ಸಿ ತಜ್ಞರ ವರದಿಯಲ್ಲಿರುವ ಮಾಹಿತಿಯನ್ನು ನೀಡಿದೆ.

ಡಿ. 29ರಂದು ನಡೆದ ಮರು ಪರೀಕ್ಷೆಯ ಪ್ರಶ್ನೆಪತ್ರಿಕೆ ಒಂದರಲ್ಲಿ 32, ಪ್ರಶ್ನೆಪತ್ರಿಕೆ 2ರಲ್ಲಿ 29 ಹೀಗೆ ಒಟ್ಟು 61 ಪ್ರಶ್ನೆಗಳಲ್ಲಿ ಕನ್ನಡ ಭಾಷಾಂತರ ಲೋಪ ಆಗಿದೆ ಎಂದು ಅಭ್ಯರ್ಥಿಗಳು ಮತ್ತು ಕೆಲವು ಸಂಘಸಂಸ್ಥೆಗಳು ಕೆಪಿಎಸ್‌ಸಿಗೆ ದೂರು ಸಲ್ಲಿಸಿದ್ದವು. ಈ ಕುರಿತು ಪರಿಶೀಲಿಸಲು ಮೂವರು ವಿಷಯ ತಜ್ಞರುಗಳ ಸಮಿತಿಗಳನ್ನು ಕೆಪಿಎಸ್‌ಸಿ ರಚಿಸಿತ್ತು.

‘ಈ ಸಮಿತಿಯು ಭಾಷಾಂತರ ಮತ್ತು ತಾಂತ್ರಿಕ ದೋಷದಿಂದಾಗಿ ಕೆಲವು ಪ್ರಶ್ನೆಗಳಿಗೆ ಕೃಪಾಂಕ ನೀಡಬೇಕು ಹಾಗೂ ಕೆಲವು ಪ್ರಶ್ನೆಗಳ ಸರಿ ಉತ್ತರವನ್ನು ಪರಿಷ್ಕರಿಸಬೇಕು. ಕೆಲವು ಪ್ರಶ್ನೆಗಳಲ್ಲಿ ವ್ಯತ್ಯಾಸ ಇದ್ದರೂ ಪ್ರಶ್ನೆಯನ್ನು ಅರ್ಥೈಸಿ ಕೊಳ್ಳಬಹುದು. ಕೆಲವು ಪ್ರಶ್ನೆಗಳಲ್ಲಿ ಕಾಗುಣಿತಾಕ್ಷರಗಳ ಮುದ್ರಣ ದೋಷ ಆಗಿದೆ. ಉಳಿದ ಪ್ರಶ್ನೆಗಳಲ್ಲಿ ಯಾವುದೇ ಭಾಷಾಂತರ ಲೋಪ ಆಗಿಲ್ಲ ಎಂದು ಅಭಿಪ್ರಾಯ ನೀಡಿದೆ. ಪತ್ರಿಕೆ 1ರಲ್ಲಿ ಭಾಷಾಂತರ ದೋಷದಿಂದಾಗಿ ಎರಡು ಪ್ರಶ್ನೆಗಳಿಗೆ ಕೃಪಾಂಕ, ಇನ್ನೊಂದು ಪ್ರಶ್ನೆಗಳಿಗೆ 2 ಅಥವಾ 3 ಅಥವಾ 4ನ್ನು ಸರಿ ಉತ್ತರವಾಗಿ ಪರಿಗಣಿಸಬೇಕು, ಒಂದು ಪ್ರಶ್ನೆಗೆ ತಾಂತ್ರಿಕ ದೋಷದ ಕಾರಣಕ್ಕೆ ಕೃಪಾಂಕ ನೀಡಬೇಕು, ಪತ್ರಿಕೆ 2ರಲ್ಲಿ ತಾಂತ್ರಿಕ ದೋಷದ ಕಾರಣಕ್ಕೆ ಎರಡು ಪ್ರಶ್ನೆಗಳಿಗೆ ಕೃಪಾಂಕ ನೀಡುವಂತೆ ಸಮಿತಿ ಅಭಿಪ್ರಾಯ ನೀಡಿದೆ’ ಎಂದು ಕೆಪಿಎಸ್‌ಸಿ ತಿಳಿಸಿದೆ.

ಪೂರ್ವಭಾವಿ ಪರೀಕ್ಷೆಯಿಂದ 1:15 ಅನುಪಾತದಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳ ನೋಂದಣಿ ಸಂಖ್ಯೆಯನ್ನು ಈಗಾಗಲೇ ಪ್ರಕಟಿಸಲಾಗಿದೆ. ಆದರೆ, ಕಟ್ ಆಫ್ ಅಂಕ ಪ್ರಕಟಿಸಿಲ್ಲ. ಈ ವಿಚಾರದಲ್ಲಿ ಕೇಂದ್ರ ಲೋಕಸೇವಾ ಆಯೋಗದ ಮಾದರಿಯನ್ನು ಅನುಸರಿಸಲಾಗುತ್ತದೆ ಎಂದೂ ಕೆಪಿಎಸ್‌ಸಿ ತಿಳಿಸಿದೆ.

ಕನ್ನಡ ಭಾಷಾಂತರದಲ್ಲಿ ಉಂಟಾಗಿರುವ ಲೋಪಕ್ಕೆ ಸಂಬಂಧಿಸಿದಂತೆ ಮುಖ್ಯ ಕಾರ್ಯದರ್ಶಿ ಜ. 23ರಂದು ಸಭೆ ನಡೆಸಿದ್ದು, ಈ ಸಭೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕೆಪಿಎಸ್‌ಸಿ ಸಹಯೋಗದಲ್ಲಿ ಒಂದು ಕನ್ನಡ ಭಾಷಾ ತಜ್ಞರ ತಂಡ ರಚಿಸುವ ಕುರಿತು ಪರಿಶೀಲಿಸಲಾಗುತ್ತಿದೆ ಎಂದೂ ಕೆಪಿಎಸ್‌ಸಿ ಹೇಳಿದೆ.

₹3.74 ಕೋಟಿ ಶುಲ್ಕ ಸಂಗ್ರಹ: 384 ಹುದ್ದೆಗಳಿಗೆ ಒಟ್ಟು 2,10,916 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಅರ್ಜಿ ಶುಲ್ಕವಾಗಿ ₹3,74,48,450 ಸಂಗ್ರಹವಾಗಿದೆ. ಡಿ. 29ರಂದು ಬೆಳಿಗ್ಗೆ ನಡೆದ ಪತ್ರಿಕೆ–1 ಪರೀಕ್ಷೆಗೆ 10,00,990 ಅಭ್ಯರ್ಥಿಗಳು, ಮಧ್ಯಾಹ್ನ ನಡೆದ ಪತ್ರಿಕೆ– 2 ಪರೀಕ್ಷೆಗೆ 1,00,452 ಅಭ್ಯರ್ಥಿಗಳು ಹಾಜರಾಗಿದ್ದರು.

ಆಗಸ್ಟ್ 27ರಂದು ನಡೆದಿದ್ದ ಪೂರ್ವಭಾವಿ ಪರೀಕ್ಷೆಗೆ ₹13.40 ಕೋಟಿ ವೆಚ್ಚವಾಗಿತ್ತು. ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರಿಸಿದ ಪ್ರಶ್ನೆ–ಉತ್ತರಗಳಲ್ಲಿ ತಪ್ಪುಗಳು ಕಾಣಿಸಿಕೊಂಡ ಕಾರಣಕ್ಕೆ ಆ ಪರೀಕ್ಷೆಯನ್ನು ರದ್ದುಪಡಿಸಿದ್ದ ಕೆಪಿಎಸ್‌ಸಿ, ಮರು ಪೂರ್ವಭಾವಿ ಪರೀಕ್ಷೆ ನಡೆಸಿತ್ತು. ಮರು ಪರೀಕ್ಷೆಗೆ ₹13.24 ಕೋಟಿ ವೆಚ್ಚವಾಗಿದೆ ಎಂದೂ ಕೆಪಿಎಸ್‌ಸಿ ಮಾಹಿತಿ ನೀಡಿದೆ.

ಡಿ. 29ರಂದು ನಡೆದ ಪೂರ್ವಭಾವಿ ಮರು ಪರೀಕ್ಷೆಗೆ ವೆಚ್ಚ

ವಿವರ	ವೆಚ್ಚ (₹ಗಳಲ್ಲಿ)
29 ಜಿಲ್ಲೆಗಳ ಅಧಿಕಾರಿ, ಸಿಬ್ಬಂದಿಗೆ ಸಂಭಾವನೆ	47,62,600
553 ಪರೀಕ್ಷಾ ಕೇಂದ್ರಗಳಿಗೆ ಸಂಭಾವನೆ	4,17,60,336
ಸ್ಥಳೀಯ ನಿರೀಕ್ಷಣಾಧಿಕಾರಿಗಳಿಗೆ ಸಂಭಾವನೆ	1,27,200
ಪ್ರಶ್ನೆಪತ್ರಿಕೆ, ಒಎಂಆರ್, ನಾಮಿನಲ್ ಹಾಳೆಗಳ ಮುದ್ರಣ	3,85,57,794
ಜಾಮರ್ ಅಳವಡಿಸುವ ಕಾರ್ಯಕ್ಕೆ	1,04,52,997
ಫ್ರಿಸ್ಕಿಂಗ್	1,05,45,800
ಫೇಸ್ ರೆಕಗ್ನಿಷನ್	97,02,136
ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಲು	1,52,59,422
ಲಘು ವಾಹನಗಳ ಬಾಡಿಗೆ	5,04,209
ಕೊರಿಯರ್ ಸೇವೆಯ ವೆಚ್ಚ	3,36,949
ನಮೂನೆಗಳು ಮತ್ತು ಪರೀಕ್ಷಾ ಕೈಪಿಡಿ ಮುದ್ರಣ ವೆಚ್ಚ	4,40,942
ಒಟ್ಟು	13,24,50,385

ಸುದ್ದಿ 2 ನಿಮಿಷ

ನಿಲ್ದಾಣ ಅಭಿವೃದ್ಧಿ: ಕೆಲ ರೈಲು ರದ್ದು

ಬೆಂಗಳೂರು: ಯಶವಂತಪುರ ರೈಲು ನಿಲ್ದಾಣದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳಿಗಾಗಿ ಕೆಲವು ರೈಲುಗಳ ಸಂಚಾರವನ್ನು ತಾತ್ಕಾಲಿಕವಾಗಿ ರದ್ದು ಮಾಡಲು, ಇನ್ನು ಕೆಲವು ರೈಲುಗಳ ಸಂಚಾರ ಮಾರ್ಗ ಹಾಗೂ ಟರ್ಮಿನಲ್ ಬದಲಾಯಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಏಪ್ರಿಲ್ 4ರಂದು ಯಶವಂತಪುರ-ಎಂಜಿಆರ್ ಚೆನ್ನೈ ಸೆಂಟ್ರಲ್ ಎಕ್ಸ್‌ಪ್ರೆಸ್, ಏ.5ರಂದು ಎಂಜಿಆರ್ ಚೆನ್ನೈ ಸೆಂಟ್ರಲ್-ಯಶವಂತಪುರ ಎಕ್ಸ್‌ಪ್ರೆಸ್, ಏ.4ರಂದು ಯಶವಂತಪುರ-ಪುದುಚೇರಿ ಎಕ್ಸ್‌ಪ್ರೆಸ್, ಏ.5ರಂದು ಪುದುಚೇರಿ-ಯಶವಂತಪುರ ಎಕ್ಸ್‌ಪ್ರೆಸ್, ಯಶವಂತಪುರ-ಬೀದರ್ ಎಕ್ಸ್‌ಪ್ರೆಸ್, ಏ.6ರಂದು ಬೀದರ್-ಯಶವಂತಪುರ ಎಕ್ಸ್‌ಪ್ರೆಸ್, ಏ.3 ಮತ್ತು 10ರಂದು ಯಶವಂತಪುರ-ಪಂಡರಾಪುರ ಎಕ್ಸ್‌ಪ್ರೆಸ್, ಏ.4 ಮತ್ತು 11ರಂದು ಪಂಡರಾಪುರ-ಯಶವಂತಪುರ ಎಕ್ಸ್‌ಪ್ರೆಸ್ ರೈಲುಗಳ ಸಂಚಾರ ರದ್ದಾಗಲಿದೆ.

ಕೆಎಸ್‌ಆರ್ ಬೆಂಗಳೂರು-ಕಣ್ಣೂರು-ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್ ರೈಲುಗಳ ಟರ್ಮಿನಲ್ ಮತ್ತು ಮಾರ್ಗದಲ್ಲಿ ತಾತ್ಕಾಲಿಕ ಬದಲಾವಣೆ ಮಾಡಲಾಗಿದೆ. ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ರಾತ್ರಿ 8ಕ್ಕೆ ಹೊರಟು, ಬಾಣಸವಾಡಿ, ಹೆಬ್ಬಾಳ ಮತ್ತು ಚಿಕ್ಕಬಾಣಾವರ ಮಾರ್ಗದ ಮೂಲಕ ಸಂಚರಿಸಲಿದೆ. ಕಣ್ಣೂರಿನಿಂದ ಬರುವ ರೈಲು ನಗರದಲ್ಲಿ ಇದೇ ಮಾರ್ಗದ ಮೂಲಕ ಬೆಳಿಗ್ಗೆ 7.45ಕ್ಕೆ ಎಸ್‌ಎಂವಿಟಿಗೆ ತಲುಪಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಹೆಚ್ಚು ವಿದ್ಯುತ್ ಬಿಲ್ ಕೊಟ್ಟಿದ್ದಕ್ಕೆ ಇರಿತ: ವ್ಯಕ್ತಿಗೆ 10 ವರ್ಷ ಜೈಲು

ಮಡಿಕೇರಿ: ವಿದ್ಯುತ್ ಬಿಲ್ ಹೆಚ್ಚು ನೀಡಿದ್ದಾರೆ ಎಂದು ಆರೋಪಿಸಿ ಸೆಸ್ಕ್ ಮೀಟರ್ ರೀಡರ್ ಪ್ರಶಾಂತ್ (28) ಎಂಬುವವರಿಗೆ ಚಾಕುವಿನಿಂದ ಇರಿದಿದ್ದ ಸೋಮವಾರಪೇಟೆ ತಾಲ್ಲೂಕಿನ ಎಫ್‌ಎಂಸಿ ಬಡಾವಣೆಯ ನಿವಾಸಿ ಎಂ.ರತೀಶ್ (40) ಎಂಬಾತನಿಗೆ ಇಲ್ಲಿನ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ 10 ವರ್ಷ ಜೈಲು ಶಿಕ್ಷೆ ವಿಧಿಸಿದೆ.

ಪ್ರಶಾಂತ್ ಅವರು 2023ರ ಜುಲೈ 13ರಂದು ರತೀಶ್ ಮನೆಗೆ ₹1,482 ಬಿಲ್ ನೀಡಿದ್ದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ರತೀಶ್ ರಸ್ತೆಯಲ್ಲಿ ಚಾಕುವಿನಿಂದ ಇರಿದಿದ್ದರು. ಇದರಿಂದ ತೀವ್ರವಾಗಿ ಗಾಯಗೊಂಡಿದ್ದ ಪ್ರಶಾಂತ್ ಅಲ್ಲೇ ಕುಸಿದುಬಿದ್ದರು. ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ನಂತರ, ಅವರು ಚೇತರಿಸಿಕೊಂಡರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡ ಸೋಮವಾರಪೇಟೆ ವಿಭಾಗದ ಡಿವೈಎಸ್‌ಪಿ ಆರ್‌.ವಿ.ಗಂಗಾಧರಪ್ಪ ತನಿಖೆ ನಡೆಸಿ ಅಪರಾಧಿಯನ್ನು ಬಂಧಿಸಿ, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಜಿ.ಪ್ರಶಾಂತಿ ಅವರು ಅಪರಾಧಿಗೆ 10 ವರ್ಷ ಜೈಲು ಶಿಕ್ಷೆ ಹಾಗೂ ₹25,500 ದಂಡ ವಿಧಿಸಿದರು. ಸರ್ಕಾರದ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಎನ್‌.ಪಿ.ದೇವೇಂದ್ರ ವಾದ ಮಂಡಿಸಿದ್ದರು.

ಡ್ರಗ್ಸ್: ಕಳ್ಳಸಾಗಣೆ ಜಾಲದ ಬೆನ್ನತ್ತಿ ದೆಹಲಿಗೆ ತೆರಳಿದ ಪೊಲೀಸರ ತಂಡ • ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಪರಿಶೀಲನೆ

ವಿಮಾನ ನಿಲ್ದಾಣದಲ್ಲಿ ಭದ್ರತಾ ಲೋಪ: ತನಿಖೆ

ಪ್ರಜಾವಾಣಿ ವಾರ್ತೆ

ಮಂಗಳೂರು: ನಿಷೇಧಿತ ಮಾದಕ ಪದಾರ್ಥ ಎಂಡಿಎಂಎಯನ್ನು ಬೆಂಗಳೂರಿನಲ್ಲಿ ವಶಪಡಿಸಿಕೊಂಡ ಪ್ರಕರಣದ ತನಿಖೆಯನ್ನು ಇಲ್ಲಿನ ಸಿಸಿಬಿ ಪೊಲೀಸರು ಮತ್ತಷ್ಟು ಚುರುಕುಗೊಳಿಸಿದ್ದಾರೆ. ಹೆಚ್ಚಿನ ಮಾಹಿತಿ ಕಲೆಹಾಕಲು ಇಲ್ಲಿನ ಪೊಲೀಸರ ತಂಡವೊಂದು ನವದೆಹಲಿಗೆ ತೆರಳಿದೆ.

ವಿಮಾನ ನಿಲ್ದಾಣಗಳಲ್ಲಿ ಕಠಿಣ ಭದ್ರತಾ ತಪಾಸಣೆಯ ವ್ಯವಸ್ಥೆ ಇದೆ. ಆದರೂ, ಆರೋಪಿ ಮಹಿಳೆಯರಿಬ್ಬರ ಟ್ರಾಲಿ ಬ್ಯಾಗ್‌ಗಳಲ್ಲಿ ಇದ್ದ ಮಾದಕ ಪದಾರ್ಥ ಏಕೆ ಪತ್ತೆಯಾಗಲಿಲ್ಲ ಎಂಬುದು ಸಂಶಯಕ್ಕೆ ಕಾರಣವಾಗಿದೆ. ಭಾರಿ ಪ್ರಮಾಣದಲ್ಲಿ ಮಾದಕ ಪದಾರ್ಥ ಕಳ್ಳಸಾಗಣೆಗೆ ವಿಮಾನ ನಿಲ್ದಾಣಗಳ ಭದ್ರತಾ ತಪಾಸಣೆಯ ಲೋಪ ಹೇಗೆ ಕಾರಣವಾಗಿದೆ ಎಂಬ ಆಯಾಮದಲ್ಲೂ ಪೊಲೀಸರು ತನಿಖೆ ಆರಂಭಿಸಿದ್ದಾರೆ. ವಿಮಾನ ನಿಲ್ದಾಣಗಳಲ್ಲಿನ ಸಿಸಿಟಿವಿ ಕ್ಯಾಮೆರಾಗಳಲ್ಲಿ ದಾಖಲಾದ ದೃಶ್ಯಗಳ ಪರಿಶೀಲನೆ ನಡೆಸುತ್ತಿದ್ದಾರೆ.

‘ನಮ್ಮ ತಂಡವು ಡಿಜಿಟಲ್ ಸಾಕ್ಷ್ಯಗಳ ತಾಂತ್ರಿಕ ಅಂಶಗಳನ್ನು ಆಳವಾಗಿ ಪರಿಶೀಲನೆ ನಡೆಸುತ್ತಿದೆ. ಆರೋಪಿಗಳ ಚಲನವಲನಗಳ ಬಗ್ಗೆಯೂ ಮಾಹಿತಿ ಕಲೆ ಹಾಕುತ್ತಿದ್ದೇವೆ’ ಎಂದು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ತಿಳಿಸಿದರು.

ಸುಮಾರು ₹ 75 ಕೋಟಿ ಬೆಲೆ ಬಾಳುವ 37.87 ಕೆ.ಜಿಗಳಷ್ಟು ನಿಷೇಧಿತ ಮಾದಕ ಪದಾರ್ಥ ಎಂಡಿಎಂಎಯನ್ನು ಬೆಂಗಳೂರಿನಲ್ಲಿ ವಶಪಡಿಸಿಕೊಳ್ಳಲಾಗಿತ್ತು.

‘ಈ ಪ್ರಕರಣದಲ್ಲಿ ಬಂಧಿತರು (ದಕ್ಷಿಣ ಆಫ್ರಿಕಾದ ಬಾಂಬಾ ಫಾಂಟಾ ಹಾಗೂ ಅಬಿಗೇಲ್ ಅಡ್ಲೋಯಿಸ್) ಎಂಡಿಎಂಎಯನ್ನು ಬಟ್ಟೆಗಳಲ್ಲಾಗಲೀ ಪೆಟ್ಟಿಗೆಗಳಲ್ಲಾಗಲೀ ಅಡಗಿಸಿಟ್ಟಿರಲಿಲ್ಲ. ಟ್ರಾಲಿ ಬ್ಯಾಗ್‌ನಲ್ಲಿ ಬೇರೆ ಬೇರೆ ಗಾತ್ರದ ಪೊಟ್ಟಣಗಳ ಒಳಗೆ ತುಂಬಿಸಿಟ್ಟಿದ್ದರು. ಈ ಬ್ಯಾಗ್‌ಗಳು ಪದೇ ಪದೇ ತಪಾಸಣೆಗೆ ಒಳಗಾದ ಬಳಿಕವೂ ಅವುಗಳಲ್ಲಿ ಮಾದಕ ಪದಾರ್ಥಗಳಿದ್ದುದು ಏಕೆ ಪತ್ತೆಯಾಗಲಿಲ್ಲ ಎಂಬುದು ನಿಜಕ್ಕೂ ಗಂಭೀರ ವಿಚಾರ. ನಮ್ಮ ತನಿಖೆಯಲ್ಲಿ ಕಂಡುಬರುವ ಅಂಶಗಳ ಆಧಾರದಲ್ಲಿ ಮುಂದಿನ ಕ್ರಮ ಕೈಗೊಳ್ಳಲಿದ್ದೇವೆ’ ಎಂದು ಪೊಲೀಸ್ ಕಮಿಷನರ್ ತಿಳಿಸಿದರು.

‘ಆರಂಭಿಕ ತನಿಖೆಗಳ ಪ್ರಕಾರ, ಆರೋಪಿ ಮಹಿಳೆಯರಿಬ್ಬರು ನವದೆಹಲಿಯಿಂದ 37 ಸಲ ಬೆಂಗಳೂರಿಗೆ ನೇರವಾಗಿ ಬಂದಿದ್ದರು ಹಾಗೂ ಮುಂಬೈಗೆ 22 ಸಲ ತೆರಳಿದ್ದರು. ಇದನ್ನು ಗಮನಿಸಿದರೆ ನಾವು ವಶಪಡಿಸಿಕೊಂಡ ಮಾದಕ ಪದಾರ್ಥದ ಪ್ರಮಾಣ ಅತ್ಯಲ್ಪ ಎಂದು ಕಾಣುತ್ತದೆ. ಬಂಧಿತ ಮಹಿಳೆಯರಿಬ್ಬರು ದೇಶದ ಮಹಾನಗರಗಳಲ್ಲಿ ಸಕ್ರಿಯವಾಗಿರುವ ಡ್ರಗ್ಸ್ ಕಳ್ಳಸಾಗಣೆ ದೊಡ್ಡ ಜಾಲದ ಸಣ್ಣ ಭಾಗವಾಗಿರುವ ಸಾಧ್ಯತೆ ಇದೆ’ ಎಂದು ಪೊಲೀಸ್ ಮೂಲಗಳು ಶಂಕೆ ವ್ಯಕ್ತಪಡಿಸಿವೆ.

ಪೊಲೀಸ್ ಮೂಲಗಳ ಪ್ರಕಾರ, ಬಂಧಿತ ಬಾಂಬಾ ಫಾಂಟಾ ಹಾಗೂ ಅಬಿಗೇಲ್ ಅಡ್ಲೋಯಿಸ್ ಮೊದಲೇ ಪರಿಚಿತರು. ಅವರು ನೈಜೀರಿಯಾ ಪ್ರಜೆಗಳಿಗೆ ಮಾತ್ರ ಬೆಂಗಳೂರಿನಲ್ಲಿ ಮಾದಕ ಪದಾರ್ಥ ಪೂರೈಸುತ್ತಿದ್ದರು. ನೈಜೀರಿಯಾ ಪ್ರಜೆಗಳು ಆ ಡ್ರಗ್ಸ್ ಅನ್ನು ಸ್ಥಳೀಯ ಪೆಡ್ಲರ್‌ಗಳಿಗೆ ಪೂರೈಸುತ್ತಿದ್ದರು. ಅವರು ಅದನ್ನು ಮಂಗಳೂರು ಸೇರಿದಂತೆ ದ್ವಿತೀಯ ಹಂತದ ನಗರಗಳಲ್ಲಿ ಕಾರ್ಯಾಚರಿಸುವ ಪೆಡ್ಲರ್‌ಗಳಿಗೆ ಮಾರುತ್ತಿದ್ದರು.

ಬಾಂಬಾ ಫಾಂಟಾ ಪ್ರಮುಖ ಪೂರೈಕೆದಾರಳಾಗಿ ಮಹತ್ವದ ಪಾತ್ರ ನಿರ್ವಹಿಸುತ್ತಿದ್ದಳು. ಕಳ್ಳಸಾಗಣೆಗೆ ಗೊತ್ತುಪಡಿಸಲಾದ ದಿನಕ್ಕಿಂತ ಒಂದು ದಿನ ಮುಂಚೆಯೇ ಆಕೆಗೆ ಡ್ರಗ್ಸ್ ತಲುಪುತ್ತಿತ್ತು. ಆದರೆ, ಅಬಿಗೇಲ್‌ಗೆ ಕಳ್ಳಸಾಗಣೆಗೆ ಗೊತ್ತುಪಡಿಸಿದ ದಿನವೇ ಡ್ರಗ್ಸ್ ಸಿಗುತ್ತಿತ್ತು.

‘ದ.ಕ: 800 ಪೆಡ್ಲರ್‌ಗಳು ಸಕ್ರಿಯ’

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದೂವರೆ ವರ್ಷಗಳಿಂದೀಚೆಗೆ ವಶಪಡಿಸಿಕೊಂಡ ಮಾದಕ ಪದಾರ್ಥಗಳೆಲ್ಲವೂ ಬೆಂಗಳೂರಿನವರಿಂದಲೇ ಪೂರೈಕೆಯಾಗಿದೆ ಎಂದೇ ಇಲ್ಲಿನ ಪೊಲೀಸರು ಶಂಕಿಸಿದ್ದರು. ಮಂಗಳೂರು, ಕಾಸರಗೋಡು ಹಾಗೂ ಆಸುಪಾಸಿನ ಪ್ರದೇಶಗಳಲ್ಲಿ ಪದೇ ಪದೇ ಮರುಕಳಿಸಿದ ಡ್ರಗ್ಸ್ ದಂಧೆ ಪ್ರಕರಣಗಳನ್ನು ಆಳವಾಗಿ ವಿಶ್ಲೇಷಣೆಗೆ ಒಳಪಡಿಸಿದಾಗ ಸುಮಾರು 800 ಪೆಡ್ಲರ್‌ಗಳು ಈ ದಂಧೆಯಲ್ಲಿ ಸಕ್ರಿಯವಾಗಿರುವುದು ಕಂಡುಬಂದಿತ್ತು. ಅವರಲ್ಲಿ ಬಹುತೇಕರಿಗೆ ಬೆಂಗಳೂರಿನ ಡ್ರಗ್ಸ್ ಪೂರೈಕೆದಾರರ ಜೊತೆ ನೇರ ನಂಟು ಇರುವುದು ಗೊತ್ತಾಗಿತ್ತು. ಮುಖ್ಯ ಪೂರೈಕೆದಾರರು ದೇಶದ ಪ್ರಮುಖ ಮಹಾನಗರಗಳಲ್ಲಿದ್ದುಕೊಂಡೇ ಭಾರಿ ಪ್ರಮಾಣದ ಡ್ರಗ್ಸ್ ಕಳ್ಳಸಾಗಣೆ ದಂಧೆಯನ್ನು ನಿರ್ವಹಿಸುತ್ತಿದ್ದಾರೆ ಎನ್ನುತ್ತವೆ ಪೊಲೀಸ್ ಮೂಲಗಳು.

ವಿಶೇಷ ರಹದಾರಿ ಆನ್‌ಲೈನ್‌ನಲ್ಲಿ

ಒಂದನೇ ಪುಟದಿಂದ...

‘ವಾಹನ್–1 ಸಾಫ್ಟ್‌ವೇರ್ ಹಳೆಯ ಅಪ್ಲಿಕೇಶನ್ ಆಗಿತ್ತು. ಹಾಗಾಗಿ ಎಲ್ಲ ಮಾಹಿತಿಗಳನ್ನು ಭರ್ತಿ ಮಾಡಬೇಕಿತ್ತು. ಇದಕ್ಕೆ ಸಮಯ ತೆಗೆದುಕೊಳ್ಳುತ್ತಿತ್ತು. ಈಗ ಎಲ್ಲ ರಹದಾರಿಗಳನ್ನು ವೆಬ್ ಆಧಾರಿತ ಅಪ್ಲಿಕೇಶನ್ (ವಾಹನ್–4) ವ್ಯಾಪ್ತಿಗೆ ತರಲಾಗಿದೆ. ಇದರಿಂದ ವಿಶೇಷ ರಹದಾರಿ ಪಡೆಯುವುದೂ ಸರಳವಾಗಿದೆ. ರಹದಾರಿ ಪಡೆಯಲಾಗಿದೆಯೇ ಇಲ್ಲವೇ ಎಂಬುದನ್ನು ಪತ್ತೆ ಹಚ್ಚುವುದೂ ಸುಲಭವಾಗಿದೆ’ ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

‘ರಾಜ್ಯದಲ್ಲಿ ಕಾಂಟ್ರಾಕ್ಟ್ ಕ್ಯಾರೇಜ್ ಬಸ್‌ಗಳು ಸುಮಾರು 10 ಸಾವಿರ ಇವೆ. ಪ್ರವಾಸಕ್ಕೆ ಸೋಮವಾರ ಬಸ್ ಬೇಕು ಎಂದು ಶನಿವಾರ ಅಥವಾ ಭಾನುವಾರ ತಿಳಿಸಿದರೆ ರಹದಾರಿ ಪಡೆದು, ಬಸ್ ಒದಗಿಸಲು ಕಷ್ಟವಾಗುತ್ತಿತ್ತು. ಈಗ 5 ನಿಮಿಷದಲ್ಲಿ ರಹದಾರಿ ಪಡೆಯಬಹುದು. ಬೆಳಿಗ್ಗೆ ಬಸ್ ಬೇಕು ಎಂದು ಪ್ರವಾಸಿಗರು ಹಿಂದಿನ ಮಧ್ಯರಾತ್ರಿ ತಿಳಿಸಿದರೂ ಈಗ ಬಸ್ ಒದಗಿಸಲು ನಾವು ತಯಾರಿದ್ದೇವೆ’ ಎಂದು ರಾಜ್ಯ ಬಸ್ ಮಾಲೀಕರ ಸಂಘದ ಅಧ್ಯಕ್ಷ ಎಸ್‌. ನಟರಾಜ ಶರ್ಮ ತಿಳಿಸಿದ್ದಾರೆ.

> **ವಿಶೇಷ ರಹದಾರಿ ಪಡೆಯುವ ವ್ಯವಸ್ಥೆ ಒಂದು ವಾರದಿಂದ ಜಾರಿಯಲ್ಲಿದೆ. ಇದು ಪ್ರಾಯೋಗಿಕ ಹಂತ. ತಾಂತ್ರಿಕ ಅಡಚಣೆಗಳು ಕಂಡು ಬಂದರೆ ಸರಿಪಡಿಸಲಾಗುವುದು**
> **ಎ.ಎಂ. ಯೋಗೀಶ್,** ಸಾರಿಗೆ ಆಯುಕ್ತ

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಕಂಪನಿ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು–1 ರವರ ಕಛೇರಿ, ಬಿಎಸ್‌ಡಬ್ಲ್ಯೂಎಂಎಲ್, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು–560 052.

ಸಂಖ್ಯೆ: ಡಿಜಿಎಂ–1/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/12/24–25 ದಿನಾಂಕ: 17.03.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಜಿಒಕೆ ಕೆಪಿಪಿಪಿ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಬಿಎಸ್‌ಡಬ್ಲ್ಯೂಎಂಎಲ್, ಇವರ ಪರವಾಗಿ ಉಪ ಪ್ರಧಾನ ವ್ಯವಸ್ಥಾಪಕರು–1, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ, ಇವರು ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ ಕಾಮಗಾರಿಗಳಿಗೆ ಯೋಜನಾ ನಿರ್ವಹಣಾ ಸಲಹಾ ಸೇವೆಗಳಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ (https://kppp.karnataka.gov.in) ಮೂಲಕ ಸೇವೆಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಟೆಂಡರ್‌ದಾರರು ಪ್ರಮಾಣಿತ ಬಿಡ್ಡಿಂಗ್ ದಸ್ತಾವೇಜಿನ ಕೆಸಿ–6 ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತಾ ಮಾನದಂಡಗಳನ್ನು ದಯವಿಟ್ಟು ಗಮನಿಸಲು ಸೂಚಿಸಲಾಗಿದೆ. ಇತರೆ ವಿವರಗಳನ್ನು ಬಿಡ್ಡಿಂಗ್ ದಸ್ತಾವೇಜುಗಳಲ್ಲಿ ಪರಿವೀಕ್ಷಿಸಬಹುದು.

ಕ್ರ.ಸಂ.	ಕೆಲಸದ ಹೆಸರು	ಕಾಮಗಾರಿಗಿಟ್ಟ ಅಚಿದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಕಾಲಾವಧಿ (ಮಳೆಗಾಲ ಸೇರಿದಂತೆ)	ಇಎಂಡಿ (ರೂ.ಗಳಲ್ಲಿ)
1	ಬ್ಯಾಟರಾಯನಪುರ ಕ್ಷೇತ್ರದಲ್ಲಿ ಅಗತ್ಯವಿರುವ ಮೂಲಸೌಕರ್ಯಗಳನ್ನು ಸೃಷ್ಟಿಸುವ ಮೂಲಕ ಸುತ್ತಮುತ್ತಲಿನ ಗ್ರಾಮಗಳ ಅಭಿವೃದ್ಧಿ ಮತ್ತು ಎಸ್‌ಡಬ್ಲ್ಯೂಎಂ ನಿಯಮಗಳು–2016 ರ ಅನುಸಾರ ಬಯ್ಯಪ್ಪನಹಳ್ಳಿ ಸರ್ವೆ ನಂ.80 (ಫೇಸ್–1) ರಲ್ಲಿ ಕಂಪ್ಲೀಟೆಡ್ ಲ್ಯಾಂಡ್‌ಫಿಲ್ ಸೈಟ್‌ನ ಸಾಯಿಲ್ ಕ್ಯಾಪಿಂಗ್ ಜೊತೆಗೆ ಸೈಂಟಿಫಿಕ್ ಕ್ಲಾಸರ್ ಕೆಲಸಕ್ಕಾಗಿ ಪಿಎಂಸಿಯ ನೇಮಕಾತಿ (ಕರೆ–2)	9000.00	11 ತಿಂಗಳು	1,80,000.00
2	ಬ್ಯಾಟರಾಯನಪುರ ಕ್ಷೇತ್ರದಲ್ಲಿ ಬೆಂಕಿ ಅವಘಡಗಳನ್ನು ತಪ್ಪಿಸಲು ಮತ್ತು ಸುತ್ತಮುತ್ತಲಿನ ಗ್ರಾಮಗಳ ಅಭಿವೃದ್ಧಿಗಾಗಿ ಅಗತ್ಯವಾದ ಮೂಳಸೌಕರ್ಯಗಳನ್ನು ಸೃಷ್ಟಿಸುವ ಮೂಲಕ ಬೈಯಪ್ಪನಹಳ್ಳಿಯಲ್ಲಿ ಲ್ಯಾಂಡ್‌ಫಿಲ್ ವೇಸ್ಟ್‌ನ ಬಯೋ ರಿಮಿಡಿಯೇಷನ್ ಕಾರ್ಯಕ್ಕಾಗಿ ಪಿಎಂಸಿ ನೇಮಕ (ಕರೆ –2)	2000.00	9 ತಿಂಗಳು	40,000.00

ವೇಳಾಪಟ್ಟಿ:

1) ಪ್ರೀ–ಬಿಡ್ ವಿಚಾರಣೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 25.03.2025, ಸಂಜೆ 5.30 ಗಂಟೆವರೆಗೆ, ಕೆಪಿಪಿ ಪೋರ್ಟಲ್ ಮೂಲಕ.

2) ಪ್ರೀ ಬಿಡ್ ವಿಚಾರಣೆಗಳು: ಸಿಇ ಮತ್ತು ಸಿಜಿಎಂ (ತಾಂತ್ರಿಕ), ಬಿಎಸ್‌ಡಬ್ಲ್ಯೂಎಂಎಲ್, ಇವರ ಕಚೇರಿಯಲ್ಲಿ 26.03.2025, ಮಧ್ಯಾಹ್ನ 3.00 ಗಂಟೆಗೆ.

3) ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02.04.2025, ಸಂಜೆ 4.00 ಗಂಟೆವರೆಗೆ.

4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 03.04.2025, ಸಂಜೆ 4.30 ಗಂಟೆಗೆ.

5) ತಾಂತ್ರಿಕವಾಗಿ ಅರ್ಹರಾದ ಬಿಡ್ಡುದಾರರಿಗೆ ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

1. ನಮ್ಮ ನಿಯಂತ್ರಣಕ್ಕೆ ಒಳಪಡದ ವ್ಯವಸ್ಥೆಯ ವೈಫಲ್ಯದಿಂದಾಗಿ ಉಂಟಾಗುವ ಯಾವುದೇ ವಿಳಂಬಗಳಿಗೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ. ವ್ಯವಸ್ಥಿತ ರೀತಿಯಲ್ಲಿ ಯಾವುದೇ ಟೆಂಡರ್ ನವೀಕರಣಗಳ ಬಗ್ಗೆ ಟೆಂಡರ್‌ದಾರರಿಗೆ ತಿಳಿಸಲು ಪ್ರಯತ್ನಿಸಿದರೂ, ಟೆಂಡರ್‌ದಾರರಿಗೆ ತಲುಪದೇ ಇದ್ದಲ್ಲಿ ಅದಕ್ಕೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ. ಟೆಂಡರ್‌ಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್ ಅನ್ನು ಪರಿಶೀಲಿಸುವುದು ಟೆಂಡರ್‌ದಾರರ ಜವಾಬ್ದಾರಿಯಾಗಿದ್ದು, ಸಹಾಯವಾಣಿಯ ಇ–ಮೇಲ್ ವಿಳಾಸ hphelpdesk.blr@intarvo.com ಇದಾಗಿರುತ್ತದೆ. ಕೆಪಿಪಿ ಪೋರ್ಟಲ್ ಸಹಾಯವಾಣಿಯ ದೂರವಾಣಿ ಸಂಖ್ಯೆಗಳು: 080–22371090/22373788. ಟೆಂಡರ್‌ದಾರರು ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯದ ಮೊದಲು ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಬೇಕು. ಅಂತರ್ಜಾಲ ಸಂಪರ್ಕ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಕೆಪಿಪಿ ಪೋರ್ಟಲ್ ಪ್ರವೇಶಿಸಲಾಗದಿದ್ದರೆ ಅದಕ್ಕೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ.

2. ಯಾವುದೇ ತಿದ್ದುಪಡಿ/ಅನುಬಂಧವನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು –1
ಬಿಎಸ್‌ಡಬ್ಲ್ಯೂಎಂಎಲ್

DIPR/CP/5750/AKAR/2024-25

‘ಶಿಷ್ಟಾಚಾರ: ನಿಯಮ ಉಲ್ಲಂಘನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಶಿಷ್ಟಾಚಾರ ಸೌಲಭ್ಯ ನಿಯಮಗಳ ಉಲ್ಲಂಘನೆ ಆರೋಪಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ ಗುಪ್ತ ನೇತೃತ್ವದ ತಂಡವು ಪೊಲೀಸರು ಸೇರಿದಂತೆ ಹತ್ತು ಸಿಬ್ಬಂದಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಿದೆ.

ನಟಿ ರನ್ಯಾ ರಾವ್ ಅವರ ಮಲತಂದೆಯೂ ಆಗಿರುವ ಐಪಿಎಸ್ ಅಧಿಕಾರಿ ರಾಮಚಂದ್ರ ರಾವ್ ಅವರಿಗೆ ಶಿಷ್ಟಾಚಾರ ನಿಯಮಗಳಡಿ ಒದಗಿಸುತ್ತಿದ್ದ ಸೌಲಭ್ಯವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದರು ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ. ತನಿಖಾ ತಂಡ ಸರ್ಕಾರಕ್ಕೆ ಪ್ರಾಥಮಿಕ ವರದಿ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿದೆ ಎಂದು ಮೂಲಗಳು ತಿಳಿಸಿವೆ.

ಜಾಮೀನು ಅರ್ಜಿ ವಿಚಾರಣೆ ನಾಳೆ

ರನ್ಯಾ ಅವರ ಜಾಮೀನು ಅರ್ಜಿಯ ವಿಚಾರಣೆಯನ್ನು ನಗರದ ಸೆಷನ್ಸ್ ನ್ಯಾಯಾಲಯ ಮಾರ್ಚ್ 19ಕ್ಕೆ ಮುಂದೂಡಿದೆ. ಮುಂದಿನ ವಿಚಾರಣೆ ವೇಳೆ ಆಕ್ಷೇಪಣೆ ಸಲ್ಲಿಸುವಂತೆ ಡಿಆರ್‌ಐ ಪರ ವಕೀಲರಿಗೆ ನ್ಯಾಯಾಧೀಶರು ಸೂಚನೆ ನೀಡಿದರು. ಪ್ರಕರಣದ ಎರಡನೇ ಆರೋಪಿಯಾಗಿರುವ ತರುಣ್ ರಾಜು ಜಾಮೀನು ಕೋರಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಆರ್ಥಿಕ ಅಪರಾಧ ಪ್ರಕರಣಗಳ ವಿಶೇಷ ನ್ಯಾಯಾಲಯವು ಮಂಗಳವಾರಕ್ಕೆ ಮುಂದೂಡಿದೆ.

ರಾಮಚಂದ್ರ ರಾವ್ ವಿಚಾರಣೆ

ಬೆಂಗಳೂರು: ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಶಿಷ್ಟಾಚಾರ ನಿಯಮ ಉಲ್ಲಂಘನೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟಿ ರನ್ಯಾ ರಾವ್ ಅವರ ಮಲತಂದೆ ಡಿಜಿಪಿ ರಾಮಚಂದ್ರ ರಾವ್ ಅವರನ್ನು ಗೌರವ ಗುಪ್ತ ನೇತೃತ್ವದ ತನಿಖಾ ತಂಡ ಸೋಮವಾರ ವಿಚಾರಣೆ ನಡೆಸಿದೆ.

ವಿಚಾರಣೆಗೆ ಹಾಜರಾಗುವಂತೆ ಅಧಿಕಾರಿಗೆ ಸಮನ್ಸ್ ಜಾರಿ ಮಾಡಲಾಗಿತ್ತು. ಸಂಜೆ 5 ಗಂಟೆಗೆ ಬಂದ ರಾವ್ ಅವರನ್ನು ಒಂದು ತಾಸಿಗೂ ಹೆಚ್ಚು ವಿಚಾರಣೆ ನಡೆಸಿ, ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ. ವಿಮಾನ ನಿಲ್ದಾಣದ ಪೊಲೀಸರು ಮತ್ತು ಸಿಬ್ಬಂದಿ ನೀಡಿರುವ ಹೇಳಿಕೆಗಳ ಬಗ್ಗೆಯೂ ಪ್ರಶ್ನೆಗಳನ್ನು ಕೇಳಲಾಗಿದೆ ಎಂದು ಮೂಲಗಳು ತಿಳಿಸಿವೆ.ರಾಜ್ಯ ಪೊಲೀಸ್ ವಸತಿ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕರಾಗಿದ್ದ ರಾಮಚಂದ್ರ ರಾವ್ ಅವರನ್ನು ಮಾರ್ಚ್ 15ರಂದು ಸರ್ಕಾರ ಕಡ್ಡಾಯ ರಜೆ ಮೇಲೆ ಕಳುಹಿಸಿದೆ.

‘ಯುವ ಸಂಕಲ್ಪ’ ಪದಗ್ರಹಣ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕರೆ

2028ರಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತನ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಪಕ್ಷದ ಯುವಕರ ನಡೆ ಹಳ್ಳಿ, ಬೂತ್ ಕಡೆಯಲ್ಲೇ ಇರಬೇಕು. ಅಲ್ಲಿ ಹೋರಾಟ ಮಾಡಿ, 2028ರಲ್ಲಿ ಕಾಂಗ್ರೆಸ್ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಬೇಕು’ ಎಂದು ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಯುವ ಕಾಂಗ್ರೆಸ್‌ಗೆ ಆಯ್ಕೆಯಾದ ಪದಾಧಿಕಾರಿಗಳಿಗೆ ಪದಗ್ರಹಣ ಕಾರ್ಯಕ್ರಮ ‘ಯುವ ಸಂಕಲ್ಪ’ದಲ್ಲಿ ಪ್ರತಿಜ್ಞಾ ವಿಧಿ ಬೋಧಿಸಿ ಅವರು ಸೋಮವಾರ ಮಾತನಾಡಿದರು.

‘ನನ್ನ ಮುಂದೆ ನಿಂತು ಗಿರಿಗಿಟ್ಟಲೆ ಹಾಕಿ, ಪೋಸ್ಟರ್–ಫ್ಲೆಕ್ಸ್‌ನಲ್ಲಿ ನನ್ನ ಫೋಟೊ ಹಾಕಿ ಕೂಗಾಡಿದರೆ ನಾನು ಒಪ್ಪುವುದಿಲ್ಲ. ನಿಮ್ಮ ಬೂತ್‌ನಲ್ಲಿ ನೀವು ಹೋರಾಡಿ ಪಕ್ಷವನ್ನು ಅಧಿಕಾರ ತರಬೇಕು. ಮುಖದ ಚಿಹ್ನೆ ಅಲ್ಲ, ಪಕ್ಷದ ಹಸ್ತದ ಗುರುತಿಗೆ ಜನ ಮತ ಹಾಕುತ್ತಾರೆ. ವ್ಯಕ್ತಿ ಪೂಜೆ ಬೇಡ’ ಎಂದು ಕಿವಿಮಾತು ಹೇಳಿದರು.

‘ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ವಿರುದ್ಧ ಸೈದ್ಧಾಂತಿಕ ಹೋರಾಟ ಎಲ್ಲ ಬೂತ್ ಮಟ್ಟದಲ್ಲೂ ನಡೆಯಬೇಕು. ಚುನಾವಣೆಯಲ್ಲಿ ಗೆದ್ದವರು, ಸೋತವರು ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು. ಬಿಜೆಪಿಯವರು ಭಾವನೆ ಮೇಲೆ ರಾಜಕೀಯ ಮಾಡಿದರೆ, ಕಾಂಗ್ರೆಸ್ ಪಕ್ಷ ಬದುಕಿನ ಮೇಲೆ ರಾಜಕೀಯ ಮಾಡುತ್ತಿದೆ. ಪ್ರತಿ ಬೂತ್ ಮಟ್ಟದಲ್ಲಿ ‘ಡಿಜಿಟಲ್ ಯೂಥ್’ ಇರಲೇಬೇಕು. ಪ್ರತಿ ಬೂತ್‌ನಲ್ಲಿ 25 ಕಾರ್ಯಕರ್ತರ ಪಡೆ ರಚಿಸಬೇಕು. ಶಾಸಕರು ತಮ್ಮ ವಿಧಾನಸಭೆ ಕ್ಷೇತ್ರದಲ್ಲೂ ಸಭೆ ನಡೆಸಬೇಕು’ ಎಂದರು.

‘ಗೆದ್ದವರೆಲ್ಲ ಲೀಡರ್ ಅಲ್ಲ, ನಿಮ್ಮನ್ನು ಗೆಲ್ಲಿಸಿದ ಕಾರ್ಯಕರ್ತರು ನಾಯಕರು. ಅವರಿಗೆ ಅತಿಹೆಚ್ಚು ಗೌರವ ಕೊಡಬೇಕು. ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಮುನಿಸಿಪಾಲಿಟಿ, 2028ರ ವಿಧಾನಸಭೆ ಚುನಾವಣೆ ಹಾಗೂ 2029ರ ಲೋಕಸಭೆ ಚುನಾವಣೆಯಲ್ಲಿ ಪಕ್ಷವನ್ನು ಗೆಲ್ಲಿಸಲು ನೀವೆಲ್ಲ ಈಗಿನಿಂದಲೇ ಶ್ರಮಿಸಬೇಕು’ ಎಂದರು.

‘ಬಿಜೆಪಿಯವರದ್ದು ದ್ವೇಷದ ರಾಜಕಾರಣ. ನಮ್ಮ ನಾಯಕ ರಾಹುಲ್ ಗಾಂಧಿಯವರದ್ದು ಪ್ರೀತಿಯ ರಾಜಕಾರಣ. ಈ ಸಂದೇಶವನ್ನು ರಾಜ್ಯ ಮೂಲೆಮೂಲೆಗೂ ಕೊಂಡೊಯ್ಯುವ ಕೆಲಸ ಮಾಡುತ್ತೇವೆ. ಎಲ್ಲ ಬ್ಲಾಕ್, ವಿಧಾನಸಭೆ ಕ್ಷೇತ್ರಗಳಲ್ಲಿ ಪಕ್ಷ ಕಟ್ಟುವ ಕೆಲಸ ಮಾಡುತ್ತೇವೆ’ ಎಂದು ಯುವ ಕಾಂಗ್ರೆಸ್‌ನ ನೂತನ ಅಧ್ಯಕ್ಷ ಮಂಜುನಾಥ ಗೌಡ ಹೇಳಿದರು.

ಶಿವಕುಮಾರ್ ಸಮ್ಮುಖದಲ್ಲಿ ಮಂಜುನಾಥ್ ಗೌಡ ಅವರಿಗೆ ಹಿಂದಿನ ಅಧ್ಯಕ್ಷ ಮೊಹಮ್ಮದ್ ನಲಪಾಡ್ ಅವರು ಬಾವುಟ ನೀಡಿ ಅಧಿಕಾರ ಹಸ್ತಾಂತರಿಸಿದರು. ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಉದಯ್ ಭಾನು ಚಿಬ್, ಮಾಜಿ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಉಪಸ್ಥಿತರಿದ್ದರು
ಚಿತ್ರ/ ಕಿಶೋರ್ ಕುಮಾರ್ ಬೋಳಾರ್

> **ಯುವ ಕಾಂಗ್ರೆಸ್ ಅಧ್ಯಕ್ಷನಾಗಿದ್ದೆ ಎಂಬ ಕಾರಣಕ್ಕೇ ಕ್ಷೇತ್ರವಿಲ್ಲದ ನನ್ನನ್ನು ಕರೆದು ಬೆಂಗಳೂರಿನಲ್ಲಿ ಟಿಕೆಟ್ ಕೊಟ್ಟರು. ಅದು ಯುವ ಕಾಂಗ್ರೆಸ್ ಶಕ್ತಿ**
> **ಕೃಷ್ಣ ಬೈರೇಗೌಡ,** ಕಂದಾಯ ಸಚಿವ

> **ಬಿಜೆಪಿ ಹಿಂದುತ್ವದ ಮೇಲೆ ಮತ ಕೇಳುತ್ತದೆ. ನಾನೂ ಹಿಂದೂ ಎಂದು ಹೆಮ್ಮೆಯಿಂದ ಹೇಳುತ್ತೇನೆ. ಆದರೆ ಇದನ್ನು ಮತ ರಾಜಕಾರಣಕ್ಕೆ ಬಳಸಿಕೊಳ್ಳಬಾರದು**
> **ಸಂತೋಷ್ ಲಾಡ್,** ಕಾರ್ಮಿಕ ಸಚಿವ

‘ಮತೀಯ ಶಕ್ತಿಗಳ ಮೇಲೆ ನಿಗಾ ಇರಲಿ’

‘ಬಿಜೆಪಿ, ಆರ್‌ಎಸ್‌ಎಸ್, ಎಬಿವಿಪಿ... ಇವೆಲ್ಲದರ ಬಗ್ಗೆ ಯುವ ಕಾಂಗ್ರೆಸ್ ಕಾಯಕರ್ತರು ಅತ್ಯಂತ ನಿಗಾ ವಹಿಸಬೇಕಿದೆ. ನಗರ, ಹಳ್ಳಿಗಳಲ್ಲೂ ಸೂಕ್ಷ್ಮವಾಗಿ ಮತೀಯ ಶಕ್ತಿಗಳ ಮೇಲೆ ಕಣ್ಣು ಇಡಬೇಕು. ದೇಶದಲ್ಲಿ ಆಳುತ್ತಿರುವ ಬಿಜೆಪಿಯು ಯುವ ಶಕ್ತಿಯನ್ನು ದುರ್ಬಲಗೊಳಿಸುತ್ತಿದ್ದು, ಮತೀಯ ವಿಚಾರಗಳನ್ನು ಮುಂದಿಟ್ಟು ಯುವ ಜನರ ಮನಸ್ಸನ್ನು ಕಲುಷಿತಗೊಳಿಸುತ್ತಿದೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

‘ಪಕ್ಷದಲ್ಲಿ ಶಿಸ್ತು ಇರಲಿ’

‘ಪಕ್ಷದಲ್ಲಿ ಶಿಸ್ತು ಮುಖ್ಯ. ಶಿಸ್ತು ಇಲ್ಲದಿದ್ದರೆ ಯಾರೂ ನಾಯಕರಾಗುವುದಿಲ್ಲ. ಶಿಸ್ತೇ ಯಶಸ್ಸಿನ ಮೂಲಮಂತ್ರ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಲವು ಬಾರಿ ಹೇಳಿದರು. ವೇದಿಕೆಯಲ್ಲಿ ಜನ ತುಂಬಿಹೋಗಿದ್ದನ್ನು ನೋಡಿದ ಅವರು, ‘ಎಐಸಿಸಿ, ಕೆಪಿಸಿಸಿ ಪದಾಧಿಕಾರಿಗಳನ್ನು ಹೊರತು ಪಡಿಸಿ ಎಲ್ಲರೂ ಕೆಳಗೆ ಇಳಿಯದಿದ್ದರೆ ನಾನು ಮಾತಾಡುವುದಿಲ್ಲ’ ಎಂದರು.

ಶಿವಕುಮಾರ್ ಮಾತನಾಡುವಾಗ ವೇದಿಕೆಯಲ್ಲಿದ್ದವರು ಮಾತನಾಡಿಕೊಳ್ಳುತ್ತಿದ್ದರು. ಆಗ ಆಕ್ರೋಶಗೊಂಡ ಅವರು, ‘ಪಕ್ಷದ ಅಧ್ಯಕ್ಷ ಏನು ಮಾತನಾಡುತ್ತಿದ್ದಾನೆ ಎಂದು ಕೇಳಿಸಿಕೊಳ್ಳುವ ತಾಳ್ಮೆ ಶಾಸಕರಿಗೆ ಇರಬೇಕು’ ಎಂದರು.

ರಾಜ್ಯದೆಲ್ಲೆಡೆ ಅಭಿಮಾನಿಗಳಿಂದ ಭರ್ಜರಿ ಆಚರಣೆ • ಸಮಾಧಿಗೆ ಪೂಜೆ ಸಲ್ಲಿಸಿದ ಕಲಾವಿದರು

ಪುನೀತ್ 50ನೇ ಜನ್ಮದಿನ ಆಚರಣೆ

ಪ್ರಜಾವಾಣಿ ವಾರ್ತೆ

ಪುನೀತ್ ಸಮಾಧಿಗೆ ಕುಟುಂಬದ ಸದಸ್ಯರು ಪೂಜೆ ಸಲ್ಲಿಸಿ ಪುಷ್ಪನಮನ ಅರ್ಪಿಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ 50ನೇ ಜನ್ಮದಿನವನ್ನು ಸೋಮವಾರ ರಾಜ್ಯದೆಲ್ಲೆಡೆ ಅಭಿಮಾನಿಗಳು ಭರ್ಜರಿಯಾಗಿ ಆಚರಿಸಿದರು.

ಪುನೀತ್ ಅವರ ಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ಪುತ್ರಿಯರಾದ ವಂದಿತಾ, ಧೃತಿ, ನಟ ಶಿವರಾಜ್‌ಕುಮಾರ್ ದಂಪತಿ ಹಾಗೂ ನಟ ರಾಘವೇಂದ್ರ ರಾಜ್‌ಕುಮಾರ್ ದಂಪತಿ ಸೇರಿದಂತೆ ಕುಟುಂಬದ ಸದಸ್ಯರು ಕಂಠೀರವ ಸ್ಟುಡಿಯೊದಲ್ಲಿರುವ ಪುನೀತ್ ಅವರ ಸಮಾಧಿಗೆ ಪೂಜೆ ಸಲ್ಲಿಸಿದರು. ಪುನೀತ್ ಅವರ ನೆಚ್ಚಿನ ತಿಂಡಿ ತಿನಿಸುಗಳನ್ನು ಸಮಾಧಿಯ ಮುಂದೆ ಇಡಲಾಗಿತ್ತು. ನಟರಾದ ಶ್ರೀಮುರಳಿ, ಸಾಧುಕೋಕಿಲ ಸೇರಿದಂತೆ ಚಿತ್ರರಂಗದ ಅನೇಕ ಕಲಾವಿದರೂ ಸಮಾಧಿಗೆ ಪೂಜೆ ಸಲ್ಲಿಸಿದರು.

ಜನ್ಮದಿನದ ಅಂಗವಾಗಿ ಸಮಾಧಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ಸಾವಿರಾರು ಅಭಿಮಾನಿಗಳು ಸಮಾಧಿಗೆ ಭೇಟಿ ನೀಡಿ ತಮ್ಮ ನೆಚ್ಚಿನ ನಟನಿಗೆ ಪುಷ್ಪನಮನ ಸಲ್ಲಿಸಿದರು. ಹಲವರು ಕೇಕ್‌ಗಳನ್ನು ತಂದು ಸಮಾಧಿ ಮುಂದೆಯೇ ಅದನ್ನು ಕತ್ತರಿಸಿ ಪುನೀತ್ ಅವರ ಜನ್ಮದಿನ ಆಚರಿಸಿದರು. ಅಪ್ಪು ಮಾಲೆ ಧರಿಸಿ, ಅವರ ಬಗ್ಗೆ ಕವನ, ಲೇಖನ ಬರೆದು, ಹಾಡು ಹಾಡಿ ತಮ್ಮದೇ ರೀತಿಯಲ್ಲಿ ಹಲವರು ನೆಚ್ಚಿನ ನಟನನ್ನು ಸ್ಮರಿಸಿದರು. ಪುನೀತ್ ರಾಜ್‌ಕುಮಾರ್ ಅವರ ರೀತಿಯೇ ಕಾಣಿಸುವ ಬೆಳಗಾವಿಯ ಮೂಡಲಗಿಯ ಜೂನಿಯರ್ ಆರ್ಟಿಸ್ಟ್ ಅಪ್ಪು ಎಂಬುವವರ ಜೊತೆ ಸೆಲ್ಫಿಗೆ ಜನ ಮುಗಿಬಿದ್ದರು. ಪೂಜೆ ಸಲ್ಲಿಸಿದ ಬಳಿಕ ಅಭಿಮಾನಿಗಳಿಗೆ ಅಶ್ವಿನಿ, ಧೃತಿ ಹಾಗೂ ವಂದಿತಾ ಊಟ ಬಡಿಸಿದರು.

'ಜನ್ಮದಿನಕ್ಕೆ ವರುಷಗಳು ಬದಲಾದರೂ ವ್ಯಕ್ತಿ ಹಾಗೆಯೇ ಉಳಿಯುವುದು ತುಂಬಾ ಅಪರೂಪ. ಅಂತಹ ಅಪರೂಪದಲ್ಲಿ ನೀನು ಒಬ್ಬ, ನೀನೇ ಒಬ್ಬ. ಮಗುವಾಗಿದ್ದಾಗ ನಿನ್ನ ಎತ್ತಿ ಮುದ್ದಾಡುವಾಗ ಇದ್ದ ನಿನ್ನ ನಗು ಇಂದಿಗೂ ಮಾಸದ ನಲ್ಲಿ ಹಾಗೆ ಉಳಿದಿದೆ. ಇಡೀ ಪ್ರಪಂಚಕ್ಕೆ ಇಂದು ನಿನ್ನ ಐವತ್ತನೇ ಜನ್ಮದಿನ. ನನಗೆ ಈಗಲೂ ಮೊನ್ನೆಯಷ್ಟೇ ನಿನ್ನ ಮೊದಲ ಜನ್ಮದಿನ ಆಚರಿಸಿದಂತ ಸಂಭ್ರಮ. 'ಇಷ್ಟು ನೂರು ವರ್ಷವಾದರೂ ಅದು ಬದಲಾಗಲ್ಲ' ಎಂದು 'ಇನ್‌ಸ್ಟಾಗ್ರಾಂ'ನಲ್ಲಿ ಶಿವರಾಜ್‌ಕುಮಾರ್ ಪೋಸ್ಟ್ ಮಾಡಿದ್ದಾರೆ.

'ಚಿಕ್ಕಪ್ಪನ ಮೇಲೆ ಜನರಿಗೆ ಇರುವ ಪ್ರೀತಿ ವರ್ಷ ಉರುಳಿದಂತೆ ಹೆಚ್ಚುತ್ತಿದೆ. ಅಭಿಮಾನಿಗಳು ಹಲವು ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿರುವುದು ಖುಷಿಯ ವಿಚಾರ' ಎಂದರು ಯುವರಾಜ್‌ಕುಮಾರ್.

ಬೇಡಿಕೆಗೆ ಸ್ಪಂದಿಸದಿದ್ದರೆ ದೇಹ ತ್ಯಾಗ: ಗುಣಧರನಂದಿ ಮಹಾರಾಜ

ಪ್ರಜಾವಾಣಿ ವಾರ್ತೆ



ಹುಬ್ಬಳ್ಳಿ: 'ಜೈನ ಅಭಿವೃದ್ಧಿ ನಿಗಮ ಸ್ಥಾಪನೆ, ತಾಲ್ಲೂಕು ಕೇಂದ್ರಗಳಲ್ಲಿ ಜೈನ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಸೇರಿ ಇತರ ಬೇಡಿಕೆಗಳನ್ನು ಈಡೇರಿಸದಿದ್ದರೆ, ಬೆಂಗಳೂರಿನ ವಿಧಾನಸೌಧದ ಎದುರು ಸಲ್ಲೇಖನ ವ್ರತ ಕೈಗೊಂಡು ದೇಹ ತ್ಯಾಗ ಮಾಡುತ್ತೇನೆ' ಎಂದು ವರೂರು ನವಗ್ರಹ ತೀರ್ಥಕ್ಷೇತ್ರದ ಗುಣಧರನಂದಿ ಮಹಾರಾಜ ಎಚ್ಚರಿಕೆ ನೀಡಿದರು.

ತೀರ್ಥಕ್ಷೇತ್ರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಭಾವಪರವಶರಾಗಿ ಕಣ್ಣೀರು ಹಾಕಿದ ಅವರು, 'ಬೇಡಿಕೆಗಳನ್ನು ಈಡೇರಿಸಲು ಕೋರಿ ರಾಜ್ಯ ಸರ್ಕಾರಕ್ಕೆ ಒಂಬತ್ತು ಬಾರಿ ಮನವಿ ಸಲ್ಲಿಸಿದರೂ ಸ್ಪಂದಿಸಿಲ್ಲ' ಎಂದರು.

'ಮನವಿಪತ್ರ ಸಲ್ಲಿಸಿದಾಗಲೆಲ್ಲ ಮುಖ್ಯಮಂತ್ರಿ ಸೇರಿ ಎಲ್ಲರಿಂದ ಆಶ್ವಾಸನೆ ಸಿಗುತ್ತದೆ. ಆದರೆ ಬೇಡಿಕೆ ಈಡೇರಿಸಲು ಯಾಕೆ ನಿರ್ಲಕ್ಷ್ಯ ತೋರಲಾಗುತ್ತಿದೆ ಎಂಬುದು ತಿಳಿಯುತ್ತಿಲ್ಲ. ಬಡ ಜೈನರಿಗೆ ಸ್ಪಂದಿಸದಷ್ಟು ಮುಖ್ಯಮಂತ್ರಿ ನಿರ್ದಯಿ ಇರಬಾರದು. ಜೈನರು ಏನು ತಪ್ಪು ಮಾಡಿದ್ದಾರೆ ಎಂಬುದು ತಿಳಿಯುತ್ತಿಲ್ಲ' ಎಂದು ಗದ್ಗದಿತರಾದರು.

'ಸರ್ಕಾರದ ಮೇಲೆ ಒತ್ತಡ ಹೇರಲು ಹಂತಹಂತವಾಗಿ ಹೋರಾಟ ರೂಪಿಸಲಾಗುವುದು. ಮಾರ್ಚ್ 19ರಂದು ಬೆಂಗಳೂರಿನಲ್ಲಿ ಜೈನ ಸಮಾಜದಿಂದ ಸಚಿವ ಜಮೀರ್ ಅಹ್ಮದ್ ಅವರ ಮೂಲಕ ಸರ್ಕಾರಕ್ಕೆ ಕೊನೆಯ ಬಾರಿ ಮನವಿ ಸಲ್ಲಿಸಲಾಗುವುದು. ಮನವಿ ಸಲ್ಲಿಕೆಗೆ ಪ್ರತಿ ತಾಲ್ಲೂಕಿನಿಂದ ವಾಹನಗಳಲ್ಲಿ ಜನರು ಬೆಂಗಳೂರಿಗೆ ಹೋಗುವರು' ಎಂದರು.

'ಏಪ್ರಿಲ್ 9ರೊಳಗೆ ಸರ್ಕಾರ ಸ್ಪಂದಿಸದಿದ್ದರೆ, ಏಪ್ರಿಲ್ 10 ಮಹಾವೀರ ಜಯಂತಿ ದಿನದಂದು ನ್ಯಾಯದ ಬೇಡಿಕೆ ಫಲಕಗಳನ್ನು ಪ್ರದರ್ಶಿಸಿ, ಮೌನವಾಗಿ ಪ್ರತಿಭಟಿಸಲಾಗುವುದು. ಜೂನ್ 8ರಂದು ಬೆಳಗಾವಿ ಜಿಲ್ಲೆ ಐನಾಪುರದಲ್ಲಿ ಜೈನ ಸಮಾಜದ ಬೃಹತ್ ಸಮಾವೇಶ ನಡೆಸಲಾಗುವುದು' ಎಂದರು.

'ಜೈನರಲ್ಲೂ ಬಡವರು ಇದ್ದಾರೆ. ಅವರಿಗೆ ಸರ್ಕಾರ ಸೌಲಭ್ಯಗಳನ್ನು ಒದಗಿಸಬೇಕು' ಎಂದು ಮನವಿ ಮಾಡಿದರು.

120ಕ್ಕೇರಿದ ಅಸ್ವಸ್ಥರ ಸಂಖ್ಯೆ; ಹೋಟೆಲ್ ಬಂದ್

ಪ್ರಜಾವಾಣಿ ವಾರ್ತೆ

ಮಂಡ್ಯ: ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿ ಕಲುಷಿತ ಆಹಾರ ಸೇವಿಸಿ ಅಸ್ವಸ್ಥಗೊಂಡವರ ಸಂಖ್ಯೆ 120ಕ್ಕೇರಿದೆ. ಇದಕ್ಕೆ ಕಾರಣವಾದ ಎನ್ನಲಾದ, ಮಳವಳ್ಳಿ ಪಟ್ಟಣದ ಹೊರವಲಯದಲ್ಲಿರುವ ಲಕ್ಷ್ಮೀನರಸಿಂಹಸ್ವಾಮಿ ಹೋಟೆಲ್ ಬಂದ್ ಮಾಡಿಸಲಾಗಿದೆ.

ಊಟ ಸೇವಿಸಿದ್ದ 40 ಮಕ್ಕಳು, ಊಟ ಕಳುಹಿಸಿದ್ದ ಉದ್ಯಮಿ ಪುಟ್ಟೇಗೌಡ ಕುಮಾರ್ ಅವರ 61 ಸಂಬಂಧಿಕರು ಹಾಗೂ ಹೋಟೆಲ್‌ನಲ್ಲಿ ಊಟ ಖರೀದಿಸಿದ್ದ 20ಕ್ಕೂ ಅಧಿಕ ಕೃಷಿ ಕೂಲಿ ಕಾರ್ಮಿಕರಿಗೆ ವಾಂತಿ-ಭೇದಿಯಾಗಿ ಅಸ್ವಸ್ಥಗೊಂಡು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಸೋಮವಾರ ಗದ್ದೆಗಳ ಬಳಿಗೆ ತೆರಳಿ ಅಲ್ಲಿ ಬಿಸಾಡಿದ್ದ ಸ್ವಲ್ಪ ಪ್ರಮಾಣದ ಊಟ ಸಂಗ್ರಹಿಸಿ, ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ. ತನಿಖೆಗೆ ಡಿವೈಎಸ್ಪಿ ವಿ.ಕೃಷ್ಣಪ್ಪ ನೇತೃತ್ವದಲ್ಲಿ ತಂಡ ರಚಿಸಲಾಗಿದೆ. ಬಂಧಿತರಿಗೆ ಜಾಮೀನು ದೊರಕಿದೆ.

ಚಕ್ರವರ್ತಿ ಸೂಲಿಬೆಲೆ ವಿರುದ್ಧ ಪ್ರಕರಣ

ಉಳ್ಳಾಲ (ದಕ್ಷಿಣ ಕನ್ನಡ): ಅನ್ಯ ಧರ್ಮೀಯರ ಕುರಿತು ಪ್ರಚೋದನಕಾರಿ ಹೇಳಿಕೆ ನೀಡಿದ ಆರೋಪದ ಮೇರೆಗೆ ಚಕ್ರವರ್ತಿ ಸೂಲಿಬೆಲೆ ವಿರುದ್ಧ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸಮೀಪದ ಕುತ್ತಾರಿನ ಕೊರಗಜ್ಜ ಕ್ಷೇತ್ರದಲ್ಲಿ ಈಚೆಗೆ ನಡೆದ ಕಾರ್ಯಕ್ರಮದಲ್ಲಿ ಕೋಮು ದ್ವೇಷ ಹುಟ್ಟಿಸುವ ಹೇಳಿಕೆ ನೀಡಿರುವ ಚಕ್ರವರ್ತಿ ಸೂಲಿಬೆಲೆ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಉಳ್ಳಾಲದ ಅಬ್ದುಲ್ ರಶೀದ್ ಭಾನುವಾರ ದೂರು ನೀಡಿದ್ದರು.

ವಿಶ್ವ ಹಿಂದೂಪರಿಷತ್ ಏರ್ಪಡಿಸಿದ್ದ 'ನಮ್ಮ ನಡಿಗೆ ಕೊರಗಜ್ಜನ ಕಡೆಗೆ' ಕಾರ್ಯಕ್ರಮದ ಸಮಾರೋಪದಲ್ಲಿ ಭಾಷಣ ಮಾಡಿದ್ದ ಚಕ್ರವರ್ತಿ ಸೂಲಿಬೆಲೆ, 'ಮತಾಂತರ ಆಗುತ್ತಿದೆ ಎಂದು ಎಷ್ಟು ದಿನ ಬಡಿದಾಡುವುದು? ಘರ್ ವಾಪ್ಸಿ ಮಾಡೋದು ಹೇಗೆ ಎಂದು ಮನೆ ಮನೆಗೂ ಕಲಿಸಿಕೊಡೋಣ. ಯಾವುದೊ ರೀಲ್ ಮಾಡುತ್ತೀರಿ. ಘರ್ ವಾಪ್ಸಿ ಬಗ್ಗೆ ರೀಲ್ ಮಾಡಿ. ಎಲ್ಲಿವರೆಗೆ 'ಲವ್ ಜಿಹಾದ್' ಬಗ್ಗೆ ಮಾತನಾಡುತ್ತಾ ಇರುವುದು? ನಮ್ಮ ಗಂಡು ಮಕ್ಕಳಿಗೂ ಹೇಳೋಣ, ಎಷ್ಟು ದಿನ ಅಂತ ನಮ್ಮದೇ ಹೆಣ್ಣು ಮಕ್ಕಳನ್ನೇ ನೋಡುತ್ತಿರುತ್ತೀಯಪ್ಪಾ. ಹುಡುಗಿ ಸಿಗಲಿಲ್ಲ ಎಂದು ಎಷ್ಟು ದಿನ ಹೇಳುತ್ತಿಯಾ. ಸ್ವಲ್ಪ ಬೇರೆಯವರನ್ನೂ ನೋಡ್ರಲ್ಲ. ಇನ್ನು ನಾವು ಅಗ್ರೆಸಿವ್ ಮಾರ್ಗದಲ್ಲಿ ಹೋಗಬೇಕು. ರಕ್ಷಣಾತ್ಮಕ ತಂತ್ರದ ಕಾಲ ನಿಂತುಹೋಗಿದೆ' ಎಂದಿದ್ದರು.

ಸಂಕ್ಷಿಪ್ತ ಸುದ್ದಿ

'ಸಾರಾ' ಕನ್‌ವೆನ್ಶನ್ ಹಾಲ್: ತನಿಖೆಗೆ ಆದೇಶ

ಮೈಸೂರು: ಇಲ್ಲಿನ ದಟ್ಟಗಳ್ಳಿಯಲ್ಲಿರುವ ಜೆಡಿಎಸ್ ರಾಜ್ಯ ಘಟಕದ ಕಾರ್ಯಾಧ್ಯಕ್ಷ, ಮಾಜಿ ಸಚಿವ ಸಾ.ರಾ. ಮಹೇಶ್ ಕುಟುಂಬದ ಒಡೆತನದ 'ಸಾರಾ ಕನ್‌ವೆನ್ಶನ್ ಹಾಲ್' ನಿರ್ಮಾಣದ ಕುರಿತು ತನಿಖೆಗೆ ಸರ್ಕಾರವು ಆದೇಶಿಸಿದೆ.

ಈ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ಕೆ. ಲತಾ, ಅಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯದ ಆಯುಕ್ತರಿಗೆ ಮಾರ್ಚ್ 10ರಂದು ಪತ್ರ ಬರೆದಿದ್ದಾರೆ.

'ದಟ್ಟಗಳ್ಳಿಯ ಸರ್ವೆ ಸಂಖ್ಯೆ 130/3ರಲ್ಲಿ 2 ಎಕರೆ 15 ಗುಂಟೆ ಜಾಗದಲ್ಲಿ ಮಾಲೀಕರು ಕಾನೂನು ಬಾಹಿರವಾಗಿ ಕಟ್ಟಡ ನಿರ್ಮಿಸಿದ್ದು, ಇದಕ್ಕೆ ಅಧಿಕಾರಿಗಳು ಸಹಕರಿಸಿದ್ದಾರೆ ಎಂದು ಗಂಗರಾಜು ಎಂಬುವರು ಮುಖ್ಯಮಂತ್ರಿಗೆ ದೂರು ಸಲ್ಲಿಸಿದ್ದಾರೆ. ಈ ದೂರಿನ ಕುರಿತು ಆಯುಕ್ತರ ಮಟ್ಟದಲ್ಲಿ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕು' ಎಂದು ಪತ್ರದಲ್ಲಿ ಸೂಚಿಸಿದ್ದಾರೆ.

ಎಎಸ್‌ಐ ಸೇರಿ ನಾಲ್ವರ ಬಂಧನ

ರಾಯಚೂರು: ಖೋಟಾ ನೋಟು ಚಲಾವಣೆ ಮಾಡುತ್ತಿದ್ದ ಆರೋಪದ ಮೇಲೆ ಇಲ್ಲಿನ ಡಿಎಆರ್ ಎಎಸ್‌ಐ ಸೇರಿ ನಾಲ್ವರು ಆರೋಪಿಗಳನ್ನು ಪಶ್ಚಿಮ ಠಾಣೆ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

'ರಾಯಚೂರಿನ ಎಎಸ್‌ಐ ಮರಿಲಿಂಗ, ಸದ್ದಾಂ, ಸಿದ್ದಲಿಂಗಪ್ಪ ಹಾಗೂ ರವಿ ಬಂಧಿತರು. ಬಂಧಿತ ಮೂವರಲ್ಲಿ ಲಾರಿ ಮಾಲೀಕ, ಚಾಲಕ, ಕ್ಲೀನರ್ ಇದ್ದಾರೆ. ಇವರು ಆಂಧ್ರಪ್ರದೇಶದಿಂದ ಖೋಟಾ ನೋಟುಗಳನ್ನು ತಂದು ಜಿಲ್ಲೆಯಲ್ಲಿ ಚಲಾವಣೆ ಮಾಡುತ್ತಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ಕೆರೆಯಲ್ಲಿ ಮುಳುಗಿ ಮೂವರು ಸಾವು

ಚನ್ನಗಿರಿ: ಬಟ್ಟೆ ತೊಳೆಯಲು ಕೆರೆಗೆ ಹೋಗಿದ್ದ ಒಬ್ಬ ಯುವತಿ ಸೇರಿ ಮೂವರು ಮಹಿಳೆಯರು ಆಕಸ್ಮಿಕವಾಗಿ ಕಾಲು ಜಾರಿ ನೀರಿನಲ್ಲಿ ಮುಳುಗಿ ಮೃತಪಟ್ಟ ಘಟನೆ ತಾಲ್ಲೂಕಿನ ಲಕ್ಷ್ಮೀಸಾಗರ ಗ್ರಾಮದಲ್ಲಿ ಸೋಮವಾರ ನಡೆದಿದೆ.

ದೀಪಾರಾಣಿ (27), ದಿವ್ಯಾ (24) ಹಾಗೂ ಚಂದನಾ (18) ಮೃತಪಟ್ಟವರು.

ಮಂಗನ ಕಾಯಿಲೆ: ಮಹಿಳೆ ಸಾವು

ಚಿಕ್ಕಮಗಳೂರು: ನರಸಿಂಹರಾಜಪುರ ತಾಲ್ಲೂಕಿನ ಕಟ್ಟಿನಮನೆ ಬೂತನಕಾಡು ಗ್ರಾಮದ ಕಮಲಾ (69) ಎಂಬವರು ಮಂಗನ ಕಾಯಿಲೆಯಿಂದಾಗಿ ಮೃತಪಟ್ಟಿದ್ದಾರೆ.

ಜ್ವರದಿಂದ ಬಳಲುತ್ತಿದ್ದ ಅವರನ್ನು ಕೊಪ್ಪ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮಂಗನ ಕಾಯಿಲೆ ಇರುವುದು ದೃಢಪಟ್ಟಿತ್ತು. ಮಣಿಪಾಲದ ಕೆಎಂಸಿ ಆಸ್ಪತ್ರೆಗೆ ರವಾನಿಸುವಾಗ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಮೈಕ್ರೊ ಫೈನಾನ್ಸ್ ಕಿರುಕುಳ ಆರೋಪ: ವ್ಯಕ್ತಿ ನೇಣು ಹಾಕಿಕೊಂಡು ಆತ್ಮಹತ್ಯೆ

ಗೌರಿಬಿದನೂರು: ಮೈಕ್ರೊ ಫೈನಾನ್ಸ್‌ಗಳ ಕಿರುಕುಳಕ್ಕೆ ಬೇಸತ್ತು ತಾಲ್ಲೂಕಿನ ಎಂ.ಜಾಲಹಳ್ಳಿಯ ಮಂಜುನಾಥ್ (34) ಭಾನುವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

'ಮಗ ಖಾಸಗಿ ಫೈನಾನ್ಸ್‌ಗಳಲ್ಲಿ ₹6.25ಲಕ್ಷ ಸಾಲ ಮಾಡಿದ್ದ. ಭಾನುವಾರ ಎಲ್‌ಎನ್‌ಟಿ ಫೈನಾನ್ಸ್‌ನವರು ₹10ಸಾವಿರ ಕಂತು ಕಟ್ಟಲೇಬೇಕು ಎಂದು ಪಟ್ಟು ಹಿಡಿದಿದ್ದರು' ಎಂದು ತಾಯಿ ಗಂಗರತ್ನಮ್ಮ ಹೇಳಿದ್ದಾರೆ.

ಕುಟುಂಬಸ್ಥರು ಸೋಮವಾರ ಗೌರಿಬಿದನೂರಿನ ಎಲ್‌ಎನ್‌ಟಿ ಫೈನಾನ್ಸ್ ಕಚೇರಿ ಬಳಿ ಶವ ತಂದು ಪ್ರತಿಭಟಿಸಲು ಮುಂದಾಗುತ್ತಿದ್ದಂತೆ ಸಿಬ್ಬಂದಿ ಕಚೇರಿಗೆ ಬೀಗ ಹಾಕಿಕೊಂಡು ಹೊರಟರು. ಆಗ ವೃತ್ತ ನಿರೀಕ್ಷಕ ಕೆ.ಪಿ ಸತ್ಯನಾರಾಯಣ್ ಮಧ್ಯಪ್ರವೇಶಿಸಿ ಫೈನಾನ್ಸ್ ವಿರುದ್ಧ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392–200293
ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ–2/2024–25/2658 ದಿ:12.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
("KPPP" ಪೋರ್ಟಲ್ ಕೆ.ಡಬ್ಲ್ಯೂ–4 ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ 4702 ಪ್ರಧಾನ ಕಾಮಗಾರಿ (ಹೊಸಕೆರೆ) ಯೋಜನೆಯಡಿ ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಚನ್ನಿಹಳ್ಳಿ ತಾಂಡಾ ಗ್ರಾಮದ ಹತ್ತಿರ ಜಿನುಗು ಕೆರೆ ನಿರ್ಮಾಣ ಕಾಮಗಾರಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಅಂದಾಜು ಮೊತ್ತ ರೂ. 404.25 ಲಕ್ಷಗಳಿರುತ್ತದೆ ಟೆಂಡರ್‌ನ್ನು ದಿನಾಂಕ: 12.03.2025 ರಿಂದ ದಿನಾಂಕ: 19.03.2025 ರ ಸಂಜೆ 5.30 ಗಂಟೆಯವರಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 21.03.2025 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ಗಳನ್ನು ದಿನಾಂಕ: 25.03.2025 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು "KPPP" ವೆಬ್‌ಸೈಟ್ http://kppp.karnataka.gov.in ನಲ್ಲಿ ಪಡೆಯಬಹುದು.
ಸಹಿ/ ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/1031/ಕೆಎಸ್‌ಎಂಸಿಎ/2024–25

ಅಟಲ್ ಭೂಜಲ್ ಜಲ ಯೋಜನೆ
(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಯೋಜನಾ ನಿರ್ದೇಶಕರ ಕಛೇರಿ, ರಾಜ್ಯ ಕಾರ್ಯಕ್ರಮ ನಿರ್ವಹಣಾ ಘಟಕ (SPMU), ಅಟಲ್ ಭೂಜಲ್ ಯೋಜನೆ, ನಂ.1/1, 2ನೇ ಮಹಡಿ, ಕೆಎಸ್‌ಎಫ್‌ಸಿ ಭವನ ತಿಮ್ಮಯ್ಯ ರಸ್ತೆ, ಬೆಂಗಳೂರು–560 052.
No. ABHY/SPMU/PROC/35/2024-25 Date: 17.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಎಸ್.ಪಿ.ಎಂ.ಯು, ಅಟಲ್ ಭೂಜಲ್ ಯೋಜನೆ, ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಬಿಡ್‌ದಾರರಿಂದ "Short Term Tender for providing SPMU & DPMU Experts and supporting staff manpower service to Atal Bhujal Yojana in the State of Karnataka" ಇಲ್ಲಿಗೆ ಸೇವೆಯನ್ನು ಒದಗಿಸಲು ಟೆಂಡರ್ ಅನ್ನು ಆಹ್ವಾನಿಸಲಾಗಿದೆ.
ಅರ್ಹತೆ ಮತ್ತು ಇತರೆ ವಿವರಗಳಿಗೆ ಸಂಬಂಧಿಸಿದ ವಿವರವಾದ ಅಧಿಸೂಚನೆಯನ್ನು https://kppp.karnataka.gov.in ಗೆ ಲಾಗ್ ಇನ್ ಮಾಡುವ ಮೂಲಕ ಪಡೆಯಬಹುದು. ಟೆಂಡರ್ ಡಾಕ್ಯೂಮೆಂಟ್ ಅನ್ನು ದಿನಾಂಕ: 18.03.2025 ರಿಂದ ಕೆಪಿಪಿ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಬಹುದು ಮತ್ತು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವನ್ನು ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಉಲ್ಲೇಖಿಸಲಾಗಿದೆ.
ಹೆಚ್ಚಿನ ವಿವರಗಳನ್ನು ಕಚೇರಿ ಸಮಯದಿಂದ ಬೆಳಿಗ್ಗೆ 10:00 ಗಂಟೆಯಿಂದ ಸಂಜೆ 5:30 ಗಂಟೆಗಳವರೆಗೆ ಪಡೆಯಬಹುದು. ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
DIPR/CP/RO5747/AAPL/2024-25 ಎಸ್.ಪಿ.ಎಂ.ಯು, ಅಟಲ್ ಜಲ್, ಕರ್ನಾಟಕ

ಬನ್ನೇರುಘಟ್ಟ ಜೈವಿಕ ಉದ್ಯಾನವನ
ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು – 560083. ಫೋನ್: 080–29776466 / 29776467
ಇ–ಮೇಲ್: ed@bannerughattabiopark.org
ಸಂಖ್ಯೆ:ಎ3/ಬಬಪಾ/ಟೆಂಡರ್/ಸಿವಿಲ್ ಕಾಮಗಾರಿ/ಸಿಆರ್–06/2024–25 ದಿನಾಂಕ: 13–03–2025

ಟೆಂಡರ್ ಪ್ರಕಟಣೆ

ಬನ್ನೇರುಘಟ್ಟ ಜೈವಿಕ ಉದ್ಯಾನವನದ ವ್ಯಾಪ್ತಿಯಲ್ಲಿ ಆಯೋಜಿಸಿರುವ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ ಗುತ್ತಿಗೆದಾರರಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿರುತ್ತದೆ.
ವಿವರವಾದ ಟೆಂಡರ್ ಅಧಿಸೂಚನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಿಂದ ದಿನಾಂಕ: 17–03–2025 ರ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ಪೂರ್ವಭಾವಿ ಸಭೆಯ ದಿನಾಂಕ: 21–03–2025 ರಂದು ಬೆಳಿಗ್ಗೆ 11.30 ಗಂಟೆಗೆ. ಟೆಂಡರ್‌ನ ವಿಚಾರಣೆಗಳು ಮತ್ತು ಸ್ಪಷ್ಟೀಕರಣಕ್ಕಾಗಿ ಕೊನೆಯ ದಿನಾಂಕ ಮತ್ತು ಸಮಯ: 25–03–2025. ನಿಗಧಿತ ಇ.ಎಂ.ಡಿ ಹಾಗೂ ಟೆಂಡರ್ ಪ್ರೊಸೆಸ್ಸಿಂಗ್ ಫೀ ಯೊಂದಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 26–03–2025 ರ ಸಂಜೆ 4.00 ಗಂಟೆವರೆಗೆ. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: 27–03–2025 ರ ಸಂಜೆ 4.30 ಗಂಟೆಗೆ. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: 29–03–2025 ರಂದು ಬೆಳಿಗ್ಗೆ 11.30 ಗಂಟೆಗೆ.
ಸಹಿ/–
ವಾಸಾಸಂಇ/ವಾ.ಪ್ರ/5730/ಅಡ್ವರ್ಟೋರ್/2024–25 ಕಾರ್ಯನಿರ್ವಾಹಕ ನಿರ್ದೇಶಕರು

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ
ಐ.ಎಫ್.ಟಿ.ಸಂಖ್ಯೆ:26/2024–25
ದಿನಾಂಕ:13.03.2025

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ–3 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ https://kppp.karnataka. gov.in ನಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಮೊತ್ತ ರೂ.80.60 ಲಕ್ಷಗಳು ಟೆಂಡರ್ ಸಲ್ಲಿಸುವ ಕಡೆಯ ದಿ: 21.03.2025 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರಾಕ್ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/–ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/1066/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ, ಉತ್ತರ ಕನ್ನಡ
ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಅಧಿಕಾರಿಗಳು
ಉತ್ತರ ಕನ್ನಡ – ಕಾರವಾರ.
E-mail: dhoukannada@gmail.com Phone: 08382-226339
ಕ್ರಸಂ:ಅಭಿವೃದ್ಧಿ(1)/14/2024–25 ದಿನಾಂಕ: 13/03/2025

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

2025–26ನೇ ನೇ ಸಾಲಿಗೆ ಸಾಲಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಉ.ಕ., ಕಾರವಾರ ಅಧೀನದಲ್ಲಿ ಒಳಪಡುವ ಆರೋಗ್ಯ ಸಂಸ್ಥೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಬಾಹ್ಯ ಸಂಪನ್ಮೂಲ ಸಂಸ್ಥೆಯ ಮೂಲಕ ಸಿಬ್ಬಂದಿಗಳನ್ನು ಪೂರೈಸುವ ಕುರಿತು ಇ–ಟೆಂಡರ್ ಆಹ್ವಾನ ಕೆಳಕಾಣಿಸಿದಂತೆ ಅರ್ಹ ಸಂಸ್ಥೆ/ಏಜೆನ್ಸಿಗಳಿಂದ ಈ ಪ್ರೊಕ್ಯೂರಮೆಂಟ್ ಮೂಲಕ ಗ್ರೂಪ್ ಡಿ/ಲ್ಯಾಬ್ ಟೆಕ್ನಿಷಿಯನ್/ ಡಾಟಾ ಎಂಟ್ರಿ ಆಪರೇಟರ್ ಸಿಬ್ಬಂದಿಗಳನ್ನು ಪೂರೈಸಲು ಟೆಂಡರ್ ಆಹ್ವಾನಿಸಲಾಗಿದೆ ಟೆಂಡರ್ ನಮೂನೆಗಳಿಗಾಗಿ ಇ.ಎಂ.ಡಿ ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ನೋಡಬಹುದಾಗಿದೆ.
ಇ– ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ವಿವರಗಳು: (1) ಇ.ಎಂ.ಡಿ ಮೊತ್ತ 2% ರೂ. 6,33,205/– (2) ಇ– ಪ್ರೋಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರ್ ಫಾರಂ ಡೌನಲೋಡ್ ಆರಂಭ ದಿನಾಂಕ ದಿನಾಂಕ: 14–03–2025 ಪೂರ್ವಾಹ್ನ 11.00 (3) ಟೆಂಡರ್‌ನಲ್ಲಿ ಆಕ್ಷೇಪಣೆಗಳಿದ್ದಲ್ಲಿ ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ ದಿನಾಂಕ: 02–04–2025 (4) ಇ–ಪ್ರೋಕ್ಯೂರ್‌ಮೆಂಟ್ ವೇದಿಕೆಯ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ ದಿನಾಂಕ: 14–04–2025 ಸಾಯಂಕಾಲ 5:30 (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ ದಿನಾಂಕ: 16–04–2025 ಸಾಯಂಕಾಲ 5:30 (6)ಟೆಂಡರ್ ಅಂದಾಜು ಮೊತ್ತ ರೂ.3,16,00,000/–
ಮೇಲಿನ ದಿನಾಂಕಗಳಂದು ಸಾರ್ವಜನಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಲಾಗುವುದು.
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿ
ಉತ್ತರ ಕನ್ನಡ, ಕಾರವಾರ.
DIPR/ADK/KSMCA/995/24-25 dt. 17.03.2025

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಅಭಿಯಂತರರು(ವಿ), ಟೆಂಡರಿಂಗ್ & ಪ್ರೊಕ್ಯುರ್‌ಮೆಂಟ್,
ನವನಗರ ಪಿ.ಬಿ.ರಸ್ತೆ, ಹುಬ್ಬಳ್ಳಿ–25
ಇ–ಮೇಲ್: seetp.hescom@gmail.com / seetp@hescom.co.in
ದೂ: 0836–2224792 ಫ್ಯಾಕ್ಸ್: 0836–2324307
Corporate Identity Number CIN: U31401KA2002SGC030437
ಸಂಖ್ಯೆ: ಹುವಿಸಕಂನಿ/ಅಇಂ(ಟಿ&ಪಿ)/ಇ–7/ಎಇಇ–1/2024–25/CYS-9636
ದಿನಾಂಕ: 17.03.2025

ಟೆಂಡರ್ ಆಹ್ವಾನಿಸುವ ಅಧಿಸೂಚನೆ

ಅಧೀಕ್ಷಕ ಅಭಿಯಂತರರು (ವಿ), (ಟೆಂಡರಿಂಗ್ & ಪ್ರೊಕ್ಯೂರಮೆಂಟ್), ಹುವಿಸಕಂನಿ, ಹುಬ್ಬಳ್ಳಿ, ಇವರು ಇ. ಪ್ರೊಕ್ಯೂರಮೆಂಟ್ ಕಟ್ಟೆಯಡಿ, ದ್ವಿ–ಪದ್ಧತಿಯಲ್ಲಿ ಈ ಕೆಳಗಿನಂತೆ ಟೆಂಡರ್ ಆಹ್ವಾನಿಸಿರುತ್ತಾರೆ

1	ಉಪಕರಣದ ವಿವರ	ಎರಡು ಜೊತೆ ಸಾಕ್ಸದೊಂದಿಗೆ ಸುರಕ್ಷತಾ ಶೂಗಳು
2	ಇಎಮ್‌ಡಿ ಮೊತ್ತ	ರೂ 1,77,000/–
3	ವಿಚಾರಣೆ ಸಂಖ್ಯೆ	HESCOM/2024-25/ IND0073/CALL-3
4	ವಿಚಾರಣೆ ಪ್ರಕಟಿಸಲಾಗುವ ದಿನಾಂಕ	15.03.2025
5	ತಾಂತ್ರಿಕ ಬಿಡ್‌ನ್ನು ಸಲ್ಲಿಸಲು ಕೊನೆಯ ದಿನಾಂಕ	02.04.2025 4.30 PM
6	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ	03.04.2025 5.00 PM

ಹೆಚ್ಚಿನ ಮಾಹಿತಿಗಾಗಿ kppp.karnataka.gov.in ವೆಬ್‌ಸೈಟನ್ನು ದಿ–15.03.2025 ಅಥವಾ ನಂತರದಲ್ಲಿ ಸಂಪರ್ಕಿಸಬಹುದು.
ಸಹಿ/–
ಅಧೀಕ್ಷಕ ಅಭಿಯಂತರರು (ವಿ),
ಟೆಂಡರ್ & ಪ್ರೊಕ್ಯೂರಮೆಂಟ್,
ಹುವಿಸಕಂನಿ, ನವನಗರ ಹುಬ್ಬಳ್ಳಿ.
ವಾ.ಸಾ.ಇ./ಧಾರವಾಡ/1099/ಮಣಿಪಾಲ್/2024–25

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯವರ ಕಾರ್ಯಾಲಯ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಶಾಂತಿನಿಲಯ, ಕಾನ್ವೆಂಟ್ ಜಂಕ್ಷನ್ ಮಡಿಕೇರಿ, ಕೊಡಗು ಜಿಲ್ಲೆ–571201
email: dcpokodagu@gmail.com, ದೂರವಾಣಿ: 08272–228800

ಪೋಷಕರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ

ದಿನಾಂಕ: 15–03–2025 ರಂದು ಕೊಡಗು ಜಿಲ್ಲೆ ಮಡಿಕೇರಿ ತಾಲ್ಲೂಕಿನ ಪೇರೂರು ಗ್ರಾಮ ಬಲ್ಲಮಾವಟಿ ಅಂಚೆಯ ತೋಲಂಡ ಜಿ. ಪೂಣಚ್ಚ ಎಂಬುವರ ತೋಟದ ಲೈನ್ ಮನೆಯ ಜಗಲಿಯ ಆವರಣದಲ್ಲಿ ಮಗು ಅಳುವ ಶಬ್ದ ಕೇಳಿದ್ದು, ಬಿಳಿಯ ಬಟ್ಟೆಯಲ್ಲಿ ಆಗತಾನೇ ಹೆರಿಗೆಯಾದ ಮಗು ಇದ್ದು, ಸುತ್ತಮುತ್ತ ನೋಡಲಾಗಿ ಅಲ್ಲಿ ಯಾರು ಇಲ್ಲದೇ ಇದ್ದುದ್ದರಿಂದ ಶ್ರೀ. ಪೂಣಚ್ಚನವರು 112ಗೆ ಕರೆಮಾಡಿದ್ದು, ಸ್ಥಳಕ್ಕೆ ನಾಪೋಕ್ಲು ಪೊಲೀಸ್‌ನವರು ಬಂದು ಮಗುವನ್ನು ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿರುತ್ತದೆ. ಮಗುವಿನ ತಂದೆ ತಾಯಿಯನ್ನು ಹುಡುಕಾಡಿದಾಗ ಯಾರೂ ಸಿಗದೇ ಇರುವ ಕಾರಣ ಈ ಕುರಿತು ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ಸಂಖ್ಯೆ:0021/2025 ದಿನಾಂಕ:16–03–2025 ರಡಿ ಪ್ರಕರಣ ದಾಖಲಿಸಲಾಗಿರುತ್ತದೆ. ಆದ್ದರಿಂದ ಸದರಿ ಮಗುವಿನ ಪಾಲಕರು/ಪೋಷಕರು ಕಾನೂನು ರೀತಿ ಹಕ್ಕುಳ್ಳವರು ಎಲ್ಲಿಯಾದರೂ 2 ತಿಂಗಳ ಅವಧಿ ಮುಗಿಯುವ ಒಳಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಡಗು ಜಿಲ್ಲೆ, ಹಾಗೂ ಮಡಿಲು ಸರ್ಕಾರಿ ವಿಶೇಷ ದತ್ತು ಸಂಸ್ಥೆ, ಮಡಿಕೇರಿ ಇವರನ್ನು ಸಂಪರ್ಕಿಸಬೇಕು, ಒಂದು ವೇಳೆ ಯಾರೂ ವಾರಸುದಾರರು ಬಾರದ ಪಕ್ಷದಲ್ಲಿ ಕಾನೂನು ರೀತಿಯಲ್ಲಿ ದತ್ತು ಪ್ರಕ್ರಿಯೆಗೆ ಒಳಪಡಿಸಲಾಗುವುದೆಂದು ಕೊಡಗು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಪ್ರಕಟಣೆಯಲ್ಲಿ ತಿಳಿಸಿದೆ.
ಮಗುವಿನ ವಿವರ: ಮಗು ಸಿಕ್ಕ ದಿನಾಂಕ : 15–03–2025. ಮಗು ಸಿಕ್ಕ ಸ್ಥಳ: ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಪೇರೂರು ಗ್ರಾಮ ಬಲ್ಲಮಾವಟಿ ಅಂಚೆಯ ತೋಲಂಡ ಜಿ. ಪೂಣಚ್ಚ ಎಂಬುವರ ತೋಟದ ಲೈನ್ ಮನೆ. ಲಿಂಗ: ಹೆಣ್ಣು, ಮೈಬಣ್ಣ: ಗೋಧಿ ಬಣ್ಣ
ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಡಿಕೇರಿ, ಕೊಡಗು ಜಿಲ್ಲೆ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆವಿಕಂನ ಬೆಂಗಳೂರು ಗ್ರಾಮೀಣ ವೃತ್ತ, ವ್ಯಾಪ್ತಿಯಲ್ಲಿ SMC LT rewireable Fuse Protection Box ಗಳ ಪೂರೈಕೆ, ಸ್ಥಾಪನೆ ಮತ್ತು ಕಾರ್ಯಾರಂಭ ಕಾಮಗಾರಿಯನ್ನು ಒಂದು ವರ್ಷದ ಅವಧಿಗೆ ಕೈಗೊಳ್ಳಲು ಒಟ್ಟು ಟರ್ನ್‌ಕೀ ಆಧಾರದ ಮೇಲೆ ವಿಚಾರಣೆ ಸಂಖ್ಯೆ: BESCOM/2024-25/EL/WORK_INDENT443 ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
ಬಿಡ್ ದಾಖಲೆಗಳು ದೊರೆಯುವ ದಿನಾಂಕ: 18.03.2025ರಿಂದ. ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ: 16.04.2025 ರಂದು ಮಧ್ಯಾಹ್ನ 3:00 ಗಂಟೆಯವರೆಗೆ. ಬಿಡ್‌ಗಳನ್ನು ತೆರೆಯುವ ದಿನಾಂಕ: 17.04.2025 ರಂದು ಮಧ್ಯಾಹ್ನ 3:15 ಗಂಟೆಗೆ.
ಇಚ್ಛೆಯುಳ್ಳ ಅರ್ಹ ಬಿಡ್ಡುದಾರರು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ಅಡಿಯಲ್ಲಿ ನೋಂದಾಯಿಸಿಕೊಂಡು ಭಾಗವಹಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಸಹಾಯವಾಣಿ ಸಂಪರ್ಕ ಸಂಖ್ಯೆಗಳು (+91-8046010000, +91-8068948777) ಅಥವಾ support@eprochelpdesk.com ಗೆ ಇಮೇಲ್ ಮಾಡುವ ಮೂಲಕ ಸಹಾಯ ಪಡೆಯಬಹುದು.
ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು(ವಿ), ಖರೀದಿ ಶಾಖೆ, ಬೆ.ವಿ.ಕಂ, 2ನೇ ಮಹಡಿ, ಕೆ.ಆರ್.ವೃತ್ತ, ಬೆಂಗಳೂರು–560 001 ದೂ : 080–22352704.
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile App ಡೌನ್‌ಲೋಡ್ ಮಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ವಿಜಯನಗರ ವಿಭಾಗ, 3ನೇ ಮುಖ್ಯರಸ್ತೆ, 1ನೇ ಮಹಡಿ, ಶಾಸಕರ ಭವನ, ವಿಜಯನಗರ, ಬೆಂಗಳೂರು – 560 040.
ಸಂಖ್ಯೆ: ಕಾಪಾಅ(ವಿನ)/ಎಇ/ಕೆಪಿಪಿಪಿ/11/2024–25 ದಿನಾಂಕ: 17.03.2025

ಟೆಂಡರ್ ಪ್ರಕಟಣೆ (ಏಕಲಕೋಟೆ & ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ವಿಜಯನಗರ) ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಬೃ.ಬೆಂ.ಮ.ಪಾ/ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಎಸ್.ಟಿ.ಡಿ. ಕೆಡಬ್ಲ್ಯೂ–3)

ಕ್ರ ಸಂ.	ಕಾಮಗಾರಿಗಳ ಹೆಸರು/ವರ್ಗೀಕರಣ (ದ್ವಿಲಕೋಟೆ ಪದ್ಧತಿ) (ಕೆಡಬ್ಲ್ಯೂ–3)
1.	ವಿಜಯನಗರ ಕ್ಷೇತ್ರದ ಮನುವನ & ಆರ್‌ಪಿಸಿ ಬಡಾವಣೆಯಲ್ಲಿ ಪ್ರವಾಹ ತಗ್ಗಿಸುವಿಕೆ ಕಾಮಗಾರಿಗಳನ್ನು ಮಾಡುವುದು (ಸಾಮಾನ್ಯರಿಗೆ) ಕಾಮಗಾರಿಗಿಟ್ಟ ಅಂದಾಜು ಮೊತ್ತ ₹60.00 ಲಕ್ಷಗಳು, ಇಎಂಡಿ: ₹120000/–
2.	ಗಾಳಿ ಆಂಜನೇಯ ದೇವಸ್ಥಾನ ಉಪವಿಭಾಗದ ವಾರ್ಡ್ ಸಂಖ್ಯೆ–149, 150, 151 & 152ರಲ್ಲಿ 2024–25ನೇ ಸಾಲಿಗೆ ರಸ್ತೆ ಗುಂಡಿಗಳನ್ನು ಮುಚ್ಚುವುದು ಮತ್ತು ರಸ್ತೆ ಅಗೆದಿರುವ ಭಾಗಗಳನ್ನು ಮರುಸ್ಥಾಪನೆ ಮಾಡುವುದು. (3ನೇ ಕರೆ) (ಸಾಮಾನ್ಯರಿಗೆ) ಕಾಮಗಾರಿಗಿಟ್ಟ ಅಂದಾಜು ಮೊತ್ತ ₹60.00 ಲಕ್ಷಗಳು, ಇಎಂಡಿ: ₹120000/–
3.	ವಾರ್ಡ್ ಸಂಖ್ಯೆ–144 ಕೆ ಪಿ ಅಗ್ರಹಾರ ಮತ್ತು ವಾರ್ಡ್ ಸಂಖ್ಯೆ–145 ವಿಜಯನಗರದಲ್ಲಿ ರಸ್ತೆಗಳು, ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. (ಸಾಮಾನ್ಯರಿಗೆ) ಕಾಮಗಾರಿಗಿಟ್ಟ ಅಂದಾಜು ಮೊತ್ತ ₹100.00 ಲಕ್ಷಗಳು, ಇಎಂಡಿ: ₹200000/– (ರೂ.1.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ & ಉಳಿದ ರೂ.1,00,000/– ಬ್ಯಾಂಕ್ ಗ್ಯಾರಂಟಿ/ಎಫ್‌ಡಿ ಮೂಲಕ ಭರಿಸುವುದು)
4.	ವಾರ್ಡ್ ಸಂಖ್ಯೆ–148 ಹೊಸ ಗುಡ್ಡದಹಳ್ಳಿಯ ಹೊಸ ಗುಡ್ಡದಹಳ್ಳಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು, ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. (ಸಾಮಾನ್ಯರಿಗೆ) ಕಾಮಗಾರಿಗಿಟ್ಟ ಅಂದಾಜು ಮೊತ್ತ ₹100.00 ಲಕ್ಷಗಳು, ಇಎಂಡಿ: ₹200000/– (ರೂ.1.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ & ಉಳಿದ ರೂ.1,00,000/– ಬ್ಯಾಂಕ್ ಗ್ಯಾರಂಟಿ/ಎಫ್‌ಡಿ ಮೂಲಕ ಭರಿಸುವುದು)

ಟೆಂಡರ್ ವೇಳಾಪಟ್ಟಿ: (1) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 25.03.2025ರ ಮಧ್ಯಾಹ್ನ 3:00 ಗಂಟೆಗೆ ನಡೆಸಲಾಗುವುದು. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ 28.03.2025ರ ಸಂಜೆ 4:00 ಗಂಟೆಯವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 29.03.2025 ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯವನ್ನು (ಕೆಪಿಪಿಪಿ ಮೂಲಕ ನಂತರ ತಿಳಿಸಲಾಗುವುದು)
ಸಹಿ/– ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–3 ರವರ ಕಚೇರಿ, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು – 560052
No: DGM-3/BSWML/Tend/09/24-25 Date: 17.03.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1) ಉಪ ಪ್ರಧಾನ ವ್ಯವಸ್ಥಾಪಕರು–3 ಬಿ ಎಸ್ ಡಬ್ಲ್ಯೂ ಎಂ ಎಲ್ ಇವರು ವ್ಯವಸ್ಥಾಪಕ ನಿರ್ದೇಶಕರು, ಬಿ ಎಸ್ ಡಬ್ಲ್ಯೂ ಎಂ ಎಲ್, ಇವರ ಪರವಾಗಿ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿರುವ ಕಾಮಗಾರಿಗಳಿಗೆ ಯೋಜನಾ ನಿರ್ವಹಣಾ ಸಲಹಾ ಸೇವೆಗಳಿಗೆ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರಕಾರದ ಕೆಪಿಪಿ ಪೋರ್ಟಲ್ : https ://kppp.karnataka.gov.in ಮೂಲಕ ಬಿಡ್‌ಗಳನ್ನು ಆಹ್ವಾನಿಸಿರುತ್ತಾರೆ. ಕಾಮಗಾರಿ ಅರ್ಹತೆ ಪಡೆಯಲು ಷರತ್ತು 3ರಲ್ಲಿ ನಿರ್ದಿಷ್ಟಪಡಿಸಿದ ಕೆಸಿ–6 ಮೂಲಕ ಕನಿಷ್ಠ ಅಹ್ರತಾ ಮಾನದಂಡಗಳನ್ನು ಗಮನಿಸಲು ಟೆಂಡರ್‌ದಾರರಿಗೆ ಸೂಚಿಸಲಾಗಿದೆ. ಹೆಚ್ಚಿನ ವಿವರಗಳನ್ನು ಟೆಂಡರ್ ಡಾಕ್ಯುಮೆಂಟ್ ನಲ್ಲಿ ವೀಕ್ಷಿಸಬಹುದು.

ಕ್ರ ಸಂ.	ಕಾಮಗಾರಿಯ ವಿವರಗಳು	ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಅವಧಿ (ಮಾನ್ಸೂನ್ ಸೇರಿದಂತೆ)	ಇಎಂಡಿ (ರೂ.ಗಳಲ್ಲಿ)
1	Appointment of PMC for the work of Village development works in Yeshwanthapura constituency around Seegehalli, Kannahalli & Doddabidrakallu waste processing plants. Village development works in Anekal & Bengaluru South constituency around waste Chikkanagamangala waste processing plant. Village development works in Yeshwanthapura constituency around Subbarayanapalya, Lingadeeranahalli waste processing plants (Call-2)	7500.00	12 ತಿಂಗಳು	1,50,000.00

ವೇಳಾಪಟ್ಟಿ :
1. ಪ್ರೀ ಬಿಡ್ ಆಕ್ಷೇಪಣೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 25.03.2025 ಸಂಜೆ 5.30 ಗಂಟೆಯವರೆಗೆ. 2) ಪೂರ್ವಭಾವಿ ಸಭೆಯ ದಿನಾಂಕ : 24.03.2025, ಮದ್ಯಾಹ್ನ 3 ಗಂಟೆಗೆ. ಸ್ಥಳ : ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರ ಕಚೇರಿ (ತಾಂತ್ರಿಕ) , ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು. 3) ಬಿಡ್ ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 01.04.2025, ಸಂಜೆ 4.00 ಗಂಟೆಯವರೆಗೆ. 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 02.04.2025, ಸಂಜೆ 4.30 ಗಂಟೆಗೆ. 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕವನ್ನು ತಾಂತ್ರಿಕವಾಗಿ ಅರ್ಹರಾಗಿರುವ ಬಿಡ್‌ದಾರರಿಗೆ ತಿಳಿಸಲಾಗುವುದು.
DIPR/CP/5752/Zen/2024-25 ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–3, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ.

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಿನ್ ಸಂಖ್ಯೆ: U04010KA2002SGC030436
ಸಂಖ್ಯೆ:ಗುವಿಸಕಂನಿ/ಅಅ(ವಿ)(ಖರೀದಿ)/ ಕಾನಿಇಂ/ಸಕಾನಿಇಂ/24–25/72785–90 ದಿನಾಂಕ:17.03.2025

:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ) ::

1. ಗು.ವಿ.ಸ.ಕಂ.ನಿ ವ್ಯಾಪ್ತಿಯಲ್ಲಿ ಬರುವ ಕಾರ್ಯ ಮತ್ತು ಪಾಲನೆ ವೃತ್ತವಾರು ರ್‍ಯಾಬಿಟ್ ಎಸಿಎಸ್‌ಆರ್ ವಾಹಕವನ್ನು ಗುವಿಸಕಂನಿಯ ತಾಂತ್ರಿಕ ನಿರ್ದಿಷ್ಟತೆಗಳಂತೆ ತಯಾರಿಸಿ ಸರಬರಾಜು ಮಾಡುವುದು.
ಪಿ.ಸಿ– 1424: ಕಾ ಮತ್ತು ಪಾ ವೃತ್ತ ಕಲಬುರಗಿ ಪಿ.ಸಿ– 1425: ಕಾ ಮತ್ತು ಪಾ ವೃತ್ತ ಬೀದರ್ ಪಿ.ಸಿ– 1426: ಕಾ ಮತ್ತು ಪಾ ವೃತ್ತ ಬಳ್ಳಾರಿ ಪಿ.ಸಿ– 1427: ಕಾ ಮತ್ತು ಪಾ ವೃತ್ತ ರಾಯಚೂರು ಪಿ.ಸಿ– 1428: ಕಾ ಮತ್ತು ಪಾ ವೃತ್ತ ಕೊಪ್ಪಳ.
2. ಗುವಿಸಕಂನಿಯ ತಾಂತ್ರಿಕ ನಿರ್ದಿಷ್ಟತೆಗಳಂತೆ, ವಿವಿಧ ಸಾಮರ್ಥ್ಯಗಳ ಸ್ಟಾರ್ 1 ವಿದ್ಯುತ ಪರಿವರ್ತಕಗಳ ತಯಾರಿಸಿ ಸರಬರಾಜು ಮಾಡುವುದು.
ಪಿಸಿ–1429: 25 ಕೆವಿಎ, ಪಿಸಿ–1430: 63 ಕೆವಿಎ, ಪಿಸಿ–1431 : 100 ಕೆವಿಎ,
ಟೆಂಡರ್ ಮೊತ್ತ: ಅತಿ ಹೆಚ್ಚು: ರೂ. 1998.00 ಲಕ್ಷಗಳು ಅತಿ ಕಡಿಮೆ: ರೂ. 825.45 ಲಕ್ಷಗಳು.
ದಿನಾಂಕ: ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: 19.03.2025 ರಂದು ಅಥವಾ ನಂತರ. ಟೆಂಡರ್ ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ, ತಾಂತ್ರಿಕ ಬಿಡ್ ತೆರೆಯುವ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: ಕೆ.ಪಿ.ಪಿ ಪೋರ್ಟಲ್‌ನಲ್ಲಿರುವಂತೆ
ಬಿಡ್ಡುದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು ಪ್ರಕಾರ, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಅಧೀಕ್ಷಕ ಅಭಿಯಂತರರು (ವಿ), ಖರೀದಿ ಶಾಖೆ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ–585 102. ಮೊ.ಸಂ: 94484 99997. ಅಂತರ್ಜಾಲತಾಣದ ವಿಳಾಸ: www.kppp.karnataka.gov.in.KPP ಪೋರ್ಟಲ್‌ನ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ +91–8046010000/8068948777 ಗೆ ಇಮೇಲ್ ವಿಳಾಸ:, upport@eprochelpdesk.comಗೆ ಸಂಪರ್ಕಿಸಬಹುದಾಗಿದೆ.
ಸಹಿ/– ಅಧೀಕ್ಷಕ ಅಭಿಯಂತರರು (ವಿ).,
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/1096/ಕೆ.ಎಸ್.ಎಂ.ಸಿ.&ಎ/2024–25

ಸುಭಾಷಿತ

ಎಲ್ಲಿ ಏನು ಹೇಳಬೇಕೋ ಎಷ್ಟು ಹೇಳಬೇಕೋ ಅಷ್ಟನ್ನೇ ಹೇಳಬೇಕು. ಮಾತು ನಮ್ಮ ಕೈಯೊಳಗೆ ಇರಬೇಕೇ ವಿನಾ ನಾವು ಮಾತಿನ ಕೈಯೊಳಗೆ ಇರಬಾರದು.

–ಸಿದ್ಧೇಶ್ವರ ಸ್ವಾಮೀಜಿ

ಹಿರಿಯ ನಾಗರಿಕರ ಕಡೆಗಣನೆ ಸಲ್ಲ ಸಮಾಜದ ಆತ್ಮಾವಲೋಕನ ಅಗತ್ಯ

ಹಿರಿಯ ನಾಗರಿಕರನ್ನು ಆರೈಕೆ ಮಾಡದೆ ನಿರ್ಲಕ್ಷಿಸುವ ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿ ಹಕ್ಕು ರದ್ದುಗೊಳಿಸಲು ಅವಕಾಶ ಕಲ್ಪಿಸುವ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ರಾಜ್ಯ ಸರ್ಕಾರ ಮುಂದಾಗಿರುವುದು ಅಗತ್ಯವಾಗಿದ್ದ ಕ್ರಮ. ಆಸ್ತಿಯನ್ನು ತಮ್ಮ ಹೆಸರಿಗೆ ಬರೆಸಿಕೊಂಡ ನಂತರ ಕೆಲವು ಮಕ್ಕಳು ತಮ್ಮ ವೃದ್ಧ ಪೋಷಕರನ್ನು ಆಸ್ಪತ್ರೆಗಳಲ್ಲಿ ಬಿಟ್ಟು ಹೋಗುತ್ತಿರುವ ಪ್ರಕರಣಗಳು ಬೆಳಕಿಗೆ ಬರುತ್ತಿರುವುದು ವರದಿಯಾಗಿದೆ. ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲೇ 150ಕ್ಕೂ ಹೆಚ್ಚು ಹಿರಿಯ ನಾಗರಿಕರನ್ನು ಮಕ್ಕಳು ಬಿಟ್ಟುಹೋಗಿದ್ದು, 'ಇತರ ವೈದ್ಯಕೀಯ ಸಂಸ್ಥೆಗಳಲ್ಲಿ ಇಂತಹ 100ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಹೀಗೆ ಆಸ್ಪತ್ರೆ ಸೇರಿದ ಕೆಲವು ಹಿರಿಯ ನಾಗರಿಕರಿಗೆ ಬೆಳಗಾವಿ ಮತ್ತು ಸುತ್ತಮುತ್ತಲಿನ ವೃದ್ಧಾಶ್ರಮಗಳಲ್ಲಿ ಆಸರೆ ಕಲ್ಪಿಸಲಾಗಿದೆ. ಆದರೆ, 'ಇನ್ನೂ ಅನೇಕರು ಆಸ್ಪತ್ರೆಗಳಲ್ಲಿಯೇ ಉಳಿದಿದ್ದು, ಅವರ ನಿರ್ವಹಣೆಯು ಆಸ್ಪತ್ರೆಗಳಿಗೆ ಹೆಚ್ಚುವರಿ ಹೊರೆಯಾಗಿದೆ. ಪೋಷಕರನ್ನು ಆಸ್ಪತ್ರೆಗಳ ಪಾಲು ಮಾಡಿ ಮಕ್ಕಳು ನಾಪತ್ತೆಯಾಗುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ವಿವಿಧ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗಳ ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಸದಸ್ಯರ ಜೊತೆ ಉನ್ನತ ವೈದ್ಯಕೀಯ ಶಿಕ್ಷಣ ಸಚಿವರು ಸಭೆ ನಡೆಸಿದ್ದಾರೆ. ತಾಯಿ-ತಂದೆಯರನ್ನು ಅನಾಥರನ್ನಾಗಿ ಮಾಡುತ್ತಿರುವವರ ಅಮಾನವೀಯ ಕೃತ್ಯಗಳಿಗೆ ತಡೆ ಹಾಕಬೇಕು ಎಂದು ಸೂಚಿಸಿರುವ ಅವರು, ಆರೈಕೆ ಮಾಡದ ಮಕ್ಕಳಿಗೆ ಮಾಡಿರುವ ಆಸ್ತಿ ವರ್ಗಾವಣೆ ಅಥವಾ ಉಯಿಲನ್ನು ರದ್ದುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. 'ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆ-2007'ರ ಸೆಕ್ಷನ್ 9ರ ಅಡಿಯಲ್ಲಿ, ತಮ್ಮ ಯೋಗಕ್ಷೇಮ ನಿರ್ಲಕ್ಷಿಸುವ ಮಕ್ಕಳ ವಿರುದ್ಧ ಪೋಷಕರು ದೂರು ನೀಡಬಹುದಾಗಿದೆ. ಸೆಕ್ಷನ್ 23ರ ಪ್ರಕಾರ, ಮಕ್ಕಳ ಅಥವಾ ಸಂಬಂಧಿಕರ ಹೆಸರಿನಲ್ಲಿ ಬರೆದಿರುವ ಉಯಿಲು ಅಥವಾ ದಾನಪತ್ರವನ್ನು ರದ್ದುಗೊಳಿಸಿ, ಆಸ್ತಿಯ ಹಕ್ಕನ್ನು ಪೋಷಕರ ಹೆಸರಿಗೆ ಮರುಸ್ಥಾಪಿಸಬಹುದಾಗಿದೆ; ಈ ಅಧಿಕಾರವನ್ನು ಉಪವಿಭಾಗಾಧಿಕಾರಿಗಳಿಗೆ ನೀಡಲಾಗಿದೆ. ಆದರೆ, ಈ ಕಾನೂನಿನ ಬಗ್ಗೆ ಬಹುತೇಕರಿಗೆ ಅರಿವಿಲ್ಲದಿರುವುದು ಪೋಷಕರನ್ನು ಮಕ್ಕಳು ನಿರ್ಲಕ್ಷಿಸಲು ಪ್ರಮುಖ ಕಾರಣಗಳಲ್ಲೊಂದಾಗಿದೆ. ಹಿರಿಯ ನಾಗರಿಕರನ್ನು ಮಕ್ಕಳು ನಿರ್ಲಕ್ಷಿಸುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವ ವಿಷಯ ವಿಧಾನ ಪರಿಷತ್‌ನಲ್ಲೂ ಚರ್ಚೆಯಾಗಿದೆ.

ಘನತೆಯಿಂದ ಕೂಡಿರಬೇಕಾದ ವೃದ್ಧಾಪ್ಯವು ಅಸುರಕ್ಷತೆ ಹಾಗೂ ನೋವಿನಿಂದ ಕೂಡಿರುವುದು ಆರೋಗ್ಯಕರ ಸಮಾಜದ ಲಕ್ಷಣವಲ್ಲ

ವೃದ್ಧ ಪೋಷಕರನ್ನು ಮಕ್ಕಳು ಅಸಡ್ಡೆಯಿಂದ ನೋಡುವ ಮನೋಭಾವ ಹೆಚ್ಚುತ್ತಿರುವುದು ನಮ್ಮ ಸಾಮಾಜಿಕ ಸಂರಚನೆಯಲ್ಲಿ ಆಗಿರುವ ಗಂಭೀರ ಪಲ್ಲಟದ ಸಂಕೇತವಾಗಿದೆ. ಮಕ್ಕಳು ಮತ್ತು ಪೋಷಕರ ನಡುವೆ ಗಾಢ ಅನುಬಂಧದ ಭಾರತೀಯ ಕುಟುಂಬ ಪದ್ಧತಿ ವಿಶ್ವದಲ್ಲೇ ಪ್ರಸಿದ್ಧವಾದದ್ದು. ಮಕ್ಕಳನ್ನು ಪೋಷಕರು ಕಾಳಜಿ ಮಾಡುವುದು ಹಾಗೂ ವೃದ್ಧಾಪ್ಯದಲ್ಲಿ ಪೋಷಕರ ಆರೈಕೆಯನ್ನು ಮಕ್ಕಳು ಮಾಡುವುದು ಭಾರತೀಯ ಕುಟುಂಬ ಪದ್ಧತಿಯಲ್ಲಿ ಕರ್ತವ್ಯ ನಿರ್ವಹಣೆ ಅಥವಾ ಹೊಣೆಗಾರಿಕೆಯಷ್ಟೇ ಆಗಿರದೆ, ಅದು ನಮ್ಮ ಜೀವನಮೌಲ್ಯಗಳ ಪರಂಪರೆಯ ಮುಖ್ಯವಾದ ಲಕ್ಷಣವೂ ಆಗಿದೆ. ಆ ಮೌಲ್ಯ ಮಾದರಿಯಲ್ಲಿ ಸಡಿಲಿಕೆ ಉಂಟಾಗಿರುವುದರ ರೂಪದಲ್ಲಿ ಪೋಷಕರ ನಿರ್ಲಕ್ಷ್ಯದ ಪ್ರಕರಣಗಳನ್ನು ನೋಡಬಹುದಾಗಿದೆ. ವೈಯಕ್ತಿಕ ಹಿತಾಸಕ್ತಿಯಷ್ಟೇ ಮುಖ್ಯವಾಗಿ ಪ್ರಬಲವಾಗಿರುವ ಯುವ ತಲೆಮಾರಿಗೆ ತಮ್ಮ ಪೋಷಕರನ್ನು ಹೊರೆಯಂತೆ ಕಾಣಿಸಿದಲ್ಲಿ ಅಚ್ಚರಿಯೇನಿಲ್ಲ. ಹಾಗೆಂದು, ಪೋಷಕರನ್ನು ಆಸ್ಪತ್ರೆಗಳಲ್ಲಿ ಬಿಟ್ಟುಹೋದ ಎಲ್ಲ ಮಕ್ಕಳನ್ನೂ ನಿರ್ದಯಿಗಳೆಂದು ಹೇಳುವುದು ಸಾಧ್ಯವಿಲ್ಲ. ಆರ್ಥಿಕ ತೊಂದರೆಯಿಂದ ಬಳಲುವವರು ತಮ್ಮ ಪೋಷಕರನ್ನು ಸಾಕಲಾಗದೆ, ಉಚಿತ ಊಟ, ಚಿಕಿತ್ಸೆ ಮತ್ತು ವಸತಿ ದೊರೆಯುತ್ತದೆನ್ನುವ ಕಾರಣಕ್ಕಾಗಿ ತಂದೆ- ತಾಯಿಯನ್ನು ಆಸ್ಪತ್ರೆಯಲ್ಲಿ ಬಿಟ್ಟುಹೋಗಿರುವುದಿದೆ. ಆದರೆ, ತಂದೆ- ತಾಯಿಯ ಎಲ್ಲ ಆಸ್ತಿಯನ್ನೂ ಕಬಳಿಸಿ, ಬದುಕಿದ್ದ ಅವರನ್ನು ಕಡೆಗಣಿಸುವ ಪ್ರಕರಣಗಳು ಹೆಚ್ಚುತ್ತಿರುವುದು ಕಳವಳ ಹುಟ್ಟಿಸುವ ಸಂಗತಿ. ಪೋಷಕರನ್ನು ನೋಡಿಕೊಳ್ಳಬೇಕಾದುದು ಮಕ್ಕಳ ಕರ್ತವ್ಯ ಮಾತ್ರವಲ್ಲ, ಅದು ಭಾರತೀಯ ಕೌಟುಂಬಿಕ ಪದ್ಧತಿಯ ಮೌಲ್ಯ ಮಾದರಿಯೂ ಹೌದು. ಆ ನೈತಿಕ ನೆಲಗಟ್ಟು ತ್ವರಿತಗತಿಯಲ್ಲಿ ಶಿಥಿಲವಾಗುತ್ತಿರುವುದು ಕಳವಳಕಾರಿ. ಹಿರಿಯ ನಾಗರಿಕರನ್ನು ಅಸಹಾಯಕತೆಗೆ ದೂಡುವ ಅಮಾನವೀಯ ಕೃತ್ಯಗಳನ್ನು ಗುರುತಿಸಿ, ಕಾನೂನು ಕ್ರಮದ ಮೂಲಕ ಸಮಸ್ಯೆಗೆ ಉತ್ತರ ಕಂಡುಕೊಳ್ಳಲು ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ. ಆದರೆ, ಸಮಾಜದಲ್ಲಿನ ನೈತಿಕ ಅಧಃಪತನವನ್ನು ತಡೆಗಟ್ಟುವುದು ಕಾನೂನಿನಿಂದ ಸಾಧ್ಯವಿಲ್ಲ. ಕುಟುಂಬ ಹಾಗೂ ಸಮಾಜದ ಜೀವಕೋಶವಾದ ನೈತಿಕತೆಗೆ ತಗುಲಿರುವ ರೋಗ ನಿವಾರಣೆಗೆ ದೊಡ್ಡದೊಂದು ನೈತಿಕ ಆಂದೋಲನವೇ ನಡೆಯಬೇಕಾಗಿದೆ. ಘನತೆಯಿಂದ ಕೂಡಿರಬೇಕಾದ ವೃದ್ಧಾಪ್ಯವು ಅಸುರಕ್ಷತೆ ಹಾಗೂ ನೋವಿನಿಂದ ಕೂಡಿರುವುದು ಆರೋಗ್ಯಕರ ಸಮಾಜದ ಲಕ್ಷಣವಲ್ಲ.

ಸಿಬಿಐ, ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆ ದಾಳಿಗಳಿಂದ ಆಗಿದ್ದೇನು?

ತನಿಖೆ ಹುಯಿಲು: ರಾಜಕೀಯ ಕೊಯ್ಲು

ಗತಿಬಿಂಬ

ವೈ.ಗ. ಜಗದೀಶ್

ಭೂಸುಧಾರಣೆ, ಪಂಚಾಯತ್ ಕಾಯ್ದೆ, ಹಿಂದುಳಿದವರು, ಮಹಿಳೆಯರಿಗೆ ಮೀಸಲಾತಿ, ಮಲ ಹೊರುವ ಹಾಗೂ ಜೀತ ಪದ್ಧತಿ ನಿಷೇಧ, ಮಾಹಿತಿ ತಂತ್ರಜ್ಞಾನ ಕ್ರಾಂತಿಯಂತಹ ಕಾರಣಗಳಿಗೆ ರಾಷ್ಟ್ರಮಟ್ಟದಲ್ಲಿ ನಾಡಿನ ಹೆಸರಿಗೆ ಹಿಂದೆಲ್ಲ ಹೊಳಪು ಬಂದಿದ್ದುಂಟು. ಇತ್ತೀಚಿನ ವರ್ಷಗಳಲ್ಲಿ ನಕಾರಾತ್ಮಕ ಕಾರಣಗಳಿಗಾಗಿ ಕರ್ನಾಟಕ ಸದ್ದು ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ.

ಅಕ್ರಮ ಗಣಿಗಾರಿಕೆಯಲ್ಲಿ ಭಾಗಿಯಾಗಿದ್ದ ಆರೋಪದ ಮೇಲೆ ಸಚಿವರು, ಮುಖ್ಯಮಂತ್ರಿಯಾಗಿದ್ದವರು ಜೈಲು ಸೇರಿದ್ದರು. ಅಕ್ರಮ ಹಣ ವರ್ಗಾವಣೆಯ ಆಪಾದನೆ ಮೇರೆಗೆ ಪ್ರಭಾವಿ ನಾಯಕರೊಬ್ಬರು ಜೈಲು ಪಾಲಾಗಿದ್ದರು. ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಪತ್ತೆಯಾಗಿದ್ದ ಬಿಟ್ ಕಾಯಿನ್ ಹಗರಣವಂತೂ ಬೆಚ್ಚಿ ಬೀಳಿಸುವಂತಿತ್ತು.

2024ರ ಲೋಕಸಭೆ ಚುನಾವಣೆ ಬಳಿಕ ನಡೆದ ಮತ್ತಷ್ಟು ವಿದ್ಯಮಾನಗಳು ನಾಡಿಗೆ ಕಪ್ಪುಚುಕ್ಕಿಗಳನ್ನೇ ಇಟ್ಟವು. ಯುವ ರಾಜಕಾರಣಿ ಪ್ರಜ್ವಲ್ ರೇವಣ್ಣ, ನಟ ದರ್ಶನ್ ಪ್ರಕರಣಗಳು ಅಧಿಕಾರಸ್ಥರು ಹಾಗೂ ಹಣವಂತರ ದುಷ್ಟತನವನ್ನು ಬಯಲುಗೊಳಿಸಿದವು. ಅದಾದ ಬಳಿಕ, ವಾಲ್ಮೀಕಿ ನಿಗಮ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಹಗರಣಗಳು ಮುನ್ನೆಲೆಗೆ ಬಂದವು. ಕಳೆದ ಹತ್ತು ದಿನಗಳಿಂದೀಚೆಗೆ ಚಿನ್ನದ ಕಳ್ಳಸಾಗಣೆ ವಿಷಯ ಭಾರಿ ಸದ್ದು ಮಾಡುತ್ತಿದೆ. ಈ ಜಾಲ ದೇಶದ ಹಲವು ನಗರ ಹಾಗೂ ವಿದೇಶಕ್ಕೂ ಚಾಚಿರುವುದು ಒಂದು ಕಾರಣವಾದರೆ, ಸಾಗಣೆಯಲ್ಲಿ ಪ್ರಮುಖ ಪಾತ್ರ ವಹಿಸಿದಂತಿರುವ ನಟಿ ರನ್ಯಾ ರಾವ್‌ಗೆ ಇರಬಹುದಾದ ಹಲ ಬಗೆಯ ನಂಟುಗಳೂ ಮತ್ತೊಂದು ಕಾರಣ.

ಅದರಲ್ಲೂ ರನ್ಯಾ ರಾವ್ ಚಿನ್ನ ಸಾಗಣೆ ಪ್ರಕರಣದಲ್ಲಿ ರಾಜ್ಯ ಸರ್ಕಾರದ ಇಬ್ಬರು ಪ್ರಭಾವಿ ಸಚಿವರ ನಂಟಿದೆ ಎಂಬ ಮಾಹಿತಿಯು ರಾಜಕೀಯ ವಲಯದಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿತು. ಆ ಸಚಿವರು ಯಾರೆಂಬುದು ನಿಗೂಢವಾಗಿಯೇ ಉಳಿದಿದೆಯಾದರೂ ರಾಜಕೀಯ ಹಾಗೂ ಪೊಲೀಸ್ ವಲಯದಲ್ಲಿ ಈ ಹೆಸರುಗಳು ರಹಸ್ಯವಾಗಿ ಉಳಿದಿಲ್ಲ. ವಾಲ್ಮೀಕಿ ಅಭಿವೃದ್ಧಿ ನಿಗಮ ಹಾಗೂ ಮುಡಾ ಪ್ರಕರಣಗಳಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ತಮ್ಮ ಆಯ್ಕೆಯ ವಿವರಗಳಷ್ಟನ್ನೇ ಅಧಿಕೃತ ಟಿಪ್ಪಣಿಗಳ ರೂಪದಲ್ಲಿ 'ಸೋರಿಕೆ' ಮಾಡುತ್ತಿದ್ದರು. ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಡಿಆರ್‌ಐ, ಇ.ಡಿ, ಸಿಬಿಐ ಹೀಗೆ ಕೇಂದ್ರ ಸರ್ಕಾರದ ತನಿಖಾ ಸಂಸ್ಥೆಗಳು ಒಂದರ ಮೇಲೊಂದರಂತೆ ತನಿಖೆ ನಡೆಸುತ್ತಿದ್ದರೂ ಯಾವುದೇ ಮಾಹಿತಿಯನ್ನೂ ಹೊರಗೆಡವುತ್ತಿಲ್ಲ. ಇದು ಕುತೂಹಲಕ್ಕೆ ಎಡೆಮಾಡಿದೆ.

ಹಿಂದಿನ ಐದು ವರ್ಷದತ್ತ ಪಕ್ಷಿನೋಟ ಬೀರಿದರೆ, ಇಂತಹ ಪ್ರಕರಣಗಳು ಆರಂಭದಲ್ಲಿ ಜಗತ್ತನ್ನೇ ಬಡಿದೆಬ್ಬಿಸುವಷ್ಟು ಸದ್ದು ಹುಟ್ಟಿಸುತ್ತವೆ. ಯಾರಿಗೋ ನಂಟು ಉಂಟೆಂಬ ಮಾಹಿತಿಯನ್ನು ತನಿಖಾ ಸಂಸ್ಥೆಗಳೇ ಸೋರಿಕೆ ಮಾಡುತ್ತವೆ. ಭಾರಿ ಪ್ರಮಾಣದ ದಾಖಲೆಗಳು ಸಿಕ್ಕಿವೆಯೆಂದು ಸುದ್ದಿಯನ್ನೂ ಹರಿಯಬಿಡಲಾಗುತ್ತದೆ. ಸದ್ದುಗದ್ದಲ ಏನಿದ್ದರೂ, ಮತ್ತೊಂದು ಪ್ರಕರಣ ಮುನ್ನೆಲೆಗೆ ಬರುವವರೆಗಷ್ಟೆ. ಘನಘೋರ ಎನ್ನಿಸಿದ ಪ್ರಕರಣ ಎಲ್ಲರ ನೆನಪಿನಿಂದ ಕ್ರಮೇಣ ಮರೆಯಾಗುತ್ತದೆ.

ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಆಯನೂರು ಉಮೇಶ ಸೇರಿದಂತೆ ಹಲವರ ಮನೆ, ಕಚೇರಿಯ ಮೇಲೆ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು ದಾಳಿ ನಡೆಸಿದರು. ಸಾವಿರಾರು ಕೋಟಿ ರೂಪಾಯಿ ಮೊತ್ತದ ಟೆಂಡರ್ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಬಹುಕೋಟಿ ಅಕ್ರಮಕ್ಕೆ ಸಂಬಂಧಿಸಿದ ದಾಖಲೆ ಲಭ್ಯವಾಗಿದೆ ಎಂಬ ಮಾಹಿತಿಯೂ ಹೊರಬಿದ್ದಿತ್ತು. ಆಗ, ಬಿಜೆಪಿ ವರಿಷ್ಠರ ವಿರುದ್ಧ ತಿರುಗಿಬಿದ್ದಿದ್ದ ಯಡಿಯೂರಪ್ಪನವರನ್ನು ಹದ್ದುಬಸ್ತಿನಲ್ಲಿಡಲಷ್ಟೇ ಇದನ್ನು ಬಳಸಲಾಯಿತೇ ವಿನಾ ಪ್ರಕರಣಕ್ಕೆ ಸಂಬಂಧಿಸಿದ ಒಂದಿಂಚೂ ವಿವರವನ್ನು ಕೇಂದ್ರ ಸರ್ಕಾರಿ ಸ್ವಾಮ್ಯದ ಐ.ಟಿ ಇಲಾಖೆ ಈವರೆಗೂ ನೀಡಿಲ್ಲ.

ನಂತರ ಅಧಿಕಾರಕ್ಕೆ ಬಂದ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಹೊರಬಂದ ಬಿಟ್ ಕಾಯಿನ್ ಹಗರಣ ನಾಡಿನಲ್ಲಿ ಕಂಪನವನ್ನೇ ಸೃಷ್ಟಿಸಿತು. ಆಗ ಅಧಿಕಾರದಲ್ಲಿದ್ದ ಪ್ರಭಾವಿ ಸಚಿವರ ಮಕ್ಕಳು, ಹಿರಿಯ ಪೊಲೀಸ್ ಅಧಿಕಾರಿಗಳು ಇದರಲ್ಲಿ ಭಾಗಿಯಾಗಿದ್ದಾರೆ, ಕೇಂದ್ರದ ಪ್ರಭಾವಿಗಳಿಗೂ ಇದರ ಪಾಲು ಹೋಗಿದೆ ಎಂಬ ಸುದ್ದಿಗಳೂ ಹರಿದಾಡಿದವು. ಆಗಲೂ ಯಾರ್‍ಯಾರೋ ಅಧಿಕಾರ ಕಳೆದುಕೊಳ್ಳುತ್ತಾರೆ, ಜೈಲು ಸೇರುತ್ತಾರೆ ಎಂದು ಹೇಳಲಾಗಿತ್ತು. ಈ ಬಗ್ಗೆ ದೊಡ್ಡ ಮಟ್ಟದ ತನಿಖೆಯೂ ನಡೆಯಿತು. ಆದರೆ, ಯಾವುದೇ ಪ್ರಭಾವಿಗಳ ಬಂಧನ ಈವರೆಗೂ ನಡೆಯಲಿಲ್ಲ.

ಲೋಕಸಭೆ ಚುನಾವಣೆ ಹೊತ್ತಿಗೆ ಐ.ಟಿ ಇಲಾಖೆ ನಡೆಸಿದ ದಾಳಿಯಲ್ಲಿ, ಪೆಟ್ಟಿಗೆಗಳಲ್ಲಿ ತುಂಬಿಟ್ಟದ್ದ ಸುಮಾರು ₹104 ಕೋಟಿ ನಗದನ್ನು ವಶಪಡಿಸಿಕೊಳ್ಳಲಾಗಿತ್ತು. 'ಧನಪೆಟ್ಟಿಗೆಗಳನ್ನು ಸಂಗ್ರಹಿಸಿದ್ದ ಕಟ್ಟಡದ ಆಸುಪಾಸಿನ ಸಿ.ಸಿ. ಟಿ.ವಿ ಕ್ಯಾಮೆರಾಗಳಲ್ಲಿ ಪ್ರಭಾವಿಗಳು ಓಡಾಡಿರುವ ಚಿತ್ರಗಳಿವೆ. ಸರ್ಕಾರದ ಪ್ರಭಾವಿಗಳಿಗೆ ಇದು ಮುಳುವಾಗಲಿದೆ' ಎಂಬ ಮಾಹಿತಿಗಳು ಹೊರಬಿದ್ದಿದ್ದವು. ವರ್ಷ ಮುಗಿಯುತ್ತಾ ಬಂದರೂ ಏನೂ ಆಗಲಿಲ್ಲ. ಅಷ್ಟರ ಬಳಿಕ ವಾಲ್ಮೀಕಿ ಅಭಿವೃದ್ಧಿ ನಿಗಮದ ₹94.97 ಕೋಟಿಯನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ ಹಗರಣ ಹೊರಬಂತು. ಬಿ. ನಾಗೇಂದ್ರ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಆರ್ಥಿಕ ಅಪರಾಧದ ಕಾರಣಕ್ಕೆ ಸಿಬಿಐ ತನಿಖೆ ಕೈಗೆತ್ತಿಕೊಂಡಿತು. ಕಾಂಗ್ರೆಸ್ ನೇತೃತ್ವದ ಸರ್ಕಾರವೇ ಪತನವಾದರೂ ಅಚ್ಚರಿಯಿಲ್ಲ ಎಂಬ ಸುದ್ದಿಯನ್ನು ಹರಿಯಬಿಡಲಾಯಿತು. ಬ್ಯಾಂಕ್ ಅಧಿಕಾರಿಗಳೂ ಶಾಮೀಲಾಗಿ ಹಣ ವರ್ಗಾವಣೆ ಮಾಡಿದ್ದರೂ, ಹಗರಣಕ್ಕೆ ಕಾರಣರಾದ ಬ್ಯಾಂಕ್ ಅಧಿಕಾರಿಗಳು ಎಲ್ಲಿದ್ದಾರೆ ಎಂಬ ರಹಸ್ಯವನ್ನು ಸಿಬಿಐ ಭೇದಿಸಲಿಲ್ಲ.

ಆನಂತರ ಮುಡಾ ನಿವೇಶನ ಹಂಚಿಕೆಯ ವಿವಾದ ಮುನ್ನೆಲೆಗೆ ಬಂದಿತು. ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ತನಿಖೆ ನಡೆಸಲು ರಾಜ್ಯಪಾಲರು ಅನುಮತಿಯನ್ನೂ ನೀಡಿದರು. ತನಿಖೆಯೂ ನಡೆಯಿತು. ಏತನ್ಮಧ್ಯೆ, ಹಣದ ಅಕ್ರಮ ವರ್ಗಾವಣೆಯಾಗಿದೆ ಎಂದು ಪ್ರಕರಣ ದಾಖಲಿಸಿಕೊಂಡ ಜಾರಿ ನಿರ್ದೇಶನಾಲಯ ತನಿಖೆ ಕೈಗೆತ್ತಿಕೊಂಡಿತು. ಸಚಿವರು, ಅವರ ಆಪ್ತರ ಕೈವಾಡವಿದ್ದು, ಸರ್ಕಾರವೇ ಖೆಡ್ಡಾಕ್ಕೆ ಬಿದ್ದಿದೆ ಎಂಬಷ್ಟರಮಟ್ಟಿಗೆ ಜಾರಿ ನಿರ್ದೇಶನಾಲಯ ಮಾಹಿತಿಯನ್ನು 'ಸೋರಿಕೆ' ಮಾಡಿತು. ಆದರೆ, ಈವರೆಗೆ ಏನೂ ಆಗಿಲ್ಲ.

ಚಿನ್ನ ಕಳ್ಳಸಾಗಣೆ ಪ್ರಕರಣದ ಸದ್ದು ಈಗ ಜೋರಾಗಿದೆ. ಚಿನ್ನ ತಂದಿರುವುದು ದುಬೈನಿಂದ, ಅಲ್ಲಿಗೆ ಬಂದಿರುವುದು ಮಧ್ಯಪ್ರಾಚ್ಯ ದೇಶಗಳಿಂದ. ದುಬೈ ವಿಮಾನ ನಿಲ್ದಾಣದ ಭದ್ರತೆ, ಕಸ್ಟಮ್ಸ್, ವಲಸೆ ವಿಭಾಗಗಳ ಕಣ್ತಪ್ಪಿಸಿ ಚಿನ್ನವನ್ನು ಭಾರತಕ್ಕೆ ತರಲಾಗಿದೆ. ಬೆಂಗಳೂರಿನ ವಿಮಾನ ನಿಲ್ದಾಣದಲ್ಲಿ ವಲಸೆ, ಕಸ್ಟಮ್ಸ್ ಹಾಗೂ ಭದ್ರತೆಯನ್ನು ಭೇದಿಸಿ ರನ್ಯಾ ರಾವ್ ಚಿನ್ನ ಹೊತ್ತು ತಂದಿದ್ದಾರೆ. ವಿಮಾನ ನಿಲ್ದಾಣದ ಸರ್ಪಗಾವಲುಗಳನ್ನೆಲ್ಲ ಕಣ್ತಪ್ಪಿಸಿ, ಅಷ್ಟು ಸಲೀಸಾಗಿ ಚಿನ್ನ ತರಬಹುದು ಎನ್ನುವುದಾದರೆ ರನ್ಯಾ ರಾವ್‌ಗೆ 'ಮಾಯಾ ವಿದ್ಯೆ' ಗೊತ್ತಿರಬೇಕು, ಇಲ್ಲವೇ ಎಲ್ಲ ಹಂತದ ಅಧಿಕಾರಿಗಳೂ ಶಾಮೀಲಾಗಿರಬೇಕು.

ರನ್ಯಾ ರಾವ್ ಅವರು ವಿಮಾನ ನಿಲ್ದಾಣದ ಹೊರ ಬರುವ ಕೊನೇ ಹಂತದಲ್ಲಿ ಶಿಷ್ಟಾಚಾರ ನಿಯಮಗಳಡಿ ಸಿಗುವ ಸೌಲಭ್ಯ-ವಿನಾಯಿತಿ ಬಳಸಿಕೊಂಡಿದ್ದಾರೆ. ಅದೂ ಅಪರಾಧವೇ. ಒಟ್ಟಾರೆ ಪ್ರಕರಣದಲ್ಲಿ ರಾಜ್ಯದ ಸಚಿವರ ಪಾತ್ರ ಇದ್ದರೆ ಅವರನ್ನು ತನಿಖೆಗೆ ಗುರಿಪಡಿಸಲು ಕೇಂದ್ರದ ಸಂಸ್ಥೆಗಳಿಗೆ ಅವಕಾಶವಿದೆ. ಶಿಷ್ಟಾಚಾರವೊಂದು ಬಿಟ್ಟರೆ, ಉಳಿದೆಲ್ಲ ಸಂಸ್ಥೆಗಳು ಕೇಂದ್ರ ಸರ್ಕಾರದ ಮೂಗಿನಡಿ ಕಾರ್ಯನಿರ್ವಹಿಸುತ್ತವೆ. ಹಾಗಿದ್ದರೂ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು, ಪ್ರಕರಣದಲ್ಲಿ ಯಾರನ್ನೋ ರಕ್ಷಿಸಲು ರಾಜ್ಯ ಸರ್ಕಾರ ಯತ್ನಿಸುತ್ತಿದೆ ಎಂದು ಹೇಳಿರುವುದು ಬಾಲಿಶವಷ್ಟೆ!

ಐದು ವರ್ಷಗಳಲ್ಲಿ ಹೀಗೆ ಬಹುಕೋಟಿ ಹಗರಣಗಳೇ ಬಯಲಾಗಿವೆ. ಇವೆಲ್ಲವುಗಳ ತನಿಖೆಯನ್ನು ಕೇಂದ್ರದ ತನಿಖಾ ಸಂಸ್ಥೆಗಳೇ ನಡೆಸಿವೆ. ಸೋರಿಕೆ ಮಾಡಿದ ಮಾಹಿತಿ ಹೊರತಾಗಿ, ಈವರೆಗೂ ಯಾವುದೇ ಒಬ್ಬ ಪ್ರಭಾವಿಯನ್ನೂ ಕಾನೂನಿನಡಿ ಶಿಕ್ಷೆಗೆ ಗುರಿಪಡಿಸದೇ ಇರುವುದನ್ನು ನೋಡಿದರೆ, ಮಾಹಿತಿಯನ್ನು ರಾಜಕೀಯ ಹಿತಾಸಕ್ತಿಗೆ ಬಳಸಲಾಗಿದೆಯೇ ಎಂಬ ಅನುಮಾನ ಉಳಿಯುತ್ತದೆ. ಮಾತಿಗೆ ಬಗ್ಗದ ಸ್ವಪಕ್ಷೀಯರು, ತಿರುಗಿ ಬೀಳುವ ವಿರೋಧ ಪಕ್ಷದ ನಾಯಕರನ್ನು ಹಣಿಯಲು ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳಲಾಯಿತೇ ಎಂಬ ಸಂಶಯವೂ ಘನವಾಗುತ್ತದೆ. ದೊಡ್ಡ ಸದ್ದೆಬ್ಬಿಸಿ, ಎದುರಾಳಿಗಳ ತೇಜೋವಧೆ ಮಾಡಲು ಅಥವಾ ಹದ್ದುಬಸ್ತಿನಲ್ಲಿ ಇಡುವುದಕ್ಕಷ್ಟೇ ತನಿಖಾ ಸಂಸ್ಥೆಗಳು ಅಸ್ತ್ರವಾಗುತ್ತವೆ ಎಂದಾದರೆ, ಅವುಗಳನ್ನು ಬಿಳಿಯಾನೆಗಳಂತೆ ಸಾಕುವ ಬದಲು ಮುಚ್ಚುವುದೇ ಲೇಸು.

ಚುರುಮುರಿ

ಮಾಯಾಮೃಗಾಲಜಿ

• ಡಿ.ಎಸ್.ಲಿಂಗರಾಜು

'ಸಾ, ಜನ ಯಾಕೆ ಹಿಂಗೆ 'ದುಬೈಗೆ ಹೋತಿನಿ, ದುಬೈಗೆ ಹೋತಿನಿ' ಅಂತ ನೆರೆಹೊಂಡತರೋ ಕಾಣೆ. ದುಬೈನಲ್ಲಿ ಚಿನ್ನ ಕಡಮೆ ರೇಟಿಗೆ ಸಿಕ್ತದಂತೆ ಅಂತ ಕುಣಕಂದು ಹೋದ ನನ್ನ ಭಾವನೆಂಟ ನೂರು ಗ್ರಾಂ ಚಿನ್ನ ತಕ್ಕಬಂದು ಇಮಾನ ನಿಲ್ದಾಣದೇಲಿ ತಾರಾಮಾರ ದಂಡ ಕಟ್ಟದ' ಅಂತ ನನ್ನ ಅನುಭವ ಹೇಳಿದೆ.

'ಸುಂಕ ಯಾಮಾರಿಸಿ ಚಿನ್ನ ತರದು ಮಾಯಾಜಿಂಕೆಗಳಿಗೆ ಮಾತ್ರ ಸಾಧ್ಯ ಕಲಾ. ಮಾಯಾಮೃಗಗಳು ಸೂತ್ರ ಹೆಣೆದು ಕಾಸೂ ಕೊಟ್ಟು ದುಬೈಗೆ ಕಳುಗುಸ್ತವೆ' ಅಂತ ಒಗಟು ಹಾಕಿದರು.

'ಮಾಯಾಮೃಗ ಅಂದರಲ್ಲಾ ಹಂಗದ್ರೇನು ಸಾ?' ನನ್ನ ಅಜ್ಞಾನ ಪ್ರದರ್ಶನ ಮಾಡಿದೆ.

'ಯಾರ ಕಣ್ಣಿಗೂ ಕಾಣದೆ ತೆರೆಮರೆಯಲ್ಲಿರೋ ಫೇಕು ಮರ್ಯಾದಸ್ಥರೇ ಮಾಯಾಮೃಗಗಳು. ಸುಂಕದಕಟ್ಟೆಗೆ ಬಂದು ಮಾಯಾಮೃಗಗಳ ಹೆಸರು ಹೇಳಿದೇಟಿಗೆ ಇಮಾನ ನಿಲ್ದಾಣದಲ್ಲಿರೋ ಬೇ-ಇಮಾನಿಗಳು ಚಿನ್ನದ ಜಿಂಕೆಗಳನ್ನ ಮರ್ಯಾದೆಯಿಂದ ವಿಐಪಿ ಗೇಟು ದಾಟಿಸಿ ಹೋಯ್ತರೆ ಅಂದ್ರೆ ನೀನೆ ತಿಳಕ' ಅಂತಂದ್ರು.

'ಚಿನ್ನದ ಜಿಂಕೆಗಳು ಸಿಗೇಬಿದ್ರೂ ಬಾಯಿಬುಟ್ಟು ಯಾರಿಗೆ ವಿಲೇವಾರಿ ಅಂತ ಹೇಳಂಗಿಲ್ಲ. 'ನಾನು ಸುಮ್ಮಗೆ ಹೋಯ್ತಾಬತ್ತಾ ಇರತೀನಿ. ನಾನು ಚಿನ್ನ ತಂದೇ ಇಲ್ಲ' ಅಂತ ಲೈ ಡ್ರಾಮಾ ಆಡಬೇಕು ಅಲ್ಲುವರಾ?'

'ದುಬೈನಿಂದ ಚಿನ್ನವ ಇಲ್ಲಿಗೆ ಹಾರಿಸ್ಕಂದು ಬಂದ್ರೆ ಕೇಜಿಗೆ 12 ಲಕ್ಷ ರೂಪಾಯಿ ಫಾಯದೆ. ಅಂದ್ರೆ ಹತ್ತು ಕೇಜಿಗೆ ಕೋಟಿ ಲಾಭ ಆದದಂತೆ. ದಿಟವಾಗಿ ಮಾಯಾಮೃಗಾಲಜಿ ವ್ಯವಸ್ಥಿತ ವೈಜ್ಞಾನಿಕ ಉದ್ಯಮವೇ ಸೈ ಕಲಾ'.

'ವಿಜ್ಞಾನ ಅಲ್ಲ ಸಾ. ಚಿನ್ನದ ಬಿಸ್ಕತ್ತುಗಳನ್ನೆಲ್ಲಾ ಕಾಣದಂಗೆ ಸೊಂಟಪಟ್ಟೇಲಿ ಅವಿಸಿಟ್ಕಂದು ಪಾರಾಗಿ ಬರೋ ಹುನ್ನಾರದ ಚೌರ್ಯವಿದ್ಯೆ ಆಗಿರೋದ್ರಿಂದ ಇದು ಕಲೆಯೇ ಸರಿ'.

'ಚಿನ್ನ ತರೋದು ವಿಜ್ಞಾನವೂ ಹೌದು, ಕಲೆಯೂ ಹೌದು. ಕಾಸು ಮಾತ್ರ ನಮ್ಮ ತಲೆ ಮೇಲೇ ಕಣೆರ್ಲಾ' ಅಂತಂದ ಯಂಟಪ್ಪಣ್ಣನ ಕೊಂಕುಸ್ಥಾಪನೆಯನ್ನು ದುಸರಾ ಮಾತಿಲ್ಲದೇ ಒಪ್ಪಿಕೊಂಡೆವು.

ದಿನದ ಟ್ವೀಟ್

ಅಭಿವೃದ್ಧಿ: ಬೇಕು ಸಮತೋಲನ

ಕೊಪ್ಪಳದಲ್ಲಿ ಪರಿಸರಕ್ಕೆ ಸಂಬಂಧಿಸಿದ ಬಿಕ್ಕಟ್ಟು ಉಲ್ಬಣಗೊಂಡಿದೆ: 33 ಮಾಲಿನ್ಯಕಾರಕ ಕಾರ್ಖಾನೆಗಳು ಬೆಳೆ ನಾಶ ಮಾಡುತ್ತಿವೆ, ನೀರನ್ನು ಕಲುಷಿತಗೊಳಿಸುತ್ತಿವೆ ಮತ್ತು ಗಾಳಿಯನ್ನು ವಿಷಗೊಳಿಸುತ್ತಿವೆ. ನಿವಾಸಿಗಳು ಮತ್ತು ರೈತರು ಕ್ರಮಕ್ಕೆ ಆಗ್ರಹಿಸಿದ್ದಾರೆ. ಕೈಗಾರಿಕಾ ಅಭಿವೃದ್ಧಿ ಮತ್ತು ಸುಸ್ಥಿರತೆ ಜೊತೆ ಜೊತೆಗೇ ಸಾಗಬೇಕು.

ಗೌತಮ್ ಮಾಚಯ್ಯ, ಪತ್ರಕರ್ತ

ಕಿಡಿನುಡಿ

ಯಾರೂ ಏನೂ ಅನ್ನಬಾರದು ಅನ್ನುವುದಕ್ಕೆ 'ಕಾವೇರಿ' ಅಂತ ಸೇರಿಸಿಬಿಡೋದು. ಈ ಬೇಸಿಗೆಯ ದಗೆಯಲ್ಲಿ, ಕೆರೆಗಳ ನೀರು ಆವಿಯಾಗೋ ಸಮಯದಲ್ಲಿ, ನಿಂತ ನೀರಲ್ಲಿ ಆರತಿ... ಈ ಉತ್ತರ ಭಾರತದ ಆಚರಣೆಯನ್ನು ಅನುಕರಿಸುವ ರೋಗ ಬರೀ ರೋಗವಲ್ಲ, ಅವೈಜ್ಞಾನಿಕವಾದ ಮನೋರೋಗ!

(ಬೆಂಗಳೂರಿನ ಸ್ಯಾಂಕಿ ಕೆರೆಯಲ್ಲಿ ರಾಜ್ಯ ಸರ್ಕಾರ ಆಚರಿಸಲು ಉದ್ದೇಶಿಸಿರುವ 'ಕಾವೇರಿ ಆರತಿ' ಕಾರ್ಯಕ್ರಮಕ್ಕೆ ಪ್ರತಿಕ್ರಿಯೆ)

ಸುಷ್ಮಾ ಅಯ್ಯಂಗಾರ್

25 ವರ್ಷಗಳ ಹಿಂದೆ

ಶನಿವಾರ, 18-3-2000

• 'ಯಡಿಯೂರಪ್ಪ ಮುಂದುವರಿಕೆಗೆ ಅಡಚಣೆ ಇಲ್ಲ'

ನವದೆಹಲಿ, ಮಾರ್ಚ್ 17– ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳದ ಬಿಜೆಪಿ ಘಟಕಗಳ ಅಧ್ಯಕ್ಷರು ನಿರಂತರವಾಗಿ ಎರಡು ಬಾರಿಗೆ ಅಧ್ಯಕ್ಷರಾಗಿಲ್ಲವಾದ ಕಾರಣ ಅವರು ಮುಂದಿನ ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಗಳಾಗುವುದಕ್ಕೆ ಪಕ್ಷದ ನಿಯಮದಲ್ಲಿ ಯಾವುದೇ ಅಡಚಣೆ ಇಲ್ಲ ಎಂಬುದಾಗಿ ಬಿಜೆಪಿಯ ರಾಷ್ಟ್ರೀಯ ಕಾರ್ಯದರ್ಶಿ ಬಸವರಾಜ ಪಾಟೀಲ ಸೇಡಂ ಇಂದು ಇಲ್ಲಿ ಸ್ಪಷ್ಟಪಡಿಸಿದರು.

ಕರ್ನಾಟಕ ಸೇರಿದಂತೆ 8 ರಾಜ್ಯಗಳ ಬಿಜೆಪಿ ಅಧ್ಯಕ್ಷರನ್ನು ಬದಲಾವಣೆ ಮಾಡಲಾಗುವುದು ಎಂಬ ವರದಿಯೊಂದರ ಬಗೆಗೆ ಸ್ಪಷ್ಟನೆ ನೀಡಿದ ಅವರು, ಬಿ.ಎಸ್. ಯಡಿಯೂರಪ್ಪ ಅವರು ನಿರಂತರವಾಗಿ ಎರಡನೇ ಬಾರಿಗೆ ಅಧ್ಯಕ್ಷರಾಗಿಲ್ಲ. ಕಳೆದ ಬಾರಿ ಕೆ.ಎಸ್. ಈಶ್ವರಪ್ಪ ಅಧ್ಯಕ್ಷರಾಗಿದ್ದರು. ಆದ್ದರಿಂದ ನಿಯಮದ ಪ್ರಕಾರ ಯಡಿಯೂರಪ್ಪ ಎರಡನೇ ಬಾರಿ ಅಧ್ಯಕ್ಷರಾಗುವುದಕ್ಕೆ ಅಡಚಣೆ ಇಲ್ಲ ಎಂದರು.

• ರಾಜ್ಯಸಭೆ ಚುನಾವಣೆ ಮಲ್ಯ ಕಣದಲ್ಲಿ ಉಳಿಯುವರೇ?

ಬೆಂಗಳೂರು, ಮಾರ್ಚ್ 17– ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಈ ತಿಂಗಳ 29ರಂದು ನಡೆಯಲಿರುವ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ 'ಅಬಕಾರಿ ದೊರೆ' ಹಾಗೂ ಖ್ಯಾತ ಉದ್ಯಮಿ ವಿಜಯ ಮಲ್ಯ ಅವರು ಅಂತಿಮವಾಗಿ ಚುನಾವಣಾ ಕಣದಲ್ಲಿ ಉಳಿಯುತ್ತಾರೋ ಇಲ್ಲವೋ ಎಂಬುದು ಈಗ ರಾಜಕೀಯ ವಲಯದಲ್ಲಿ ತೀವ್ರ ಕುತೂಹಲ ಕೆರಳಿಸಿದೆ.

50 ವರ್ಷಗಳ ಹಿಂದೆ

ಮಂಗಳವಾರ, 18-3-1975

• ಸಂಶಯವಿಲ್ಲ

ಬೆಂಗಳೂರು, ಮಾರ್ಚ್ 17– ಏನು ಬೇಕಾದರೂ ಕೇಳಿ ಅನ್ನುವ ಧೋರಣೆ. ತಮ್ಮ ಸ್ಥಾನದಿಂದ ಅಧಿಕಾರಿಗಳ ಗ್ಯಾಲರಿವರೆಗೆ ಹತ್ತಾರು ಬಾರಿ ಓಡಾಡಿದರು. ಕೇಳಿದ ವಿವರ ಅಧಿಕಾರಿಗಳ ಬಳಿ ಇದ್ದರೆ ಕೂಡಲೇ ಒದಗಿಸುವ ಆಸಕ್ತಿ ತೋರಿದರು.

ಮೇಲ್ಮನೆಯಲ್ಲಿ ವಿರೋಧಪಕ್ಷದವರು ನಿರ್ಮಲ ಎಂಜಿನಿಯರಿಂಗ್ ಕಂಪನಿ ವ್ಯವಹಾರವನ್ನು ತಾವು ಚರ್ಚಿಸುವಾಗ ಮುಖ್ಯಮಂತ್ರಿಯವರು ಹಾಜರಿರಲಿಲ್ಲವೆಂದು ಮೂರು ದಿನದಿಂದ ಆಕ್ಷೇಪಿಸುತ್ತಿದ್ದರು. ಇಂದು ಮುಖ್ಯಮಂತ್ರಿ ದೇವರಾಜ ಅರಸು ಇಡೀ ದಿನವನ್ನು ಮೇಲ್ಮನೆಯಲ್ಲಿ ಕಳೆದರು. ಅವರ ಹಾಜರಾತಿಯನ್ನು ವಿರೋಧ ಪಕ್ಷದವರು ಪೂರ್ಣವಾಗಿ ಉಪಯೋಗಿಸಿಕೊಂಡರು.

ಐದು ಗಂಟೆಗಳ ಕಾಲ ಪ್ರಶ್ನೋತ್ತರವೇ ಆಯಿತು. ಎತ್ತಿದ ಎಲ್ಲ ಪ್ರಶ್ನೆಗಳಿಗೂ ಅರಸು ಉತ್ತರವಿತ್ತರು. ನಿರ್ಮಲ ಎಂಜಿನಿಯರಿಂಗ್ ಕಂಪನಿ ವ್ಯವಹಾರದಲ್ಲಿ ತಾವು ಮಾಡಿರುವ ಆಜ್ಞೆ ರಾಜ್ಯದ ಹಿತದೃಷ್ಟಿಯಿಂದ ಸರಿ ಎಂಬುದರಲ್ಲಿ ಅವರಿಗೆ ಸಂಶಯವಿಲ್ಲ.

ಕಂಪನಿ ವಿರುದ್ಧ ಮೊಕದ್ದಮೆ ಹೂಡುವ ಬಗ್ಗೆ, ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ತೆರೆದ ಮನಸ್ಸು. 'ಮೊಕದ್ದಮೆ ಹೂಡಬೇಕೆಂದು ಕಾನೂನು ಇಲಾಖೆ ಅಭಿಪ್ರಾಯಪಟ್ಟರೆ ಖಂಡಿತ ಹೂಡಲಾಗುವುದು' ಎಂದು ಸ್ಪಷ್ಟಪಡಿಸಿದರು.

ಸಂಗತ

ಉನ್ನತ ಶಿಕ್ಷಣ: ಬೇಡ ಸಂಕುಚಿತ ದೃಷ್ಟಿಕೋನ

ಈ ಕ್ಷೇತ್ರವನ್ನು ಸರಿದಾರಿಗೆ ತರಲು ಭಿನ್ನವಾದ ಉಪಕ್ರಮಗಳನ್ನು ರೂಪಿಸಬೇಕಿದೆ

• ನಾಗೇಶ ಡೂಗನವರ

ವಿಶ್ವವಿದ್ಯಾಲಯಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳು ಎಂತಹ ಶಿಕ್ಷಣ ಕೊಡಬೇಕು ಎಂದು ಚರ್ಚಿಸುವಾಗಲೆಲ್ಲ ಮುನ್ನೆಲೆಗೆ ಬರುವ ಮುಖ್ಯ ಪ್ರಶ್ನೆ, ಹಾಗೆ ಪಡೆದ ಶಿಕ್ಷಣ ಒದಗಿಸುವ ಉದ್ಯೋಗಾವಕಾಶಗಳ ಲಭ್ಯತೆ ಹೇಗಿರುತ್ತದೆ ಎಂಬುದು. ಇಂತಹ ಮನೋಧರ್ಮ ರೂಪುಗೊಳ್ಳಲು ಕಾರಣಗಳೇನು ಎನ್ನುವುದನ್ನು ಆಲೋಚಿಸಿ, ಈ ಕ್ಷೇತ್ರದಲ್ಲಿ ಆಗಬೇಕಾದ ಮಾರ್ಪಾಡುಗಳ ಬಗ್ಗೆ ಚರ್ಚಿಸುವುದು ಅಗತ್ಯ.

ಈ ಬಗೆಯ ಚರ್ಚೆಗಳು ಮುನ್ನೆಲೆಗೆ ಬಂದಾಗಲೆಲ್ಲ ಶಿಕ್ಷಣ ತಜ್ಞರು, ಪ್ರಾಧ್ಯಾಪಕರು ಹಾಗೂ ಬುದ್ಧಿಜೀವಿಗಳು ಪಾಶ್ಚಿಮಾತ್ಯ ವಿಶ್ವವಿದ್ಯಾಲಯಗಳನ್ನು ಉಲ್ಲೇಖಿಸಿ, ಅಲ್ಲಿ ನಡೆಯುವ ಬೋಧನೆ ಮತ್ತು ಅದಕ್ಕೆ ಪೂರಕವಾದ ಉತ್ಕೃಷ್ಟ ಸಂಶೋಧನೆ, ಪಠ್ಯಕ್ರಮದ ಸ್ವಾತಂತ್ರ್ಯ, ಅಂತರಶಿಸ್ತೀಯ ಅಧ್ಯಯನದಂತಹ ಮಾದರಿಗಳನ್ನು ಹೆಸರಿಸುತ್ತಾರೆ. ನಮ್ಮಲ್ಲಿ ಯಾವೆಲ್ಲ ಬದಲಾವಣೆಗಳನ್ನು ತರಬಹುದೆಂಬ ಸಲಹೆ ನೀಡುತ್ತಾರೆ. ಈ ಸಲಹೆಗಳು ಸ್ವಲ್ಪ ಕಾಲ ಚರ್ಚೆಯಲ್ಲಿದ್ದು ನಿಧಾನವಾಗಿ ನೇಪಥ್ಯಕ್ಕೆ ಸರಿದು ಮತ್ತೆ ಯಥಾಸ್ಥಿತಿ ಮುಂದುವರಿಯುತ್ತದೆ. ಆದರೆ ಈ ಬಾರಿ ಉನ್ನತ ಶಿಕ್ಷಣ ಸಂಸ್ಥೆಗಳ ಮೌಲ್ಯಮಾಪನ ಮಾಡುವ ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಮಂಡಳಿಯೇ (ನ್ಯಾಕ್) ಭ್ರಷ್ಟಾಚಾರದಲ್ಲಿ ಸಿಲುಕಿರುವ ಪ್ರಕರಣವು ಈ ಇಡೀ ವ್ಯವಸ್ಥೆಯ ಆಳದಲ್ಲಿ ಬೇರೂರಿ, ಅಪರೂಪವೆನ್ನುವಂತೆ ಮುನ್ನೆಲೆಗೆ ಬರುತ್ತಿದ್ದ ಸಮಸ್ಯೆಗಳ ಜಾಲವನ್ನೇ ಬಯಲುಮಾಡಿದೆ.

ಹೀಗೆ ಹಲವು ದಶಕಗಳಿಂದ ಹಳಿ ತಪ್ಪಿದ ಉನ್ನತ ಶಿಕ್ಷಣ ಸರಿದಾರಿಗೆ ಬರಬೇಕಾದರೆ ಭಿನ್ನವಾದ ಉಪಕ್ರಮಗಳನ್ನು ನಾವಿಂದು ರೂಪಿಸಬೇಕಾಗಿದೆ. ಯುವಜನ ಹಾಗೂ ಪೋಷಕರ ಆಶೋತ್ತರಗಳು, ನಿರೀಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು ಅವರ ಸಹಭಾಗಿತ್ವದಲ್ಲಿ ಚರ್ಚೆಗಳಾಗಬೇಕಾಗಿದೆ. ಅಷ್ಟಕ್ಕೂ ಆರ್ಥಿಕ ಸಂಪಾದನೆಯೇ ಶಿಕ್ಷಣದ ಉದ್ದೇಶ ಎಂಬ ಪರಿಕಲ್ಪನೆಯನ್ನು ಸಮಾಜದಲ್ಲಿ ಹುಟ್ಟುಹಾಕಿ, ನಮ್ಮ ಯುವಜನರಿಂದ ಉನ್ನತ ಮಟ್ಟದ ಸಂಶೋಧನೆಯನ್ನು ನಿರೀಕ್ಷಿಸುವುದು ಸರಿಯೇ?

ವಿಶ್ವವಿದ್ಯಾಲಯಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಎಷ್ಟು ಪಾರದರ್ಶಕವಾಗಿ ಅರ್ಹ ಅಭ್ಯರ್ಥಿಗಳ ಆಯ್ಕೆಯಾಗುತ್ತದೆ ಎನ್ನುವುದು ಬೇಸರ ಮೂಡಿಸುತ್ತದೆ. ಈ ಬೆಳವಣಿಗೆಯು ಶಿಕ್ಷಣದಿಂದ ರೂಢಿಸಿಕೊಳ್ಳಬೇಕಾದ ಮೌಲ್ಯಗಳನ್ನು ಯುವಜನ ತಿರಸ್ಕರಿಸಿ ಅಡ್ಡಮಾರ್ಗಗಳ ಮೂಲಕ ಉದ್ಯೋಗಾವಕಾಶ ಕಲ್ಪಿಸಿಕೊಂಡು ಭ್ರಷ್ಟ ವ್ಯವಸ್ಥೆಯ ಭಾಗವಾಗುವಂತೆ ಮಾಡುತ್ತದೆ. ಹೀಗೆ ಪ್ರಾಧ್ಯಾಪಕರಾದವರು ಗುಣಮಟ್ಟದ ಸಂಶೋಧನೆ ಮಾಡಿಯಾರೇ? ಪಾಶ್ಚಿಮಾತ್ಯ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ ಉದ್ಯೋಗಾವಕಾಶಕ್ಕಾಗಿ ಕೈಗೊಂಡದ್ದಲ್ಲ ಬದಲಾಗಿ ಹೊಸ ಜ್ಞಾನ ಸೃಷ್ಟಿಸುವ ಮತ್ತು ಆ ಮೂಲಕ ಸಮಾಜಕ್ಕೆ ಕೊಡುಗೆ ನೀಡಬೇಕೆನ್ನುವ ಹಂಬಲದಿಂದ ಎಂಬ ಮಾತುಗಳು ಆಗಾಗ ಕೇಳಿಬರುತ್ತವೆ. ಆದರೆ ನಮ್ಮಲ್ಲಿರುವ ಬಹುತೇಕ ವಿಶ್ವವಿದ್ಯಾಲಯಗಳು ಪಾಶ್ಚಿಮಾತ್ಯರಿಂದ ಎರವಲು ಪಡೆದವುಗಳಲ್ಲವೇ?

ಪಾಶ್ಚಿಮಾತ್ಯ ವಿಶ್ವವಿದ್ಯಾಲಯಗಳ ಉತ್ಕೃಷ್ಟ ಸಂಶೋಧನೆ ಮಾದರಿಯ ಜ್ಞಾನಶಿಸ್ತುಗಳನ್ನು ಬೆಳೆಸಲು ಪೂರಕವಾದ ಶೈಕ್ಷಣಿಕ ವ್ಯವಸ್ಥೆ ನಮ್ಮಲ್ಲಿ ಇದೆಯೇ ಎಂದು ಮೊದಲು ಕೇಳಿಕೊಳ್ಳಬೇಕು. ಅದಕ್ಕೆ ಬೇಕಾದ ವ್ಯಾಪಕ ಓದು ಹಾಗೂ ಬೌದ್ಧಿಕ ಪಕ್ವತೆಯನ್ನು ನಮ್ಮ ಸಂಶೋಧಕರು ಹೊಂದಿದ್ದಾರೆಯೇ? ಅಂತಹ ಸಂಶೋಧನೆಗೆ ಬೇಕಾದ ತರಬೇತಿ, ಮಾರ್ಗದರ್ಶನ ನಮ್ಮಲ್ಲಿರುವ ಎಷ್ಟು ವಿಶ್ವವಿದ್ಯಾಲಯಗಳಲ್ಲಿ ಲಭ್ಯ ಇದೆ? ಅಲ್ಲಿನ ಸಂಶೋಧನೆಯ ಮಾದರಿಗಳನ್ನು ಯಥಾವತ್ತಾಗಿ ಅನುಕರಿಸದೆ ನಮ್ಮ ವ್ಯವಸ್ಥೆಗೆ ಅನುಗುಣವಾಗಿ ಅವನ್ನು ರೂಪಿಸಬೇಕು. ನಾವು ಎದುರಿಸುವ ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ಹಿನ್ನೆಲೆಯಲ್ಲಿ ಉದ್ಭವಿಸುವ ಬಿಕ್ಕಟ್ಟುಗಳಿಗೆ ಪರಿಹಾರ ಕಂಡುಕೊಳ್ಳಲು ಮತ್ತು ಹೊಸ ಜ್ಞಾನ ಸೃಷ್ಟಿಸಲು ನಮ್ಮದೇ ಆದ ಸಂಶೋಧನಾ ಪರಂಪರೆಯೊಂದನ್ನು ಕಟ್ಟಿಕೊಳ್ಳಬೇಕು. ಆಗ ಮಾತ್ರ ನಮ್ಮ ಸಂಶೋಧನೆ ಅರ್ಥಪೂರ್ಣವಾಗುವುದರ ಜೊತೆಗೆ ಸಮಾಜಕ್ಕೆ ಕೊಡುಗೆ ನೀಡಬಹುದು.

ಕಳಪೆ ಗುಣಮಟ್ಟದ ಸಂಶೋಧನೆಯನ್ನು ತಡೆಯಬೇಕೆಂದರೆ ಪ್ರಾಧ್ಯಾಪಕರಿಗೆಲ್ಲ ಸಂಶೋಧನೆ ಕಡ್ಡಾಯ ಆಗಬಾರದು. ಬದಲಾಗಿ ರಾಷ್ಟ್ರೀಯ ಶಿಕ್ಷಣ ನೀತಿ– 2020 ರೂಪಿಸಿದ ಉಪಕ್ರಮಗಳಲ್ಲಿ ಒಂದಾದ ಎರಡು ಮಾದರಿಯ ವಿಶ್ವವಿದ್ಯಾಲಯಗಳ ಪರಿಕಲ್ಪನೆ ಸಾಕಾರವಾಗಬೇಕು. ಮೊದಲನೆಯದು, ಸಂಶೋಧನೆಗೇ ಮೀಸಲಾದ ವಿಶ್ವವಿದ್ಯಾಲಯಗಳು. ಎರಡನೆಯದು, ಬೋಧನೆ, ಪಠ್ಯಕ್ರಮ, ಕಲಿಕೆ, ಪರೀಕ್ಷೆ ಹಾಗೂ ಮೌಲ್ಯಮಾಪನಕೇಂದ್ರಿತ ಉಪಕ್ರಮಗಳನ್ನು ನಿರ್ವಹಿಸುವ ವಿಶ್ವವಿದ್ಯಾಲಯಗಳು. ಇಲ್ಲಿ ಸಂಶೋಧನೆ ನಡೆಯಬಾರದೆಂದಲ್ಲ. ಆದರೆ ಬೋಧನೆ, ಪರೀಕ್ಷೆ ಮೌಲ್ಯಮಾಪನದಂತಹ ಕಾರ್ಯ ನಿರ್ವಹಿಸಿ ಉಳಿದ ಸಮಯದಲ್ಲಿ ಗುಣಮಟ್ಟದ ಸಂಶೋಧನೆ ಕೈಗೊಳ್ಳಲು ಇಚ್ಛಿಸಿದ ಪ್ರಾಧ್ಯಾಪಕರಿಗೆ ಅಗತ್ಯ ಪರಿಕರಗಳ ಜೊತೆಗೆ ಆರ್ಥಿಕ ನೆರವು ಒದಗಿಸಿ ಪ್ರೋತ್ಸಾಹಿಸುವಂತೆ ಆಗಬೇಕು. ಅಲ್ಲದೆ ಮುಖ್ಯವಾಗಿ ಈ ಎರಡೂ ಬಗೆಯ ವಿಶ್ವವಿದ್ಯಾಲಯಗಳಲ್ಲಿ ನಡೆಯುವ ಸಂಶೋಧನೆಯನ್ನು ನೇಮಕಾತಿ ಹಾಗೂ ವೃತ್ತಿ ಪದೋನ್ನತಿಯಂತಹವುಗಳಿಗೆ ಪರಿಗಣಿಸಬಾರದು.

ಒಟ್ಟಾರೆಯಾಗಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಉದ್ಭವಿಸಿರುವ ಈ ಬೌದ್ಧಿಕ ಬಿಕ್ಕಟ್ಟು ನಿವಾರಣೆ ಆಗಬೇಕು ಹಾಗೂ ಶಿಕ್ಷಣದ ಬಗೆಗಿನ ಸಂಕುಚಿತ ದೃಷ್ಟಿಕೋನ ಬದಲಾಗಿ ಅದು ಒಂದು ಪರಿಪೂರ್ಣ ವ್ಯಕ್ತಿತ್ವ ರೂಪಿಸುವ ಹಾಗೂ ನಮ್ಮ ಚಿಂತನಾಕ್ರಮಗಳನ್ನು ನಿರಂತರವಾಗಿ ವಿಕಸನಗೊಳಿಸುವ ಸ್ಫೂರ್ತಿಯ ಚಿಲುಮೆಯಾಗಬೇಕು. ಹಾಗಾದರೆ ಮಾತ್ರ ನಮ್ಮ ಯುವಜನ ಹಾಗೂ ಸಾರ್ವಜನಿಕರಲ್ಲಿ ಉನ್ನತ ಶಿಕ್ಷಣದ ಬಗ್ಗೆ ವಿಶ್ವಾಸಾರ್ಹತೆ ಮೂಡಬಹುದು.

ವಾಚಕರ ವಾಣಿ

ಯಾರಾದರೊಬ್ಬರು ಸೋತಿದ್ದರೆ ಸಾಕಿತ್ತು...

ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ವಿವಾಹ ಆರತಕ್ಷತೆ ಕಾರ್ಯಕ್ರಮದಲ್ಲಿ ಊಟಕ್ಕೆ ಕುಳಿತವರಿಗೆ ಕುಡಿಯಲು ತಕ್ಷಣ ನೀರು ನೀಡಲಿಲ್ಲ ಎಂಬ ಕಾರಣಕ್ಕೆ ಉಂಟಾದ ಜಗಳದಿಂದ ಮದುವೆಯೇ ರದ್ದಾದ ಪ್ರಕರಣ ವರದಿಯಾಗಿದೆ (ಪ್ರ.ವಾ., ಮಾರ್ಚ್ 17). ಮದುವೆಗಳು ಯಾವ್ಯಾವ ಕಾರಣಕ್ಕೋ ರದ್ದಾಗಿದ್ದನ್ನು ಕೇಳಿದ್ದೆವು. ಇದೀಗ ಊಟಕ್ಕೆ ನೀರು ಕೊಡಲು ವಿಳಂಬವಾದ ನೆಪದಲ್ಲಿ ರದ್ದಾಗಿರುವುದು ಹೊಸ ಸೇರ್ಪಡೆ ಎನ್ನಬಹುದು. ಕುಟುಂಬ ವ್ಯವಸ್ಥೆಯಲ್ಲಿ ಇಂದು ನಮ್ಮ ನಮ್ಮಲ್ಲಿ ಪರಸ್ಪರ ಸಹಬಾಳ್ವೆ, ಸಂಯಮ, ಸಹನೆ ಬಹುಶಃ ಮರೀಚಿಕೆ ಆಗುತ್ತಿದೆಯೇನೋ ಎಂಬ ಭಾವನೆ ಇಂದಿನ ಕೆಲವು ಪ್ರಕರಣಗಳನ್ನು ನೋಡಿದಾಗ ಮೂಡುತ್ತದೆ. ನಾನೇ ಹೆಚ್ಚು ಎನ್ನುವ ಅಹಂ ಮತ್ತು ಅತಿಯಾದ ನಿರೀಕ್ಷೆಗಳು ಸಂಬಂಧದಲ್ಲಿ ಬಿರುಕಿಗೆ ಕಾರಣವಾಗುತ್ತವೆ. ಕೌಟುಂಬಿಕ ವ್ಯವಸ್ಥೆಯಲ್ಲಿ ಸಾಂಪ್ರದಾಯಿಕವಾಗಿ ನಡೆಯುವ ಹಬ್ಬ, ಜಾತ್ರೆ, ಉತ್ಸವದಂತಹ ಕಾರ್ಯಕ್ರಮಗಳಲ್ಲಿ ಇದು ಬಹಿರಂಗವಾಗುತ್ತದೆ. ಅದರಲ್ಲೂ ವಿವಾಹ ಸಮಾರಂಭದಲ್ಲಿ ತುಸು ಹೆಚ್ಚಾಗಿಯೇ ನಡೆಯುತ್ತದೆ. ರದ್ದಾಗಿರುವ ಮದುವೆಯಲ್ಲಿ ಯಾರಾದರೊಬ್ಬರು ಸೋತಿದ್ದರೆ ಸಾಕಿತ್ತು, ಕಂಕಣಭಾಗ್ಯ ಸಲೀಸಾಗಿ ನೆರವೇರುತ್ತಿತ್ತು.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಗಂಗಾರತಿಯ ಅನುಕರಣೆ ಯಾಕೆ?

ಬೆಂಗಳೂರಿನ ಸ್ಯಾಂಕಿ ಕೆರೆಯಲ್ಲಿ 'ಕಾವೇರಿ ಆರತಿ'ಯನ್ನು ರಾಜ್ಯ ಸರ್ಕಾರ ಆಯೋಜಿಸಲು ಹೊರಟಿದೆ (ಪ್ರ.ವಾ., ಮಾರ್ಚ್ 17). ಮೊದಲಿಗೆ ಸ್ಯಾಂಕಿ ಕೆರೆಗೂ ಕಾವೇರಿಗೂ ಯಾವ ಸಂಬಂಧ? ವಾರಾಣಸಿಯಲ್ಲಿ ನಡೆಯುವ 'ಗಂಗಾರತಿ'ಯ ಅನುಕರಣೆಗೆ ಕಾರಣವೇನು? ಅಲ್ಲಿಂದಲೇ ಪುರೋಹಿತರನ್ನು ಕರೆಸುವ ಚಿಂತನೆ ಯಾಕಾಗಿ? ಒಂದೆಡೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬಿಜೆಪಿ ಪ್ರತಿಪಾದಿಸುವ ಹಿಂದುತ್ವವನ್ನು ಟೀಕಿಸುತ್ತಾ ಬಂದಿದ್ದಾರೆ. ಹಾಗಿದ್ದೂ ಇಂತಹ ಅರ್ಥವಿಲ್ಲದ ಕಾರ್ಯಕ್ರಮಗಳನ್ನು ಮಾದರಿಯಾಗಿ ಕಾಣುವುದು ಅಷಾಢಭೂತಿತನವಲ್ಲವೇ? ಅದೂ ಅಲ್ಲದೆ ಇಲ್ಲಿ ಕಾವೇರಿ ಜೀವಜಲದ ಬಗ್ಗೆ ಭಾವನಾತ್ಮಕ ನೆಲೆ ಕಾಣುತ್ತಿಲ್ಲ. ಬದಲಿಗೆ ಯಾರನ್ನೋ ಓಲೈಸುವ ರಾಜಕಾರಣ ಎದ್ದು ತೋರುತ್ತಿದೆ. ಮೂಢನಂಬಿಕೆಗಳನ್ನು ಖಂಡಿಸುವ ಸಿದ್ದರಾಮಯ್ಯನವರು ಇಂತಹ ಕಾರ್ಯಕ್ರಮಗಳಿಗೆ ಅವಕಾಶ ಕೊಡದೆ ವಿಚಾರವಾದವನ್ನು ಎತ್ತಿಹಿಡಿಯಬೇಕು. ಇದಕ್ಕಿಂತ ಮುಖ್ಯವಾಗಿ ಜನಪರ ಕಾರ್ಯಕ್ರಮಗಳ ಪ್ರಾಮಾಣಿಕ ಅನುಷ್ಠಾನಕ್ಕೆ ಗಮನ ಕೊಡಬೇಕು.

ಚಂದ್ರಪ್ರಭ ಕಠಾರಿ, ಬೆಂಗಳೂರು

ಹಣ ವಂಚನೆ ತಡೆಗೆ ಕೇಂದ್ರ ಮುಂದಾಗಲಿ

ವೃದ್ಧ ಗ್ರಾಹಕಿಯೊಬ್ಬರಿಗೆ ₹ 50 ಲಕ್ಷ ವಂಚಿಸಿದ ಆರೋಪದ ಮೇರೆಗೆ ಇಂಡಸ್ ಇಂಡ್ ಬ್ಯಾಂಕ್‌ನ ಬೆಂಗಳೂರಿನ ಗಿರಿನಗರ ಶಾಖೆಯ ಉಪ ವ್ಯವಸ್ಥಾಪಕಿ ಮೇಘನಾ ಮತ್ತು ಅವರ ಸಹಚರರನ್ನು ಪೊಲೀಸರು ಅತಿ ಶೀಘ್ರದಲ್ಲೇ ಬಂಧಿಸಿರುವುದು ಸಂತಸದ ವಿಚಾರ. ಭವಿಷ್ಯದ ದಿನಗಳಿಗೆ ಅತ್ಯಗತ್ಯ ಎಂದು ಹಣ ಕೂಡಿಡುವುದು ಜನರ ಮನೋಭಾವ ಮತ್ತು ಸಹಜ ಕೂಡ. ಹಾಗೆ ಇರುವ ಹಣವನ್ನು ಎಲ್ಲಿಡುವುದು? ಪರಿಚಿತರಿಗೆ ಕೊಟ್ಟರೆ ಹಿಂದಿರುಗಿಸುವ ಸಂಭವ ಕಡಿಮೆ. ವಿನಿವಿಂಕ್‌ನಂತಹ ಕಡೆ ವಿನಿಯೋಗಿಸಿದರೆ ಏನಾಯಿತು ಎಂಬುದು ಸಾರ್ವಜನಿಕರಿಗೆ ಮನದಟ್ಟಾಗಿದೆ. ಗುರು ರಾಘವೇಂದ್ರ ತರಹದ ಸಹಕಾರಿ ಬ್ಯಾಂಕ್‌ಗಳಲ್ಲಿ ಇಟ್ಟು ಹಣ ಕಳೆದುಕೊಂಡವರೂ ಇದ್ದಾರೆ. ಮನೆಯಲ್ಲೇ ಇಟ್ಟರೆ ಕಳ್ಳಕಾಕರ ಭಯ. ಇಂಥವನ್ನೆಲ್ಲಾ ಅರಿತ ಜನ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಠೇವಣಿ ಇಡುತ್ತಾರೆ ಅಥವಾ ಕೊಂಚ ಅಧಿಕ ಬಡ್ಡಿಗೆ ಆಸೆಪಟ್ಟು ಖಾಸಗಿ ಬ್ಯಾಂಕುಗಳಲ್ಲೂ ಇಡುತ್ತಾರೆ. ಆದರೆ, ಅಲ್ಲೂ ಸಿಬ್ಬಂದಿಯಿಂದಲೇ ವಂಚನೆಗೆ ಒಳಗಾಗುವುದಾದರೆ ಮಧ್ಯವಯಸ್ಕರು, ವೃದ್ಧರ ಭವಿಷ್ಯದ ಗತಿ ಏನು? ತಮ್ಮ ಇಡೀ ಜೀವನದ ಗಳಿಕೆಯೇ ಮಾಯವಾದರೆ ಮುಂದಿನ ದಾರಿ ಏನು?

ಇಂತಹವರ ಹಣವನ್ನು ಕೇಂದ್ರ ಸರ್ಕಾರವೇ ಬಾಂಡ್ ಮೂಲಕ ಖರೀದಿಸಿ, ತಿಂಗಳಿಗೆ ಬಡ್ಡಿ ದೊರಕುವಂತೆ ಮಾಡಿದರೆ ಅನುಕೂಲ ಆದೀತು. ಆಗ ರಾಷ್ಟ್ರೀಕೃತ ಬ್ಯಾಂಕ್ ಹೊರತುಪಡಿಸಿ ಮಿಕ್ಕೆಡೆ ಹಣ ಇಟ್ಟು ವಂಚನೆಗೆ ಒಳಗಾಗುವವರನ್ನು ರಕ್ಷಿಸಬಹುದು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಗ್ರೂಪ್ 'ಡಿ' ಹುದ್ದೆ ತುಂಬಿ, ಶಿಕ್ಷಕರ ಹೊರೆ ಇಳಿಸಿ

ರಾಜ್ಯದ ಸರ್ಕಾರಿ ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮೂಲ ಸೌಕರ್ಯಗಳ ಕೊರತೆ ಇದೆ. ಹಾಗೆಯೇ ಗ್ರೂಪ್ 'ಡಿ' ಹಾಗೂ ಕ್ಲರ್ಕ್ ಹುದ್ದೆಗಳು ಕೂಡ ಕಾಲಕಾಲಕ್ಕೆ ಭರ್ತಿಯಾಗುತ್ತಿಲ್ಲ. ಹೀಗಾಗಿ, ಪಠ್ಯಪುಸ್ತಕ, ಸಮವಸ್ತ್ರಗಳನ್ನು ಶಿಕ್ಷಕರೇ ಹಂಚಬೇಕಾದ ಅನಿವಾರ್ಯ ಇದೆ. ಎಲ್ಲಾ ಇಲಾಖೆಗಳಲ್ಲಿ ಗ್ರೂಪ್ 'ಡಿ', ಕ್ಲರ್ಕ್ ಹುದ್ದೆಗಳಿಗೆ ನೇಮಕವಾಗುತ್ತದೆ. ಇಡೀ ವ್ಯವಸ್ಥೆಗೆ ಭದ್ರಬುನಾದಿಯಾದ ಶಿಕ್ಷಣ ಇಲಾಖೆಯ ಕಿರಿಯ, ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಅವುಗಳನ್ನು ತುಂಬುವುದಿಲ್ಲವೇಕೆ? ಗ್ರೂಪ್ 'ಡಿ' ಹಾಗೂ ಕ್ಲರ್ಕ್ ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ಶಿಕ್ಷಕರ ಕಾರ್ಯಭಾರವನ್ನು ಸರ್ಕಾರ ಕಡಿಮೆ ಮಾಡಬೇಕಾಗಿದೆ.

ರಾಜೇಂದ್ರ ಕುಮಾರ್ ಮುದ್ನಾಳ್, ಯಾದಗಿರಿ

ಹಿರಿಯ ನಾಗರಿಕರಿಗೆ ಬೇಕು ಸಹಾಯವಾಣಿ

ಪೋಷಕರ ಆರೈಕೆ ಮಾಡದಿದ್ದರೆ ಆಸ್ತಿ ಹಕ್ಕು ಇಲ್ಲ ಎಂಬ ಸಚಿವ ಶರಣಪ್ರಕಾಶ್ ಪಾಟೀಲ ಅವರ ಹೇಳಿಕೆ (ಪ್ರ.ವಾ., ಮಾರ್ಚ್ 17) ಓದಿ ಸಂತೋಷವಾಯಿತು. ಇಂತಹ ಪ್ರಕರಣಗಳ ವಿಚಾರಣೆ ನಡೆಸುವ ಕಂದಾಯ ಉಪವಿಭಾಗಾಧಿಕಾರಿಗಳಿಗೆ ಮುಕ್ತ ಅಧಿಕಾರ ನೀಡಬೇಕು. ಸ್ಥಳೀಯ ರಾಜಕಾರಣಿಗಳು ತಮ್ಮ ಆಪ್ತರಿಗೆ ಅನುಕೂಲವಾಗುವಂತೆ ಆದೇಶಿಸಲು ಅವರ ಮೇಲೆ ಒತ್ತಡ ಹೇರುವುದನ್ನು ತಡೆಯಬೇಕು. ಈ ಸಂಬಂಧ ಜನಪ್ರತಿನಿಧಿಗಳಿಗೆ ಸರ್ಕಾರ ಕಟ್ಟುನಿಟ್ಟಿನ ಆದೇಶ ನೀಡಬೇಕು. ಒಂದು ವೇಳೆ ಈ ರೀತಿಯ ಹಸ್ತಕ್ಷೇಪ ಅಥವಾ ಅಧಿಕಾರಿಗಳು ವಿಳಂಬ ಧೋರಣೆ ಅನುಸರಿಸುವುದು ಕಂಡುಬಂದಲ್ಲಿ ಅಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು. ಇಂತಹ ಪ್ರಕರಣಗಳ ವಿಲೇವಾರಿ ಕುರಿತು ತಿಂಗಳಿಗೊಮ್ಮೆ ರಾಜ್ಯ ಮಟ್ಟದ ಅಧಿಕಾರಿಗಳು ವರದಿ ತರಿಸಿಕೊಳ್ಳಬೇಕು. ಹಿರಿಯ ನಾಗರಿಕರಿಗೆ ಈ ಕಾಯ್ದೆಗೆ ಸಂಬಂಧಿಸಿದಂತೆ ಸಹಾಯವಾಣಿ ಸ್ಥಾಪಿಸಬೇಕು. ಆರ್ಥಿಕವಾಗಿ ಹಾಗೂ ದೈಹಿಕವಾಗಿ ದುರ್ಬಲರಾದ ಹಿರಿಯ ನಾಗರಿಕರು ಅಲೆದಾಡಿಯೇ ಹೈರಾಣಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಹೀಗಾಗಿ, ಕಾಯ್ದೆಯನ್ನು ಸರಿಯಾಗಿ ನಿರ್ವಹಿಸುವ ಜವಾಬ್ದಾರಿ ಸರ್ಕಾರದ ಮೇಲಿದೆ.

ಹುಸೇನಬಾಷಾ, ಹುಬ್ಬಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಸಿಗಾಳಿ ಎದುರಿಸಲು ಸಜ್ಜಾಗಿ

ಹವಾಮಾನ ಬದಲಾವಣೆಯು ಈ ಬಾರಿಯೂ ದೇಶದಾದ್ಯಂತ ಸುಡು ಬೇಸಿಗೆಯ ಅನುಭವ ನೀಡುವುದು ನಿಚ್ಚಳವಾಗಿದೆ. ಬೇಸಿಗೆಯ ಆರಂಭದಲ್ಲೇ ಕರ್ನಾಟಕವೂ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಬಿಸಿಗಾಳಿಯ ವಾತಾವರಣ ಇದ್ದು, ಜನ ತಳಮಳ ಅನುಭವಿಸುತ್ತಿದ್ದಾರೆ. 2024 ಜಾಗತಿಕವಾಗಿ ಅತ್ಯಂತ ಬಿಸಿಯ ವರ್ಷವಾಗಿತ್ತು. ಭಾರತದಲ್ಲಿ ಈ ವರ್ಷದ ಫೆಬ್ರುವರಿ ತಿಂಗಳು 125 ವರ್ಷಗಳಲ್ಲೇ ಅತ್ಯಂತ ಬಿಸಿಯ ಫೆಬ್ರುವರಿ ತಿಂಗಳಾಗಿತ್ತು. ಇನ್ನು ಎರಡು ಮೂರು ತಿಂಗಳು ಬಿಸಿಲಿನ ಝಳ ಕಾಡಲಿದ್ದು, ಬಿಸಿಲಾಘಾತದ ಹೊಡೆತದಿಂದ ತಪ್ಪಿಸಿಕೊಳ್ಳಲು ಜನರು ಎಚ್ಚರಿಕೆ ವಹಿಸುವುದು ಅತ್ಯಗತ್ಯ

ಪ್ರಜಾವಾಣಿ ವಾರ್ತೆ

ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಾರ್ಚ್ 18ರಿಂದ 20ರವರೆಗೆ ಬಿಸಿಗಾಳಿ ಬೀಸಲಿದ್ದು, ಜನ ಎಚ್ಚರಿಕೆ ವಹಿಸಬೇಕು ಎಂದು ರಾಜ್ಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಒಡಿಶಾ, ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನ, ಛತ್ತೀಸಗಢ, ಜಾರ್ಖಂಡ್ ರಾಜ್ಯಗಳಲ್ಲಿಯೂ ಬಿಸಿಗಾಳಿ ಬೀಸಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಎಚ್ಚರಿಕೆ ನೀಡಿದೆ.

1901ರ ನಂತರ 2024 ಅತಿ ಹೆಚ್ಚು ತಾಪಮಾನದ ವರ್ಷವಾಗಿತ್ತು ಎಂದು ಐಎಂಡಿ ತನ್ನ ವಾರ್ಷಿಕ ಹವಾಗುಣ ವರದಿಯಲ್ಲಿ ಉಲ್ಲೇಖಿಸಿದೆ. ಕಳೆದ ವರ್ಷ ಮುಂಗಾರುಪೂರ್ವ ಬೇಸಿಗೆ ಕಾಲವು 92 ದಿನಗಳಿಗೆ ವಿಸ್ತರಿಸಿತ್ತು; ಮಾರ್ಚ್‌ನಿಂದ ಮೇವರೆಗೆ ದೇಶದಲ್ಲಿ 54 ದಿನ ಬಿಸಿಗಾಳಿ ಕಾಣಿಸಿಕೊಂಡಿತ್ತು ಎಂದು ವರದಿ ತಿಳಿಸಿದೆ. ದಕ್ಷಿಣ ಭಾರತದಲ್ಲಿ ತಾಪಮಾನವು ಅಸಹಜವಾಗಿ ಏರಿಕೆ ಕಂಡಿತ್ತು. ಜಾರ್ಖಂಡ್, ಛತ್ತೀಸಗಢ, ಪಶ್ಚಿಮ ಬಂಗಾಳ, ಸಿಕ್ಕಿಂ, ಜಮ್ಮು–ಕಾಶ್ಮೀರ ರಾಜ್ಯಗಳಲ್ಲಿ ಸಾಮಾನ್ಯ ತಾಪಮಾನಕ್ಕಿಂತ 1 ಡಿಗ್ರಿ ಸೆಲ್ಸಿಯಸ್ ಹೆಚ್ಚು ದಾಖಲಾಗಿತ್ತು.

2024ರ ಮಾರ್ಚ್‌ನಿಂದ ಜೂನ್‌ವರೆಗೆ ದೇಶದ 37 ನಗರಗಳಲ್ಲಿ ತಾಪಮಾನವು 45 ಡಿಗ್ರಿ ಸೆಲ್ಸಿಯಸ್ ದಾಟಿತ್ತು. ದೇಶದ 36 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಪೈಕಿ 17ರಲ್ಲಿ ಮಾರ್ಚ್1 ಮತ್ತು ಜೂನ್ 25ರ ನಡುವೆ ರಾತ್ರಿ ವೇಳೆ ಅತಿ ಹೆಚ್ಚು ತಾಪಮಾನ ದಾಖಲಾಗಿತ್ತು. ಜೂನ್‌ನಲ್ಲಿ ದೆಹಲಿಯ ಉಷ್ಣಾಂಶ 52.9 ಡಿಗ್ರಿ ಸೆಲ್ಸಿಯಸ್‌ವರೆಗೂ ಏರಿತ್ತು. ಈ ವರ್ಷ ಬೇಸಿಗೆ ಆರಂಭದಲ್ಲೇ ಹೆಚ್ಚಿನ ಉಷ್ಣತೆ ಕಂಡುಬರುತ್ತಿದ್ದು, ಬಿಸಿಗಾಳಿ, ಬಿಸಿಲಾಘಾತ ಹೆಚ್ಚಾಗಬಹುದು.

‘ಹೀಟ್‌ವಾಚ್’ ಎನ್ನುವ ಸರ್ಕಾರೇತರ ಸಂಸ್ಥೆಯ ಪ್ರಕಾರ, ಭಾರತದಲ್ಲಿ 1992ರಿಂದ ಈವರೆಗೆ 24 ಸಾವಿರ ಮಂದಿ ಬಿಸಿಗಾಳಿಯಿಂದಾಗಿ ಪ್ರಾಣತೆತ್ತಿದ್ದಾರೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ಪ್ರಕಾರ, 2012ರಿಂದ 2022ರವರೆಗೆ ಬಿಸಿಲಾಘಾತದಿಂದ 11,868 ಮಂದಿ ಮೃತಪಟ್ಟಿದ್ದಾರೆ.

ಕಡತದಲ್ಲಷ್ಟೇ ಕ್ರಿಯಾ ಯೋಜನೆ: ಬಿಸಿಗಾಳಿಯ ದುಷ್ಪರಿಣಾಮಗಳ ನಿವಾರಣೆಗಾಗಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ಐಎಂಡಿ ಮತ್ತು 23 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸಹಯೋಗದೊಂದಿಗೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿದೆ. ಆದರೆ, ಕರ್ನಾಟಕವೂ ಸೇರಿದಂತೆ ಬಹುತೇಕ ರಾಜ್ಯಗಳಲ್ಲಿ ಅದು ಪೂರ್ಣವಾಗಿ ಅನುಷ್ಠಾನಗೊಂಡಿಲ್ಲ.

ಕೇಂದ್ರ ಆರೋಗ್ಯ ಇಲಾಖೆ, ಹವಾಮಾನ ಇಲಾಖೆ, ಆಯಾ ರಾಜ್ಯ ಸರ್ಕಾರಗಳು ಕೂಡ ಬೇಸಿಗೆಯಲ್ಲಿ ಬಿಸಿಗಾಳಿ ಪರಿಸ್ಥಿತಿ ನಿರ್ವಹಣೆಗೆ ಪಾಲಿಸಬೇಕಾದ ನಿಯಮಗಳ ಬಗ್ಗೆ ಮಾರ್ಗಸೂಚಿ ಹೊರಡಿಸುತ್ತವೆ. ಆದರೆ, ಅದು ತಳಮಟ್ಟದಲ್ಲಿ ಜಾರಿ ಆಗುತ್ತಿಲ್ಲ. ಆರೋಗ್ಯ ಸೇರಿದಂತೆ ಸಂಬಂಧಪಟ್ಟ ಇಲಾಖೆಗಳಲ್ಲಿ ಸಿಬ್ಬಂದಿಗೆ ಬಿಸಿಗಾಳಿ, ಅದರ ಪರಿಣಾಮಗಳು, ತುರ್ತು ಸಂದರ್ಭಗಳನ್ನು ನಿಭಾಯಿಸುವ ಬಗ್ಗೆ ಮಾಹಿತಿಯ ಕೊರತೆ ಇದೆ. ಮಾರ್ಗಸೂಚಿಗಳ ಬಗ್ಗೆ ಅರಿವೇ ಇಲ್ಲ ಎಂಬ ಸಂಗತಿಯೂ ಅಧ್ಯಯನಗಳಿಂದ ತಿಳಿದುಬಂದಿದೆ.

ಆರ್ಥಿಕತೆಗೂ ಹೊಡೆತ: ಬಿಸಿಗಾಳಿಯು ಜನರ ಆರೋಗ್ಯ ಹಾನಿ ಮಾಡುವುದಲ್ಲದೇ, ಅವರ ಉದ್ಯೋಗ ಮತ್ತು ದೇಶದ ಆರ್ಥಿಕತೆಯ ಮೇಲೂ ಪ್ರತಿಕೂಲ ಪರಿಣಾಮ ಬೀರುತ್ತದೆ. ಹೆಚ್ಚಿದ ತಾಪಮಾನವು 2050ರ ಹೊತ್ತಿಗೆ ಭಾರತದ 38 ಕೋಟಿಯಿಂದ 48 ಕೋಟಿ ಜನರ ಉದ್ಯೋಗದ ಸಾಮರ್ಥ್ಯ, ಆರ್ಥಿಕ ಬೆಳವಣಿಗೆ ಮತ್ತು ಜೀವನ ಮಟ್ಟದ ಮೇಲೆ ಪರಿಣಾಮ ಉಂಟುಮಾಡಲಿದೆ ಎಂದು ಹೀಟ್‌ವಾಚ್ ಸಂಸ್ಥೆ ತಿಳಿಸಿದೆ. ಬಿಸಿಗಾಳಿಯು ಮುಂದಿನ ದಿನಗಳಲ್ಲಿ ದೇಶದ ಶೇ 90ರಷ್ಟು ಜನರ ಜೀವನೋಪಾಯಕ್ಕೆ ತೊಡಕಾಗಲಿದ್ದು, ಆಹಾರ ಧಾನ್ಯಗಳ ಇಳುವರಿಯಲ್ಲಿ ಕುಸಿತ, ನೀರಿನಿಂದ ಬರುವ ಕಾಯಿಲೆಗಳಿಗೆ ಕಾರಣವಾಗುವುದಲ್ಲದೇ ನಗರ ಸುಸ್ಥಿರತೆಯ ಮೇಲೂ ಪರಿಣಾಮ ಬೀರಲಿದೆ ಎಂದು ಅದು ಹೇಳಿದೆ.

ಆರೋಗ್ಯದ ಮೇಲೆ ಏನೇನು ಪರಿಣಾಮ?

ಶಾಖದ ಬಾಧೆ (ಹೀಟ್ ಕ್ರಾಂಪ್ಸ್): ಬಿಸಿಲಿನಲ್ಲಿ ಶ್ರಮದಾಯಕ ಕೆಲಸ ಮಾಡುವಾಗ ಸ್ನಾಯುಗಳಲ್ಲಿ ಊತ, ನೋವು ಕಾಣಿಸಿಕೊಳ್ಳುತ್ತದೆ

ಶಾಖದ ಬಳಲಿಕೆ: ದೇಹದ ಉಷ್ಣಾಂಶ ಜಾಸ್ತಿಯಾದಾಗ ನಿರ್ಜಲೀಕರಣ, ಆಯಾಸ, ತಲೆ ಸುತ್ತು, ತಲೆ ನೋವು, ವಾಂತಿ, ಪಿತ್ತ, ಹೊಟ್ಟೆತೊಳಸುವಿಕೆ ಮುಂತಾದ ಸಮಸ್ಯೆ ಕಾಣಿಸಿಕೊಳ್ಳಬಹುದು

ಬಿಸಿಲಾಘಾತ: ಬಿಸಿಲಿನ ಝಳ ತಡೆಯಲು ಸಾಧ್ಯವಾಗದೆ ತಲೆ ಸುತ್ತು ಬಂದು ಕುಸಿದು ಬಿದ್ದು, ಪ್ರಜ್ಞೆ ತಪ್ಪುತ್ತದೆ. ಇದು ಪ್ರಾಣಕ್ಕೆ ಎರವಾಗಬಹುದು. ಅಶಕ್ತರು, ವೃದ್ಧರು, ವಿವಿಧ ರೀತಿಯ ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವವರು ಬಿಸಿಲಾಘಾತಕ್ಕೆ ತುತ್ತಾಗುವ ಸಾಧ್ಯತೆ ಹೆಚ್ಚು

ಬಿಸಿಗಾಳಿ ಎಂದರೆ...

ನಿರ್ದಿಷ್ಟ ಪ್ರದೇಶದಲ್ಲಿ ದಾಖಲಾಗುವ ಗರಿಷ್ಠ ಉಷ್ಣಾಂಶದ ಆಧಾರದಲ್ಲಿ ಭಾರತೀಯ ಹವಾಮಾನ ಇಲಾಖೆಯು ಬಿಸಿಗಾಳಿಯನ್ನು ವ್ಯಾಖ್ಯಾನಿಸುತ್ತದೆ. ಈ ಗರಿಷ್ಠ ಉಷ್ಣತೆಯ ಮಿತಿಯನ್ನು ಪ್ರದೇಶವಾರು ನಿಗದಿಪಡಿಸಲಾಗಿದೆ.

- ಬಯಲು ಪ್ರದೇಶದ ವ್ಯಾಪ್ತಿಯಲ್ಲಿ ವಾತಾವರಣದ ಗರಿಷ್ಠ ತಾಪಮಾನ 40 ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತ ಜಾಸ್ತಿ ಇದ್ದರೆ ಬಿಸಿಗಾಳಿ ಎಂದು ಘೋಷಣೆ ಮಾಡಲಾಗುತ್ತದೆ
- ಕರಾವಳಿ ಪ್ರದೇಶಗಳಲ್ಲಿ ಬಿಸಿಗಾಳಿ ಇದೆ ಎಂದು ಕರೆಯಬೇಕಾದರೆ 37 ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತ ಹೆಚ್ಚು ಉಷ್ಣತೆ ದಾಖಲಾಗಿರಬೇಕು
- ಗಿರಿ ಪ್ರದೇಶಗಳಲ್ಲಿ 30 ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತ ಹೆಚ್ಚು ತಾಪಮಾನ ಇದ್ದರೆ ಬಿಸಿಗಾಳಿ ಎಂದು ಕರೆಯಲಾಗುತ್ತದೆ

– ನಿರ್ದಿಷ್ಟ ಪ್ರದೇಶದ ತಾಪಮಾನವು ಆ ಪ್ರದೇಶದ ಸಾಮಾನ್ಯ ಉಷ್ಣತೆಗಿಂತ...

ಎ) 3 ರಿಂದ 4 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಿದ್ದರೆ, ‘ಸಾಮಾನ್ಯಕ್ಕಿಂತ ಮೇಲಿನ ಉಷ್ಣತೆ’,

ಬಿ)5 ರಿಂದ 6 ಡಿಗ್ರಿ ಸೆಲ್ಸಿಯಸ್‌ನಷ್ಟು ಜಾಸ್ತಿ ಇದ್ದರೆ ‘ಮಧ್ಯಮ ಬಿಸಿಗಾಳಿ’ ಹಾಗೂ

ಸಿ) 7 ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತಲೂ ಹೆಚ್ಚಿದ್ದರೆ ‘ತೀವ್ರ ಬಿಸಿಗಾಳಿ’ ಎನ್ನಲಾಗುತ್ತದೆ

- ನಿರ್ದಿಷ್ಟ ಪ್ರದೇಶದ ಸಾಮಾನ್ಯ ಗರಿಷ್ಠ ತಾಪಮಾನ 45 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಿದ್ದರೂ ‘ಬಿಸಿಗಾಳಿ’ ಎಂದು ಗುರುತಿಸಲಾಗುತ್ತದೆ

ಹವಾಮಾನ ಇಲಾಖೆಯ ಉಪವಿಭಾಗದ ಕನಿಷ್ಠ ಎರಡು ತಾಪಮಾನ ಮಾಪನ ಕೇಂದ್ರಗಳಲ್ಲಿ ಸತತ ಎರಡು ದಿನಗಳಲ್ಲಿ ಮೇಲಿನ ಮಾನದಂಡಗಳಂತೆ ಉಷ್ಣತೆ ದಾಖಲಾಗಿದ್ದರೆ ಇಲಾಖೆಯು ಬಿಸಿಗಾಳಿ ಎಚ್ಚರಿಕೆಯನ್ನು ನೀಡುತ್ತದೆ.

ಬಿಸಿಲ ಝಳ ತಡೆಯಲು ಹೀಗೆ ಮಾಡಿ...

- ಹೆಚ್ಚು ಬಿಸಿಲು ಇರುವ ಅವಧಿಯಲ್ಲಿ (ಮಧ್ಯಾಹ್ನ 12ರಿಂದ 3 ಗಂಟೆವರೆಗೆ) ಹೊರಗಡೆ ಹೋಗಬೇಡಿ. ಈ ಸಮಯದಲ್ಲಿ ಶ್ರಮದಾಯಕ ಕೆಲಸಗಳನ್ನು ಮಾಡಬೇಡಿ
- ಬಾಯಾರಿಕೆ ಇಲ್ಲದಿದ್ದರೂ ಹೆಚ್ಚು ನೀರು ಕುಡಿಯಿರಿ
- ಹಗುರವಾದ ತಿಳಿಬಣ್ಣದ, ಸಡಿಲವಾದ ಮತ್ತು ಹತ್ತಿ ಬಟ್ಟೆಗಳನ್ನೇ ಧರಿಸಿ
- ಬಿಸಿಲಿನಲ್ಲಿ ಹೋಗುವಾಗ ರಕ್ಷಣೆಗಾಗಿ ಕನ್ನಡಕಗಳು, ಛತ್ರಿ, ಟೋಪಿ ಧರಿಸಿ. ಕಾಲಿನಲ್ಲಿ ಬೂಟು/ಪಾದರಕ್ಷೆ ಸದಾ ಇರಲಿ
- ಪ್ರಯಾಣಿಸುವಾಗ ಜೊತೆಗೆ ನೀರನ್ನು ಕೊಂಡೊಯ್ಯಿರಿ
- ಆಲ್ಕೋಹಾಲ್, ಚಹಾ, ಕಾಫಿ, ಕಾರ್ಬೊನೇಟೆಡ್ ತಂಪು ಪಾನೀಯಗಳನ್ನು ಸೇವಿಸದಿರಿ. ಇವುಗಳ ಸೇವನೆ ನಿರ್ಜಲೀಕರಣಕ್ಕೆ (ಡಿಹೈಡ್ರೇಷನ್) ಕಾರಣವಾಗಬಹುದು
- ನಿಂಬೆ ಷರಬತ್ತು, ಮಜ್ಜಿಗೆ ಮುಂತಾದ ಪಾನೀಯಗಳು, ಒಆರ್‌ಎಸ್ ಬಳಸಿ. ಈ ಪಾನೀಯಗಳನ್ನು ಮನೆಯಲ್ಲೇ ತಯಾರಿಸಿದರೆ ಉತ್ತಮ
- ಸಾಧ್ಯವಾದಷ್ಟೂ ಬಿಸಿ ಆಹಾರ ಸೇವಿಸಿ
- ಬಿಸಿಲಿಗೆ ನಿಲ್ಲಿಸಿದ ವಾಹನಗಳಲ್ಲಿ ಮಕ್ಕಳು, ಸಾಕುಪ್ರಾಣಿಗಳನ್ನು ಬಿಡದಿರಿ
- ಪ್ರಾಣಿಗಳನ್ನು ನೆರಳಿನಲ್ಲಿ ಇರಿಸಿ, ನೀರು ಕೊಡಿ
- ತಲೆಸುತ್ತು, ಮೂರ್ಛೆ ಅಥವಾ ಅನಾರೋಗ್ಯದ ಅನುಭವವಾದರೆ ವೈದ್ಯರನ್ನು ಕಾಣಿ

ದೇಶದಲ್ಲಿ ಬಿಸಿಲಾಘಾತದ ಶಂಕಿತ ಪ್ರಕರಣಗಳು

ವರ್ಷ	ಪ್ರಕರಣಗಳು
2022	4,481
2023	19,402
2024	48,156

ಬಿಸಿಲಾಘಾತ: ಶಂಕಿತ ಮತ್ತು ದೃಢಪಟ್ಟ ಸಾವಿನ ಪ್ರಕರಣ

ವರ್ಷ	ಶಂಕಿತ ಸಾವಿನ ಪ್ರಕರಣ	ಸಾವು ದೃಢಪಟ್ಟ ಪ್ರಕರಣ
2022		33
2023	298	189
2024	269	161

2,151 ಕರ್ನಾಟಕದಲ್ಲಿ 2024ರಲ್ಲಿ ವರದಿಯಾಗಿದ್ದ ಶಂಕಿತ ಬಿಸಿಲಾಘಾತ ಪ್ರಕರಣಗಳು

5 ಕೇಂದ್ರ ಆರೋಗ್ಯ ಸಚಿವಾಲಯದ ಪ್ರಕಾರ ರಾಜ್ಯದಲ್ಲಿ 2024ರಲ್ಲಿ ದೃಢಪಟ್ಟ ಸಾವಿನ ಪ್ರಕರಣಗಳು

8 ಸರ್ಕಾರೇತರ ಸಂಸ್ಥೆ ‘ಹೀಟ್‌ವಾಚ್’ ನಡೆಸಿರುವ ಅಧ್ಯಯನದ ಪ್ರಕಾರ ರಾಜ್ಯದಲ್ಲಿ 2024ರಲ್ಲಿ ಸಂಭವಿಸಿದ ಸಾವುಗಳು

ಸಾವು: ತಾಳೆಯಾಗದ ಅಂಕಿ ಅಂಶ

ಬಿಸಿಲಾಘಾತದಿಂದಾಗಿ ಜನರು ಸಾವಿಗೀಡಾಗುತ್ತಿರುವ ಕುರಿತ ನಿಖರ ಅಂಕಿ ಅಂಶಗಳು ಸಿಗುತ್ತಿಲ್ಲ. ಕೇಂದ್ರ ಸರ್ಕಾರದ ಇಲಾಖೆಗಳು ನೀಡುವ ಮಾಹಿತಿಗಳು ಪರಸ್ಪರ ತಾಳೆಯಾಗುತ್ತಿಲ್ಲ. ಸರ್ಕಾರೇತರ ಸಂಸ್ಥೆಗಳು ಬೇರೆಯದೇ ಅಂಕಿ ಅಂಶಗಳನ್ನು ನೀಡುತ್ತಿವೆ. ಉದಾಹರಣೆಗೆ, 2024ರಲ್ಲಿ ಮಾರ್ಚ್ 1ರಿಂದ ಜುಲೈ 31ರ ನಡುವೆ 374 ಮಂದಿ ಮೃತಪಟ್ಟಿದ್ದಾರೆ ಎಂದು ಆರೋಗ್ಯ ಇಲಾಖೆಯು ಸಂಸತ್ತಿಗೆ ಮಾಹಿತಿ ನೀಡಿದೆ. ರಾಷ್ಟ್ರೀಯ ಹವಾಮಾನ ಬದಲಾವಣೆ ಮತ್ತು ಮಾನವ ಆರೋಗ್ಯ ಕಾರ್ಯಕ್ರಮದ ವರದಿಯ ಪ್ರಕಾರ, 2024ರಲ್ಲಿ ದೇಶದಲ್ಲಿ 161 ಮಂದಿ ಬಿಸಿಲಾಘಾತದಿಂದ ಮೃತಪಟ್ಟಿದ್ದಾರೆ. 269 ಮಂದಿ ಬಿಸಿಲಾಘಾತದ ಕಾರಣಕ್ಕೆ ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದೆ. ಇವೆರಡನ್ನೂ ಕೂಡಿಸಿದರೆ ಮೃತಪಟ್ಟವರ ಸಂಖ್ಯೆ 430 ಆಗುತ್ತದೆ. ಈ ಅಂಕಿ ಅಂಶಗಳಿಗೆ ವ್ಯತಿರಿಕ್ತವಾದ ಮಾಹಿತಿಯನ್ನು ‘ಹೀಟ್‌ವಾಚ್’ ಸಂಸ್ಥೆ ನೀಡಿದೆ. ಕಳೆದ ವರ್ಷ ಬಿಸಿಗಾಳಿ ಕಾರಣದಿಂದ ದೇಶದಲ್ಲಿ 773 ಮಂದಿ ಮೃತಪಟ್ಟಿದ್ದಾರೆ ಎಂದು ಅದು ಹೇಳಿದೆ.

ಆಧಾರ: ರಾಜ್ಯ ಸರ್ಕಾರದ ಸುತ್ತೋಲೆ, ರಾಷ್ಟ್ರೀಯ ಹವಾಮಾನ ಬದಲಾವಣೆ ಮತ್ತು ಮಾನವ ಆರೋಗ್ಯ ಕಾರ್ಯಕ್ರಮ ವರದಿ–2024, ಸದನದಲ್ಲಿ ಸಚಿವರ ಉತ್ತರ, ಹೀಟ್‌ವಾಚ್ ವೆಬ್‌ಸೈಟ್, ಐಎಂಡಿ, ಡೌನ್ ಟು ಅರ್ಥ್

ಸಿನಿ ಬಿಟ್ಸ್

ವಂಶಿ

ಏ.24ಕ್ಕೆ ಫೈರ್‌ಫ್ಲೈ ತೆರೆಗೆ

ವರನಟ ರಾಜ್‌ಕುಮಾರ್ ಅವರ ಜನ್ಮದಿನದಂದು ತಮ್ಮ ನಿರ್ಮಾಣದ ಚೊಚ್ಚಲ ಸಿನಿಮಾವನ್ನು ತೆರೆಗೆ ತರಲು ನಿವೇದಿತಾ ಶಿವರಾಜ್‌ಕುಮಾರ್ ನಿರ್ಧರಿಸಿದ್ದಾರೆ. ವಂಶಿ ನಿರ್ದೇಶನದ ‘ಫೈರ್‌ಫ್ಲೈ’ ಸಿನಿಮಾ ಏ.24ರಂದು ತೆರೆಕಾಣಲಿದೆ.

ಶ್ರೀ ಮುತ್ತು ಸಿನಿ ಸರ್ವೀಸ್ ಆ್ಯಂಡ್ ಪ್ರೊಡಕ್ಷನ್ಸ್‌ನಡಿ ಈ ಸಿನಿಮಾ 2023ರ ಜೂನ್‌ನಲ್ಲಿ ಸೆಟ್ಟೇರಿತ್ತು. ವಂಶಿ ನಿರ್ದೇಶನದ ಜೊತೆಗೆ ನಾಯಕರಾಗಿಯೂ ನಟಿಸಿದ್ದಾರೆ. ವಂಶಿಗೆ ರಚನಾ ಇಂದರ್ ಜೋಡಿಯಾಗಿದ್ದಾರೆ. ಈಗಾಗಲೇ ಟೀಸರ್ ಮೂಲಕ ಗಮನಸೆಳೆದಿರುವ ಈ ಸಿನಿಮಾದಲ್ಲಿ ಅಚ್ಯುತ್ ಕುಮಾರ್, ಸುಧಾರಾಣಿ, ಶೀತಲ್ ಶೆಟ್ಟಿ, ಆನಂದ್ ನೀನಾಸಂ, ಮೂಗು ಸುರೇಶ್ ಮುಂತಾದವರು ನಟಿಸಿದ್ದಾರೆ.

‘ಅಪ್ಪಾಜಿಯ ಜನ್ಮದಿನದಂದೇ ನನ್ನ ಮಗಳ ಮೊದಲ ಚಿತ್ರ ಬಿಡುಗಡೆಯಾಗುತ್ತಿರುವುದು ವಿಶೇಷವಾದ ಕ್ಷಣ. ಫೈರ್‌ಫ್ಲೈ ಸಾವು, ನೋವು ಮತ್ತು ಜೀವನ ಸ್ಫೂರ್ತಿಯ ಮರುಚಿಗುರುವಿಕೆಯ ಬಗ್ಗೆ ಮಾತನಾಡುವ ಚಿತ್ರ. ಗಾಢವಾದ ವಿಷಯವನ್ನು ಸರಳವಾಗಿ, ಹಾಸ್ಯದ ಮೂಲಕ ನಿರ್ದೇಶಕರು ಹೇಳಹೊರಟಿರುವುದು ನನಗೆ ಬಹಳ ಹಿಡಿಸಿತು’ ಎಂದಿದ್ದಾರೆ ನಟ ಶಿವರಾಜ್‌ಕುಮಾರ್.

ಚಿತ್ರಕ್ಕೆ ಚರಣ್‌ರಾಜ್ ಸಂಗೀತವಿದ್ದು, ಯುಗಾದಿಗೆ ಚಿತ್ರದ ಮೊದಲ ಹಾಡನ್ನು ಆನಂದ್ ಆಡಿಯೊ ಯುಟ್ಯೂಬ್ ಚಾನಲ್‌ನಲ್ಲಿ ಬಿಡುಗಡೆ ಮಾಡಲು ಚಿತ್ರತಂಡ ಸಜ್ಜಾಗಿದೆ. ಅಭಿಲಾಷ್ ಕಳತ್ತಿ ಛಾಯಾಚಿತ್ರಗ್ರಹಣ, ರಘು ನಿಡುವಳ್ಳಿ ಸಂಭಾಷಣೆ, ಸುರೇಶ್ ಆರ್ಮುಗಮ್ ಸಂಕಲನ ಚಿತ್ರಕ್ಕಿದೆ.

ವೀರ ಕಂಬಳ ಹಾಡಿಗೆ ಕೈಲಾಶ್ ಖೇರ್ ಧ್ವನಿ

ಇತ್ತೀಚೆಗಷ್ಟೇ ‘ಕೆಡಿ’ ಚಿತ್ರದ ‘ಶಿವ ಶಿವ..’ ಹಾಡಿಗೆ ಧ್ವನಿಯಾಗಿದ್ದ ಗಾಯಕ ಕೈಲಾಶ್ ಖೇರ್ ಕನ್ನಡದಲ್ಲಿ ಹಲವು ಹಿಟ್ ಹಾಡುಗಳನ್ನು ನೀಡಿದ್ದಾರೆ. ಇದೀಗ ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ ‘ವೀರ ಕಂಬಳ’ ಚಿತ್ರದ ಹಾಡೊಂದಕ್ಕೆ ಅವರು ದನಿಯಾಗಿದ್ದಾರೆ.

ಕಂಬಳ ಕ್ರೀಡೆಯನ್ನು ಆಧರಿಸಿದ ಈ ಸಿನಿಮಾವನ್ನು ಅರುಣ್ ರೈ ತೋಡಾರ್ ನಿರ್ಮಾಣ ಮಾಡಿದ್ದು, ಚಿತ್ರವು ಕನ್ನಡ ಹಾಗೂ ತುಳು ಭಾಷೆಗಳಲ್ಲಿ ಮೂಡಿಬರುತ್ತಿದೆ. ತುಳುವಿನಲ್ಲಿ ‘ಬಿರ್ದುದ ಕಂಬಳ’ ಎಂಬ ಶೀರ್ಷಿಕೆಯಲ್ಲಿ ಈ ಸಿನಿಮಾ ಬರುತ್ತಿದೆ. ‘ಈ ಸಿನಿಮಾ ಮಣ್ಣಿನ ಕಥೆಯನ್ನು ಹೊಂದಿದೆ. ಸಾಂಸ್ಕೃತಿಕ ವಿಷಯವನ್ನು ಹೊಂದಿರುವ ಈ ಚಿತ್ರದ ಹಾಡನ್ನು ಮಣಿಕಾಂತ್ ಕದ್ರಿ ಅತ್ಯುತ್ತಮವಾಗಿ ಸಂಯೋಜಿಸಿದ್ದಾರೆ. ರಘು ಶಾಸ್ತ್ರಿ ಅವರ ಸಾಹಿತ್ಯವೂ ಅದ್ಭುತವಾಗಿದೆ’ ಎಂದಿದ್ದಾರೆ ಕೈಲಾಶ್ ಖೇರ್.

ಚಿತ್ರಕ್ಕೆ ವಿಜಯ್ ಕುಮಾರ್ ಕೊಡಿಯಾಲ್‌ಬೈಲ್ ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದಾರೆ. ಆರ್. ಗಿರಿ ಛಾಯಾಚಿತ್ರಗ್ರಹಣ, ಶ್ರೀನಿವಾಸ್ ಪಿ.ಬಾಬು ಸಂಕಲನ, ಮದನ್-ಹರಿಣಿ ನೃತ್ಯ ನಿರ್ದೇಶನ, ಡಿಫರೆಂಟ್ ಡ್ಯಾನಿ, ಮಾಸ್ ಮಾದ ಸಾಹಸ ನಿರ್ದೇಶನ ಚಿತ್ರಕ್ಕಿದೆ. ಆದಿತ್ಯ, ಪ್ರಕಾಶ್ ರಾಜ್, ರವಿಶಂಕರ್, ಶೋಭರಾಜ್, ನವೀನ್ ಡಿ. ಪಡೀಲ್, ಭೋಜರಾಜ್ ವಾಮಂಜೂರ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಕೈಲಾಶ್ ಖೇರ್ | ಮಣಿಕಾಂತ್ ಕದ್ರಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಭಾರತದ ಕ್ರಿಕೆಟ್ ಆಟಗಾರ ಹಾರ್ದಿಕ್ ಪಾಂಡ್ಯ ಅವರು ಬಾಲಿವುಡ್ ನಟಿ ಅನನ್ಯಾ ಪಾಂಡೆ ಅವರೊಂದಿಗೆ ಇರುವ ಹಲವು ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಈ ಫೋಟೊಗಳನ್ನು ದುಬೈನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತೆಗೆಯಲಾಗಿದೆ ಎಂದೂ, ಐಸಿಸಿ ಚಾಂಪಿಯನ್ಸ್ ಟ್ರೋಫಿಯ ಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಭಾರತ ಗೆದ್ದ ನಂತರ ಹಾರ್ದಿಕ್ ಮತ್ತು ಅನನ್ಯಾ ಅಪ್ಪಿಕೊಂಡು ಸಂತಸ ವ್ಯಕ್ತಪಡಿಸಿದರು ಎಂದೂ ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ಚಿತ್ರಗಳನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲಿಸಿದಾಗ, ಇದೇ ಚಿತ್ರಗಳನ್ನು ಇಂಥದ್ದೇ ಪ್ರತಿಪಾದನೆಯೊಂದಿಗೆ ಹಲವರು ಹಂಚಿಕೊಂಡಿರುವುದು ಕಂಡುಬಂತು. ಚಿತ್ರಗಳನ್ನು ಮತ್ತಷ್ಟು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಚಿತ್ರಗಳ ನಡುವೆ ಮತ್ತು ಚಿತ್ರಗಳಲ್ಲಿರುವ ಇಬ್ಬರ ಮುಖಚಹರೆಗಳಲ್ಲಿ ವ್ಯತ್ಯಾಸಗಳಿದ್ದು, ಇದು ಕೃತಕ ಬುದ್ಧಿಮತ್ತೆಯ (ಎಐ) ಚಿತ್ರ ಇರಬಹುದು ಎನ್ನುವ ಅನುಮಾನ ಮೂಡಿಸಿತು. ಚಿತ್ರಗಳನ್ನು ಹೈವ್ ಮಾಡರೇಷನ್ ಎನ್ನುವ ಎಐ ಪತ್ತೆ ಸಾಧನದ ಮೂಲಕ ಪರಿಶೀಲಿಸಿದಾಗ, ಇವು ಎಐ ಚಿತ್ರಗಳೇ ಎಂಬುದು ಖಚಿತವಾಯಿತು. ಎಐ ಚಿತ್ರಗಳನ್ನು ಹಂಚಿಕೊಳ್ಳುವ ಮೂಲಕ ಸುಳ್ಳು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ತಿಳಿಸಿದೆ.

ಗುಂಡಣ್ಣ

ಮನದೊಳಗೆ ವಚನಗಳ ಸಿಹಿ ತುಂಬಿ

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

154

ನಮ್ಮಲ್ಲಿ ಒಂದು ನಂಬಿಕೆ ಇದೆ. ಪಾಪ ಕಳೆದುಕೊಳ್ಳಬೇಕು ಎಂದರೆ ಗಂಗೆಯಲ್ಲಿ ಮುಳುಗಬೇಕು ಎಂದು. ಮನಸ್ಸಿನ ತಾಪ ಕಳೆದುಕೊಳ್ಳಬೇಕು ಎಂದರೆ ಬೆಳದಿಂಗಳಲ್ಲಿ ಸುತ್ತಾಡಬೇಕು. ಶಾಪ ಕಳೆಯಬೇಕು ಎಂದರೆ ನೀವು ನಂಬಿದ ದೇವರ ಹತ್ತಿರ ಹೋಗಬೇಕು. ಪಾಪ, ತಾಪ ಮತ್ತು ಶಾಪ ಮೂರೂ ಕಳೆಯುವ ಶಕ್ತಿ ಸತ್ಯ ಶರಣರ ವಚನಗಳಲ್ಲಿವೆ. ಕೇಳುತ್ತಾ ಇರಬೇಕು. ‘ಎಷ್ಟು ದಿನ ಕೇಳಬೇಕ್ರಿ, ಎಷ್ಟು ಕೇಳಿದರೂ ಮತ್ತೆ ಹೊಲಸಾಗತೈತಿ ಮನಸ್ಸು ಅಂತೀರಿ’ ಗೊತ್ತು. ಹೊಲಸಾಗುವುದು ಅದರ ಗುಣಧರ್ಮ. ಅದಕ್ಕೇ ಕೇಳುತ್ತಲೇ ಇರಬೇಕು. ನೀವು ಚಹಾ ಮಾಡುವಾಗ ಚಹಾ ಮಾಡುವ ಪಾತ್ರೆ ಬದಲಾಯಿಸಿ, ತೊಳೆಯದೇ ಇದ್ದ ಸಾಂಬಾರು ಮಾಡುವ ಪಾತ್ರೆ ಬಳಸಿದರೆ ಏನಾಗುತ್ತದೆ? ಚಹಾ ಖಾರ ಅನಿಸ್ತದ. ಅದನ್ನು ತೊಳೆದರೂ ಅದು ಹೋಗುವುದಿಲ್ಲ. ದಿನಾ ತೊಳೆಯುತ್ತಿದ್ದರೆ ಒಂದು ದಿನ ಅದು ಚಹಾ ಮಾಡುವ ಪಾತ್ರೆಯಾಗಿ ಬದಲಾಗುತ್ತದೆ. ಆಗ ಚಹಾ ಸಿಹಿ ಸಿಹಿ ಅನಿಸುತ್ತದೆ. ಹಾಗೆಯೇ ಮನಸ್ಸು ಕೂಡ. ಖಾರದ ಸಾಂಬಾರು ಮಾಡುವ ಬೋಗುಣಿ ತರಹ. ಅದನ್ನು ಸ್ವಚ್ಛ ಮಾಡಬೇಕು ಎಂದರೆ ಶರಣರ ವಚನಗಳೆಂಬ ಸಿಹಿಯನ್ನು ಆಗಾಗ ಹಚ್ಚುತ್ತಿರಬೇಕು. ಒಂದಲ್ಲ ಒಂದು ದಿನ ಅದೂ ಸ್ವಚ್ಛವಾಗಿ ಸಿಹಿ ಸಿಹಿ ಆಗುತ್ತದೆ. ಅಭ್ಯಾಸವಾಗಬೇಕು ಮನಸ್ಸಿಗೆ.

ಒಬ್ಬ ವ್ಯಕ್ತಿ ಜ್ಯೋತಿಷಿ ಬಳಿಗೆ ಹೋದನಂತೆ. ‘ಬಹಳ ಕಷ್ಟ ಇದೆ ಸ್ವಾಮಿ’ ಎಂದ. ಅದಕ್ಕೆ ಜ್ಯೋತಿಷಿ ಕೂಡಿಸಿ, ಗುಣಿಸಿ ನೋಡಿ ‘ಇನ್ನೂ 6 ತಿಂಗಳು ನಿನಗೆ ಬಹಳ ಕಷ್ಟ ಇದೆ’ ಎಂದು ಹೇಳಿದ. ತಕ್ಷಣ ಆ ವ್ಯಕ್ತಿ ‘6 ತಿಂಗಳ ನಂತರ ಎಲ್ಲಾ ಕಡಿಮೆಯಾಗುತ್ತದೆಯೇ’ ಎಂದು ಕೇಳಿದ. ‘ಕಷ್ಟ ಏನೂ ಕಡಿಮೆಯಾಗೋದಿಲ್ಲ. ಆದರೆ ಕಷ್ಟಗಳು ನಿನಗೆ ಅಭ್ಯಾಸ ಆಗುತ್ತದೆ’ ಎಂದ ಜ್ಯೋತಿಷಿ. ಮನಸ್ಸಿಗೆ ಅಭ್ಯಾಸ ಮಾಡಿಸಬೇಕು. ಆಗಾಗ ಮನೆ ಸ್ವಚ್ಛ ಮಾಡಬೇಕು. ಮನಸ್ಸು ಸ್ವಚ್ಛ ಮಾಡಿಕೊಳ್ಳಬೇಕು. ‘ಮನೆಯೊಳಗೆ ಮನೆಯೊಡೆಯ ನಿದ್ದಾನೊ ಇಲ್ಲವೊ ಹೊಸ್ತಿಲಲ್ಲಿ ಹುಲ್ಲು ಹುಟ್ಟಿ ಮನೆಯೊಳಗೆ ರಜ ತುಂಬಿ ಮನೆಯೊಳಗೆ ಮನೆಯೊಡೆಯ ನಿದ್ದಾನೊ ಇಲ್ಲವೊ ತನುವಿನಲ್ಲಿ ಹುಸಿ ತುಂಬಿ ಮನದೊಳಗೆ ವಿಷಯ ತುಂಬಿ ಮನದೊಳಗೆ ಮನದೊಡೆಯನಿದ್ದಾನೊ ಇಲ್ಲವೊ ಇಲ್ಲ ಕೂಡಲ ಸಂಗಮದೇವಾ’ ಎಂದು ಬಸವಣ್ಣ ಹೇಳುತ್ತಾರೆ.

ಮನೆಯ ಮುಂದೆ ಕಸ ಇತ್ತು, ಹೊಲಸಿತ್ತು ಎಂದರೆ ಆ ಮನೆಯಲ್ಲಿ ಯಜಮಾನ ಇಲ್ಲ ಎಂತಲೇ ಅರ್ಥ. ಮನೆಯ ಮುಂದೆ ಕಸ ಇಲ್ಲದಿದ್ದರೆ, ಮನೆಯಲ್ಲಿ ದೀಪ ಹಚ್ಚಿದ್ದರೆ, ಮನೆ ಮುಂದೆ ಹಸಿರು ಇದ್ದರೆ ಮನೆಯಲ್ಲಿ ಯಜಮಾನ ಇದ್ದಾನೆ ಎಂದು ಅರ್ಥ. ಹಾಗೆಯೇ ದೇಹವೆಂಬ ಮನೆಯಲ್ಲಿ ಹೊಲಸು, ಕಸ ತುಂಬಿತ್ತು ಎಂದರೆ ದೇಹದೊಳಗೆ ದೇವರು ಎಂಬ ಯಜಮಾನ ಇಲ್ಲ ಎಂದೇ ಅರ್ಥ ಎಂದು ಬಸವಣ್ಣನವರು ಹೇಳುತ್ತಾರೆ. ನೀವು ಯಾವುದೇ ಕ್ಷೇತ್ರ ತೆಗೆದುಕೊಳ್ಳಿ. ಧಾರ್ಮಿಕ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಎಲ್ಲ ಕ್ಷೇತ್ರಗಳಲ್ಲಿಯೂ ಹೊಲಸು ತುಂಬಿವೆ. ವೈದ್ಯಕೀಯ ಕ್ಷೇತ್ರ ಬಹಳ ದುಬಾರಿ ಅಂತೀವಿ. ಆದರೆ ಮಂಡ್ಯದಲ್ಲಿ ಒಬ್ಬ ವೈದ್ಯರಿದ್ದರು. ಅವರು ಪ್ರತಿ ರೋಗಿಯಿಂದ ಐದು ರೂಪಾಯಿ ಮಾತ್ರ ತೆಗೆದುಕೊಳ್ಳುತ್ತಿದ್ದರು. ಅವರಿಗೆ ಪದ್ಮಶ್ರೀ ಪ್ರಶಸ್ತಿ ಕೊಟ್ಟರು. ವೈದ್ಯ ರೋಗಿಯಲ್ಲಿ ಭಯ ಹುಟ್ಟಿಸಬಾರದು. ಭರವಸೆ ಹುಟ್ಟಿಸಬೇಕು. ಎಲ್ಲ ಕ್ಷೇತ್ರಗಳೂ ಸ್ವಚ್ಛವಾಗಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಮಾರ್ಚ್ 18, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಚತುರ್ಥಿ ಗಂ. 22-10 ನಕ್ಷತ್ರ: ಸ್ವಾತಿ ಗಂ. 17-52 ಯೋಗ: ವ್ಯಾಘಾತ ಗಂ. 16-44 ಕರಣ: ಬವ ಗಂ. 08-52, ಮೀನ ಮಾಸದ 04 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ1.

ರಾಹುಕಾಲ : ಮಧ್ಯಾಹ್ನ 03-00 – 04-30

ಸೂರ್ಯೋದಯ : 06-39 ಸೂರ್ಯಾಸ್ತ : 06-38

ಮುಸ್ಲಿಂ ದಿನಾಂಕ : 17 ರಂಜಾನ್

ಅದೃಷ್ಟ ಸಂಖ್ಯೆ : 2, 9

ಮೇಷ: ಪ್ರಮುಖ ಗುರಿ ಸಾಧನೆಗಳಿಗೆ ಇಂದಿನಿಂದ ಒಳ್ಳೆಯ ಚಾಲನೆ ಸಿಗುವುದು. ಅಗತ್ಯವಿದ್ದಲ್ಲಿ ಹೊಸ ಸ್ಥಾನ ಅಥವಾ ಹೊಸ ಮನೆಗೆ ಹೋಗುವ ಯೋಚನೆ ನಡೆಸುವಿರಿ. ಕೆಲಸ ಕಾರ್ಯಗಳಲ್ಲಿ ಉತ್ಸಾಹವನ್ನು ಕಾಣುವಿರಿ.

ವೃಷಭ: ಸ್ವಪ್ರತಿಷ್ಠೆಗಾಗಿ ನಿಮ್ಮವರ ಜತೆಯಲ್ಲಿ ವಾದ ಮಾಡಬೇಕಾಗಬಹುದು. ವೈದ್ಯಕೀಯ ವಲಯದ ಉನ್ನತ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗುವುದು. ಮನೆಯ ಕೆಲಸಗಳು ಸರಾಗವಾಗಿ ನೆರವೇರುವುದು.

ಮಿಥುನ: ಅವಶ್ಯಕತೆ ಇರುವ ಸುತ್ತಮುತ್ತಲಿನ ವಿದ್ಯಮಾನಗಳ ಬಗ್ಗೆ ಮಾಹಿತಿ ಸಂಗ್ರಹಿಸಿ. ದೇವತಾನುಗ್ರದಿಂದ ಸಕಲ ಆಸೆಗಳು ಸಿದ್ಧಿಯಾಗಿ ಸಂತೃಪ್ತಿಯಾಗುವುದು. ಏಕಾಗ್ರತೆಗೆ ಭಂಗಬಾರದು.

ಕರ್ಕಾಟಕ: ಕುಟುಂಬದಲ್ಲಿ ಆಸ್ತಿಯ ಸಂಬಂಧಿತ ಸಮಸ್ಯೆಗಳು ನಿರಾತಂಕವಾಗಿ ಮುಗಿಯಲಿವೆ. ಕೊಟ್ಟ ಮಾತಿನಂತೆ ಕೆಲಸ ನೆರವೇರಿಸಿ ಕೊಡುವುದರಿಂದ ಹೆಸರು ಗಳಿಸಬಹುದು. ವ್ಯಾಪಾರ ಸರಿ ವ್ಯವಸ್ಥೆಗೆ ತರುವಿರಿ.

ಸಿಂಹ: ಆಸೆ ಆಕಾಂಕ್ಷೆಗಳು ಈಡೇರಿ ಎಲ್ಲವೂ ನಿಮ್ಮ ಇಚ್ಛೆಯಂತೆ ನಡೆಯುವುದು. ಉದ್ಯೋಗದಲ್ಲಿ ಹೆಚ್ಚಿನ ಅಧಿಕಾರ ಪಡೆದುಕೊಳ್ಳುವ ಸಂದರ್ಭ ಬರಲಿದೆ. ವಿವಾಹ ಪ್ರಸ್ತಾಪವು ಬಲಗೊಂಡು ಕಂಕಣ ಭಾಗ್ಯದ ಸಾಧ್ಯತೆ ಇರುವುದು.

ಕನ್ಯಾ: ಯಂತ್ರೋಪಕರಣಗಳ ವ್ಯಾಪಾರದಿಂದ ಲಾಭವನ್ನು ಪಡೆಯಬಹುದು. ವೃತ್ತಿಗೆ ಸಂಬಂಧಿಸಿದಂತೆ ಶತ್ರುಬಾಧೆ ಎದುರಾಗಬಹುದು. ದಿಟ್ಟತನ ಹಾಗೂ ಸಾಧಿಸಲೇಬೇಕೆಂಬ ಛಲದಿಂದಾಗಿ ಕಾರ್ಯ ಕೈಗೂಡುವುದು.

ತುಲಾ: ಸಮಸ್ಯೆಗೆ ಸಂಬಂಧಿಸಿದಂತೆ ವ್ಯಕ್ತಿಯಲ್ಲಿ ಮಾತನಾಡುವುದರಿಂದ ಸಂಪೂರ್ಣವಾಗಿ ಉತ್ತರ ಸಿಗಲಿದೆ. ಆಧ್ಯಾತ್ಮಿಕ ಚಿಂತನೆಯು ಧೈರ್ಯವನ್ನು ವೃದ್ಧಿಸುತ್ತದೆ. ರಾಜಕೀಯ ವ್ಯಕ್ತಿಗಳೊಂದಿಗೆ ಒಡನಾಟ ಬೆಳೆಸಿಕೊಳ್ಳುವಿರಿ.

ವೃಶ್ಚಿಕ: ಕೋರ್ಟ್ ಕೆಲಸಗಳಿಗಾಗಿ ಹಿರಿಯ ಅಧಿಕಾರಿಗಳ ಸಲಹೆ ಪಡೆಯುವುದು ಅವಶ್ಯಕ. ಮಂಗಳ ಕಾರ್ಯದಲ್ಲಿ ಭಾಗಿಯಾಗಲು ದೂರ ಪ್ರಯಾಣ ಮಾಡಬೇಕಾಗುತ್ತದೆ. ವ್ಯವಹಾರಗಳಲ್ಲಿ ಹಿಡಿತವನ್ನು ಸಾಧಿಸಿದ್ದೀರಿ.

ಧನು: ಆಸ್ತಿ ಖರೀದಿ ನಿರ್ಧಾರದಲ್ಲಿ ಲಾಭ-ನಷ್ಟವನ್ನು ಯೋಚಿಸುವುದು ಉತ್ತಮ. ಉಷ್ಣವ್ಯಾಧಿ ಉಪಶಮನಕ್ಕೆ ಬೇಕಾದ ಔಷಧಿಯನ್ನು ಸ್ವೀಕರಿಸಿ. ದೃಢ ನಿರ್ಧಾರದಿಂದ ಹಿಂದಿನ ಕೆಲಸಕಾರ್ಯಗಳೆಲ್ಲವು ಪೂರ್ಣಗೊಳ್ಳಲಿವೆ.

ಮಕರ: ಗಣನೀಯವಾದ ಆದಾಯವಿದ್ದರೂ ಮನರಂಜನೆಯ ಬಯಕೆಯಿಂದಾಗಿ ಖರ್ಚುಗಳು ಸಂಭವಿಸಲಿವೆ. ಉತ್ಸಾಹವನ್ನು ಹೆಚ್ಚಿಸುವ ಪ್ರೋತ್ಸಾಹಕರ ಸುದ್ದಿಯನ್ನು ಹಿತೈಷಿಗಳಿಂದ ಕೇಳುತ್ತೀರಿ.

ಕುಂಭ: ಜವಾಬ್ದಾರಿಯುತ ಸ್ಥಾನವನ್ನು ನಿಭಾಯಿಸಲು ತೀರ್ಮಾನಿಸುವುದು ಸರಿಯಲ್ಲ. ಸಂತೋಷವನ್ನು ಜೀವನದಲ್ಲಿ ಪಡೆಯಲು ಯೋಗ ಹಾಗೂ ಪ್ರಾಣಾಯಾಮವನ್ನು ದಿನಚರಿಯಲ್ಲಿ ಅಳವಡಿಸಿಕೊಳ್ಳಿ.

ಮೀನ: ಕಷ್ಟದ ದಿನಗಳಲ್ಲಿ ಸಹಕರಿಸಿದವರೊಂದಿಗೆ ವಿನಯದಿಂದ ಇರುವುದನ್ನು ಮರೆಯಬೇಡಿ. ವೈವಾಹಿಕ ಜೀವನದಲ್ಲಿ ಪರಸ್ಪರ ಹೊಂದಾಣಿಕೆ ಇದ್ದು, ಸಂತೋಷದಿಂದ ಇರುವಿರಿ. ವೃತ್ತಿಪರತೆ ಕಡೆ ಗಮನಹರಿಸಿ.

ಪದಬಂಧ 5985

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕ್ರಮ ಕೊನೆಗಿಟ್ಟು ತೋರಿದ ಕಲಿತನ (4)
3.ತೋರಿಕೆಗಾಗಿ ನಗುವ ನಗು (4)
5.ಒನಪು ತೋರಿದಾಗ ಬಂದಿರುವ ಸ್ಮರಣೆ (3)
6.ಯಾರ ಆಕ್ಷೇಪವಿಲ್ಲದ ಗುಪ್ತನಿಧಿ! (3)
8.ಕುಲದಲ್ಲಿ ಎಲ್ಲರೂ ಕ್ಷೇಮ! (3)
9.ಹಿತವಲ್ಲದ್ದು ಇದು (3)
10.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
12.ವನದಲ್ಲಿಯೇ ತ್ಯಜಿಸುವಿಕೆ (3)
14.ಕರುಣೆಯೇ ಇಲ್ಲದ ಕ್ರೂರ (4)
15.ಚಾರನ ಕೆಟ್ಟ ನಡವಳಿಕೆ (4)

ಮೇಲಿಂದ ಕೆಳಕ್ಕೆ

1.ಹಾಲು ಕರೆಯುವ ಹಸು (4)
2.ಮದಿಸಿದ ಗಜ (3)
3.ಚರಪು ತಿನ್ನಲು ತೋರಿದ ಉತ್ಸಾಹ! (3)
4.ಹಿಂದಿನ ಕಾಲದ ಶಿಕ್ಷಣ ಕೇಂದ್ರ (4)
7.ಪಾಪ ಮಾಡಿದವನು (3)
8.ಅಷ್ಟದಿಕ್ಪಾಲಕರಲ್ಲಿ ಈತನೇ ಶ್ರೀಮಂತ! (3)
9.ಸ್ಮರಣ ಶಕ್ತಿ ಚನ್ನಾಗಿರುವವನು (4)
11.ಕರದಲ್ಲಿರುವ ದೇಹ (4)
12.ನೀರಿನ ಅಧಿದೇವತೆ (3)
13.ಕೈಯಲ್ಲಿನ ಹಣ (3)



5984ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಸರ್ವತೋಮುಖ 4.ಚರಟ 5.ರಸನ 7.ಪದ 10.ಮದ 11.ಶರಣ 12.ಲಾಭ 13.ಕರು 15.ತಕ್ಕಡಿ 18.ಜಳಕ 19.ಪುನರುತ್ಥಾನ

ಮೇಲಿಂದ ಕೆಳಕ್ಕೆ: 1.ಸಂತೋಷ 2.ವಿಟಪ 3.ಖರ 4.ಚರಮಗೀತ 6.ನರಭಕ್ಷಕ 8.ದಶಕ 9.ಕಣಕ 14.ರುಜನ 16.ಡಿಪು 17.ಅರುಣ

ಸುಡೊಕು 6370

		1		7		6		2
		5	2		9			
2	8			1			9	5
	5		7			8		
	2			8		5		9
8		6		9				
6				5		9		7
		8					5	
5		3		6		1		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6369 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ಅಡಿಕೆ ಧಾರಣೆ (₹ಗಳಲ್ಲಿ)

ಕಾರ್ಕಳ	
ಹೊಸತು	25000-40000
ಹಳತು	30000-46000

ಕುಮಟ	
ಚಾಲಿ	31709-36919
ಚಿಪ್ಪು	18099-25099
ಕೋಕ	7019-19019
ಫ್ಯಾಕ್ಟರಿ	6099-25149
ಹೊಸಚಾಲಿ	35699-37298

ಸಾಗರ	
ಬಿಳಿಗೋಟು	8099-19600
ಚಾಲಿ	26300-33619
ಕೋಕ	8100-19588
ಕೆಂಪುಗೋಟು	11099-25939
ರಾಶಿ	24599-52269
ಸಿಪ್ಪೆಗೋಟು	8012-16859

ಶಿವಮೊಗ್ಗ	
ಬೆಟ್ಟೆ	44572-57400
ಗೊರಬಲು	16769-28300
ರಾಶಿ	35669-52259
ಸರಕು	57100-86540

ಸಿದ್ದಾಪುರ	
ಬಿಳಿಗೋಟು	22009-27009
ಚಾಲಿ	32509-36519
ಕೋಕ	13099-24189
ಹೊಸಚಾಲಿ	29809-35709
ಕೆಂಪುಗೋಟು	19609-23609
ರಾಶಿ	41099-49409
ತಟ್ಟಿಬೆಟ್ಟೆ	28499-44109

ಶಿರಸಿ	
ಬೆಟ್ಟೆ	26110-40989
ಬಿಳಿಗೋಟು	16249-28889
ಚಾಲಿ	31266-37909
ಕೆಂಪುಗೋಟು	13191-23299
ರಾಶಿ	40909-45861

ಯಲ್ಲಾಪುರ	
ಅಪಿ	60379-60479
ಬಿಳಿಗೋಟು	13899-26112
ಚಾಲಿ	27675-37599
ಕೋಕ	4609-15510
ಕೆಂಪುಗೋಟು	14899-26399
ರಾಶಿ	40269-57299
ತಟ್ಟಿಬೆಟ್ಟೆ	27975-37310

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,397
ಇಂದಿನ ಅಂತ್ಯ	22,508
▲	111
ದಿನದ ಗರಿಷ್ಠ	22,577

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹455
12 ಕ್ಕೆ	₹60
ಮೈಸೂರು	
100ಕ್ಕೆ	₹455

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1410 (1410)
ಸೋಯಾ (ರಿಫೈನ್ಡ್)	₹1310 (1325)
ಸೂರ್ಯಕಾಂತಿ (ರಿಫೈನ್ಡ್)	₹1410 (1410)
ಪಾಮೋಲಿನ್	₹1360 (1370)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹193
ಆರ್‌ಎಸ್‌ಎಸ್-5	₹187
ಗುಡ್ ಲಾಟ್	₹181

ವಿನಿಮಯ ದರ

$ ಡಾಲರ್	86.81
£ ಪೌಂಡ್	112.44
€ ಯುರೊ	94.63
¥ ಯೆನ್ (100ಕ್ಕೆ)	58

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹14500-15000
ದಾವಣಗೆರೆ	₹11600-11600

ಸಂಕ್ಷಿಪ್ತ ಸುದ್ದಿ

ಸಗಟು ಹಣದುಬ್ಬರ ಶೇ 2.38ಕ್ಕೆ ಏರಿಕೆ

ನವದೆಹಲಿ (ಪಿಟಿಐ): ದೇಶದ ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧರಿತ ಹಣದುಬ್ಬರವು ಫೆಬ್ರುವರಿಯಲ್ಲಿ ಶೇ 2.38ಕ್ಕೆ ಏರಿಕೆಯಾಗಿದೆ.

ಜನವರಿಯಲ್ಲಿ ಶೇ 2.31ರಷ್ಟಾಗಿತ್ತು. ಸಸ್ಯಜನ್ಯ ತೈಲ ಮತ್ತು ಪಾನೀಯಗಳು ಬೆಲೆಯಲ್ಲಿ ಏರಿಕೆಯಾಗಿದೆ. ಇದು ಹಣದುಬ್ಬರ ಏರಿಕೆಗೆ ಪ್ರಮುಖ ಕಾರಣವಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಸೋಮವಾರ ತಿಳಿಸಿದೆ. ಕಳೆದ ವರ್ಷದ ಫೆಬ್ರುವರಿಯಲ್ಲಿ ಸೂಚ್ಯಂಕವು ಶೇ 0.2ರಷ್ಟಿತ್ತು.

ತಯಾರಿಸಿದ ಆಹಾರ ಪದಾರ್ಥಗಳ ಬೆಲೆ ಶೇ 11.06ರಷ್ಟು ಏರಿಕೆಯಾಗಿದೆ. ಸಸ್ಯಜನ್ಯ ತೈಲ ಶೇ 33.59 ಮತ್ತು ಪಾನೀಯಗಳು ಬೆಲೆ ಶೇ 1.66 ಹೆಚ್ಚಳವಾಗಿದೆ. ಒಟ್ಟಾರೆ ತಯಾರಿಸಿದ ಉತ್ಪನ್ನಗಳ ಬೆಲೆ ಶೇ 0.42ರಷ್ಟು ಏರಿಕೆಯಾಗಿದೆ.

ಜನವರಿಯಲ್ಲಿ ಆಲೂಗಡ್ಡೆ ಬೆಲೆ ಶೇ 74.28ರಷ್ಟಿತ್ತು. ಫೆಬ್ರುವರಿಯಲ್ಲಿ ಶೇ 27.54ರಷ್ಟಕ್ಕೆ ಇಳಿಕೆಯಾಗಿದೆ. ಇಂಧನ ಮತ್ತು ವಿದ್ಯುತ್ ಬೆಲೆ ಶೇ 2.78ರಿಂದ ಶೇ 0.71ಕ್ಕೆ ಇಳಿದಿದೆ ಎಂದು ತಿಳಿಸಿದೆ.

10 ಗ್ರಾಂ ಚಿನ್ನದ ದರ ₹90,750

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆಯಾಗಿದೆ.

ಚಿನ್ನದ ದರ 10 ಗ್ರಾಂ ಗೆ (ಶೇ 99.9 ಪರಿಶುದ್ಧತೆ) ₹1,300 ಏರಿಕೆಯಾಗಿ, ₹90,750ರಂತೆ ಮಾರಾಟವಾಗಿದೆ. ಆಭರಣ ಚಿನ್ನ (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹90,350 ಆಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹1,300 ಏರಿಕೆಯಾಗಿ, ₹1.02 ಲಕ್ಷದಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ. ಜನವರಿಯಿಂದ ಇಲ್ಲಿಯವರೆಗೆ ಚಿನ್ನದ ದರವು ₹11,360 (ಶೇ 14.31) ಹೆಚ್ಚಳವಾಗಿದೆ.

ಅಮೆರಿಕದ ಸುಂಕ ನೀತಿಯು ಜಾಗತಿಕ ಮಾರುಕಟ್ಟೆಯಲ್ಲಿ ಅನಿಶ್ಚಿತತೆಯ ಸ್ಥಿತಿ ಉಂಟು ಮಾಡಿದೆ. ಇದು ಚಿನ್ನದ ದರ ಏರಿಕೆಗೆ ಕಾರಣವಾಗಿದೆ. ಜೊತೆಗೆ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಈ ವರ್ಷವೂ ಬಡ್ಡಿದರ ಕಡಿತಗೊಳಿಸುವ ಸಾಧ್ಯತೆ ಬಗ್ಗೆ ಭರವಸೆ ಮೂಡಿದೆ. ಇದರಿಂದ ಹೂಡಿಕೆದಾರರು ಹಳದಿ ಲೋಹದ ಖರೀದಿಗೆ ಮುಂದಾಗಿದ್ದಾರೆ. ಹಾಗಾಗಿ, ಚಿನ್ನದ ದರ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧರಿತ ಚಿಲ್ಲರೆ ಹಣದುಬ್ಬರವು ಫೆಬ್ರುವರಿಯಲ್ಲಿ ಏಳು ತಿಂಗಳ ಕನಿಷ್ಠ ಮಟ್ಟವಾದ ಶೇ 3.61ರಷ್ಟು ದಾಖಲಾಗಿತ್ತು.

ಮಾರುತಿ, ಟಾಟಾ ವಾಹನ ಬೆಲೆ ಶೀಘ್ರ ಹೆಚ್ಚಳ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಮತ್ತು ಟಾಟಾ ಮೋಟರ್ಸ್ ತಮ್ಮ ವಾಹನಗಳ ಬೆಲೆಯನ್ನು ಹೆಚ್ಚಿಸಲು ನಿರ್ಧರಿಸಿವೆ.

ಮಾರುತಿ ಸುಜುಕಿ ತನ್ನ ಕಾರುಗಳ ಬೆಲೆಯನ್ನು ಶೇ 4ರಷ್ಟು ಹೆಚ್ಚಿಸಲು ಮುಂದಾಗಿದೆ. ಪರಿಷ್ಕೃತ ದರವು ಏಪ್ರಿಲ್‌ನಿಂದ ಜಾರಿಯಾಗಲಿದೆ.

ಏಪ್ರಿಲ್ 1ರಿಂದ ವಾಣಿಜ್ಯ ವಾಹನಗಳ ಬೆಲೆಯನ್ನು ಶೇ 2ರಷ್ಟು ಹೆಚ್ಚಳ ಮಾಡುವುದಾಗಿ ಟಾಟಾ ಮೋಟರ್ಸ್ ತಿಳಿಸಿದೆ.

ತಯಾರಿಕಾ ಮತ್ತು ಕಾರ್ಯಾಚರಣೆ ವೆಚ್ಚಗಳಲ್ಲಿ ಉಂಟಾಗಿರುವ ಏರಿಕೆಯನ್ನು ಸರಿದೂಗಿಸಲು ಈ ಬೆಲೆ ಏರಿಕೆ ಮಾಡಲಾಗುತ್ತಿದೆ. ದರ ಏರಿಕೆಯು ವಾಹನದ ಮಾದರಿಯ ಮೇಲೆ ಅವಲಂಬಿಸಿರುತ್ತದೆ ಎಂದು ಕಂಪನಿಗಳು ಷೇರುಪೇಟೆಗೆ ಸೋಮವಾರ ತಿಳಿಸಿವೆ.

ಮಾರ್ಚ್ 16ರ ವರೆಗೆ ₹21.26 ಲಕ್ಷ ಕೋಟಿ ಸಂಗ್ರಹ: ಸಿಬಿಡಿಟಿ

ನೇರ ತೆರಿಗೆ ಸಂಗ್ರಹ ಏರಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಮಾರ್ಚ್ 16ರ ವರೆಗೆ ₹21.26 ಲಕ್ಷ ಕೋಟಿ ನಿವ್ವಳ ನೇರ ತೆರಿಗೆ ಸಂಗ್ರಹವಾಗಿದೆ ಎಂದು ಕೇಂದ್ರೀಯ ನೇರ ತೆರಿಗೆಗಳ ಮಂಡಳಿಯು (ಸಿಬಿಡಿಟಿ) ಸೋಮವಾರ ಬಿಡುಗಡೆ ಮಾಡಿರುವ ವರದಿ ತಿಳಿಸಿದೆ.

2023–24ರ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ತೆರಿಗೆ ಸಂಗ್ರಹ ಪ್ರಮಾಣದಲ್ಲಿ ಶೇ 13ರಷ್ಟು ಏರಿಕೆಯಾಗಿದೆ ಎಂದು ಹೇಳಿದೆ.

ಈ ಆರ್ಥಿಕ ವರ್ಷದಲ್ಲಿ, ಸರ್ಕಾರವು ನಾಲ್ಕು ಕಂತುಗಳ ಮುಂಗಡ ತೆರಿಗೆಯಿಂದ ₹10.44 ಲಕ್ಷ ಕೋಟಿ ಸಂಗ್ರಹಿಸಿದೆ. ಇದು ಹಿಂದಿನ ಹಣಕಾಸು ವರ್ಷದಲ್ಲಿ ₹9.11 ಲಕ್ಷ ಕೋಟಿಗಳಷ್ಟಿತ್ತು. ಶೇ 14ರಷ್ಟು ಹೆಚ್ಚಳ ದಾಖಲಿಸಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಮುಂಗಡ ತೆರಿಗೆ ಪಾವತಿಯ ಕೊನೆಯ ಕಂತು ಮಾರ್ಚ್ 15ರಂದು ಆಗಿತ್ತು.

ಕಾರ್ಪೊರೇಟ್ ತೆರಿಗೆ ₹7.57 ಲಕ್ಷ ಕೋಟಿ ಸಂಗ್ರಹವಾಗಿದ್ದು, ಒಟ್ಟಾರೆ ಶೇ 12ರಷ್ಟು ಹೆಚ್ಚಳವಾಗಿದೆ. ಕಾರ್ಪೊರೇಟ್‌ಯೇತರ ತೆರಿಗೆ ₹2.87 ಲಕ್ಷ ಕೋಟಿ ಸಂಗ್ರಹವಾಗಿದ್ದು, ಶೇ 20ರಷ್ಟು ಏರಿಕೆಯಾಗಿದೆ. ಷೇರು ವಹಿವಾಟು ತೆರಿಗೆ (ಎಸ್‌ಟಿಟಿ) ಸಂಗ್ರಹವು ಶೇ 56ರಷ್ಟು ಹೆಚ್ಚಾಗಿ, ₹53,095 ಕೋಟಿ ಸಂಗ್ರಹವಾಗಿದೆ.

ವೈಯಕ್ತಿಕ ಆದಾಯ ತೆರಿಗೆ ಸಂಗ್ರಹವು ಶೇ 17ರಷ್ಟು ಹೆಚ್ಚಾಗಿ ₹11.01 ಲಕ್ಷ ಕೋಟಿ ಆಗಿದೆ. ಒಟ್ಟು ₹4.60 ಲಕ್ಷ ಕೋಟಿ ಮರುಪಾವತಿ (ರೀಫಂಡ್) ಮಾಡಲಾಗಿದೆ. ಹಿಂದಿನ ಆರ್ಥಿಕ ವರ್ಷದಲ್ಲಿ ₹3.47 ಲಕ್ಷ ಕೋಟಿ ಮಾಡಲಾಗಿತ್ತು. ನೇರ ತೆರಿಗೆಯ ಸರಾಸರಿ ಸಂಗ್ರಹವು ₹25.86 ಲಕ್ಷ ಕೋಟಿ ಆಗಿದೆ ಎಂದು ತಿಳಿಸಿದೆ.

ಐಬಿಸಿ: 28,818 ಅರ್ಜಿ ವಿಲೇವಾರಿ

ನವದೆಹಲಿ (ಪಿಟಿಐ): ದಿವಾಳಿ ಸಂಹಿತೆ (ಐಬಿಸಿ) ಅಡಿಯಲ್ಲಿ 40,943 ಅರ್ಜಿಗಳು ಸಲ್ಲಿಕೆಯಾಗಿದ್ದು, ಅವುಗಳಲ್ಲಿ ₹10 ಲಕ್ಷ ಕೋಟಿ ಮೌಲ್ಯದ 28,818 ಅರ್ಜಿಗಳನ್ನು ವಿಚಾರಣೆಗೆ ಒಳಪಡುವ ಮೊದಲೇ ಬಗೆಹರಿಸಲಾಗಿದೆ ಎಂದು ಕೇಂದ್ರ ಕಾರ್ಪೊರೇಟ್ ವ್ಯವಹಾರಗಳ ರಾಜ್ಯ ಖಾತೆ ಸಚಿವ ಸಚಿವ ಹರ್ಷ ಮಲ್ಹೋತ್ರಾ ಲೋಕಸಭೆಗೆ ಸೋಮವಾರ ತಿಳಿಸಿದ್ದಾರೆ.

ವಿಶ್ವಬ್ಯಾಂಕ್ ವರದಿ ಪ್ರಕಾರ ದಿವಾಳಿತನವನ್ನು ಪರಿಹರಿಸುವಲ್ಲಿ ಭಾರತದ ಶ್ರೇಯಾಂಕ 2018ರಲ್ಲಿ 108 ಆಗಿತ್ತು. ಇದು 2019ರಲ್ಲಿ 52ನೇ ಸ್ಥಾನಕ್ಕೆ ಬಂದಿದೆ. ಇದು ದೊಡ್ಡ ಸಾಧನೆಯಾಗಿದೆ ಎಂದು ಹೇಳಿದ್ದಾರೆ.

ಅನುಕೂಲಕರ ವ್ಯಾಪಾರದ ವಾತಾವರಣ ಸೃಷ್ಟಿಸುವ ಗುರಿಯನ್ನು ಹೊಂದಿರುವ ಸುಲಲಿತ ಉದ್ದಿಮೆ ವಹಿವಾಟಿಗೆ (ಇಒಡಿಬಿ) ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. 2021ರ ಸೆಪ್ಟೆಂಬರ್‌ನಲ್ಲಿ ವಿಶ್ವಬ್ಯಾಂಕ್ ವ್ಯಾಪಾರ ವರದಿಯನ್ನು ಅನ್ನು ಪ್ರಕಟಿಸುವುದನ್ನು ನಿಲ್ಲಿಸಿತು. ಕೊನೆಯ ವರದಿ ಅಕ್ಟೋಬರ್ 2019ರಲ್ಲಿ ಬಿಡುಗಡೆಯಾಗಿತ್ತು.

ರಫ್ತು ಇಳಿಕೆ

ನವದೆಹಲಿ (ಪಿಟಿಐ): ದೇಶದ ರಫ್ತು ಮೌಲ್ಯವು ಫೆಬ್ರುವರಿ ತಿಂಗಳಲ್ಲಿ ₹3.20 ಲಕ್ಷ ಕೋಟಿಗೆ ಇಳಿದಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಸೋಮವಾರ ತಿಳಿಸಿದೆ.

2024ರ ಫೆಬ್ರುವರಿಯಲ್ಲಿ ರಫ್ತು ಮೌಲ್ಯ ₹3.59 ಲಕ್ಷ ಕೋಟಿಯಷ್ಟಾಗಿತ್ತು. ಪೆಟ್ರೋಲ್ ದರದಲ್ಲಿ ಏರಿಳಿತ ಮತ್ತು ಜಾಗತಿಕ ಅನಿಶ್ಚಿತ ಸ್ಥಿತಿಯಿಂದಾಗಿ ರಫ್ತು ಪ್ರಮಾಣ ಸತತ ನಾಲ್ಕನೇ ತಿಂಗಳು ಇಳಿಕೆಯಾಗಿದೆ ಎಂದು ತಿಳಿಸಿದೆ.

ಆಮದು ಮತ್ತು ರಫ್ತು ವಹಿವಾಟಿನ ನಡುವಿನ ವ್ಯತ್ಯಾಸವಾದ ವ್ಯಾಪಾರ ಕೊರತೆ ₹1.21 ಲಕ್ಷ ಕೋಟಿಯಷ್ಟಾಗಿದ್ದು, ಆಮದು ಪ್ರಮಾಣ ₹4.42 ಲಕ್ಷ ಕೋಟಿಯಾಗಿದೆ.

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್–ಫೆಬ್ರುವರಿಯಲ್ಲಿ ಸರಕು ಮತ್ತು ಸೇವೆಗಳ ರಫ್ತು ಶೇ 6ರಷ್ಟು ಏರಿಕೆಯಾಗಿದ್ದು, ₹65.14 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ಪಿಎಂ ಇಂಟರ್ನ್‌ಶಿಪ್ ಮೊಬೈಲ್ ಆ್ಯಪ್‌ಗೆ ಚಾಲನೆ

ನಿರ್ಮಲಾ ಸೀತಾರಾಮನ್

ನವದೆಹಲಿ (ಪಿಟಿಐ): ಪ್ರಧಾನಮಂತ್ರಿ ಇಂಟರ್ನ್‌ಶಿಪ್ ಯೋಜನೆಗೆ ಮೀಸಲಾದ ಮೊಬೈಲ್ ಅಪ್ಲಿಕೇಷನ್‌ಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ಚಾಲನೆ ನೀಡಿದ್ದಾರೆ.

ಯೋಜನೆಯ ವೆಬ್‌ಸೈಟ್ ಮತ್ತು ಆ್ಯಪ್ ಹಲವಾರು ಭಾಷೆಗಳಲ್ಲಿ ಲಭ್ಯವಿದೆ. ಈ ಯೋಜನೆಗೆ ಸೇರಲು ಯುವಜನರನ್ನು ಪ್ರೋತ್ಸಾಹಿಸುವಂತೆ ಸಂಸದರಿಗೆ ಮನವಿ ಮಾಡಿದ ಸಚಿವೆ ನಿರ್ಮಲಾ ಸೀತಾರಾಮನ್, ಹೆಚ್ಚಿನ ಕಂಪನಿಗಳು ಈ ಕಾರ್ಯಕ್ರಮಕ್ಕೆ ಸೇರಬೇಕೆಂದು ಹೇಳಿದ್ದಾರೆ. ಈ ಯೋಜನೆಯು ಉದ್ಯಮಕ್ಕೆ ಅಗತ್ಯವಿರುವ ಕೌಶಲಗಳನ್ನು ಮತ್ತು ಉದ್ಯೋಗ ಲಭ್ಯತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಎಂದರು.

2024-25ರ ಆರ್ಥಿಕ ವರ್ಷದಲ್ಲಿ ಯೋಜನೆಯ ಪ್ರಾಯೋಗಿಕ ಭಾಗವಾಗಿ 1.25 ಲಕ್ಷ ಯುವಜನರಿಗೆ ತರಬೇತಿ ನೀಡುವ ಗುರಿ ಹೊಂದಿದೆ. ಆಯ್ಕೆಯಾದವರಿಗೆ 12 ತಿಂಗಳು ತರಬೇತಿ ಜೊತೆಗೆ ಮಾಸಿಕ ₹5 ಸಾವಿರ ಭತ್ಯೆ ನೀಡಲಾಗುತ್ತದೆ. ಅಲ್ಲದೆ, ಸರ್ಕಾರವು ಒಂದು ಬಾರಿಗೆ ₹6 ಸಾವಿರ ಆರ್ಥಿಕ ನೆರವು ನೀಡಲಿದೆ. ಈ ಯೋಜನೆಯಡಿ ಮುಂದಿನ ಐದು ವರ್ಷದಲ್ಲಿ ಒಂದು ಕೋಟಿ ಯುವಜನರಿಗೆ ವೃತ್ತಿ ತರಬೇತಿ ನೀಡುವುದು ಸರ್ಕಾರದ ಗುರಿಯಾಗಿದೆ.

ಮುಂಬೈ ಧಾರಣೆ (ಶೇಂಗಾ)

17-03-2025

ಜಾವಾ 70/80(ಹೊಸ)	9800-9900
ಜಾವಾ 80/90(ಹೊಸ)	9300-9400
ದಪ್ಪ ಮಧ್ಯಪ್ರದೇಶ(ಹೊಸ)	7700-7800
ದಪ್ಪ ಗುಜರಾತ್(ಹೊಸ)	8000-8100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1420 (1420)
ಒಂದು ವಾರದ ಡೆಲಿವರಿ	1415 (1415)
ಪಾಮ್ ವಾರದ ಡೆಲಿವರಿ	1358 (1368)
ಸೂರ್ಯಕಾಂತಿ ಎಣ್ಣೆ ಕಚ್ಚಾ	1375 (1375)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ	₹87,800 (87,600)
ಬೆಳ್ಳಿ ಕೆ.ಜಿ	₹99,750 (99,650)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹315-645
ದ್ವಿತಳಿ (ಬಿ.ವಿ)	₹325-780

2012ರ ಪ್ರಕರಣದಲ್ಲಿ ಅದಾನಿ ದೋಷಮುಕ್ತ

ಮುಂಬೈ (ಪಿಟಿಐ): ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್‌ನ ಅಧ್ಯಕ್ಷ ಗೌತಮ್ ಅದಾನಿ ಮತ್ತು ಅದರ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಅದಾನಿ ಅವರನ್ನು ಮಾರುಕಟ್ಟೆ ನಿಯಮ ಉಲ್ಲಂಘನೆಯ ಆರೋಪದಿಂದ ಮುಕ್ತಗೊಳಿಸಿ ಬಾಂಬೆ ಹೈಕೋರ್ಟ್ ಸೋಮವಾರ ಆದೇಶಿಸಿದೆ.

ವಂಚನೆ ಅಥವಾ ಕ್ರಿಮಿನಲ್ ಪಿತೂರಿ ಆರೋಪಗಳು ಸಾಬೀತಾಗಿಲ್ಲ ಎಂದು ಕೋರ್ಟ್ ಹೇಳಿದೆ. ಗಂಭೀರ ವಂಚನೆಗಳ ತನಿಖಾ ಕಚೇರಿಯು (ಎಸ್‌ಎಫ್‌ಐಒ) ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ (ಎಇಎಲ್) ಮತ್ತು ಅದರ ಪ್ರವರ್ತಕರಾದ ಗೌತಮ್ ಅದಾನಿ, ರಾಜೇಶ್ ಅದಾನಿ ಅವರ ವಿರುದ್ಧ 2012ರಲ್ಲಿ ಪ್ರಕರಣ ದಾಖಲಿಸಿಕೊಂಡಿತ್ತು.

ಇವರಿಬ್ಬರು ಕ್ರಿಮಿನಲ್ ಪಿತೂರಿಯಲ್ಲಿ, ವಂಚನೆಯಲ್ಲಿ ಭಾಗಿಯಾಗಿದ್ದಾರೆ ಎಂದು ದೋಷಾರೋಪ ಪಟ್ಟಿ ಸಲ್ಲಿಸಿತ್ತು. ₹388 ಕೋಟಿ ಮೌಲ್ಯದ ಪ್ರಕರಣ ಇದು. ತಮ್ಮನ್ನು ಪ್ರಕರಣದಿಂದ ಮುಕ್ತಗೊಳಿಸದ ಸೆಷನ್ಸ್ ನ್ಯಾಯಾಲಯದ ನಿಲುವನ್ನು ಪ್ರಶ್ನಿಸಿ ಗೌತಮ್ ಅದಾನಿ, ರಾಜೇಶ್ ಅದಾನಿ ಮತ್ತು ಕಂಪನಿಯು ಹೈಕೋರ್ಟ್‌ಗೆ 2019ರಲ್ಲಿ ಅರ್ಜಿ ಸಲ್ಲಿಸಿದ್ದರು.

ಸೆಷನ್ಸ್ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್‌ನ ಏಕಸದಸ್ಯ ಪೀಠವು ಸೋಮವಾರ ರದ್ದುಪಡಿಸಿದೆ. ಗೌತಮ್ ಅದಾನಿ, ರಾಜೇಶ್ ಅದಾನಿ ಮತ್ತು ಎಇಎಲ್ ಕಂಪನಿಯನ್ನು ದೋಷಮುಕ್ತಗೊಳಿಸಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಸುನಿತಾ ವಾಪಸಾತಿಗೆ ಕ್ಷಣಗಣನೆ

ಕೇಪ್ ಕೆನವೆರಲ್ (ಅಮೆರಿಕ) (ಎಪಿ/ಎಎಫ್‌ಪಿ): ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ (ಐಎಸ್‌ಎಸ್) 9 ತಿಂಗಳಿನಿಂದ ಇರುವ ಸುನಿತಾ ವಿಲಿಯಮ್ಸ್, ಬುಚ್ ವಿಲ್ಮೋರ್ ಅವರು ಅಮೆರಿಕ ಕಾಲಮಾನದ ಪ್ರಕಾರ ಮಂಗಳವಾರ ಸಂಜೆ ಭೂಮಿಗೆ ಹಿಂತಿರುಗಲಿದ್ದಾರೆ ಎಂದು ಬಾಹ್ಯಾಕಾಶ ಸಂಸ್ಥೆ 'ನಾಸಾ' ಪ್ರಕಟಿಸಿದೆ.

'ಸ್ಪೇಸ್‌ಎಕ್ಸ್‌'ನ ರಾಕೆಟ್ ಭಾನುವಾರ ಬಾಹ್ಯಾಕಾಶ ನಿಲ್ದಾಣಕ್ಕೆ ತಲುಪಿಸಿದ 'ಡ್ರ್ಯಾಗನ್' ಗಗನನೌಕೆಯಲ್ಲಿ ಅಮೆರಿಕ ಕಾಲಮಾನ ಮಂಗಳವಾರ ಸಂಜೆ 5.57ಕ್ಕೆ (ಭಾರತೀಯ ಕಾಲಮಾನದ ಪ್ರಕಾರ ಬುಧವಾರ ಮುಂಜಾನೆ 3.27) ಫ್ಲಾರಿಡಾದ ಕಡಲತೀರಕ್ಕೆ ನಾಲ್ವರು ಗಗನಯಾತ್ರಿಗಳು ಬಂದಿಳಿಯಲಿದ್ದಾರೆ. ಸುನಿತಾ, ಬುಚ್ ಜೊತೆಗೆ ಐಎಸ್‌ಎಸ್‌ನಲ್ಲಿರುವ ನಿಕ್ ಹೇಗ್, ಅಲೆಕ್ಸಾಂಡರ್ ಗೊರ್ಬನೊವ್ ಕೂಡ ಭೂಮಿಗೆ ಹಿಂತಿರುಗಲಿದ್ದಾರೆ. ಭೂಮಿಗೆ ಹಿಂತಿರುಗುವ ಪ್ರಕ್ರಿಯೆಗಳು ಈಗಾಗಲೇ ಬಾಹ್ಯಾಕಾಶ ನಿಲ್ದಾಣದಲ್ಲಿ ಆರಂಭಗೊಂಡಿದ್ದು, ಪ್ರಯಾಣದ ಅವಧಿ 17 ಗಂಟೆ ಇರಲಿದೆ.

ಮೊದಲು ಅಂದುಕೊಂಡಂತೆ ಮುಂದಿನ ವಾರ ಸುನಿತಾ, ವಿಲ್ಮೋರ್ ಭೂಮಿಗೆ ಮರಳಬೇಕಿತ್ತು. ಆದರೆ, ಫ್ಲಾರಿಡಾದ ಗಲ್ಫ್ ಕರಾವಳಿಯಲ್ಲಿ ಮುಂದಿನ ವಾರ ಪ್ರತಿಕೂಲ ಹವಾಮಾನ ಇರಲಿರುವುದರಿಂದ, ಗಗನಯಾತ್ರಿಗಳನ್ನು ಭೂಮಿಗೆ ತರುವ ದಿನಾಂಕವನ್ನು ಮಂಗಳವಾರಕ್ಕೆ ನಿಗದಿಪಡಿಸಿರುವುದಾಗಿ ನಾಸಾ ಭಾನುವಾರ ರಾತ್ರಿ ತಿಳಿಸಿತು.

ತೊಗರಿ ಖರೀದಿ: ನೋಂದಣಿ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೇಂದ್ರ ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿಗೆ ತೆರೆದ ಕೇಂದ್ರಗಳಲ್ಲಿ ನಿಗದಿಪಡಿಸಿದ ರೈತರ ನೋಂದಣಿ ಅವಧಿಯನ್ನು ಮಾರ್ಚ್ 31ರವರೆಗೆ ವಿಸ್ತರಿಸಿ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ.

'ಈ ಕೇಂದ್ರಗಳಲ್ಲಿ ಪ್ರತಿ ಕ್ವಿಂಟಲ್‌ಗೆ ₹7,550 ದರದಲ್ಲಿ ಕೇಂದ್ರ ಸರ್ಕಾರವು ತೊಗರಿ ಖರೀದಿಸುತ್ತಿದೆ. ರಾಜ್ಯ ಸರ್ಕಾರವೂ ಪ್ರತಿ ಕ್ವಿಂಟಲ್‌ಗೆ ₹450 ಪ್ರೋತ್ಸಾಹಧನ ಘೋಷಿಸಿದೆ. ಇಲ್ಲಿ ತೊಗರಿ ಮಾರಲು ನೋಂದಣಿಗಾಗಿ ಮಾರ್ಚ್ 17 ಕೊನೇ ದಿನವಾಗಿತ್ತು. ಆದರೆ, ತಾಂತ್ರಿಕ ಸಮಸ್ಯೆಯಿಂದ ವಿವಿಧ ಜಿಲ್ಲೆಗಳಲ್ಲಿ ಹಲವು ರೈತರು ಇನ್ನೂ ನೋಂದಣಿ ಮಾಡಿಕೊಂಡಿರಲಿಲ್ಲ. ಹಾಗಾಗಿ ದಿನಾಂಕ ವಿಸ್ತರಿಸುವಂತೆ ಒತ್ತಾಯಿಸಿದ್ದರು.

'ಖರೀದಿ ಕೇಂದ್ರದಲ್ಲಿ ತೊಗರಿ ಮಾರಲು ಇಚ್ಛಿಸುವವರು ಮಾರ್ಚ್ 31ರವರೆಗೆ ನೋಂದಾಯಿಸಿಕೊಳ್ಳಬಹುದು. ಏಪ್ರಿಲ್ 2ರವರೆಗೆ ಖರೀದಿ ಪ್ರಕ್ರಿಯೆ ನಡೆಯಲಿದೆ' ಎಂದು ಕೃಷಿ ಮಾರಾಟ ಇಲಾಖೆ ಬೆಳಗಾವಿ ಉಪನಿರ್ದೇಶಕ ಮಹಾದೇವಪ್ಪ ಚಬನೂರ 'ಪ್ರಜಾವಾಣಿ'ಗೆ ತಿಳಿಸಿದರು. ನೋಂದಣಿ ಪ್ರಕ್ರಿಯೆ ವಿಸ್ತರಣೆಗೆ ರೈತರು ಕೋರಿರುವ ಬಗ್ಗೆ ವಿಶೇಷ ವರದಿ ಮಾರ್ಚ್ 17ರ ಪ್ರಜಾವಾಣಿ ಸಂಚಿಕೆಯಲ್ಲಿ ಪ್ರಕಟವಾಗಿತ್ತು.

ಮೋದಿ ಹೇಳಿಕೆಗೆ ಚೀನಾ ಮೆಚ್ಚುಗೆ

ಬೀಜಿಂಗ್ (ಪಿಟಿಐ): ಭಾರತ ಮತ್ತು ಚೀನಾ ಸಂಬಂಧದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಸಕಾರಾತ್ಮಕವಾಗಿ ಮಾತನಾಡಿರುವುದನ್ನು ಮೆಚ್ಚಿರುವ ಚೀನಾ, ಇಬ್ಬರಿಗೂ ಲಾಭ ತರುವಂತಹ ಸಹಕಾರ ಹೊಂದುವುದನ್ನು ಹೊರತುಪಡಿಸಿದರೆ ಎರಡೂ ದೇಶಗಳಿಗೆ ಬೇರೆ ಆಯ್ಕೆಗಳಿಲ್ಲ ಎಂದು ಹೇಳಿದೆ.

'ಭಾರತ–ಚೀನಾ ಸಂಬಂಧದ ಬಗ್ಗೆ ಪ್ರಧಾನಿ ಮೋದಿ ನೀಡಿರುವ ಸಕಾರಾತ್ಮಕ ಹೇಳಿಕೆಯನ್ನು ಗಮನಿಸಿದ್ದೇವೆ, ಅದನ್ನು ಮೆಚ್ಚುತ್ತೇವೆ' ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರೆ ಮಾವೊ ನಿಂಗ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

ಅಮೆರಿಕದ ಪಾಡ್‌ಕಾಸ್ಟರ್ ಲೆಕ್ಸ್ ಫ್ರಿಡ್ಮನ್ ಅವರಿಗೆ ನೀಡಿರುವ ಸಂದರ್ಶನದಲ್ಲಿ ಮೋದಿ ಅವರು, 'ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ಜೊತೆ ಮಾತುಕತೆ ನಡೆಸಿದ ನಂತರದಲ್ಲಿ ಭಾರತ ಮತ್ತು ಚೀನಾ ಸಂಬಂಧವು ಸಹಜ ಸ್ಥಿತಿಗೆ ಮರಳಿದೆ' ಎಂದು ಹೇಳಿದ್ದರು. ಲಡಾಖ್‌ನ ಪೂರ್ವ ಭಾಗದಲ್ಲಿ ಎರಡೂ ದೇಶಗಳ ಸೈನಿಕರ ನಡುವೆ 2020ರಲ್ಲಿ ಸಂಘರ್ಷ ಉಂಟಾದ ನಂತರ ಸಂಬಂಧವು ಹಳಸಿತ್ತು.

ಭದ್ರತೆ: ಸಭೆ ಕರೆದ ಪಾಕಿಸ್ತಾನ ಸ್ಪೀಕರ್

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ರಾಷ್ಟ್ರೀಯ ಭದ್ರತೆಗಾಗಿನ ಸಂಸದೀಯ ಸಮಿತಿಯ ಗೋಪ್ಯ ಸಭೆಯನ್ನು ಪಾಕಿಸ್ತಾನದ ನ್ಯಾಷನಲ್ ಅಸೆಂಬ್ಲಿಯ ಸ್ಪೀಕರ್ ಆಯಾಜ್ ಸಾದಿಕ್ ಅವರು ಮಂಗಳವಾರ ಆಯೋಜಿಸಿದ್ದಾರೆ.

ಬಲೂಚಿಸ್ತಾನ ಮತ್ತು ಖೈಬರ್ ಪಖ್ತುಂಖ್ವಾ ಪ್ರದೇಶದಲ್ಲಿ ಉಗ್ರರು ದಾಳಿ ನಡೆಸುತ್ತಿರುವುದು ಹೆಚ್ಚಾಗಿರುವ ಸಂದರ್ಭದಲ್ಲಿ ಈ ಸಭೆ ಕರೆಯಲಾಗಿದೆ. ಸಭೆ ನಡೆಸುವಂತೆ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಶರೀಫ್ ಅವರು ಸ್ಪೀಕರ್‌ಗೆ ಹೇಳಿದ್ದಾರೆ ಎಂದು 'ಡಾನ್' ಪತ್ರಿಕೆ ವರದಿ ಮಾಡಿದೆ. ಭದ್ರತಾ ಸ್ಥಿತಿ ಹೇಗಿದೆ ಎಂಬ ಬಗ್ಗೆ ಮಿಲಿಟರಿಯ ನಾಯಕರು ಸಂಸದೀಯ ಸಮಿತಿಗೆ ವಿವರ ಒದಗಿಸಲಿದ್ದಾರೆ ಎಂದು ಪ್ರಧಾನಿ ಕಚೇರಿಯ ಪ್ರಕಟಣೆ ತಿಳಿಸಿದೆ. ಪ್ರಧಾನಿ ಮತ್ತು ಸೇನೆಯ ಮುಖ್ಯಸ್ಥ ಆಸಿಂ ಮುನೀರ್ ಅವರೂ ಸಭೆಯಲ್ಲಿ ಇರಲಿದ್ದಾರೆ.

ಫ್ರಿಡ್ಮನ್ ಪಾಡ್‌ಕಾಸ್ಟ್ ಹಂಚಿಕೊಂಡ ಟ್ರಂಪ್

ವಾಷಿಂಗ್ಟನ್ (ಪಿಟಿಐ/ಎಎಫ್‌ಪಿ): ಅಮೆರಿಕದ ಜನಪ್ರಿಯ ಪಾಡ್‌ಕಾಸ್ಟರ್ ಲೆಕ್ಸ್ ಫ್ರಿಡ್ಮನ್ ಜೊತೆ ಪ್ರಧಾನಿ ನರೇಂದ್ರ ಮೋದಿ ಅವರ ಮಾತುಕತೆಯ ವಿಡಿಯೊ ಕೊಂಡಿಯನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಮ್ಮ 'ಟ್ರುತ್' ಸೋಷಿಯಲ್ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

'ನಾನು ಮತ್ತು ಟ್ರಂಪ್ ನಮ್ಮ ದೇಶಗಳಿಗೆ ಮೊದಲ ಆದ್ಯತೆ ನೀಡುತ್ತೇವೆ. ಈ ಕಾರಣದಿಂದಾಗಿ ನಾನು ಮತ್ತು ಅವರು ಬಹಳ ಚೆನ್ನಾಗಿ ಬೆರೆಯುತ್ತೇವೆ' ಎಂದು ಮೋದಿ ಅವರು ಪಾಡ್‌ಕಾಸ್ಟ್‌ನಲ್ಲಿ ಹೇಳಿದ್ದಾರೆ.

ಸೋವಿಯತ್ ಒಕ್ಕೂಟ ಪತನವಾದ ನಂತರ ರಷ್ಯಾದಿಂದ ಅಮೆರಿಕಕ್ಕೆ ವಲಸೆ ಹೋದ ಫ್ರಿಡ್ಮನ್ ಅವರು 2018ರಲ್ಲಿ ತಮ್ಮ ಪಾಡ್‌ಕಾಸ್ಟ್ ಆರಂಭಿಸಿದರು.

ಮೋದಿ ಹೇಳಿಕೆ ಏಕಪಕ್ಷೀಯ: ಪಾಕಿಸ್ತಾನ

ಇಸ್ಲಾಮಾಬಾದ್ (ಪಿಟಿಐ): ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಜಮ್ಮು–ಕಾಶ್ಮೀರ ಕುರಿತಾಗಿ ನೀಡಿರುವ ಹೇಳಿಕೆಗಳು 'ದಾರಿ ತಪ್ಪಿಸುವಂತಿವೆ ಮತ್ತು ಏಕಪಕ್ಷೀಯವಾಗಿವೆ' ಎಂದು ಪಾಕಿಸ್ತಾನ ಸೋಮವಾರ ಪ್ರತಿಕ್ರಿಯಿಸಿದೆ.

ಅಮೆರಿಕದ ಪಾಡ್‌ಕಾಸ್ಟರ್ ಲೆಕ್ಸ್ ಫ್ರಿಡ್ಮನ್ ಅವರಿಗೆ ನೀಡಿದ ಸಂದರ್ಶನದಲ್ಲಿ ಪ್ರಧಾನಿ ಮೋದಿ ಅವರು, 'ಪಾಕಿಸ್ತಾನದೊಂದಿಗೆ ಶಾಂತಿ ಸ್ಥಾಪನೆಗಾಗಿ ನಡೆಸಿದ ಪ್ರತಿಯೊಂದು ಪ್ರಯತ್ನಕ್ಕೆ ಪ್ರತಿಯಾಗಿ ನಮಗೆ ದ್ರೋಹ ಮತ್ತು ಹಗೆತನ ಸಿಕ್ಕಿತು' ಎಂದು ಹೇಳಿದ್ದರು.

ಮೋದಿ ಹೇಳಿಕೆ ಕುರಿತು ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯೆಯ ರೂಪದಲ್ಲಿ ಪ್ರಕಟಣೆಯನ್ನು ನೀಡಿರುವ ಪಾಕಿಸ್ತಾನದ ವಿದೇಶಾಂಗ ಇಲಾಖೆಯು ಮೋದಿ ಅವರ ಸಮರ್ಥನೆಗಳನ್ನು ನಿರಾಕರಿಸಿದೆ.

'ಅವರು ತಮ್ಮ ಅನುಕೂಲಕ್ಕಾಗಿ ಜಮ್ಮು–ಕಾಶ್ಮೀರ ವಿಚಾರದ ಬಗ್ಗೆ ಗಮನಹರಿಸಿಲ್ಲ. ಭಾರತದ ನಾಯಕತ್ವವು ವಿಶ್ವಸಂಸ್ಥೆ, ಪಾಕಿಸ್ತಾನ ಮತ್ತು ಕಾಶ್ಮೀರದ ಜನರಿಗೆ ಭರವಸೆಗಳನ್ನು ನೀಡಿಲ್ಲ. ಹೀಗಾಗಿ ಕಳೆದ ಏಳು ದಶಕಗಳಿಂದ ಈ ಸಮಸ್ಯೆ ಬಗೆಹರಿದಿಲ್ಲ ಎಂದು ಹೇಳಿದೆ.

ಸ್ವಯಂಪ್ರೇರಿತರಾಗಿ ಗಡೀಪಾರಾಗಿರುವ ಭಾರತೀಯ ವಿದ್ಯಾರ್ಥಿನಿ

'ಪರಿಸ್ಥಿತಿ ಅಪಾಯಕಾರಿಯಾಗಿತ್ತು'

ನ್ಯೂಯಾರ್ಕ್ (ಎಪಿ): ವೀಸಾ ರದ್ದುಗೊಳಿಸಿದ ನಂತರ ಸ್ವಯಂ-ಪ್ರೇರಿತರಾಗಿ ಗಡೀಪಾರಾಗಿರುವ, ಕೊಲಂಬಿಯಾ ವಿಶ್ವವಿದ್ಯಾಲಯದ ಭಾರತೀಯ ವಿದ್ಯಾರ್ಥಿನಿ ರಂಜನಿ ಶ್ರೀನಿವಾಸನ್ ತಮಗಾದ ಅನುಭವವನ್ನು ಹಂಚಿಕೊಂಡಿದ್ದಾರೆ.

ಪರಿಸ್ಥಿತಿ ಅಪಾಯಕಾರಿಯಾಗಿದೆ ಎನ್ನುವುದನ್ನು ತಿಳಿದ ತಕ್ಷಣ ಸ್ವಯಂ ಗಡೀಪಾರಾಗುವ ನಿರ್ಧಾರ ಕೈಗೊಂಡಿದ್ದಾಗಿ ಅವರು ಹೇಳಿದ್ದಾರೆ.

'ವೀಸಾ ರದ್ದಾಗಿರುವ ವಿಷಯ ಆಗಷ್ಟೇ ತಿಳಿದಿತ್ತು. ಮೂವರು ವಲಸೆ ಅಧಿಕಾರಿಗಳು ನಾನಿರುವ ಅಪಾರ್ಟ್‌ಮೆಂಟ್‌ನ ಬಾಗಿಲು ಬಡಿದರು. ನಾನಾಗ ಬಾಗಿಲು ತೆರೆಯಲಿಲ್ಲ.

> **ವೀಸಾ ಮತ್ತು ವಿಶ್ವವಿದ್ಯಾಲಯ ಪ್ರವೇಶಾತಿ ರದ್ದು ಮಾಡಲಾಗಿದ್ದು, ನನ್ನ ಬದುಕು, ಭವಿಷ್ಯ ಬುಡಮೇಲಾಗಿದೆ**
>
> **ರಂಜನಿ ಶ್ರೀನಿವಾಸನ್,** ಸ್ವಯಂ ಗಡೀಪಾರಾದ ವಿದ್ಯಾರ್ಥಿನಿ

ಮರುದಿನ ರಾತ್ರಿ ಮತ್ತೆ ಅಧಿಕಾರಿಗಳು ಬಂದಾಗ ನಾನು ಮನೆಯಲ್ಲಿ ಇರಲಿಲ್ಲ. ಪರಿಸ್ಥಿತಿ ಅಪಾಯಕಾರಿಯಾಗಿದೆ ಎಂದು ತಿಳಿದ ತಕ್ಷಣವೇ ವಸ್ತುಗಳನ್ನೆಲ್ಲಾ ಪ್ಯಾಕ್ ಮಾಡಿಕೊಂಡು, ಸಾಕುಬೆಕ್ಕನ್ನು ಸ್ನೇಹಿತರಿಗೆ ಹಸ್ತಾಂತರಿಸಿ ಕೆನಡಾಗೆ ಪ್ರಯಾಣಿಸಿದೆ' ಎಂದು 'ನ್ಯೂಯಾರ್ಕ್ ಟೈಮ್ಸ್'ಗೆ ರಂಜನಿ ತಿಳಿಸಿದ್ದಾರೆ.

ಮೂರನೇ ಬಾರಿ ಅಧಿಕಾರಿಗಳು ವಾರಂಟ್ ಹಿಡಿದು ಬಂದಾಗ ನಾನು ದೇಶವನ್ನೇ ತೊರೆದಾಗಿತ್ತು ಎಂದು ಹೇಳಿದ್ದಾರೆ.

'ಕೊಲಂಬಿಯಾ ವಿಶ್ವವಿದ್ಯಾಲಯವು ಯಾವುದೇ ವಿವರಣೆ ಕೇಳದೆ ನನ್ನ ಪ್ರವೇಶಾತಿಯನ್ನು ರದ್ದು ಮಾಡಿದೆ. ಪದವಿ ಪೂರ್ಣಗೊಳಿಸಲು ಸಾಧ್ಯವಾಗುವುದೋ ಇಲ್ಲವೋ, ಗೊತ್ತಿಲ್ಲ' ಎಂದು ರಂಜನಿ ಅವರು ಅಳಲು ತೋಡಿಕೊಂಡಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಲು ಕೊಲಂಬಿಯಾ ವಿಶ್ವವಿದ್ಯಾಲಯ ನಿರಾಕರಿಸಿದೆ.

ರಂಜನಿ ಅವರು ಪ್ಯಾಲಸ್ಟೀನ್ ಪರವಾಗಿ ನಡೆದಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಿಬಿಪಿ ಆ್ಯಪ್ ಬಳಸಿ ದೇಶ ತೊರೆದ ರಂಜನಿ: 'ಮಾರ್ಚ್ 5ರಂದು ರಂಜನಿ ಅವರ ಎಫ್–1 ವೀಸಾವನ್ನು ರದ್ದು ಮಾಡಲಾಗಿತ್ತು. ಅವರು ಅಮೆರಿಕ ಕಸ್ಟಮ್ಸ್ ಮತ್ತು ಗಡಿ ಭದ್ರತೆ (ಸಿಬಿಪಿ) ಆ್ಯಪ್ ಮೂಲಕ ಮಾರ್ಚ್ 11ರಂದು ಸ್ವಪ್ರೇರಣೆಯಿಂದ ದೇಶ ತೊರೆದಿದ್ದಾರೆ' ಎಂದು ಹೋಮ್‌ಲ್ಯಾಂಡ್ ಭದ್ರತಾ ಇಲಾಖೆ ತಿಳಿಸಿದೆ.

ಹಿಂಸೆ, ಭಯೋತ್ಪಾದನೆ ಪ್ರಚೋದಿಸುವ ಮತ್ತು ಹಮಾಸ್ ಭಯೋತ್ಪಾದಕ ಸಂಘಟನೆಯನ್ನು ಬೆಂಬಲಿಸುವ ಚಟುವಟಿಕೆಗಳಲ್ಲಿ ರಂಜನಿ ತೊಡಗಿಕೊಂಡಿದ್ದರು ಎಂದು ಅಮೆರಿಕವು ಆರೋಪಿಸಿ, ಅವರ ವೀಸಾ ರದ್ದು ಮಾಡಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
www.dhclassifieds.com
BOOK NOW
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@ 500/-* PER SQCM
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331
9901641752

ಕ್ಲಾಸಿಫೈಡ್ಸ್ CONNECT

ಹೊಂಗೆ ಬೀಜ ಖರೀದಿ
ದಿನಾಂಕ : 11.03.2025
M11 ಎನರ್ಜಿ ಟ್ರಾನ್ಸಿಷನ್ ಪ್ರೈ. ಲಿ.,ರವರು ಹೊಂಗೆ, ಹಿಪ್ಪೆ, ಜಟ್ರೋಪ, ಬೇವು, ಅಮೋರ ಇತ್ಯಾದಿ ಕಚ್ಚಾ ವಸ್ತುಗಳನ್ನು ಖರೀದಿಸುತ್ತಿದ್ದೇವೆ. ಪ್ರಸ್ತುತ ಹೊಂಗೆ ಬೀಜಕ್ಕೆ ರೂ.45.00 ಕೆ.ಜಿ. ದರದಲ್ಲಿ ಖರೀದಿಸಲು ತೀರ್ಮಾನಿಸಿದೆ. (ಗರಿಷ್ಟ ತೇವಾಂಶ 10%).
ಹೆಚ್ಚಿನ ವಿವರಗಳಿಗೆ ಕೆಳಕಂಡ ವಿಳಾಸದಲ್ಲಿ ಸಂಪರ್ಕಿಸಲು ಕೋರಿದೆ.
M11 ಎನರ್ಜಿ ಟ್ರಾನ್ಸಿಷನ್ ಪ್ರೈ.ಲಿ., ನೆಲಮಂಗಲ, ಬೆಂಗಳೂರು
ಮೊ: 90081 46840 / 88808 80625

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

PUBLIC NOTICE

ಕರ್ನಾಟಕ ಪ್ರದೇಶ ಬಲಿಜ ಸಂಘ (ರಿ)
ಆನೇಕಲ್ ತಿಮ್ಮಯ್ಯ ಚಾರಿಟೇಬಲ್ ಟ್ರಸ್ಟ್ (ರಿ),
ನಂ.31, 1ನೇ ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018.

ಪ್ರಕಟಣೆ

ಮೇಲ್ಕಂಡ ಸಂಘದ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ: 6291/2025 C/w 6302/2025 (ಜಿ.ಎಂ–ಕೆ.ಎಸ್.ಆರ್.) ದಿನಾಂಕ: 03–03–2025 ರ ಆದೇಶದಂತೆ, ಕರ್ನಾಟಕ ಪ್ರದೇಶ ಬಲಿಜ ಸಂಘ (ರಿ) ಇದರ ಚುನಾವಣೆಗೆ ಸಂಬಂಧಿಸಿದಂತೆ ದಿನಾಂಕ: 20–02–2025 ರಂದು ಹೊರಡಿಸಿದ್ದ ಚುನಾವಣಾ ವೇಳಾ ಪಟ್ಟಿಗೆ ತಡೆಯಾಜ್ಞೆ ಇರುತ್ತದೆ. ಆದುದ್ದರಿಂದ ಕರ್ನಾಟಕ ಪ್ರದೇಶ ಬಲಿಜ ಸಂಘಕ್ಕೆ ದಿನಾಂಕ: 23–03–2025 ರಂದು ನಡೆಯಬೇಕಾಗಿದ್ದ ಆಡಳಿತ ಮಂಡಳಿಯ ಚುನಾವಣಾ ಪ್ರಕ್ರಿಯೆಯನ್ನು ಮಾನ್ಯ ಉಚ್ಚ ನ್ಯಾಯಾಲಯದ ಮುಂದಿನ ಆದೇಶದವರೆಗೂ ಸ್ಥಗಿತಗೊಳಿಸಲಾಗಿದೆ ಎಂದು ಈ ಮೂಲಕ ತಿಳಿಸಲಾಗಿದೆ.

ಸಹಿ/– ಗೌರವ ಕಾರ್ಯದರ್ಶಿ, ಕರ್ನಾಟಕ ಪ್ರದೇಶ ಬಲಿಜ ಸಂಘ (ರಿ) ಬೆಂಗಳೂರು – 560 018.
ಸಹಿ/– ರಿಟರ್ನಿಂಗ್ ಆಫೀಸರ್, ಕರ್ನಾಟಕ ಪ್ರದೇಶ ಬಲಿಜ ಸಂಘ (ರಿ) ಬೆಂಗಳೂರು–560 018.
ದಿ: 18–03–2025 ಸ್ಥಳ: ಬೆಂಗಳೂರು

ಸಂಕ್ಷಿಪ್ತ ಸುದ್ದಿ

ಬಾಗ್ಚಿ 'ಸುಪ್ರೀಂ' ನ್ಯಾಯಮೂರ್ತಿ

ನವದೆಹಲಿ (ಪಿಟಿಐ): ಕಲ್ಕತ್ತ ಹೈಕೋರ್ಟ್‌ನ ಹಿರಿಯ ನ್ಯಾಯಮೂರ್ತಿಯಾಗಿದ್ದ ಜಾಯ್‌ಮಾಲ್ಯ ಬಾಗ್ಚಿ ಅವರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು.

ಸುಪ್ರೀಂ ಕೋರ್ಟ್ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಅವರು ಬಾಗ್ಚಿ ಅವರಿಗೆ ಪ್ರಮಾಣ ವಚನ ಬೋಧಿಸಿದರು.

ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಮೂರ್ತಿಗಳ ಒಟ್ಟು 34 ಹುದ್ದೆಗಳು ಇದ್ದು ಈಗ 33 ಹುದ್ದೆಗಳು ಭರ್ತಿಯಾಗಿವೆ. ಒಂದು ಸ್ಥಾನ ಖಾಲಿ ಇದೆ.

ಮಣಿಪುರ ಗಲಭೆ: ಗುವಾಹಟಿಯಲ್ಲೇ ವಿಚಾರಣೆ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ನಡೆದ ಜನಾಂಗೀಯ ಹಿಂಸಾಚಾರದ ಪ್ರಕರಣಗಳ ವಿಚಾರಣೆಯು ಅಸ್ಸಾಂನ ರಾಜಧಾನಿ ಗುವಾಹಟಿಯಲ್ಲಿ ನಡೆಯಲಿದೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ. ಜನಾಂಗೀಯ ಹಿಂಸಾಚಾರ ಪ್ರಕರಣಗಳ ತನಿಖೆಯನ್ನು ಸಿಬಿಐ ನಡೆಸಿದೆ.

ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಗೀತಾ ಮಿತ್ತಲ್ ನೇತೃತ್ವದ ಸಮಿತಿಯ ಅವಧಿಯನ್ನು ಸುಪ್ರೀಂ ಕೋರ್ಟ್ ಜುಲೈ 31ರವರೆಗೆ ವಿಸ್ತರಿಸಿದೆ. ಮಣಿಪುರದ ಜನಾಂಗೀಯ ಹಿಂಸಾಚಾರದಲ್ಲಿ ತೊಂದರೆಗೆ ಒಳಗಾದವರಿಗೆ ಪರಿಹಾರ ಮತ್ತು ಪುನರ್ವಸತಿ ಕಲ್ಪಿಸುವ ಕಾರ್ಯದ ಉಸ್ತುವಾರಿಗೆ ಈ ಸಮಿತಿಯನ್ನು ಸುಪ್ರೀಂ ಕೋರ್ಟ್ 2023ರ ಆಗಸ್ಟ್‌ನಲ್ಲಿ ರಚಿಸಿದೆ.

ಭಯೋತ್ಪಾದಕ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕುಪ್ವಾರಾ ಜಿಲ್ಲೆಯ ಜಚಲ್‌ದರಾದಲ್ಲಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಭಯೋತ್ಪಾದಕನೊಬ್ಬನನ್ನು ಹತ್ಯೆ ಮಾಡಲಾಗಿದೆ.

ಇಲ್ಲಿನ ಕೃಮ್ಹೂರಾ ಗ್ರಾಮದಲ್ಲಿ ಭಯೋತ್ಪಾದಕರು ಅಡಗಿದ್ದಾರೆ ಎಂಬ ಖಚಿತ ಮಾಹಿತಿ ಆಧರಿಸಿ ಭದ್ರತಾ ಪಡೆಗಳು ಶೋಧ ಕಾರ್ಯಾಚರಣೆ ಆರಂಭಿಸಿದ್ದರು. ಈ ವೇಳೆ ಏಕಾಏಕಿ ಸೈನಿಕರ ಮೇಲೆ ಗುಂಡಿನ ದಾಳಿ ನಡೆದಿದೆ. ಪ್ರತಿದಾಳಿ ವೇಳೆ ಒಬ್ಬ ಭಯೋತ್ಪಾದಕ ಮೃತಪಟ್ಟಿದ್ದು, ಸ್ಥಳದಿಂದ ಅಪಾರ ಪ್ರಮಾಣದ ಮದ್ದು-ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಮೃತ ಭಯೋತ್ಪಾದಕನ ಗುರುತು, ಯಾವ ಸಂಘಟನೆಗೆ ಸೇರಿದವ ಎಂಬುದು ಗೊತ್ತಾಗಿಲ್ಲ.

ನಾಲ್ವರು ವಿದೇಶಿ ವಿದ್ಯಾರ್ಥಿಗಳ ಮೇಲೆ ಹಲ್ಲೆ

ಅಹಮದಾಬಾದ್: ದರ್ಗಾದ ಬಳಿ ಸಿಗರೇಟು ಸೇದುತ್ತಿದ್ದ, ಚಪ್ಪಲಿಯಲ್ಲಿ ಓಡಾಡುತ್ತಿದ್ದ ನಾಲ್ವರು ವಿದೇಶಿ ವಿದ್ಯಾರ್ಥಿಗಳ ಮೇಲೆ 10 ಮಂದಿಯ ಗುಂಪೊಂದು ಹಲ್ಲೆ ನಡೆಸಿದ್ದು, ಥಾಯ್ಲೆಂಡ್‌ನ ವಿದ್ಯಾರ್ಥಿಯೊಬ್ಬರಿಗೆ ತಲೆಗೆ ತೀವ್ರ ಪೆಟ್ಟಾಗಿದೆ.

ಥಾಯ್ಲೆಂಡ್, ದಕ್ಷಿಣ ಸುಡಾನ್, ಮೊಜಾಂಬಿಕ್ ಹಾಗೂ ಯುನೈಟೆಡ್ ಕಿಂಗ್‌ಡಂನ್‌ನ ವಿದ್ಯಾರ್ಥಿಗಳು ಹಲ್ಲೆಗೆ ಒಳಗಾಗಿದ್ದಾರೆ. ಇವರು ವಡೋದರಾ ಜಿಲ್ಲೆಯ ಪಾರುಲ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಘಟನೆ ಬಗ್ಗೆ ವಿಶ್ವವಿದ್ಯಾಲಯದ ಅಧಿಕಾರಿಗಳು ಪೊಲೀಸರಿಗೆ ದೂರು ನೀಡಿದ್ದು, ಎಫ್‌ಐಆರ್ ಕೂಡ ದಾಖಲಾಗಿದೆ. 'ಗುಜರಾತಿ ಭಾಷೆ ಬಾರದ ಕಾರಣ ವಾಗ್ವಾದ ನಡೆದು, ಹಲ್ಲೆ ನಡೆದಿದೆ' ಎಂದು ಎಫ್‌ಐಆರ್‌ನಲ್ಲಿದೆ.

ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್ ಜತೆ ಮೋದಿ ಮಾತುಕತೆ ● ಆರು ಒಪ್ಪಂದಗಳಿಗೆ ಸಹಿ

ಭಾರತ ವಿರೋಧಿ ಚಟುವಟಿಕೆ ಬಗ್ಗೆ ಕಳವಳ

ನವದೆಹಲಿ (ಪಿಟಿಐ): ರಕ್ಷಣೆ ಹಾಗೂ ಹಿಂದೂ ಮಹಾಸಾಗರ–ಪೆಸಿಫಿಕ್ ಸುರಕ್ಷತೆ ವಿಚಾರದಲ್ಲಿ ಹೆಚ್ಚಿನ ಸಹಭಾಗಿತ್ವ ಸೇರಿ ಹಲವು ವಿಷಯಗಳಲ್ಲಿ ಭಾರತ ಹಾಗೂ ನ್ಯೂಜಿಲೆಂಡ್ ನಡುವೆ ಸೋಮವಾರ ಆರು ಒಪ್ಪಂದಗಳು ಏರ್ಪಟ್ಟವು. ಇದೇ ವೇಳೆ ನ್ಯೂಜಿಲೆಂಡ್‌ನಲ್ಲಿ ನಡೆಯುತ್ತಿರುವ ಖಾಲಿಸ್ತಾನಿ ಪರ ಚಟುವಟಿಕೆಗಳ ಬಗ್ಗೆಯೂ ಭಾರತ ಕಳವಳ ವ್ಯಕ್ತಪಡಿಸಿತು.

ಎರಡೂ ದೇಶಗಳ ಹಣಕಾಸಿನ ಒಪ್ಪಂದಗಳನ್ನು ಇನ್ನಷ್ಟು ವೃದ್ಧಿಸಿಕೊಳ್ಳುವ ಉದ್ದೇಶದಿಂದ ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್ ಅವರು ಐದು ದಿನಗಳ ಭೇಟಿಗಾಗಿ ಭಾರತಕ್ಕೆ ಭಾನುವಾರ ಬಂದಿದ್ದರು.

'2019ರಲ್ಲಿ ಕ್ರಿಸ್ಟ್‌ಚರ್ಚ್ ಮೇಲೆ ಹಾಗೂ ಮುಂಬೈನಲ್ಲಿ ನಡೆದ ದಾಳಿ ಒಪ್ಪತಕ್ಕ ವಿಚಾರಗಳಲ್ಲ. ಅಂತೆಯೇ ನ್ಯೂಜಿಲೆಂಡ್‌ನಲ್ಲಿ ಕೆಲವು ದುಷ್ಕರ್ಮಿಗಳು ಭಾರತ ವಿರೋಧಿ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಇದೂ ಕಳವಳಕಾರಿ ವಿಚಾರ. ಈ ದುಷ್ಕರ್ಮಿಗಳ ವಿರುದ್ಧ ಕ್ರಮ ಕೈಗೊಳ್ಳಲು ನ್ಯೂಜಿಲೆಂಡ್ ಸರ್ಕಾರವು ನಮಗೆ ಸಹಕಾರ ನೀಡುತ್ತದೆ ಎಂದು ನಾವು ನಂಬಿದ್ದೇವೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಮಾಧ್ಯಮ ಹೇಳಿಕೆಯಲ್ಲಿ ಪ್ರತಿಪಾದಿಸಿದರು.

'ಭಾರತ ವಿರೋಧಿ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ನಾವು ನಮ್ಮ ಮಿತ್ರ ದೇಶಗಳಿಗೆ ಹಲವು ಬಾರಿ ಎಚ್ಚರಿಕೆ ನೀಡಿದ್ದೇವೆ. ನಮ್ಮ ಕಳವಳವನ್ನು ನ್ಯೂಜಿಲೆಂಡ್ ಕೇಳಿಸಿಕೊಂಡಿದೆ ಮತ್ತು ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಈ ಹಿಂದೆಯೂ ಹೇಳಿದೆ. ಕ್ರಮ ಕೈಗೊಳ್ಳುವುದಾಗಿ ಈ ಬಾರಿಯೂ ಅದು ಹೇಳಿದೆ' ಎಂದು ವಿದೇಶಾಂಗ ಸಚಿವಾಲಯದ (ಪೂರ್ವ) ಕಾರ್ಯದರ್ಶಿ ಜೈದೀಪ್ ಮಜುಂದಾರ್ ಹೇಳಿದರು.

'ಎರಡೂ ದೇಶಗಳು ಅಭಿವೃದ್ಧಿಗೆ ಪೂರಕವಾದ ನೀತಿಯಲ್ಲಿ ನಂಬಿಕೆ ಇಟ್ಟಿದ್ದೇವೆ ಹೊರತು, ಗಡಿ ವಿಸ್ತರಣೆಗೆ ಪೂರಕವಾದ ನೀತಿಗಳಿಗಲ್ಲ' ಎಂದರು. ಇಂಡೊ–ಪೆಸಿಫಿಕ್ ಸಾಗರದಲ್ಲಿ ಚೀನಾದ ಕಾರ್ಯಚಟುವಟಿಕೆಗಳ ಕುರಿತು ಪ್ರಧಾನಿ ಮೋದಿ ಪ್ರಸ್ತಾಪ ಮಾಡಿದರು.

'ಇಂಡೊ–ಪೆಸಿಫಿಕ್ ಪ್ರದೇಶವನ್ನು ಸುರಕ್ಷಿತವಾಗಿರಿಸುವಲ್ಲಿ ಎರಡೂ ದೇಶಗಳ ಹಿತಾಸಕ್ತಿಗೆ ಅನುಗುಣವಾಗಿ ಕಾರ್ಯನಿರ್ವಹಿಸುವ ಬಗ್ಗೆ ನಮಗೆ ಬಲವಾದ ಬದ್ಧತೆ ಇದೆ. ಈ ಬಗ್ಗೆ ನಾನು ಹಾಗೂ ಮೋದಿ ಅವರು ಮಾತುಕತೆ ನಡೆಸಿದ್ದೇವೆ' ಎಂದು ಲಕ್ಸನ್ ಹೇಳಿದರು.

ಪ್ರಧಾನಿ ಮೋದಿ ಹಾಗೂ ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್ ಅವರು ದೆಹಲಿಯ ರಕಾಬ್‌ಗಂಜ್ ಗುರುದ್ವಾರಕ್ಕೆ ಭೇಟಿ ನೀಡಿದರು –ಪಿಟಿಐ ಚಿತ್ರ

'ಖಲಿಸ್ತಾನಿ'ಗಳ ವಿಷಯ ಚರ್ಚಿಸಿದ ಭಾರತ

ನವದೆಹಲಿ (ಪಿಟಿಐ): ಅಮೆರಿಕದ ರಾಷ್ಟ್ರೀಯ ಗುಪ್ತಚರ ಸಂಸ್ಥೆಯ ನಿರ್ದೇಶಕಿ ತುಳಸಿ ಗಬಾರ್ಡ್ ಅವರು ಸೋಮವಾರ ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ ಸಿಂಗ್, ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಜತೆ ವಿವಿಧ ಕ್ಷೇತ್ರಗಳ ಕಾರ್ಯತಂತ್ರದ ಕುರಿತು ಮಹತ್ವದ ಮಾತುಕತೆ ನಡೆಸಿದರು.

ಖಾಲಿಸ್ತಾನಿ ಪ್ರತ್ಯೇಕತಾವಾದಿ ಸಂಘಟನೆ ಸಿಖ್ಸ್ ಫಾರ್ ಜಸ್ಟೀಸ್ (ಎಸ್‌ಎಫ್‌ಜೆ), ಅಮೆರಿಕದಲ್ಲಿ ಭಾರತ ವಿರೋಧಿ ಚಟುವಟಿಕೆಯಲ್ಲಿ ತೊಡಗಿರುವುದರ ಬಗ್ಗೆ ರಾಜನಾಥ ಅವರು ಗಬಾರ್ಡ್ ಎದುರು ಕಳವಳ ವ್ಯಕ್ತಪಡಿಸಿದರು. ಎಸ್‌ಎಫ್‌ಜೆಯನ್ನು 'ಭಯೋತ್ಪಾದಕ ಸಂಘಟನೆ' ಎಂದು ಘೋಷಿಸುವಂತೆಯೂ ಅವರು ಇದೇ ವೇಳೆ ಮನವಿ ಮಾಡಿದರು ಎಂದು ಮೂಲಗಳು ತಿಳಿಸಿವೆ.

'ಭಯೋತ್ಪಾದನೆ ಎದುರಿಸಲು, ಸಮುದ್ರ ಮತ್ತು ಸೈಬರ್ ಭದ್ರತಾ ಸಹಕಾರ ಹೆಚ್ಚಿಸಲು ಉಭಯ ದೇಶಗಳು ಬದ್ಧವಾಗಿವೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸಭೆ ಬಳಿಕ ತಿಳಿಸಿದರು.

'ಪ್ರಸಕ್ತ ವರ್ಷದ ಕೊನೆಯಲ್ಲಿ ಟ್ರಂಪ್ ಅವರನ್ನು ಭಾರತಕ್ಕೆ ಸ್ವಾಗತಿಸಲು ನಾನು ಮತ್ತು ಭಾರತದ ಜನರು ಎದುರು ನೋಡುತ್ತಿದ್ದೇವೆ' ಎಂದೂ ಮೋದಿ ಹೇಳಿದರು.

ಟ್ರಂಪ್ ಅವರ ಎರಡನೇ ಅವಧಿಯ ಆಡಳಿತದಲ್ಲಿ ಅಮೆರಿಕದ ಉನ್ನತ ಅಧಿಕಾರಿಯೊಬ್ಬರು ಭಾರತಕ್ಕೆ ನೀಡಿದ ಮೊದಲ ಭೇಟಿ ಇದಾಗಿದೆ.

'ಇಸ್ಲಾಮಿಸ್ಟ್‌ಗಳು ಹರಡುತ್ತಿರುವ ಜಾಗತಿಕ ಭಯೋತ್ಪಾದನೆಯ ಬೆದರಿಕೆಗಳನ್ನು ಸೋಲಿಸಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ಬದ್ಧವಾಗಿದೆ' ಎಂದು ತಿಳಿಸಿದ ಗಬಾರ್ಡ್ ಅವರು, 'ಅಮೆರಿಕದಲ್ಲಿ ಖಲಿಸ್ತಾನಿ ಸಿಖ್ ಉಗ್ರಗಾಮಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂಬುದು ಭಾರತ ನಿರೀಕ್ಷೆಯಾಗಿದೆ' ಅವರು ಹೇಳಿದರು.

ಗಬಾರ್ಡ್ ಅವರು ಭಾನುವಾರ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರನ್ನು ಭೇಟಿಯಾದರಲ್ಲದೆ, ನವದೆಹಲಿಯಲ್ಲಿ ನಡೆದ ಗುಪ್ತಚರ ವಿಭಾಗದ ಮುಖ್ಯಸ್ಥರ ಜಾಗತಿಕ ಸಮಾವೇಶದಲ್ಲಿ ಪಾಲ್ಗೊಂಡರು.

ರಾಜನಾಥ ಸಿಂಗ್ ಮತ್ತು ತುಳಸಿ ಗಬಾರ್ಡ್ –ಪಿಟಿಐ ಚಿತ್ರ

'ಮೋದಿಯಿಂದ ಟ್ರಂಪ್ ಓಲೈಕೆ'

ನವದೆಹಲಿ (ಪಿಟಿಐ): 'ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಾತುಗಳನ್ನೇ ಪ್ರಧಾನಿ ನರೇಂದ್ರ ಮೋದಿ ಅವರೂ ಆಡುತ್ತಿದ್ದಾರೆ. ಈ ಮೂಲಕ ಟ್ರಂಪ್ ಅವರೊಂದಿಗೆ ಉತ್ತಮ ಸಂಬಂಧ ಹೊಂದಲು, ಅವರನ್ನು ಓಲೈಸಲು ಮೋದಿ ಅವರು ಬಯಸುತ್ತಿದ್ದಾರೆ ಎಂಬುದು ಸ್ಪಷ್ಟವಾಗಿದೆ' ಎಂದು ಕಾಂಗ್ರೆಸ್ ಅಭಿಪ್ರಾಯಪಟ್ಟಿದೆ.

ಭಾನುವಾರ ಬಿಡುಗಡೆಯಾದ ಅಮೆರಿಕದ ಪಾಡ್‌ಕಾಸ್ಟರ್ ಲೆಕ್ಸ್ ಫ್ರಿಡ್ಮನ್ ಅವರೊಂದಿಗಿನ ಮಾತುಕತೆಯ ಬಗ್ಗೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಪ್ರತಿಕ್ರಿಯಿಸಿದರು.

'ಜಾಗತಿಕ ಸಂಸ್ಥೆಗಳಿಂದ ಭಾರತಕ್ಕೆ ಹೇರಳವಾದ ಲಾಭವಾಗಿದೆ. ಹೀಗಿರುವಾಗ ಇಂಥ ಸಂಸ್ಥೆಗಳು ಈಗ ಅಪ್ರಸ್ತುತವಾದವೇ? ಇದು ಟ್ರಂಪ್ ಅವರ ಮಾತುಗಳು. ನಿಜ ಹೇಳಬೇಕೆಂದರೆ, ಟ್ರಂಪ್ ಅವರೇ ಇಂಥ ಸಂಸ್ಥೆಗಳನ್ನು ಅಪ್ರಸ್ತುತಗೊಳಿಸಲು ಯತ್ನಿಸುತ್ತಿದ್ದಾರೆ. ಮೋದಿ ಅವರು ಅವರ 'ಸ್ನೇಹಿತನ' ಮಾತುಗಳನ್ನೇ ಆಡುತ್ತಿದ್ದಾರೆ' ಎಂದು ಜೈರಾಮ್ ರಮೇಶ್ ಅಭಿಪ್ರಾಯಪಟ್ಟರು.

'ವಿಶ್ವ ಆರೋಗ್ಯ ಸಂಸ್ಥೆ, ವಿಶ್ವ ವ್ಯಾಪಾರ ಸಂಸ್ಥೆ ಭಾರತಕ್ಕೆ ಉತ್ತಮವಾದವುಗಳಲ್ಲವೇ? ಪ್ಯಾರಿಸ್ ಒಪ್ಪಂದವು ಭಾರತಕ್ಕೆ ಒಳ್ಳೆಯದಲ್ಲವೇ? ವಿದೇಶಗಳಲ್ಲಿ ಶಾಂತಿಪಾಲನಾ ಪಡೆಗಳನ್ನು ಇರಿಸಲು, ತನ್ನೆಲ್ಲಾ ಮಿತಿಗಳ ನಡುವೆಯೇ ವಿಶ್ವ ಸಂಸ್ಥೆಯು ಭಾರತಕ್ಕೆ ಅನುವು ಮಾಡಿಕೊಟ್ಟಿಲ್ಲವೇ?' ಎಂದರು.

ತ್ರಿಭಾಷಾ ನೀತಿ: ನಾಯ್ಡು ಸಮರ್ಥನೆ

ಹೈದರಾಬಾದ್: ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರು, ತ್ರಿಭಾಷಾ ನೀತಿಯನ್ನು ಸಮರ್ಥಿಸಿ ವಿಧಾನಸಭೆ ಅಧಿವೇಶನದಲ್ಲಿ ಸೋಮವಾರ ಮಾತನಾಡಿದರು. 'ಭಾಷೆ ಇರುವುದು ದ್ವೇಷಿಸುವುದಕ್ಕಾಗಿ ಅಲ್ಲ. ಆಂಧ್ರಪ್ರದೇಶದಲ್ಲಿ ತೆಲುಗು ಮಾತೃಭಾಷೆಯಾದರೆ, ಹಿಂದಿ 'ರಾಷ್ಟ್ರೀಯ ಭಾಷೆ' ಮತ್ತು ಇಂಗ್ಲಿಷ್ ಅಂತರರಾಷ್ಟ್ರೀಯ ಭಾಷೆ. 'ರಾಷ್ಟ್ರ ಭಾಷೆ'ಯನ್ನು ಕಲಿಯುವುದರಿಂದ ದೆಹಲಿಯಲ್ಲಿ ಸುಲಲಿತವಾಗಿ ಮಾತನಾಡಬಹುದು' ಎಂದರು.

ರಾಜ್ಯಸಭೆ ಕಲಾಪದಿಂದ ಹೊರನಡೆದ ವಿರೋಧ ಪಕ್ಷಗಳ ಸದಸ್ಯರು

'ಎಪಿಕ್' ಚರ್ಚೆಗೆ ವಿಪಕ್ಷ ಬಿಗಿಪಟ್ಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಮತದಾರರ ಗುರುತಿನ ಚೀಟಿಗಳು ಒಂದೇ ರೀತಿಯ 'ಎಪಿಕ್' ಸಂಖ್ಯೆಗಳನ್ನು ಹೊಂದಿರುವ ವಿಷಯದ ಕುರಿತು ಕೂಡಲೇ ಚರ್ಚೆಯಾಗಬೇಕು ಎಂದು ಒತ್ತಾಯಿಸಿದ ವಿರೋಧ ಪಕ್ಷಗಳ ಸದಸ್ಯರು ಸೋಮವಾರ ರಾಜ್ಯಸಭೆ ಕಲಾಪದಿಂದ ಹೊರನಡೆದರು.

ವಿವಿಧ ವಿಷಯಗಳ ಕುರಿತು ಚರ್ಚಿಸಲು ಅನುಮತಿ ಕೋರಿ ಸಲ್ಲಿಸಲಾದ 16 ನೋಟಿಸ್‌ಗಳನ್ನು ತಿರಸ್ಕರಿಸಲಾಗಿದೆ ಎಂದು ಉಪ ಸಭಾಪತಿ ಹರಿವಂಶ್ ಅವರು ಪ್ರಕಟಿಸಿದ ಬೆನ್ನಲ್ಲೇ, ಕಾಂಗ್ರೆಸ್ ಮತ್ತು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸದಸ್ಯರು 'ಎಪಿಕ್' ಕುರಿತು ಚರ್ಚೆಗೆ ಒತ್ತಾಯಿಸಿದರು. ಎಸ್‌ಪಿ, ಡಿಎಂಕೆ, ಆರ್‌ಜೆಡಿ, ಸಿಪಿಎಂ, ಸಿಪಿಐ ಮತ್ತು ಇತರ ವಿಪಕ್ಷಗಳ ಸದಸ್ಯರು ಇದಕ್ಕೆ ದನಿಗೂಡಿಸಿದರು.

ಟಿಎಂಸಿಯ ಸುಖೇಂದು ಶೇಖರ್ ರಾಯ್, ಮೌಸಮ್ ನೂರ್ ಮತ್ತು ಸುಷ್ಮಿತಾ ದೇವ್ ಹಾಗೂ ಕಾಂಗ್ರೆಸ್‌ನ ಪ್ರಮೋದ್ ತಿವಾರಿ ಅವರಿಂದ ಮತದಾರರ ಪಟ್ಟಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದ ಕುರಿತ ಚರ್ಚೆಗೆ ನೋಟಿಸ್ ಸ್ವೀಕರಿಸಲಾಗಿದೆ ಎಂದು ಹರಿವಂಶ್ ತಿಳಿಸಿದರು.

ಲೋಕಸಭಾ ಕ್ಷೇತ್ರಗಳ ಪುನರ್‌ವಿಂಗಡನೆ, ಇಲಾನ್ ಮಸ್ಕ್ ಒಡೆತನದ ಸ್ಟಾರ್‌ಲಿಂಕ್ ಕಂಪನಿಯ ಜತೆ ಭಾರ್ತಿ ಏರ್‌ಟೆಲ್ ಮತ್ತು ಜಿಯೊ ಕಂಪನಿಯ ಒಪ್ಪಂದ ಮತ್ತು ದೆಹಲಿಯಲ್ಲಿ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವ ವಿಷಯಗಳ ಕುರಿತು ಚರ್ಚೆಗೂ ನೋಟಿಸ್‌ಗಳು ಬಂದಿವೆ ಎಂದರು.

'ಎಪಿಕ್' ವಿಷಯದ ಕುರಿತು ಮಾತನಾಡಲು ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅವಕಾಶ ನೀಡಬೇಕೆಂದು ಕೆಲವು ಸಂಸದರು ಒತ್ತಾಯಿಸಿದರು. ನೋಟಿಸ್ ತಿರಸ್ಕರಿಸಲ್ಪಟ್ಟ ವಿಷಯವನ್ನು ಪ್ರಸ್ತಾಪಿಸಲು ಯಾರಿಗೂ ಅವಕಾಶ ನೀಡುವುದಿಲ್ಲ ಎಂದು ಉಪ ಸಭಾಪತಿ ಹೇಳಿದರು.

ಇದರಿಂದ ಖರ್ಗೆ ಅವರು ಸಭಾತ್ಯಾಗ ಮಾಡಿದರು. ಅವರೊಂದಿಗೆ ವಿಪಕ್ಷಗಳ ಇತರ ಸದಸ್ಯರೂ ಸದನದಿಂದ ಹೊರನಡೆದರು. ವಿರೋಧ ಪಕ್ಷದ ಸದಸ್ಯರು 'ಎಪಿಕ್' ಕುರಿತು ಚರ್ಚೆಗೆ ಲೋಕಸಭೆಯಲ್ಲೂ ನೋಟಿಸ್ ನೀಡಿದ್ದರು. ಆದರೆ, ಅಲ್ಲೂ ನೋಟಿಸ್‌ಗಳನ್ನು ತಿರಸ್ಕರಿಸಲಾಯಿತು.

ಹೃದಯ ತುಂಬಿ ಬಂದಿದೆ: ಸಭಾಪತಿ ಧನಕರ್

ಜಗದೀಪ್ ಧನಕರ್

ಪಕ್ಷಭೇದ ಮರೆತು ಎಲ್ಲರೂ ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿರುವುದನ್ನು ನೋಡಿ ಹೃದಯ ತುಂಬಿ ಬಂದಿದೆ ಎಂದು ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ಹೇಳಿದರು.

ಎದೆನೋವಿನ ಕಾರಣ ಧನಕರ್ ಅವರು ದೆಹಲಿಯ ಏಮ್ಸ್‌ನಲ್ಲಿ ಚಿಕಿತ್ಸೆ ಪಡೆದಿದ್ದರು. ವೈದ್ಯರು ವಿಶ್ರಾಂತಿ ಸೂಚಿಸಿದ್ದರಿಂದ ಒಂದು ವಾರ ಕಲಾಪದಿಂದ ದೂರವುಳಿದಿದ್ದ ಅವರು ಸೋಮವಾರ ಸದನಕ್ಕೆ ಬಂದರು.

ಕಲಾಪದ ಆರಂಭದಲ್ಲಿ ಆಡಳಿತ ಪಕ್ಷದ ನಾಯಕ ಜೆ.ಪಿ. ನಡ್ಡಾ ಮತ್ತು ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು, ಅನಾರೋಗ್ಯದಿಂದ ಶೀಘ್ರ ಚೇತರಿಸಿಕೊಂಡದ್ದಕ್ಕೆ ಸಂತಸ ವ್ಯಕ್ತಪಡಿಸಿದರಲ್ಲದೆ ಧನಕರ್ ಅವರ ದೀರ್ಘಾಯುಷ್ಯಕ್ಕಾಗಿ ಹಾರೈಸಿದರು.

'ಎಲ್ಲರೂ ಪಕ್ಷಭೇದ ಮರೆತು ನನ್ನ ಆರೋಗ್ಯದ ಬಗ್ಗೆ ವಿಚಾರಿಸಿದ್ದಾರೆ. ಇಂತಹ ಪರಿಸ್ಥಿತಿ ಬಂದಾಗ, ನಮ್ಮ ಹೃದಯಗಳು ಪರಸ್ಪರ ಬೆಸೆದುಕೊಳ್ಳುತ್ತವೆ ಎಂಬ ಅರಿವು ಕೂಡಾ ನನ್ನಲ್ಲಿ ಮೂಡಿದೆ' ಎಂದು ಈ ವೇಳೆ ಸಭಾಪತಿ ಹೇಳಿದರು.

ಟಿಎಂಸಿಯ ಡೆರಿಕ್ ಒಬ್ರಯಾನ್ ಅವರೊಂದಿಗಿನ ಮಾತುಕತೆಯನ್ನು ನೆನಪಿಸಿಕೊಂಡ ಧನಕರ್, 'ಹುಟ್ಟು ಹಬ್ಬದ ಶುಭಾಶಯ ಕೋರಲು ಕಳೆದ ವಾರ ಒಬ್ರಯಾನ್‌ಗೆ ಕರೆ ಮಾಡಿದ್ದೆ. ಆಗ ಅವರು ತಮ್ಮ ಎಂದಿನ ಮಾತಿನ ಶೈಲಿಯಲ್ಲಿ, 'ಶಟ್ ಅಪ್, ನೀವು ವಿಶ್ರಾಂತಿ ತೆಗೆದುಕೊಳ್ಳಿ' ಎಂದು ಉತ್ತರಿಸಿದರು' ಎನ್ನುತ್ತಾ ನಗು ಬೀರಿದರು.

ಔರಂಗಜೇಬ್ ಜೊತೆ ಫಡಣವೀಸ್ ಹೋಲಿಕೆ

ಪಿಟಿಐ/ ಪ್ರಜಾವಾಣಿ ವಾರ್ತೆ

ಮುಂಬೈ: ಮೊಘಲ್ ದೊರೆ ಔರಂಗಜೇಬ್ ಜೊತೆಗೆ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರನ್ನು ಹೋಲಿಸಿ ನೀಡಿರುವ ಹೇಳಿಕೆ ವಿಚಾರ ಅಧಿವೇಶನದಲ್ಲಿ ಕೋಲಾಹಲ ಸೃಷ್ಟಿಸಿತು. ವಿವಾದಾಸ್ಪದ ಹೇಳಿಕೆ ನೀಡಿದ ನಾಯಕರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮಹಾಯುತಿ ನಾಯಕರು ಸೋಮವಾರ ಒತ್ತಾಯಿಸಿದರು.

ಮಹಾರಾಷ್ಟ್ರದ ವಿಧಾನಮಂಡಲದ ಉಭಯ ಸದನಗಳಲ್ಲಿ ಈ ವಿಚಾರ ಪ್ರತಿಧ್ವನಿಸಿತು. ಈ ಹೇಳಿಕೆ ನೀಡಿರುವ ಕಾಂಗ್ರೆಸ್‌ನ ಹರ್ಷವರ್ಧನ್ ವಸಂತರಾವ್ ಸಪಕಾಳ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಡಳಿತ ಪಕ್ಷದ ಶಾಸಕರು ಒತ್ತಾಯಿಸಿದರು.

ಉಪಮುಖ್ಯಮಂತ್ರಿ ಅಜಿತ್ ಪವಾರ್ (ಎನ್‌ಸಿಪಿ) ಹಾಗೂ ಕಂದಾಯ ಸಚಿವ ಚಂದ್ರಶೇಖರ್ ಬಾವಂಕುಲೆ (ಬಿಜೆಪಿ) ಅವರು ಮಾತನಾಡಿ, 'ಹೇಳಿಕೆ ಕುರಿತು ವಿಸ್ತೃತವಾಗಿ ತನಿಖೆ ನಡೆಸಿ, ಸಪಕಾಳ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

> **'ಔರಂಗಜೇಬ್ ಕ್ರೂರ ಆಡಳಿತಗಾರ. ದೇವೇಂದ್ರ ಫಡಣವೀಸ್ ಕೂಡ ಅಷ್ಟೇ ಕ್ರೂರ ಆಡಳಿತಗಾರರು. ಅವರು ಯಾವಾಗಲೂ ಧರ್ಮ ಆಧಾರಿತ ವಿಚಾರವನ್ನು ಬೆಂಬಲಿಸುತ್ತಾರೆ. ಆದರೆ, ಸರಪಂಚ್ ಸಂತೋಷ್ ದೇಶ್‌ಮುಖ್ ಕೊಲೆ ಪ್ರಕರಣದ ಬಗ್ಗೆ ಏನೂ ಮಾಡುತ್ತಿಲ್ಲ'**
> **ಹರ್ಷವರ್ಧನ್ ವಸಂತರಾವ್ ಸಪಕಾಳ್,** ಮಹಾರಾಷ್ಟ್ರ ಕಾಂಗ್ರೆಸ್ ಘಟಕದ ಅಧ್ಯಕ್ಷ

'ಪಕ್ಷದ ಹಿರಿಯ ನಾಯಕರ ಗಮನಸೆಳೆಯಲು ಇಂತಹ ಹೇಳಿಕೆ ನೀಡಿದ್ದಾರೆ. ಅವರ ನೈಜ ಬಣ್ಣ ಬಯಲಾಗಿದೆ. ಮುಖ್ಯವಾದ ಹುದ್ದೆಯಲ್ಲಿದ್ದು, ಇಂತಹ ಹೇಳಿಕೆ ನೀಡಿರುವ ಬಗ್ಗೆ ತನಿಖೆ ನಡೆಸಲಾಗುವುದು' ಎಂದು ಅಜಿತ್ ಪವಾರ್ ತಿಳಿಸಿದರು.

ಸಪಕಾಳ್ ಮೇಲಿನ ಆರೋಪವನ್ನು ತಳ್ಳಿಹಾಕಿದ ಕಾಂಗ್ರೆಸ್ ನಾಯಕ ಭಾಯಿ ಜಗತಾಪ್, 'ಅಂತಹ ಹೇಳಿಕೆಯನ್ನೇ ನೀಡಿಲ್ಲ' ಎಂದು ತಿಳಿಸಿದರು.

'ಇ–ಸ್ವತ್ತಿ'ಗೆ ಗ್ರಾಮೀಣರ ಪರದಾಟ

ಒಂದನೇ ಪುಟದಿಂದ...

'ತಂದೆಯ ಹೆಸರಿನಲ್ಲಿದ್ದ ಮನೆಯ ಮಾಲೀಕತ್ವವನ್ನು ನನ್ನ ಹೆಸರಿಗೆ ವರ್ಗಾಯಿಸಿಕೊಳ್ಳಲು 'ಇ-ಸ್ವತ್ತು'ಗೆ ಅರ್ಜಿ ಸಲ್ಲಿಸಿದ್ದೆ. ರಸ್ತೆಗೆ ಹೊಂದಿಕೊಂಡ ಮನೆಗಳಿಗೆ ಲೋಕೋಪಯೋಗಿ ಇಲಾಖೆಯ ಮಾರ್ಗಸೂಚಿಯ ಪ್ರಕಾರ 'ಇ-ಸ್ವತ್ತು' ನೀಡಲು ಸಾಧ್ಯವಿಲ್ಲ ಎಂಬುದಾಗಿ ಗ್ರಾಮ ಪಂಚಾಯಿತಿ ಹಿಂಬರಹ ಕೊಟ್ಟಿದೆ. ಆಸ್ತಿ ಪರಭಾರೆಗೆ ತೊಡಕು ಎದುರಾಗಿದೆ' ಎಂದು ದಾವಣಗೆರೆ ತಾಲ್ಲೂಕಿನ ಬಾಡ ಗ್ರಾಮದ ಶಿವಪ್ರಕಾಶ್ ಅಳಲು ತೋಡಿಕೊಂಡರು.

ರಾಜ್ಯ ಹೆದ್ದಾರಿಯ ಮಾದರಿಯಲ್ಲಿ ಜಿಲ್ಲಾ ಮುಖ್ಯ ರಸ್ತೆಯ ಅಂಚು ಗುರುತಿಸುವ ಜವಾಬ್ದಾರಿಯನ್ನು ಆಯಾ ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರುಗಳಿಗೆ ನೀಡಲಾಗಿದೆ. ಮುಖ್ಯ ರಸ್ತೆ ಹಾದು ಹೋಗಿರುವ ಊರುಗಳನ್ನು ಪರಿಶೀಲಿಸಿ 'ರೇಖೆ' ಗುರುತಿಸುವ ಕಾರ್ಯಕ್ಕೆ ಇನ್ನೂ ಚಾಲನೆ ಸಿಗಬೇಕಿದೆ.

'ರಾಜ್ಯ ಹೆದ್ದಾರಿ ಮಾದರಿಯಲ್ಲಿ ಜಿಲ್ಲಾ ಮುಖ್ಯ ರಸ್ತೆಗಳ ಪರಿಮಿತಿ ನಿಗದಿಪಡಿಸುವ ಕೆಲಸ ಆಗಿಲ್ಲ. ಹೊಸದಾಗಿ ಟೆಂಡರ್ ಕರೆದು ಏಜೆನ್ಸಿಯೊಂದನ್ನು ನೇಮಕ ಮಾಡುವ ಕಾರ್ಯ ಬಾಕಿ ಇದೆ. ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿರುವ ಕಟ್ಟಡಗಳಿಗೆ 'ಇ-ಸ್ವತ್ತು' ಸಿಗುತ್ತಿಲ್ಲ ಎಂಬುದಾಗಿ ಅನೇಕರು ಅಲವತ್ತುಕೊಳ್ಳುತ್ತಿದ್ದಾರೆ' ಎಂದು ಲೋಕೋಪಯೋಗಿ ಇಲಾಖೆಯ ಎಂಜಿನಿಯರ್ ಒಬ್ಬರು ತಿಳಿಸಿದ್ದಾರೆ.

ಚುರಾಚಾಂದ್‌ಪುರ ಉದ್ವಿಗ್ನ

ಇಂಫಾಲ್/ಚುರಾಚಾಂದ್‌ಪುರ (ಪಿಟಿಐ): ಹಮಾರ್ ಬುಡಕಟ್ಟು ಸಮುದಾಯದ ನಾಯಕ ರಿಚರ್ಡ್ ಹಮಾರ್ ಅವರ ಮೇಲೆ ದಾಳಿ ನಡೆದ ಬಳಿಕ ಮಣಿಪುರದ ಚುರಾಚಾಂದ್‌ಪುರ ಜಿಲ್ಲೆ ಮತ್ತೊಮ್ಮೆ ಉದ್ವಿಗ್ನಗೊಂಡಿದೆ. ಪೊಲೀಸರು ಜಿಲ್ಲೆಯಲ್ಲಿ ನಿಷೇಧಾಜ್ಞೆ ಜಾರಿ ಮಾಡಿದ್ದಾರೆ.

'ವಿ.ಕೆ. ಮೊಂಟೆಸರಿ ಕಾಂಪ್ಲೆಕ್ಸ್ ಒಳಗೆ ಭಾನುವಾರ ರಾತ್ರಿ ರಿಚರ್ಡ್ ಅವರ ಮೇಲೆ ದಾಳಿ ನಡೆದಿದೆ' ಎಂದು ಪೊಲೀಸರು ತಿಳಿಸಿದರು. 'ರಿಚರ್ಡ್ ಅವರು ವಾಹನ ಚಾಲನೆ ಮಾಡುತ್ತಿದ್ದ ವೇಳೆ ಅವರು ದ್ವಿಚಕ್ರ ವಾಹನ ಸವಾರನಿಗೆ ಗುದ್ದಿದ್ದಾರೆ. ಈ ಬಳಿಕ ಮಾತಿನ ಚಕಮಕಿ ನಡೆದಿದೆ. ಕೊನೆಗೆ ಕೆಲವರು ರಿಚರ್ಡ್ ಅವರ ಮೇಲೆ ದಾಳಿ ನಡೆಸಿದ್ದಾರೆ' ಎಂದು ಮೂಲಗಳು ಹೇಳಿವೆ.

ಅಂಬೇಡ್ಕರ್ ಸೋಲು ಕೋಲಾಹಲ

ಒಂದನೇ ಪುಟದಿಂದ...

'ಅಂಬೇಡ್ಕರ್ ಅವರನ್ನು ಚುನಾವಣೆಯಲ್ಲಿ ಸೋಲಿಸಿದ್ದು ಯಾರು? ನಿಧನದ ನಂತರ ಅಂಬೇಡ್ಕರ್ ಅವರ ಅಂತ್ಯಸಂಸ್ಕಾರಕ್ಕೆ ಮತ್ತು ಸ್ಮಾರಕ ನಿರ್ಮಾಣಕ್ಕೆ ದೆಹಲಿಯಲ್ಲಿ ಸ್ಥಳಾವಕಾಶ ನೀಡದೆ ಅವಮಾನಿಸಿದವರು ಯಾರು' ಎಂದು ಬಿಜೆಪಿ ಸದಸ್ಯರು ಏರಿ ಧ್ವನಿಯಲ್ಲಿ ಕೇಳಿದರು.

ಪತ್ರ ತೋರಿಸುವಂತೆ ಬಿಜೆಪಿಯವರು ಆಗ್ರಹಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, 'ಪತ್ರ ತೋರಿಸುತ್ತೇನೆ. ಪತ್ರದಲ್ಲಿರುವುದು ನಿಜವಾದರೆ ನೀವು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತೀರಾ? ಪತ್ರದಲ್ಲಿ ಹಾಗೆ ಉಲ್ಲೇಖವಿಲ್ಲದಿದ್ದರೆ ರಾಜೀನಾಮೆ ನೀಡಲು ನಾನು ಸಿದ್ಧ' ಎಂದು ಸವಾಲು ಹಾಕಿದರು.

'ಅಂಬೇಡ್ಕರ್ ಅವರನ್ನು ಸೋಲಿಸಿದ್ದು ಕಾಂಗ್ರೆಸ್. ನೆಹರೂ ಮೀಸಲಾತಿಯನ್ನೂ ವಿರೋಧಿಸಿದ್ದರು' ಎಂದು ಯತ್ನಾಳ ಆರೋಪಿಸಿದರು.

'ಕಾಂಗ್ರೆಸ್‌ನವರೇ ಅಂಬೇಡ್ಕರ್ ಅವರನ್ನು ಸೋಲಿಸಿದ್ದು ಎಂದು ಕೆ.ಆರ್. ರಮೇಶ್ ಕುಮಾರ್ ಅವರು ಇದೇ ಸದನದಲ್ಲಿ ಹೇಳಿದ್ದರು' ಎಂದು ಬೆಲ್ಲದ ಹೇಳಿದರು.

ಕೆಲ ಸಮಯದ ಬಳಿಕ ಸಿಬ್ಬಂದಿಯಿಂದ ಬ್ಯಾಗ್ ತರಿಸಿಕೊಂಡ ಪ್ರಿಯಾಂಕ್ ಅವರು, ಮೂರು ಪುಟಗಳ ಪತ್ರವೊಂದನ್ನು ತೆಗೆದು ಪ್ರದರ್ಶಿಸಿದರು. '1952ರ ಜನವರಿ 18ರಂದು ಅಂಬೇಡ್ಕರ್ ಅವರು ತಮ್ಮ ಪರಿಚಯಸ್ಥರಿಗೆ ಬರೆದ ಪತ್ರದಲ್ಲಿ ವಿನಾಯಕ ದಾಮೋದರ್ ಸಾವರ್ಕರ್ ತಮ್ಮ ಚುನಾವಣಾ ಸೋಲಿನಲ್ಲಿ ಹೇಗೆ ಪಾತ್ರ ವಹಿಸಿದ್ದಾರೆ ಎಂಬುದನ್ನು ವ್ಯಕ್ತಪಡಿಸಿದ್ದಾರೆ' ಎಂದು ಪತ್ರದ ಸಾಲುಗಳನ್ನು ಉಲ್ಲೇಖಿಸಿದರಲ್ಲದೇ, 'ಸವಾಲು ಸ್ವೀಕರಿಸಿ ಚರ್ಚೆಗೆ ಬನ್ನಿ' ಎಂದು ಬಿಜೆಪಿ ಸದಸ್ಯರಿಗೆ ಪಂಥಾಹ್ವಾನ ನೀಡಿದರು.

ಮಧ್ಯಾಹ್ನದ ಬಳಿಕ ಅಂಬೇಡ್ಕರ್ ಕುರಿತು ಚರ್ಚೆಗೆ ಅವಕಾಶ ನೀಡುವುದಾಗಿ ಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು. ಆಗ ಮತ್ತೆ ಬಿಜೆಪಿ ಸದಸ್ಯರು ಸಚಿವ ಪ್ರಿಯಾಂಕ್ ಅವರನ್ನು ಉದ್ದೇಶಿಸಿ ಏರಿದ ಧ್ವನಿಯಲ್ಲಿ ಮಾತನಾಡಲು ಆರಂಭಿಸಿದರು. 'ಹೆದರಿಸಲು ಬರಬೇಡಿ. ಇದು ಸದನ, ಆರ್‌ಎಸ್‌ಎಸ್ ಕಚೇರಿಯಲ್ಲ ಹುಷಾರು' ಎಂದು ಪ್ರಿಯಾಂಕ್ ತಿರುಗೇಟು ನೀಡಿದರು.

ತಮ್ಮ ಪತ್ರದಲ್ಲಿ, ಡಾ. ಅಂಬೇಡ್ಕರ್ ಅವರು ಸಾವರ್ಕರ್ ತಮ್ಮ ಸೋಲಿಗೆ ಕಾರಣವೆಂದು ನಂಬಿದ ಅಂಶಗಳನ್ನು ವಿವರಿಸಿದ್ದಾರೆ. ಸಾವರ್ಕರ್ ಅವರ ಪ್ರಭಾವ ಮತ್ತು ರಾಜಕೀಯ ಕೌಶಲವನ್ನು ತಮ್ಮ ಪತ್ರದಲ್ಲಿ ಎತ್ತಿ ತೋರಿಸಿದ್ದರು.

ಆರ್‌ಎಸ್‌ಎಸ್: ಕಲಾಪ ಕಲಹ

ಒಂದನೇ ಪುಟದಿಂದ...

ಕಾಂಗ್ರೆಸ್ ಸದಸ್ಯರು ಆರ್‌ಎಸ್‌ಎಸ್ ವಿರೋಧಿ ಘೋಷಣೆಗಳನ್ನು ಮೊಳಗಿಸಿದರು. ಬಿಜೆಪಿ ಉಪನಾಯಕ ಅರವಿಂದ ಬೆಲ್ಲದ ಮತ್ತು ಹರೀಶ್ ಪೂಂಜಾ ಅವರು, 'ನೀವು ನಿಷೇಧಿತ ಸಂಘಟನೆ ಪಿಎಫ್‌ಐ ಪರ ಇದ್ದೀರಿ. ಅವರ ಮೇಲೆ ಇದ್ದ ಕೇಸುಗಳನ್ನು ತೆಗೆದು ಹಾಕಿದ್ದೀರಿ. ಅವರ ಏಜೆಂಟ್‌ಗಳು' ಎಂದು ಅಬ್ಬರಿಸಿದರು.

'ಗೊತ್ತಿದೆ ಕೂತ್ಕೊಳ್ರಿ, ನಿಮಗೆ ಗಲಾಟೆ ಮಾಡಿ ಅಂತ ಹೇಳಿ ಕಳಿಸಿಕೊಟ್ಟವರು ಯಾರೆಂದು ನನಗೆ ಗೊತ್ತು. ನೀವೆಲ್ಲ ಆರ್‌ಎಸ್‌ಎಸ್‌ನವರಲ್ಲ, ನಿಮ್ಮನ್ನ ಎತ್ತಿ ಕಟ್ಟಿದ್ದಾರೆ. ನಾನೇನು ಪಿಎಫ್‌ಐ ಬೆಂಬಲಿಸಿಲ್ಲ. ಆ ಸಂಘಟನೆಯ ಯಾವುದೇ ವ್ಯಕ್ತಿಯ ವಿರುದ್ಧ ಕೇಸನ್ನು ಹಿಂದಕ್ಕೆ ಪಡೆದಿಲ್ಲ ' ಎಂದು ಸಿದ್ದರಾಮಯ್ಯ ತಿರುಗೇಟು ನೀಡಿದರು.

'ಮುಖ್ಯಮಂತ್ರಿ ಆರ್‌ಎಸ್‌ಎಸ್ ಕುರಿತು ಆಡಿದ ಮಾತನ್ನು ಹಿಂದಕ್ಕೆ ಪಡೆಯುವವರೆಗೆ ಸದನ ನಡೆಯಲು ಬಿಡುವುದಿಲ್ಲ ಮತ್ತು ಹೇಳಿಕೆಯನ್ನು ಸಹಿಸುವ ಪ್ರಶ್ನೆಯೇ ಇಲ್ಲ' ಎಂದು ಅಶೋಕ ಅವರು ಏರಿದ ಧ್ವನಿಯಲ್ಲಿ ಹೇಳಿದರು. 'ಗಾಂಧೀಜಿ ಹತ್ಯೆ ಆದಾಗ ವಲ್ಲಭಬಾಯ್ ಪಟೇಲ್ ಏನು ಹೇಳಿದ್ದರು ಗೊತ್ತಾ? ನಿಮಗೆಲ್ಲ ಹೆದ್ರಿಕೊಳ್ಳಲ್ಲ. ನಿಮ್ಮನ್ನು ಎದುರಿಸಲು ನಾನು ತಯಾರಿದ್ದೇನೆ. ನನ್ನ ಹೇಳಿಕೆ ಹಿಂದಕ್ಕೆ ಪಡೆಯುವುದಿಲ್ಲ. ಏನಾಗುತ್ತೋ ನೋಡೋಣ' ಎಂದು ಸಿದ್ದರಾಮಯ್ಯ ಬಿಜೆಪಿ ಸದಸ್ಯರಿಗೆ ಸವಾಲು ಹಾಕಿದಾಗ, 'ನಾವೂ ತಯಾರಿದ್ದೇವೆ' ಎಂದು ಅಶೋಕ ಪ್ರತಿ ಸವಾಲು ಹಾಕಿದರು.

ಆಗ ಮಧ್ಯ ಪ್ರವೇಶಿಸಿದ ಸಚಿವ ಪ್ರಿಯಾಂಕ್ ಖರ್ಗೆ, 'ಬಿಜೆಪಿಯವರು ತಮ್ಮ ಮಕ್ಕಳನ್ನು ಆರ್‌ಎಸ್‌ಎಸ್ ಶಾಖೆಗೆ ಕಳುಹಿಸುವುದಿಲ್ಲ. ಕಂಡವರ ಮಕ್ಕಳನ್ನು ಶಾಖೆಗೆ ಕಳುಹಿಸಿ ಹಾಳು ಬಾವಿಗೆ ನೂಕುತ್ತಾರೆ' ಎಂದರು.

> **ಆರ್‌ಎಸ್‌ಎಸ್ ಕುರಿತು ಮುಖ್ಯಮಂತ್ರಿಯವರು ಆಡಿದ ಮಾತು ಅಸಂಸದೀಯವಲ್ಲ**
> **ಕೆ.ಎಂ.ಶಿವಲಿಂಗೇಗೌಡ,** ಸಭಾಧ್ಯಕ್ಷ ಪೀಠದಿಂದ

ಅದಕ್ಕೆ ತಿರುಗೇಟು ನೀಡಿದ ಬಿಜೆಪಿ ವಿ.ಸುನಿಲ್‌ಕುಮಾರ್, 'ಖರ್ಗೆ ಅವರೇ ನಿಮ್ಮ ಮಕ್ಕಳು ದಲಿತ ಕಾಲೊನಿಯಲ್ಲಿ ಇದ್ದಾರೆಯೇ, ಅಲ್ಲಿಗೆ ಕಳುಹಿಸುತ್ತೀರೇ? 50 ವರ್ಷಗಳಿಂದ ಸದಾಶಿವನಗರದಲ್ಲಿ ಕುಳಿತು ದಲಿತ ಕಾಲೊನಿಗಳ ಬಗ್ಗೆ ಮಾತನಾಡುತ್ತೀರಿ ನಿಮಗೆ ನಾಚಿಕೆ ಆಗಬೇಕು' ಗುಡುಗಿದರು. ಕಾಂಗ್ರೆಸ್‌ಗೆ ಪಾಕಿಸ್ತಾನದ ನಂಟು ಇದೆ ಎಂಬ ಅರ್ಥದಲ್ಲಿ ಬಿಜೆಪಿ ಸದಸ್ಯರು ಆರೋಪ ಮಾಡಿದಾಗ, ಪ್ರಿಯಾಂಕ್ ಅವರು ಪ್ರಧಾನಿ ಮೋದಿ ಅವರು ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಷರೀಫ್ ಅವರ ಜತೆ ಇದ್ದ ಚಿತ್ರವನ್ನು ಪ್ರದರ್ಶಿಸಿದರು. ಇದಕ್ಕೆ ಪ್ರತಿಯಾಗಿ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ಕಾಶ್ಮೀರದ ಭಯೋತ್ಪಾದಕ ಯಾಸೀನ್ ಮಲಿಕ್ ಜತೆಗಿದ್ದ ಚಿತ್ರ ಪ್ರದರ್ಶಿಸಿದರು.

ಆಗ ಸಭಾಧ್ಯಕ್ಷ ಸ್ಥಾನದಲ್ಲಿದ್ದ ಕೆ.ಎಂ.ಶಿವಲಿಂಗೇಗೌಡ ಎರಡು ಬಾರಿ ಕಲಾಪವನ್ನು ಮುಂದೂಡ ಬೇಕಾಯಿತು. ಹೊರಗೆ ಹೋಗಿದ್ದ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ದೌಡಾಯಿಸಿ ಬಂದು ಕಲಾಪವನ್ನು ಆವರಿಸಿಕೊಂಡಿದ್ದ ಬಿಸಿಯನ್ನು ತಣ್ಣಗಾಗಿಸಿದರು.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಛೇರಿ
ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು
ಸಂ. ಕಾನಿಅ/ಗ್ರಾಕುನೀ&ನೈ/ವಿರಾ/ತಾ.ಶಾ/KKRDB/2024–25/ಇ-ಟೆಂಡರ/1984 ದಿನಾಂಕ: 14–03–2025
ಇ–ಪ್ರೋಕ್ಯೂರಮೆಂಟ ಟೆಂಡರ ಪ್ರಕಟಣೆ
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು ಇವರು KW-1,2& 3 (Standard Bid Document) ನಿಬಂಧನೆಗಳೊಪ್ಪಂತೆ ಪಂಚಾಯತ ರಾಜ ಇಂಜಿನೀಯರಿಂಗ ಇಲಾಖೆಯಲ್ಲಿ ಸಿವ್ಹಿಲ್ ನೊಂದಾಯಿತ ಹಾಗೂ ಇ-ಗುತ್ತಿಗೆಕುರಿತು ಇ-ಪ್ರೋಕ್ಯೂರಮೆಂಟ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ KKRDB ಅನುದಾನದಡಿಯಲ್ಲಿ ರಾಯಚೂರು ಜಿಲ್ಲೆಯ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗಳಿಗೆ ಐಟಂವಾರು ಇ-ಟೆಂಡರ ಆಹ್ವಾನಿಸಲಾಗಿದೆ.
1] E-Payment/NEFT ಮುಖಾಂತರಅರ್ಜಿ ಸ್ವೀಕರಿಸುವ ದಿನಾಂಕ :15–03–2025 2] ಶೆಡ್ಯೂಲಗಳನ್ನು Online ನಲ್ಲಿ ಬಿಡುವ ದಿನಾಂಕ:15–03–2025 3] ಭರ್ತಿ ಮಾಡಿದ ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 25–03–2025 ಸಂಜೆ 4:30 ಗಂಟೆವರೆಗೆ 4] ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 26–03–2025 ಸಂಜೆ 5:30 ಗಂಟೆ ಸಾಧ್ಯವಿದ್ದಲ್ಲಿ 5] ಆರ್ಥಿಕ ಬಿಡ್ ತೆರೆಯುವ ದಿನಾಂಕ : 27–03–2025 ಸಂಜೆ 5:30 ಗಂಟೆಗೆ ಸಾಧ್ಯವಿದ್ದಲ್ಲಿ
Indent Nos.: Deodurga: 9020, 9156 Lingasugur: 9161 Manvi: 9049 SC Reserved, 9158, 9159, 9160
ಕಾಮಗಾರಿಗಳ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕಛೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟhttps://kppp.karnataka.gov.in/ ಸಂಪರ್ಕಿಸಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು., ಗ್ರಾನೀ.ಸ & ನೈ ವಿಭಾಗ, ರಾಯಚೂರು.
DIP/RCR/826/KSMC&A/828/2024-25

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪರು–2 ರವರ ಕಛೇರಿ,
1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052.
ಸಂಖ್ಯೆ: ಡಿಜಿಎಂ–2/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/11/2024–25 ದಿನಾಂಕ : 17–03–2025
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಉಪ ಪ್ರಧಾನ ವ್ಯವಸ್ಥಾಪಕರು–2, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ಇವರು ಈ ಕೆಳಗೆ ವಿವರಿಸಿರುವ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ವ್ಯವಸ್ಥಾಪಕ ನಿರ್ದೇಶಕರು, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು ಇವರ ಪರವಾಗಿ ಯೋಜನಾ ನಿರ್ವಹಣಾ ಸಲಹಾ ಸೇವೆಗಳಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್‌ಗಳು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಸೇವೆಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು (ಉದಾ. https://kppp.karnataka.gov.in). ಟೆಂಡರ್‌ಗಳು ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತಾ ಮಾನದಂಡಗಳು ಪ್ರಮಾಣಿತ ಬಿಡ್ಡರ್‌ಗಳ ದಾಖಲೆಗಳ ಕೆಸಿ–6 ಮತ್ತು ಕೆಸಿ–7 ರ ಪ್ರಕಾರ ಎಂಬುದನ್ನು ಗಮನಿಸಲು ಸೂಚಿಸಲಾಗಿದೆ. ಇತರ ವಿವರಗಳನ್ನು ಬಿಡ್ಡಿಂಗ್ ದಾಖಲೆಗಳಲ್ಲಿ ಕಾಣಬಹುದು.

ಕ್ರ. ಸಂ.	ಕಾಮಗಾರಿಗಳ ಹೆಸರು	ಕಾಮಗಾರಿಗಳ ಅಂದಾಜು ಮೊತ್ತ (ಲಕ್ಷಗಳಲ್ಲಿ)	ಅವಧಿ (ಮಳೆಗಾಲ ಸೇರಿದಂತೆ)	ಇಎಂಡಿ ಮೊತ್ತ ರೂ.ಗಳಲ್ಲಿ
1	ಮಹದೇವಪುರ ಕ್ಷೇತ್ರದಲ್ಲಿ ಮಿಟ್ಟಗಾನಹಳ್ಳಿ ಮತ್ತು ಕಣ್ಣೂರು (ಉಳಿದ ಭಾಗ) ದಲ್ಲಿ ಹೊಸ ಭೂಕುಸಿತ ಸ್ಥಳವನ್ನು ಸ್ಥಾಪಿಸುವ ಕೆಲಸ ಮತ್ತು ಸುತ್ತಮುತ್ತಲಿನ ಗ್ರಾಮಗಳ ಅಭಿವೃದ್ಧಿಗಾಗಿ ಪಿಎಂಸಿ ನೇಮಕಾತಿ. ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಮಂಡೂರು ಪರಂಪರೆ ತ್ಯಾಜ್ಯ ಜೈವಿಕ ಗಣಿಗಾರಿಕೆ ಸ್ಥಳದ ಸುತ್ತಮುತ್ತಲಿನ ಗ್ರಾಮ ಅಭಿವೃದ್ಧಿ ಕಾರ್ಯಗಳು. (2ನೇ ಕರೆ)	9000.00	12 Months	1,80,000/-
2	ಮಹದೇವಪುರ ಕ್ಷೇತ್ರದ ಮಿಟ್ಟಗಾನಹಳ್ಳಿ ಮತ್ತು ಕಣ್ಣೂರು ಲ್ಯಾಂಡ್‌ಫಿಲ್ ಸುತ್ತಮುತ್ತಲಿನ ಅಪ್ರೋಚ್ ರಸ್ತೆಗಳ ಅಭಿವೃದ್ಧಿ ಕಾರ್ಯಕ್ಕಾಗಿ ಪಿಎಂಸಿ ಯ ನೇಮಕಾತಿ (2ನೇ ಕರೆ)	5000.00	9 Months	1,00,000/-
3	ಬ್ಯಾಟರಾಯನಪುರ ಕ್ಷೇತ್ರದಲ್ಲಿ ಅಗತ್ಯವಿರುವ ಮೂಲಸೌಕರ್ಯಗಳನ್ನು ಸೃಷ್ಟಿಸುವ ಮೂಲಕ ಬಯ್ಯಪ್ಪನಹಳ್ಳಿ ಸರ್ವೆ ಸಂಖ್ಯೆ 80 ರಲ್ಲಿ ಲಭ್ಯವಿರುವ ಕ್ವಾರಿ ಪಿಟ್ (ಬ್ಯಾಲೆನ್ಸ್ ಭಾಗ ಹಂತ–2) ನಲ್ಲಿ ಹೊಸ ವೈಜ್ಞಾನಿಕ ಭೂಕುಸಿತ ಸ್ಥಳವನ್ನು ಸ್ಥಾಪಿಸುವುದು ಮತ್ತು ಸುತ್ತಮುತ್ತಲಿನ ಗ್ರಾಮಗಳ ಅಭಿವೃದ್ಧಿಗಾಗಿ ಪಿಎಂಸಿ ಯ ನೇಮಕಾತಿ. (2ನೇ ಕರೆ).	9000.00	11 Months	1,80,000/-
4	ಬ್ಯಾಟರಾಯನಪುರ ಕ್ಷೇತ್ರದ ಓ & ಎಂ ಸೇರಿದಂತೆ ಉತ್ತರ ಭಾಗದ ಬೈಯಪ್ಪನಹಳ್ಳಿ ಸರ್ವೆ ನಂ.80, ಪಿಟ್ ನಂ.2 ರಲ್ಲಿ ಹೊಸ ಲ್ಯಾಂಡ್‌ಫಿಲ್ ಸೈಟ್ ಸ್ಥಾಪಿಸುವುದು ಮತ್ತು ಅಭಿವೃದ್ಧಿ ಕಾರ್ಯಕ್ಕಾಗಿ ಪಿಎಂಸಿ ಯ ನೇಮಕಾತಿ. (2ನೇ ಕರೆ).	2500.00	6 Months	50,000/-
5	ಬ್ಯಾಟರಾಯನಪುರ ಮತ್ತು ಮಹದೇವಪುರ ಕ್ಷೇತ್ರದ ಶ್ರೀನಿವಾಸಪುರ, ಸಾತನೂರು, ಹೊಸಹಳ್ಳಿ, ಮಡಕೆಪಾಳ್ಯ, ಕಣ್ಣೂರು, ಬಂಡೆಬೊಮ್ಮಸಂದ್ರ, ಚಿಕ್ಕಗುಬ್ಬಿ, ಕಾಡುಸೊಪ್ಪನಹಳ್ಳಿ, ಹೊಸೂರುಬಂಡೆ, ಮಿಟ್ಟಗಾನಹಳ್ಳಿ ಮತ್ತು ಸುತ್ತಮುತ್ತಲಿನ ಗ್ರಾಮಗಳಂತಹ ವೈಜ್ಞಾನಿಕ ಭೂಕುಸಿತಗಳ ಸುತ್ತಲಿನ ಗ್ರಾಮಗಳ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಮತ್ತು ಅಭಿವೃದ್ಧಿಗೊಳಿಸುವ ಕೆಲಸಕ್ಕಾಗಿ ಪಿಎಂಸಿ ಯ ನೇಮಕಾತಿ. (2ನೇ ಕರೆ).	2500.00	6 Months	50,000/-

ವೇಳಾಪಟ್ಟಿ: 1. ಕೆಪಿಪಿ ಪೋರ್ಟಲ್ ಮುಖಾಂತರ ಪೂರ್ವ–ಬಿಡ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 25.03.2025 ರಂದು ಸಂಜೆ 17.30 ಗಂಟೆಯವರೆಗೆ.** 2. ಪೂರ್ವ ಬಿಡ್ ಸಭೆ: ಸಿಇ & ಸಿಜಿಎಂ (ಟೆಕ್), ಬಿಎಸ್‌ಡಬ್ಲ್ಯೂಎಂಎಲ್, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು ಕಚೇರಿಯಲ್ಲಿ **ದಿನಾಂಕ: 26.03.2025 ರಂದು ಸಂಜೆ 15.00 ಗಂಟೆಯವರೆಗೆ.** 3. ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 02.04.2025 ರಂದು ಸಂಜೆ 16.00 ಗಂಟೆಯವರೆಗೆ.** 4. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 03.04.2025 ರಂದು ಸಂಜೆ 16.30 ಗಂಟೆಯವರೆಗೆ.** 5. ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ತಾಂತ್ರಿಕವಾಗಿ ಅರ್ಹ ಬಿಡ್‌ದಾರರಿಗೆ ತಿಳಿಸಲಾಗುವುದು.

1. ತನ್ನ ನಿಯಂತ್ರಣ ಮೀರಿದ ವ್ಯವಸ್ಥೆಯ ವೈಫಲ್ಯದಿಂದ ಉಂಟಾಗುವ ಯಾವುದೇ ವಿಳಂಬಗಳಿಗೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳ ಬಗ್ಗೆ ಟೆಂಡರ್‌ದಾರರಿಗೆ ತಿಳಿಸಲು ವ್ಯವಸ್ಥೆಯು ಪ್ರಯತ್ನಿಸಿದರೂ, ಟೆಂಡರ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ. ಟೆಂಡರ್‌ಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್ ಅನ್ನು ಪರಿಶೀಲಿಸುವುದು ಟೆಂಡರ್‌ದಾರರ ಜವಾಬ್ದಾರಿಯಾಗಿದೆ, ಸಹಾಯವಾಣಿಯ ಇ–ಮೇಲ್ ವಿಳಾಸ hphelpdesk.blr@intarvo.com. ಕೆಪಿಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆಗಳು: 080–22371090/22373788. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಟೆಂಡರ್‌ದಾರರು ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಬೇಕು. ಇಂಟರ್‌ನೆಟ್ ಸಂಪರ್ಕ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಕೆಪಿಪಿ ಪೋರ್ಟಲ್ ಪ್ರವೇಶಿಸಲಾಗದಿದ್ದರೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ.
2. ಯಾವುದೇ ತಿದ್ದುಪಡಿ / ಅನುಬಂಧವನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–2, ಬಿಎಸ್‌ಡಬ್ಲ್ಯೂಎಂಎಲ್
ವಾಸಾಸಂಇ/ವಾ.ಪ್ರ/5751
ಶಿರಡಿ ಸಾಯಿ/2024–25

ನೂತನ ನಾಯಕ ರಜತ್ ಪಾಟೀದಾರ್ ಬೆನ್ನುತಟ್ಟಿದ ಕೊಹ್ಲಿ • ಬಿಸಿಲನ್ನು ಲೆಕ್ಕಿಸದೇ ಅಭಿಮಾನಿಗಳ ಲಗ್ಗೆ

ಚಿನ್ನಸ್ವಾಮಿ ಅಂಗಳದಲ್ಲಿ ಭೋರ್ಗರೆದ ಆರ್‌ಸಿಬಿ ಆರ್ಮಿ!

ಪ್ರಜಾವಾಣಿ ವಾರ್ತೆ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ 'ಆರ್‌ಸಿಬಿ ಅನ್‌ಬಾಕ್ಸ್' ಕಾರ್ಯಕ್ರಮದಲ್ಲಿ ಆರ್‌ಸಿಬಿ ಬೆಂಗಳೂರು ತಂಡದ ಆಟಗಾರ ವಿರಾಟ್ ಕೊಹ್ಲಿ ನೂತನ ನಾಯಕ ನೇಮಕಗೊಂಡಿರುವ ನಾಯಕ ರಜತ್ ಪಾಟೀದಾರ್‌ಗೆ ಸ್ಮರಣಿಕೆ ನೀಡಿದರು. ತಂಡದ ಸಹ ಆಟಗಾರರು ಹಾಜರಿದ್ದರು (ಎಡಚಿತ್ರ). ಅಭಿಮಾನಿಗಳ ಸಂಭ್ರಮ ಪ್ರಜಾವಾಣಿ ಚಿತ್ರ/ಕೃಷ್ಣ ಕುಮಾರ್ ಪಿ.ಎಸ್.

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ಸೇರಿದ್ದ ಅಭಿಮಾನಿಗಳ ಜಯಘೋಷದ ಭೋರ್ಗರೆತಕ್ಕೆ ವಿರಾಟ್ ಕೊಹ್ಲಿ ಕೂಡ ಅರೆಕ್ಷಣ ಮಾತು ಮರೆತರು.

ಇಲ್ಲಿ ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ 'ಅನ್‌ಬಾಕ್ಸ್' ಕಾರ್ಯಕ್ರಮದಲ್ಲಿ ಕಿಕ್ಕಿರಿದು ಸೇರಿದ್ದ 'ಟ್ವೆಲ್ತ್ ಮ್ಯಾನ್ ಆರ್ಮಿ' ಖ್ಯಾತವಾಗಿರುವ ಅಭಿಮಾನಿಗಳ ಬಳಗವು 'ಕೆಂಪು ಸಮುದ್ರ'ದಂತೆ ಕಂಡಿತು. ಜನರ ಘೋಷಣೆಗಳ ನಡುವೆಯೇ ಮಾತು ಆರಂಭಿಸಿದ ಕೊಹ್ಲಿ, 'ರಜತ್ ಪಾಟೀದಾರ್ ಅವರು ಈ ತಂಡವನ್ನು ದೀರ್ಘ ಕಾಲದವರೆಗೆ ಮುನ್ನಡೆಸುವರು. ಅವರಲ್ಲಿ ಅಪಾರ ಪ್ರತಿಭೆ ಇದೆ. ಅವರು ಅಮೋಘವಾದ ಯಶಸ್ಸು ತಂದುಕೊಡುವರು' ಎಂದು ಶುಭ ಹಾರೈಸಿದರು. ರಜತ್ ಅವರಿಗೆ ಸ್ಮರಣ ಫಲಕವನ್ನೂ ನೀಡಿದರು.

'ನಾನು ಹದಿನೆಂಟು ವರ್ಷಗಳಿಂದ ಈ ತಂಡದಲ್ಲಿದ್ದೇನೆ. ಇದು ಅದ್ಭುತವಾದ ಊರು. ಅಭಿಮಾನಿಗಳ ಪ್ರೀತಿ ಅಮೋಘವಾದದ್ದು. ಈ ಬಾರಿ ನಮ್ಮ ತಂಡ ಉತ್ತಮವಾಗಿದೆ. ಉತ್ತಮ ಪ್ರತಿಭಾವಂತರು ಇದ್ದಾರೆ. ಅವರೊಂದಿಗೆ ಈ ಋತುವಿನಲ್ಲಿ ಕಣಕ್ಕಿಳಿಯಲು ಉತ್ಸುಕನಾಗಿರುವೆ' ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ರಜತ್, 'ವಿಶ್ವದಲ್ಲಿ ದೊಡ್ಡ ಮತ್ತು ಜನಪ್ರಿಯ ಫ್ರಾಂಚೈಸಿಗಳಲ್ಲಿ ಒಂದಾಗಿರುವ ಆರ್‌ಸಿಬಿಯ ಅಭಿಮಾನಿಗಳ ಪ್ರೀತಿಗೆ ಸೋತಿದ್ದೇನೆ. ನನ್ನ ಸುತ್ತಲೂ ಉತ್ತಮ ಜನರು ಇದ್ದಾರೆ. ನನ್ನ ಮೇಲೆ ವಿಶ್ವಾಸವಿಟ್ಟು ಪ್ರೀತಿಯ ಧಾರೆ ಹರಿಸುತ್ತಿರುವ ಅಭಿಮಾನಿಗಳಿಗೆ ನಾನು ಋಣಿ. ನಮ್ಮ ಸಂಪೂರ್ಣ ಸಾಮರ್ಥ್ಯ ವಿನಿಯೋಗಿಸುತ್ತೇವೆ. ಶ್ರೇಷ್ಠ ಸಾಧನೆ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುವೆ' ಎಂದರು.

ಚೆಂಡುಗಳ ಕಾಣಿಕೆ

ಮಧ್ಯಾಹ್ನದ ಬಿರುಬಿಸಿಲನ್ನೂ ಲೆಕ್ಕಿಸದ ಜನರು ಕ್ರೀಡಾಂಗಣದ ಗೇಟ್‌ಗಳ ಹೊರಗೆ ಸಾಲುಗಟ್ಟಿದ್ದರು. ಪ್ರಯಾಸಪಟ್ಟು ಒಳಬಂದು ಬಿಸಿಲಲ್ಲಿಯೇ ಕುಳಿತು ತಮ್ಮ ನೆಚ್ಚಿನ ಅಟಗಾರರನ್ನು ಕಣ್ತುಂಬಿಕೊಂಡರು. ಸುಮಾರು 4 ಗಂಟೆಗೆ ಆರ್‌ಸಿಬಿ ಆಟಗಾರರು ಕ್ರೀಡಾಂಗಣದಲ್ಲಿದ್ದ ನೆಟ್ಸ್‌ನಲ್ಲಿ ಅಭ್ಯಾಸಕ್ಕೆ ಬರುತ್ತಿದ್ದಂತೆಯೇ ಅಭಿಮಾನಿಗಳ ಉತ್ಸಾಹ ಇಮ್ಮಡಿಸಿತು. ಡಿಜೆ ಸಂಗೀತದ ಸದ್ದು ಮೀರಿಸುವ ಮಟ್ಟಕ್ಕೆ ಪ್ರೇಕ್ಷಕರ ಗ್ಯಾಲರಿಯಿಂದ ಕೇಕೆ. ಚಪ್ಪಾಳೆ ಪ್ರತಿಧ್ವನಿಸಿದವು.

ಅದರಲ್ಲೂ ವಿರಾಟ್ ಬ್ಯಾಟ್ ಹಿಡಿದು ನೆಟ್ಸ್‌ಗೆ ಬಂದಾಗ ಅಭಿಮಾನಿಗಳ ಸಂಭ್ರಮ ಮೇರೆ ಮೀರಿತು. ಇದರಿಂದ ಉತ್ತೇಜಿತರಾದ ವಿರಾಟ್ ಭರ್ಜರಿ ಹೊಡೆತಗಳನ್ನು ಆಡಿದರು. ಚೆಂಡು ಸ್ಟ್ಯಾಂಡ್‌ಗಳಿಗೆ ಹೋಗಿ ಬೀಳತೊಡಗಿತು. ಚೆಂಡನ್ನು ಹಿಡಿತಕ್ಕೆ ಪಡೆಯಲು ಅಭಿಮಾನಿಗಳ ಸಾಲಿನಲ್ಲಿ ಪೈಪೋಟಿ ಆರಂಭವಾಯಿತು.

ವಿಂಡೀಸ್ ಮೂಲದ ಆಟಗಾರ ರೊಮಾರಿಯೊ ಶೆಫರ್ಡ್ ಕೂಡ ಅಭ್ಯಾಸಕ್ಕಿಳಿದರು. ಅವರು ಹೊಡೆದ ಎರಡು ದೊಡ್ಡ ಸಿಕ್ಸರ್ ಸಿಡಿಸಿದರು. ಚೆಂಡು ಕ್ರೀಡಾಂಗಣದ ಚಾವಣಿಗೆ ಬಡಿದು ಮರಳಿತು. ಅಭ್ಯಾಸದ ನಂತರ ತಂಡದ ಎಲ್ಲ ಆಟಗಾರರೂ ಕ್ರೀಡಾಂಗಣದಲ್ಲಿ ಒಂದು ಸುತ್ತು ಹಾಕಿದರು. ಈ ಸಂದರ್ಭದಲ್ಲಿ ಆರ್‌ಸಿಬಿ ಒಕ್ಕಣೆ ಇದ್ದ ಚೆಂಡುಗಳನ್ನು ಅಭಿಮಾನಿಗಳತ್ತ ತೂರಿದರು. ಕೆಲವರಿಗೆ ಹಸ್ತಾಕ್ಷರ ನೀಡಿದರು. ಮತ್ತಷ್ಟು ಜನರೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಂಡರು.

ಹ್ಯಾಪಿ ಬರ್ತಡೇ ಅಪ್ಪು....

ಸದಾ ಕ್ರಿಕೆಟ್ ಧ್ಯಾನಿಸುವ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕರ್ನಾಟಕದ ಬಾವುಟಗಳು ನಲಿದವು. ಕನ್ನಡ ಗೀತೆಗಳ ಕಲರವ ಪ್ರತಿಧ್ವನಿಸಿತು.

ಕನ್ನಡಿಗರ ಕಣ್ಮಣಿ ದಿವಂಗತ 'ಅಪ್ಪು' ಪುನೀತ್ ರಾಜ್ ಕುಮಾರ್ ನೆನಪುಗಳು ಸಾಲುಗಟ್ಟಿದವು. ಸೋಮವಾರ ಅವರ ಜನ್ಮದಿನವೂ ಆಗಿದ್ದರಿಂದ ಅವರು ಅಭಿನಯಿಸಿದ್ದ ಚಿತ್ರದ ಹಾಡುಗಳ ಮೂಲಕ ಅವರ ಜನ್ಮದಿನಕ್ಕೆ ಶುಭ ಕೋರಲಾಯಿತು. ಅರೆಕ್ಷಣ ಅಭಿಮಾನಿಗಳ ಕಣ್ಣಂಚು ತೇವವಾದವು. ಗಣ್ಯರ ಗ್ಯಾಲರಿಯಲ್ಲಿದ್ದ ಶಿವರಾಜ್ ಕುಮಾರ್ ಕೂಡ ಭಾವುಕರಾದಂತೆ ಕಂಡರು. ಟಿಮಿ ಟ್ರಂಪೆಟ್, ಸಾವರಿ ಬ್ಯಾಂಡ್, ಬೆಸ್ಟ್ ಕೆಪ್ಟ್ ಸೀಕ್ರೆಟ್ ಬ್ಯಾಂಡ್, ಆಲ್ ಓಕೆ ರ್‍ಯಾಪರ್ ಮತ್ತು ಹನುಮಾನ್‌ಕೈಂಡ್ ಅವರ ಸಂಗೀತ ಕಾರ್ಯಕ್ರಮಗಳು ಗಮನ ಸೆಳೆದವು. ಐಶ್ವರ್ಯಾ ರಂಗರಾಜನ್ ಅವರು, ಪುನೀತ್ ರಾಜಕುಮಾರ್, ಶಿವರಾಜ್ ಕುಮಾರ್ ಮತ್ತು ಶಂಕರ್ ನಾಗ್ ಅವರ ಅಭಿನಯದ ಚಿತ್ರಗಳ ಹಾಡುಗಳನ್ನು ಹಾಡಿದರು. ಕೊನೆಯಲ್ಲಿ ಸಂಚೀತ್ ಹೆಗಡೆ ಅವರ ಹಾಡುಗಳೂ ರಂಗೇರಿಸಿದವು.

ಸ್ವಿಸ್ ಓಪನ್ ಇಂದಿನಿಂದ ಕಣದಲ್ಲಿ ಸಿಂಧು, ಲಕ್ಷ್ಯ ಸೇನ್

ಪಿ.ವಿ. ಸಿಂಧು

ಬಾಸೆಲ್ (ಪಿಟಿಐ): ಒಲಿಂಪಿಯನ್ ಪಿ.ವಿ. ಸಿಂಧು ಮತ್ತು ಲಕ್ಷ್ಯ ಸೇನ್ ಅವರು ಮಂಗಳವಾರ ಇಲ್ಲಿ ಆರಂಭವಾಗಲಿರುವ ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ತಮ್ಮ ಲಯಕ್ಕೆ ಮರಳುವ ಭರವಸೆಯಲ್ಲಿದ್ದಾರೆ. 250,000 ಅಮೆರಿಕನ್ ಡಾಲರ್ ಬಹುಮಾನ ಮೊತ್ತ ಹೊಂದಿರುವ ಟೂರ್ನಿಯ ಮಹಿಳಾ ವಿಭಾಗದಲ್ಲಿ ಭಾರತದ ಸಿಂಧು, ಮಾಳವಿಕಾ ಬನ್ಸೋದ್ ಅವರು ಕಣಕ್ಕಿಳಿಯಲಿದ್ದಾರೆ

ಪುರುಷರ ವಿಭಾಗದಲ್ಲಿ ಲಕ್ಷ್ಯ ಸೇನ್ ಮತ್ತು 2016ರಲ್ಲಿ ಸ್ವಿಸ್ ಓಪನ್ ಚಾಂಪಿಯನ್ ಆಗಿದ್ದ ಎಚ್.ಎಸ್. ಪ್ರಣಯ್ ಕೂಡ ಇಲ್ಲಿ ಭಾಗವಹಿಸಲಿದ್ದಾರೆ. ಇದು ಬಿಡಬ್ಲ್ಯುಎಫ್ ಸೂಪರ್ 300 ಟೂರ್ನಿಯಾಗಿದೆ.

2022ರ ಆವೃತ್ತಿಯ ಚಾಂಪಿಯನ್ ಆಗಿದ್ದ ಸಿಂಧು ಅವರು ಕಳೆದ ವಾರ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಿಂದ ಮೊದಲ ಸುತ್ತಿನಲ್ಲೇ ನಿರ್ಗಮಿಸಿದ್ದರು. ಆ ಟೂರ್ನಿಯಲ್ಲಿ ಮಾಳವಿಕಾ ಅವರು ಸಿಂಗಪುರದ ಯಾವೊ ಜಿಯಾ ಮಿನ್ನಿ ವಿರುದ್ಧ ಗೆಲುವು ಸಾಧಿಸಿ, ಭರವಸೆ ಮೂಡಿಸಿದ್ದರು.ಲಕ್ಷ್ಯ ಅವರು ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಕೂದಲೆಳೆಯ ಅಂತರದಲ್ಲಿ ಕಂಚಿನ ಪದಕ ತಪ್ಪಿಸಿಕೊಂಡಿದ್ದರು.ಆಲ್ ಇಂಗ್ಲೆಂಡ್‌ನಲ್ಲಿ ಪ್ರಣಯ್ ಮತ್ತು ಲಕ್ಷ್ಯ ಕೂಡ ಪ್ರಶಸ್ತಿ ಜಯಿಸುವಲ್ಲಿ ಯಶಸ್ವಿಯಾಗಿರಲಿಲ್ಲ. ಭಾರತದ ಬ್ಯಾಡ್ಮಿಂಟನ್ ಆಟಗಾರರು ಮೊದಲಿನಿಂದಲೂ ಸ್ವಿಸ್ ಓಪನ್‌ನಲ್ಲಿ ಉತ್ತಮ ಸಾಧನೆ ಮಾಡಿದ ದಾಖಲೆಗಳು ಇವೆ. ಸಿಂಧು, ಕೆ. ಶ್ರೀಕಾಂತ್, ಸೈನಾ ನೆಹ್ವಾಲ್ ಮತ್ತು ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ಮತ್ತು ಚಿರಾಗ್ ಶೆಟ್ಟಿ ಜೋಡಿಯು ಇಲ್ಲಿ ಚಾಂಪಿಯನ್ ಆಗಿದ್ದರು.

ವಿಶೇಷ ಒಲಿಂಪಿಕ್ಸ್ ಪದಕ ವಿಜೇತರನ್ನು ಕೇಂದ್ರ ಕ್ರೀಡಾ ಖಾತೆ ರಾಜ್ಯ ಸಚಿವೆ ರಕ್ಷಾ ಖಡ್ಸೆ ಸನ್ಮಾನಿಸಿದರು ಚಿತ್ರ:ಎಕ್ಸ್

ವಿಶೇಷ ಒಲಿಂಪಿಕ್ಸ್ ಪದಕ ವಿಜೇತರಿಗೆ ಸನ್ಮಾನ

ನವದೆಹಲಿ (ಪಿಟಿಐ): ವಿಶೇಷ ಚೇತನರ ಒಲಿಂಪಿಕ್ಸ್ ವಿಶ್ವ ಚಳಿಗಾಲದ ಕ್ರೀಡೆಗಳಲ್ಲಿ 33 ಪದಕಗಳನ್ನು ಗೆದ್ದು ದೇಶಕ್ಕೆ ಹೆಮ್ಮೆ ಮೂಡಿಸಿದ ಭಾರತ ತಂಡದ ಸ್ಪರ್ಧಿಗಳನ್ನು ಸೋಮವಾರ ಇಲ್ಲಿ ನಡೆದ ಸಮಾರಂಭದಲ್ಲಿ ಕ್ರೀಡಾ ಸಚಿವಾಲಯವು ಸನ್ಮಾನಿಸಿತು.

ಇಟಲಿಯ ಟ್ಯೂರಿನ್‌ನಲ್ಲಿ ಇತ್ತೀಚೆಗೆ ನಡೆದ ಈ ಕೂಟದಲ್ಲಿ ಭಾರತದ ಸ್ಪರ್ಧಿಗಳು ಎಂಟು ಚಿನ್ನ, 18 ಬೆಳ್ಳಿ ಮತ್ತು ಏಳು ಕಂಚಿನ ಪದಕಗಳನ್ನು ಗೆದ್ದುಕೊಂಡಿದ್ದರು.

'ಈ ವಿಶೇಷ ಒಲಿಂಪಿಕ್ಸ್ ಬರೇ ಕ್ರೀಡಾಕೂಟ ಮಾತ್ರವಲ್ಲ, ಇದು ಒಳಗೊಳ್ಳುವಿಕೆ ಮತ್ತು ಸಬಲೀಕರಣದ ನಿಟ್ಟಿನಲ್ಲಿ ನಡೆದ ಆಂದೋಲನ' ಎಂದು ಕೇಂದ್ರ ಕ್ರೀಡಾ ಖಾತೆ ರಾಜ್ಯ ಸಚಿವೆ ರಕ್ಷಾ ಖಡ್ಸೆ ಅವರು ಅಥ್ಲೀಟುಗಳನ್ನು ಉದ್ದೇಶಿಸಿ ಮಾತನಾಡಿದರು.

ವಿಶೇಷ ಒಲಿಂಪಿಕ್ಸ್ ಭಾರತ್‌ನ ಅಧ್ಯಕ್ಷೆ ಮಲ್ಲಿಕಾ ನಡ್ಡಾ ಅವರು ಅಥ್ಲೀಟುಗಳಿಗೆ ನೀಡಲಾಗುವ ನಗದು ಬಹುಮಾನ ಹೆಚ್ಚಿಸಲು ಪ್ರಯತ್ನ ನಡೆಸಿದ ರಕ್ಷಾ ಅವರಿಗೆ ಧನ್ಯವಾದ ಹೇಳಿದರು.

ಪರಿಷ್ಕೃತ ನಿಯಮದಂತೆ, ಚಿನ್ನ ಗೆಲ್ಲುವ ಅಥ್ಲೀಟುಗಳಿಗೆ ₹20ಲಕ್ಷ, ಬೆಳ್ಳಿ ಪದಕ ವಿಜೇತರಿಗೆ ₹14 ಲಕ್ಷ ಮತ್ತು ಕಂಚಿನ ಪದಕ ವಿಜೇತರಿಗೆ ₹8 ಲಕ್ಷ ನೀಡಲಾಗುತ್ತಿದೆ. ಈ ಹಿಂದೆ ಪ್ಯಾರಾ ಅಥ್ಲೀಟುಗಳಿಗೆ ನೀಡಲಾಗುತ್ತಿದ್ದ ನಗದು ಬಹುಮಾನ ಇದೀಗ ಬಹಳಷ್ಟು ಏರಿಕೆ ಕಂಡಿದೆ.

ವಿಶೇಷ ಚೇತನರ ಒಲಿಂಪಿಕ್ಸ್ ಅಥ್ಲೀಟುಗಳನ್ನು ಉತ್ತೇಜಿಸಲು ಕ್ರೀಡಾ ಸಚಿವಾಲಯ 11 ಕ್ರೀಡೆಗಳಲ್ಲಿ ರಾಷ್ಟ್ರೀಯ ಶಿಬಿರ ನಡೆಸುತ್ತಿದೆ. ಪರಿಕರಗಳ ಖರೀದಿಗೆ ನೆರವು ನೀಡುತ್ತಿದೆ. ಪ್ರಯಾಣ ವೆಚ್ಚ, ವಾಸ್ತವ್ಯ ಮತ್ತು ಊಟದ ವೆಚ್ಚ ಭರಿಸುತ್ತಿದೆ.

ಕ್ಯಾಪಿಟಲ್ಸ್‌ಗೆ ಡುಪ್ಲೆಸಿ ಉಪನಾಯಕ

ಡುಪ್ಲೆಸಿ

ನವದೆಹಲಿ (ಪಿಟಿಐ): ದಕ್ಷಿಣ ಆಫ್ರಿಕಾದ ದಿಗ್ಗಜ ಬ್ಯಾಟರ್ ಫಾಫ್ ಡುಪ್ಲೆಸಿ ಅವರನ್ನು ಡೆಲ್ಲಿ ಕ್ಯಾಪಿಟಲ್ಸ್ ತಂಡ ಇದೇ 22ರಂದು ಆರಂಭವಾಗುವ ಐಪಿಎಲ್‌ನಲ್ಲಿ ಆಡುವ ತನ್ನ ತಂಡಕ್ಕೆ ಉಪನಾಯಕನಾಗಿ ಸೋಮವಾರ ನೇಮಕ ಮಾಡಿದೆ.

ಆಲ್‌ರೌಂಡರ್ ಅಕ್ಷರ್ ಪಟೇಲ್ ಅವರನ್ನು ಕಳೆದ ಶುಕ್ರವಾರ ನಾಯಕನಾಗಿ ನೇಮಕ ಮಾಡಲಾಗಿತ್ತು. 40 ವರ್ಷ ವಯಸ್ಸಿನ ಡುಪ್ಲೆಸಿ ಈ ಹಿಂದೆ ಮೂರು ವರ್ಷ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಅವರು ಮುನ್ನಡೆಸಿದ್ದರು.

2024ರ ಮೆಗಾ ಆಕ್ಷನ್‌ನಲ್ಲಿ ಆರ್‌ಸಿಬಿ ಅವರನ್ನು ರೀಟೇನ್ ಮಾಡಿಕೊಂಡಿರಲಿಲ್ಲ.ಡೆಲ್ಲಿ ಕ್ಯಾಪಿಟಲ್ಸ್ ತಂಡ ಅವರನ್ನು ಬಿಡ್ ವೇಳೆ ₹2 ಕೋಟಿ ಕೊಟ್ಟು ತನ್ನ ತೆಕ್ಕೆಗೆ ಪಡೆದಿತ್ತು.

ಇಂಡಿಯನ್ಸ್ ವೆಲ್ಸ್ ಪ್ರಶಸ್ತಿ ಗೆದ್ದ ಡ್ರೇಪರ್

ಮಾಸ್ಟರ್ಸ್ 1000 ಮಟ್ಟದ ಮೊದಲ ಪ್ರಶಸ್ತಿಗೆ ಪಾತ್ರ, ಅಗ್ರ 10ರೊಳಗೆ ಸ್ಥಾನ

ಟ್ರೋಫಿಯೊಂದಿಗೆ ಜಾಕ್ ಡ್ರೇಪರ್ ಎಎಫ್‌ಪಿ ಚಿತ್ರ

ಇಂಡಿಯನ್ಸ್ ವೆಲ್ಸ್ (ಎಪಿ): ಬ್ರಿಟನ್‌ನ ಜಾಕ್ ಡ್ರೇಪರ್ ಅವರು 6–2, 6–2 ರಿಂದ ಡೆನ್ಮಾರ್ಕ್‌ನ ಹೋಲ್ಗರ್ ರೂನ್ ಅವರನ್ನು ನೇರ ಸೆಟ್‌ಗಳಿಂದ ಹಿಮ್ಮೆಟ್ಟಿಸಿ ಭಾನುವಾರ ಬಿಎನ್‌ಪಿ ಪರಿಬಾಸ್ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು. ಆ ಮೂಲಕ ಎರಡು ಮೈಲಿಗಲ್ಲುಗಳನ್ನೂ ಸಾಧಿಸಿದರು.

ಇದು, 23 ವರ್ಷ ವಯಸ್ಸಿನ ಡ್ರೇಪರ್ ಅವರಿಗೆ 'ಮಾಸ್ಟರ್ಸ್ 1000' ಮಟ್ಟದ ಮೊದಲ ಪ್ರಶಸ್ತಿ. ಇದರ ಜೊತೆಗೆ ಅವರು ಎಟಿಪಿ ರ್‍ಯಾಂಕಿಂಗ್‌ನಲ್ಲಿ ಮೊದಲ ಬಾರಿ ಅಗ್ರ 10ರ ಒಳಗೆ ಸ್ಥಾನ ಪಡೆದರು. ಅವರು ಹೊಸದಾಗಿ ಬಿಡುಗಡೆಯಾಗುವ ಕ್ರಮಾಂಕಪಟ್ಟಿಯಲ್ಲಿ 14ನೇ ಕ್ರಮಾಂಕದಿಂದ ಏಳನೇ ಕ್ರಮಾಂಕಕ್ಕೆ ಬಡ್ತಿ ಪಡೆಯಲಿದ್ದಾರೆ.

ಕ್ಯಾಲಿಫೋನಿಯಾದ ಈ ಹಾರ್ಡ್ ಕೋರ್ಟ್ ಟೂರ್ನಿಯಲ್ಲಿ ಡ್ರೇಪರ್ 13ನೇ ಶ್ರೇಯಾಂಕ ಪಡೆದಿದ್ದರು. ಸಿಡಿಸಿದ ವಿನ್ನರ್‌ಗಳ ಪ್ರಮಾಣ 21–7. ಡ್ರೇಪರ್ ಅವರಿಂದ ಸ್ವಯಂಕೃತ ತಪ್ಪುಗಳೂ ತುಂಬಾ ಕಡಿಮೆ ಇದ್ದವು. ಈ ಎಡಗೈ ಆಟಗಾರ 10 ಏಸ್‌ಗಳನ್ನು ಹಾಕಿದರು, ಅಷ್ಟೇ ಅಲ್ಲ, 21 ವರ್ಷ ವಯಸ್ಸಿನ ರೂನ್‌ಗೆ ಒಮ್ಮೆಯೂ ಬ್ರೇಕ್ ಪಾಯಿಂಟ್ ಪಡೆಯಲು ಅವಕಾಶ ನೀಡಲಿಲ್ಲ.

ಕಳೆದ ಸೆಪ್ಟೆಂಬರ್‌ನಲ್ಲಿ ನಡೆದ ಅಮೆರಿಕ ಓಪನ್‌ನಲ್ಲಿ ಡ್ರೇಪರ್ ಸೆಮಿಫೈನಲ್ ತಲುಪಿದ್ದರು.

2009ರಲ್ಲಿ, ಆಗ 22 ವರ್ಷ ವಯಸ್ಸಿನ ರಫೆಲ್ ನಡಾಲ್ (ಸ್ಪೇನ್) ಫೈನಲ್‌ನಲ್ಲಿ ತಮಗಿಂತ ಒಂದು ವರ್ಷ ಕಿರಿಯರಾಗಿದ್ದ ಆ್ಯಂಡಿ ಮರ್‍ರೆ (ಬ್ರಿಟನ್) ಅವರನ್ನು ಸೋಲಿಸಿದ ನಂತರ, ಇದೇ ಮೊದಲ ಬಾರಿ 23 ವರ್ಷದೊಳಗಿನ ಆಟಗಾರರಿಬ್ಬರು ಫೈನಲ್‌ನಲ್ಲಿ ಎದುರಾಗಿದ್ದರು.

ಇದಕ್ಕೆ ಮೊದಲು, 17 ವರ್ಷ ವಯಸ್ಸಿನ ಮಿಯೆರಾ ಆಂಡ್ರೀವಾ ಅವರು ಮಹಿಳಾ ಸಿಂಗಲ್ಸ್ ಫೈನಲ್ ಗೆದ್ದು ಸತತ ಎರಡನೇ ಮಾಸ್ಟರ್ಸ್ 1000 ಕಿರೀಟ ಧರಿಸಿದರು. ರಷ್ಯದ ಆಟಗಾರ್ತಿ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಅರಿನಾ ಸಬಲೆಂಕಾ (ಬೆಲರೂಸ್) ಅವರನ್ನು 2–6, 6–4, 6–3 ರಿಂದ ಸೋಲಿಸಿದರು.

ಫುಟ್‌ಬಾಲ್: ರೂಟ್ಸ್ ಎಫ್‌ಎಸ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೂಟ್ಸ್ ಎಫ್‌ಎಸ್ ತಂಡ ಎ ಡಿವಿಷನ್ ಲೀಗ್ ಪಂದ್ಯದಲ್ಲಿ ಸೋಮವಾರ 2–1 ಗೋಲುಗಳಿಂದ ಬೆಂಗಳೂರು ಸಿಟಿ ಎಫ್‌ಸಿ ತಂಡವನ್ನು ಸೋಲಿಸಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ರೂಟ್ಸ್ ತಂಡದ ಸಿದ್ಧಾರ್ಥ್ ಜಯಂತ್ (29ನೇ ನಿ.), ಕೀತ್ ಫೆರ್ನಾಂಡಿಸ್ (49ನೇ ನಿ.) ಗೋಲು ಗಳಿಸಿದರು.

ಬೆಂಗಳೂರು ಸಿಟಿ ತಂಡದ ಇರೂಯಿವಾಂಗ್ಬೆ ಡೈಮೆ (80 + 1ನೇ ನಿ.) ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಸ್ಪೈಪರ್ಸ್ ಎಫ್‌ಸಿ ತಂಡ 2–1 ಗೋಲುಗಳಿಂದ ಎಜಿಒಆರ್‌ಸಿ ತಂಡವನ್ನು ಸೋಲಿಸಿತು. ಸ್ನೈಪರ್ಸ್ ತಂಡದ ಅಮಲ್ ಸುರೇಶ್ (13ನೇ ನಿ.), ಅಭಿಲ್ ಎ. (46ನೇ ನಿ.) ಚೆಂಡನ್ನು ಗುರಿ ಸೇರಿಸಿದರು. ಎಜಿಒಆರ್‌ಸಿ ತಂಡದ ಜಾನ್ಸ್ ಆ್ಯಂಥೋಣಿ (16 ನೇ ನಿ.) ಗೋಲು ಹೊಡೆದರು.

ಕಬಡ್ಡಿ ವಿಶ್ವಕಪ್: ಅಧಿಕಾರಿಯಾಗಿ ಈಶ್ವರ

ಬೆಂಗಳೂರು: ಧಾರವಾಡದ ಈಶ್ವರ ಅಂಗಡಿ ಅವರು ಇದೇ 17ರಿಂದ 23ರವರೆಗೆ ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಯಲಿರುವ ಕಬಡ್ಡಿ ವಿಶ್ವಕಪ್ ಟೂರ್ನಿಗೆ ತಾಂತ್ರಿಕ ಅಧಿಕಾರಿಯಾಗಿ ನೇಮಕಗೊಂಡಿದ್ದು, ಶನಿವಾರ ತೆರಳಿದ್ದಾರೆ.

ಟೊರೆಂಟ್ ತೆಕ್ಕೆಗೆ ಟೈಟನ್ಸ್ ಒಡೆತನ

ನವದೆಹಲಿ (ಪಿಟಿಐ): ಐಪಿಎಲ್ ಫ್ರಾಂಚೈಸಿ ಆಗಿರುವ ಗುಜರಾತ್ ಟೈಟನ್ಸ್‌ನಲ್ಲಿ ಶೇ 67ರಷ್ಟು ಷೇರು ವಶಕ್ಕೆ ಪಡೆಯುವ ಪ್ರಕ್ರಿಯೆ ಪೂರ್ಣಗೊಳಿಸಿ ರುವುದಾಗಿ ಟೊರೆಂಟ್ ಗ್ರೂಪ್ ಸೋಮವಾರ ತಿಳಿಸಿದೆ.ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯೂ ಹಸಿರುನಿಶಾನೆ ತೋರಿದೆ.

2028ರ ಒಲಿಂಪಿಕ್ಸ್‌ಗೆ ಬಾಕ್ಸಿಂಗ್ ಸೇರ್ಪಡೆ ಖಚಿತ

ಕೋಸ್ಟಾ ನವಾರಿನೊ (ಗ್ರೀಸ್), (ಎಎಫ್‌ಪಿ): ಲಾಸ್ ಏಂಜಲಿಸ್‌ನಲ್ಲಿ ನಿಗದಿಯಾಗಿರುವ ಮುಂದಿನ ಒಲಿಂಪಿಕ್ಸ್‌ನಲ್ಲಿ ಬಾಕ್ಸಿಂಗ್ ಸೇರ್ಪಡೆಯಾಗಲಿದೆ ಎಂದು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಅಧ್ಯಕ್ಷ ಥಾಮಸ್ ಬಾಕ್ ಸೋಮವಾರ ತಿಳಿಸಿದ್ದಾರೆ.

ಹೊಸ ಬಾಕ್ಸಿಂಗ್ ಸಂಸ್ಥೆ ವರ್ಲ್ಡ್ ಬಾಕ್ಸಿಂಗ್‌ಗೆ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಮಾನ್ಯತೆ ನೀಡಿರುವುದರಿಂದ ಈ ನಿಟ್ಟಿನಲ್ಲಿದ್ದ ಅಡತಡೆಗಳು ನಿವಾರಣೆಯಾಗಿವೆ. ವರ್ಲ್ಡ್ ಬಾಕ್ಸಿಂಗ್‌ಗೆ ಮಾನ್ಯತೆ ನೀಡಲಾಗಿರುವುದರಿಂದ ಐಒಸಿಯ ಕಾರ್ಯಕಾರಿ ಮಂಡಳಿ 2028ರ ಕ್ರೀಡೆಗಳ ಪಟ್ಟಿಯಲ್ಲಿ ಬಾಕ್ಸಿಂಗ್ ಸೇರ್ಪಡೆಗೆ ಅನುಮೋದನೆ ನೀಡಿದೆ. ಒಲಿಂಪಿಕ್ಸ್‌ನಲ್ಲಿ ಬಾಕ್ಸಿಂಗ್ ನಡೆಸುವ ಕುರಿತಂತೆ ಇದ್ದ ಗೊಂದಲಗಳಿಗೆ ಈ ಮೂಲಕ ತೆರೆಬಿದ್ದಿದೆ.

ಬಾಕ್ಸಿಂಗ್ ಸೇರ್ಪಡೆಗೆ ಐಒಸಿಯ ಪೂರ್ಣ ಅಧಿವೇಶನದಲ್ಲಿ ಅಂಕಿತ ದೊರೆಯಬೇಕಾಗಿದೆ. ಆದರೆ ಇದು ಕೇವಲ ಔಪಚಾರಿಕ ಕ್ರಮ ಎಂದು ನಿರೀಕ್ಷಿಸಲಾಗಿದೆ.

ರಷ್ಯ ಮೂಲದ ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆಯ ಹಣಕಾಸು ನಿರ್ವಹಣೆ, ಆಡಳಿತ ಪಾರದರ್ಶಕವಾಗಿಲ್ಲ ಎಂದು ಐಒಸಿ ಅದರ ಮಾನ್ಯತೆ ಹಿಂಪಡೆದಿತ್ತು. 2021ರ ಟೋಕಿಯೊ ಒಲಿಂಪಿಕ್ಸ್ ಮತ್ತು ಕಳೆದ ವರ್ಷದ ಪ್ಯಾರಿಸ್ ಒಲಿಂಪಿಕ್ಸ್, ಅದಕ್ಕೆ ಮೊದಲು ಅರ್ಹತಾ ಟೂರ್ನಿಗಳನ್ನು ತಾನೇ ನಡೆಸಿತ್ತು.

ನಿಗದಿಯಂತೆ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಷಿಪ್: ಅಜಯ್

ನವದೆಹಲಿ (ಪಿಟಿಐ): ಮುಂಬರುವ ಮಹಿಳಾ ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್‌ಷಿಪ್ ನಿಗದಿತ ವೇಳಾಪಟ್ಟಿಯ ಪ್ರಕಾರ ನಡೆಯಲಿದೆ ಎಂದು ಬಾಕ್ಸಿಂಗ್ ಫೆಡರೇಷನ್ ಆಫ್ ಇಂಡಿಯಾದ (ಬಿಎಫ್‌ಐ) ಅಧ್ಯಕ್ಷ ಅಜಯ್ ಸಿಂಗ್ ಸ್ಪಷ್ಟಪಡಿಸಿದ್ದಾರೆ. ಈ ಚಾಂಪಿಯನ್‌ಷಿಪ್‌ನ ದಿನಾಂಕವನ್ನು ಪರಿಷ್ಕರಿಸಲಾಗಿದೆ ಎಂದು ಫೆಡರೇಶನ್‌ನ ಕಾರ್ಯದರ್ಶಿ ಹೇಳಿದ ಕೆಲವೇ ಗಂಟೆಗಳಲ್ಲಿ ಅಧ್ಯಕ್ಷರ ಸ್ಪಷ್ಟನೆ ಹೊರಬಿದ್ದಿದೆ. 2024ರ ಕೊನೆಯಿಂದ ಹಲವು ಬಾರಿ ಮುಂದೂಡಿಕೆ ಆಗಿರುವ ರಾಷ್ಟ್ರೀಯ ಚಾಂಪಿಯನ್‌ಷಿಪ್ ಮಾರ್ಚ್ 20ರಿಂದ 27ರವರೆಗೆ ಗ್ರೇಟರ್ ನೊಯ್ಡಾದಲ್ಲಿ ನಡೆಯಬೇಕಾಗಿದೆ. ಬಾಕ್ಸರ್‌ಗಳ ಸಂಖ್ಯೆ ತಿಳಿಸಲು ಮಾರ್ಚ್ 10 ಮತ್ತು ಹೆಸರು ತಿಳಿಸಲು 15 ಕೊನೆಯ ದಿನವಾಗಿತ್ತು. ಫೆಡರೇಷನ್ ಕಾರ್ಯದರ್ಶಿ ಹೇಮಂತ್ ಕಲಿಟ ಅವರು ಭಾನುವಾರ ಸಂಜೆ ಇ-ಮೇಲ್ ಕಳಿಸಿದ್ದು, ಸದಸ್ಯರ ವಿನಂತಿ ಮತ್ತು ಸಮಯದ ಕೊರತೆಯಿಂದ ಟೂರ್ನಿ ಮುಂದೂಡಲಾಗಿದೆ ಎಂದು ತಿಳಿಸಿದ್ದರು. ಕೆಲವು ರಾಜ್ಯಗಳು ಸಂಖ್ಯೆ ಮಾತ್ರ ನಮೂದಿಸಿವೆ. ಕೆಲವು ರಾಜ್ಯಗಳು ಹೆಸರು ಮಾತ್ರ ಕಳುಹಿಸಿವೆ ಎಂದು ಕಲಿಟ ಬರೆದ ಪತ್ರ ಸುದ್ದಿಸಂಸ್ಥೆಗೆ ಲಭ್ಯವಾಗಿದೆ. ಟೋಕಿಯೊ ಒಲಿಂಪಿಕ್ಸ್ ಪದಕ ವಿಜೇತೆ ಲವ್ಲಿನಾ ಬೋರ್ಗೋಹೈನ್, ವಿಶ್ವ ಚಾಂಪಿಯನ್ ನೀತು ಗಂಗಾಸ್ ಮತ್ತು ಕಾಮನ್‌ವೆಲ್ತ್ ಜಾಸ್ಮಿನ್ ಲಂಬೋರಿಯಾ ಅವರು ಹೆಸರು ನೀಡಿದ್ದವರಲ್ಲಿ ಪ್ರಮುಖರು. ಬಿಎಫ್‌ಐ, ಈ ರಾಷ್ಟ್ರೀಯ ಕೂಟಕ್ಕೆ 34 ರಾಜ್ಯಗಳಿಂದ ಸಂಖ್ಯೆಯನ್ನು, 25 ರಾಜ್ಯಗಳಿಂದ ಹೆಸರುಗಳನ್ನು ಸ್ವೀಕರಿಸಿದೆ ಎಂದು ಸಿಂಗ್ ಅವರು ತಿಳಿಸಿದ್ದಾರೆ.

16ರ ಸುತ್ತಿಗೆ ಸ್ಪೋರ್ಟಿಂಗ್, ಬೀಗಲ್ಸ್

ಬೆಂಗಳೂರು: ತೀವ್ರ ಹೋರಾಟದ ಪಂದ್ಯದಲ್ಲಿ ಬೆಂಗಳೂರು ಸ್ಪೋರ್ಟಿಂಗ್ ತಂಡ 47–45 ಅಂಕಗಳಿಂದ ಬೆಂಗಳೂರು ವ್ಯಾನ್‌ಗಾರ್ಡ್ ಬಿ.ಸಿ ತಂಡವನ್ನು ಸೋಲಿಸಿ ರಾಜ್ಯ ಯೂತ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ ಪ್ರಿಕ್ವಾರ್ಟರ್ ಫೈನಲ್ ತಲುಪಿತು.

ಬಸವನಗುಡಿಯ ಎಂಎನ್ ಕೃಷ್ಣರಾವ್ ಪಾರ್ಕ್ ಬ್ಯಾಸ್ಕೆಟ್‌ಬಾಲ್ ಅಂಕಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಈ ಪಂದ್ಯದ ಮಧ್ಯಂತರ ವೇಳೆಗೆ ಸ್ಕೋರ್ 23–23ರಲ್ಲಿ ಸಮನಾಗಿತ್ತು. ಸ್ಪೋರ್ಟಿಂಗ್ ಪರ ವಿಹಾನ್ (15 ಅಂಕ), ಸಾಯಿ (10) ಉತ್ತಮವಾಗಿ ಆಡಿದರೆ , ವ್ಯಾನ್‌ಗಾರ್ಡ್ ಪರ ಧ್ರುವ್ (13) ಗಮನ ಸೆಳೆದರು. ಇನ್ನೊಂದು ಪಂದ್ಯದಲ್ಲಿ ಸೌರವ್ ಅವರ 21 ಪಾಯಿಂಟ್‌ಗಳ ನೆರವಿನಿಂದ ಬೀಗಲ್ಸ್ 39–25 ರಿಂದ ಪಟ್ಟಾಭಿ ಕ್ರೀಡಾಕ್ಲಬ್ ತಂಡವನ್ನು ಮಣಿಸಿತು. ಪಟ್ಟಾಭಿ ಪರ ಮಾನಸ್ 18 ಅಂಕ ಗಳಿಸಿದರು. ಏಕಪಕ್ಷೀಯವಾಗಿದ್ದ ಇನ್ನೊಂದು ಪಂದ್ಯದಲ್ಲಿ ಪಿಪಿಸಿ ತಂಡ 51–11ರಿಂದ ಕೋಲಾರ ತಂಡವನ್ನು, ಹೆಬ್ಬಾಳ ಬಿ.ಸಿ. 31–14 ರಿಂದ ದೇವಾಂಗ ಬಿ.ಸಿ. ತಂಡವನ್ನು, ದ.ಕ. ಜಿಲ್ಲಾ ತಂಡ 39–22 ರಿಂದ ಮೌಂಟ್ಸ್ ಬಿ.ಸಿ. ತಂಡವನ್ನು ಮಣಿಸಿದವು.

ಬಾಲಕಿಯರ ವಿಭಾಗದಲ್ಲಿ ಬೆಂಗಳೂರು ಸ್ಪೋರ್ಟಿಂಗ್ ತಂಡ 22–17 ರಿಂದ ಬಿಸಿವೈಎ ತಂಡವನ್ನು, ವಿದ್ಯಾನಗರದ ಡಿವೈಇಎಸ್ ತಂಡ 43–12 ರಿದ ಹೊಸಕೋಟೆ ಬಿ.ಸಿ. ತಂಡವನ್ನು, ಹಾಸನ ಜಿಲ್ಲೆ 41–28 ಪಾಯಿಂಟ್‌ಗಳಿಂದ ರಾಜಮಹಲ್ ತಂಡವನ್ನು, ಬೀಗಲ್ಸ್ ಬಿ.ಸಿ. 42–10 ರಿಂದ ಬೆಳಗಾವಿ ಜಿಲ್ಲೆ ತಂಡವನ್ನು, ವಿಮಾನಪುರ ತಂಡ 26–9 ರಿಂದ ಪಟ್ಟಾಭಿ ಕ್ರೀಡಾ ಕ್ಲಬ್ ತಂಡವನ್ನು ಸೋಲಿಸಿ ಪ್ರಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದವು.

36 ಪ್ರಮುಖ ಆಟಗಾರರು ಭಾಗಿ

ರಾಷ್ಟ್ರೀಯ ಹಾಕಿ ಶಿಬಿರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ 36 ಪ್ರಮುಖ ಆಟಗಾರರನ್ನು ಒಳಗೊಂಡ ರಾಷ್ಟ್ರೀಯ ಹಾಕಿ ತಂಡದ ಶಿದಬಿರ ಸೋಮವಾರ ಇಲ್ಲಿನ ಭಾರತ ಕ್ರೀಡಾ ಪ್ರಾಧಿಕಾರ ಕೇಂದ್ರದಲ್ಲಿ ಆರಂಭವಾಯಿತು. ತಂಡದ ಇತ್ತೀಚಿನ ಪ್ರದರ್ಶನಕ್ಕೆ ಸಂಬಂಧಿಸಿ ಆತ್ಮಾವಲೋಕನಕ್ಕೆ ಶಿಬಿರದಲ್ಲಿ ಒತ್ತು ನೀಡಲಾಗುವುದು ಎಂದು ತಂಡದ ಮುಖ್ಯ ತರಬೇತುದಾರ ಪೀಟರ್ ಫುಲ್ಟನ್ ಹೇಳಿದರು.

ಶಿಬಿರ ಮಾರ್ಚ್ 28ರವರೆಗೆ ನಡೆಯಲಿದೆ. 'ಆಟಗಾರರಿಗೆ ಇದು ಬಿಡುವಿಲ್ಲದ ಋತುವಾಗಿದ್ದು, ಒಂದರ ಹಿಂದೆ ಒಂದರಂತೆ ಟೂರ್ನಿಗಳಿದ್ದು, ಉತ್ಕೃಷ್ಟ ಮಟ್ಟದ ಪಂದ್ಯಗಳಿದ್ದವು. ಈ ಶಿಬಿರದ ವೇಳೆ ನಮ್ಮ ಒತ್ತು ಫಿಟ್ನೆಸ್ ಮತ್ತು ಕಂಡಿಷನಿಂಗ್ ಬಗ್ಗೆ, ಇತ್ತೀಚಿನ ಪಂದ್ಯಗಳಲ್ಲಿ ತೋರಿದ ನಿರ್ವಹಣೆಯ ಆತ್ಮಾವಲೋಕನದ ಬಗ್ಗೆ ಇರಲಿದೆ' ಎಂದು ಫುಲ್ಟನ್ ಅವರ ಹೇಳಿಕೆಯನ್ನು ಹಾಕಿ ಇಂಡಿಯಾದ ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ.

'ನಮ್ಮ ಮುಂದಿನ ಪ್ರಯತ್ನವು, ಯುರೋಪ್‌ನಲ್ಲಿ ನಡೆಯಲಿರುವ ಪ್ರೊ ಲೀಗ್‌ನ ಮುಂದಿನ ಪಂದ್ಯಗಳಿಗೆ ತಂಡವನ್ನು ಸಜ್ಜುಗೊಳಿಸುವುದಾಗಿದೆ. ನಮ್ಮ ತಂಡದಲ್ಲಿರುವ ಹೊಸ ಪ್ರತಿಭೆಗಳು ಎಷ್ಟರ ಮಟ್ಟಿಗೆ ನಿರೀಕ್ಷೆಗೆ ತಕ್ಕ ಪ್ರದರ್ಶನ ನೀಡಲಿದೆ ಎಂಬ ಬಗ್ಗೆ ನನಗೆ ಕುತೂಹಲವಿದೆ' ಎಂದು ಹೇಳಿದ್ದಾರೆ.

ಪ್ರೊ ಲೀಗ್‌ನಲ್ಲಿ ಭಾರತ 15 ಪಾಯಿಂಟ್ಸ್ ಸಂಗ್ರಹಿಸಿದ್ದು, ಪ್ರಸ್ತುತ ಮೂರನೇ ಸ್ಥಾನದಲ್ಲಿದೆ. ಇಂಗ್ಲೆಂಡ್ ಮತ್ತು ಬೆಲ್ಜಿಯಂ ತಂಡಗಳು ತಲಾ 16 ಪಾಯಿಂಟ್ಸ್ ಕಲೆಹಾಕಿ ಮೊದಲ ಎರಡು ಸ್ಥಾನದಲ್ಲಿವೆ. ಶಿಬಿರದಲ್ಲಿರುವ ಪ್ರಮುಖ ಆಟಗಾರರು:

ಗೋಲ್‌ಕೀಪರ್ಸ್: ಕೃಷನ್ ಬಹಾದೂರ್ ಪಾಠಕ್, ಪವನ್, ಸೂರಜ್ ಕರ್ಕೇರಾ, ಮೋಹಿತ್ ಹೊನ್ನೇನಹಳ್ಳಿ, ಶಶಿಕುಮಾರ್. ಡಿಫೆಂಡರ್ಸ್: ಜರ್ಮನ್‌ಪ್ರೀತ್ ಸಿಂಗ್, ಅಮಿತ್ ರೋಹಿದಾಸ್, ಸುಮಿತ್, ಸಂಜಯ್, ಜುಗರಾಜ್ ಸಿಂಗ್, ಅಮನದೀಪ್ ಲಾಕ್ರಾ, ನನೀಲಮ್ ಸಂಜೀಪ್ ಕ್ಸೆಸ್, ವರುಣ್ ಕುಮಾರ್, ಯಶದೀಪ್ ಸಿವಾಚ್.

ಮಿಡ್ ಫೀಲ್ಡರ್ಸ್: ರಾಜಕುಮಾರ್ ಪಾಲ್, ಶಂಶೇರ್ ಸಿಂಗ್, ಮನ್‌ಪ್ರೀತ್ ಸಿಂಗ್, ಹಾರ್ದಿಕ್ ಸಿಂಗ್, ವಿವೇಕ್ ಸಾಗರ ಪ್ರಸಾದ್, ನೀಲಕಂಠ ಶರ್ಮಾ, ಮೊಯಿರಂಗ್ತೆಮ್ ರವಿಚಂದ್ರ ಸಿಂಗ್, ಮೊಹಮ್ಮದ್ ರಾಹಿಲ್ ಮೌಸೀನ್, ವಿಷ್ಣುಕಾಂತ ಸಿಂಗ್, ರಾಜೀಂದರ್ ಸಿಂಗ್, ಪೂವಣ್ಣ ಸಿ.ಬಿ., ಫಾರ್ವರ್ಡ್ಸ್: ಅಭಿಷೇಕ್, ಸುಖಜೀತ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ,ಗುರ್ಜಂತ್ ಸಿಂಗ್, ಅಂಗದ್ ಬೀರ್ ಸಿಂಗ್, ಆದಿತ್ಯ ಅರ್ಜುನ್ ಲಾಲಗೆ, ಬಾಬಿ ಸಿಂಗ್ ಧಾಮಿ, ಸುದೀಪ್ ಚಿರ್ಮಾಕೊ, ಸೆಲ್ವಂ ಕಾರ್ತಿ, ಶಿಲಾನಂದ ಲಾಕ್ರಾ, ದಿಲ್‌ಪ್ರೀತ್ ಸಿಂಗ್, ಉತ್ತಮ್ ಸಿಂಗ್.